ಬುಧವಾರ, ಜೂನ್ 3, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಸ್ಸಾಂ ಚಹಾ...
ಅಸ್ಸಾಂನ ಗೋಲಾಘಾಟ್ ಜಿಲ್ಲೆಯ ಚಹಾ ತೋಟದಲ್ಲಿ ಕಾರ್ಮಿಕ ಮಹಿಳೆಯು ಚಹಾ ಎಲೆಗಳನ್ನು ಹೊತ್ತು ಸಾಗಿದರು



ಅತೀಕಾ ಮಿಂಚು
ಭಾರತದ 11 ವರ್ಷ ವಯಸ್ಸಿನ ರೇಸಿಂಗ್ ಪಟು ಅತೀಕಾ ಮೀರ್, ಗ್ರೀಸ್‌ನಲ್ಲಿ ನಡೆದ ಚಾಂಪಿಯನ್ಸ್ ಆಫ್ ದಿ ಫ್ಯೂಚರ್ ಅಕಾಡೆಮಿ ಸರಣಿಯ ಎರಡನೇ ಸುತ್ತಿನ ಪ್ರಶಸ್ತಿ ಗೆದ್ದುಕೊಂಡರು




ಜೀವನದಲ್ಲಿ ನಿಷ್ಠೆ,
ಪರಿಶ್ರಮ,
ನಂಬಿಕೆ ಇದ್ದರೆ
ಏನಾದರೂ
ಸಾಧಿಸಬಹುದು
ಎನ್ನುವುದನ್ನು ತೋರಿಸಿ
ರಾಜ್ಯದ ನೂತನ
ಮುಖ್ಯಮಂತ್ರಿಯಾಗಿ
ಪ್ರಮಾಣವಚನ
ಸ್ವೀಕರಿಸುತ್ತಿರುವ
ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಅವರಿಗೆ
ಸಮಸ್ತ ಮಳವಳ್ಳಿಯ ಜನತೆಯ ಪರವಾಗಿ
ಅಭಿನಂದನೆಗಳು
ಎಂ. ರಾಮಕೃಷ್ಣ
ಮಳವಳ್ಳಿ
ಟಿ ಎಂ ಪ್ರಕಾಶ್
ಸಮಾಜ ಸೇವಕರು
ಮಳವಳ್ಳಿ
ಎಲ್ ನಿಂಗರಾಜು
ಮುಖಂಡರು
ಸಿ ಎಸ್ ರಮೇಶ್
ಚೊಟ್ಟನಹಳ್ಳಿ
ಮುಖಂಡರು
ಎಂ ಎಲ್ ರುದ್ರಸ್ವಾಮಿ
ಮುಖಂಡರು
ಮಳವಳ್ಳಿ
ಡಿ.ಎನ್. ಚಂದ್ರು
ದೊಡ್ಡೇಗೌಡನಕೊಪ್ಪಲು
ಕೆಂಪೇಗೌಡರು
ಮುಖಂಡರು
ಮಳವಳ್ಳಿ
ಮಹದೇವೇಗೌಡ
ನಿಡಘಟ್ಟ
ರವಿ ಈರೇಗೌಡ
ಅಮೃತೇಶ್ವರನಹಳ್ಳಿ

ಬುಧವಾರ, ಜೂನ್ 3, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಪರಿಸರ ಜಾಗೃತಿ
ವಿಶ್ವ ಪರಿಸರ ದಿನದ ಅಂಗವಾಗಿ ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಭೂಮಿ ಪೆಡ್ನೆಕರ್ ಕಾಣಿಸಿಕೊಂಡಿದ್ದು ಹೀಗೆ



ತಾಜ್‌ಮಹಲ್ ಭೇಟಿ
ಲಾವೋಸ್ ಉಪಪ್ರಧಾನಿ ಥೋಂಗ್‌ಸಾವನ್ ಮತ್ತು ಅವರ ಪತ್ನಿ ಆಗ್ರಾದಲ್ಲಿನ ತಾಜ್‌ಮಹಲ್‌ಗೆ ಮಂಗಳವಾರ ಭೇಟಿ ನೀಡಿದರು


ಕರ್ನಾಟಕದ ನೂತನ
ಮುಖ್ಯಮಂತ್ರಿಯಾಗಿ
ಪ್ರಮಾಣವಚನ ಸ್ವೀಕರಿಸುತ್ತಿರುವ
ಶ್ರೀ ಡಿ.ಕೆ. ಶಿವಕುಮಾರ್
ಅವರಿಗೆ
ಅಭಿನಂದನೆಗಳು
ಶುಭ ಕೋರುವವರು:
ರವಿಕುಮಾರ್ ಗೌಡ (ಗಣಿಗ)
ಶಾಸಕರು, ಮಂಡ್ಯ ವಿಧಾನಸಭಾ ಕ್ಷೇತ್ರ
ಹಾಗೂ ರವಿಕುಮಾರ್ ಗೌಡ (ಗಣಿಗ) ಅಭಿಮಾನಿಗಳ ಬಳಗ

ಬುಧವಾರ, ಜೂನ್ 3, 2026 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚೆರ್ರಿ ಕೊಯ್ಲು...



ಜಮ್ಮು ಮತ್ತು ಕಾಶ್ಮೀರದ ಗಾಂದರ್‌ಬಲ್ ಜಿಲ್ಲೆಯ ತೋಟವೊಂದರಲ್ಲಿ ಕೊಯ್ಲು ಮಾಡಿದ ಚೆರ್ರಿ ಹಣ್ಣುಗಳೊಂದಿಗೆ ಕಾರ್ಮಿಕ

ಬಿಸಿಲ ಧಗೆ...



ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಬಿಸಿಲಿನ ತಾಪ ತಾಳಲಾರದೇ ವ್ಯಕ್ತಿಯೊಬ್ಬರು ನಲ್ಲಿಯ ಕೆಳಗೆ ಕುಳಿತು ಮೈ ತಂಪಾಗಿಸಿಕೊಂಡರು


ಕರ್ನಾಟಕ ರಾಜ್ಯ ನೂತನ
ಮುಖ್ಯಮಂತ್ರಿಯಾಗಿ ಪ್ರಮಾಣ
ವಚನ ಸ್ವೀಕರಿಸುತ್ತಿರುವ
ಸನ್ಮಾನ್ಯ ಶ್ರೀಯುತ
ಡಿ.ಕೆ. ಶಿವಕುಮಾರ್
ಅವರಿಗೆ ಬೆಂಗಳೂರು
ಮಹಾನಗರ ಜನತೆಯ ಪರವಾಗಿ
ಹಾಗೂ ಜಿಬಿಎ ಎಲ್ಲಾ ಜಿಲ್ಲಾ
ಕಾಂಗ್ರೆಸ್ ಅಧ್ಯಕ್ಷರುಗಳು
ಹಾಗೂ ಪದಾಧಿಕಾರಿಗಳ ವತಿಯಿಂದ
ಹೃದಯಪೂರ್ವಕ
ಅಭಿನಂದನೆಗಳು
ಹನುಮಂತರಾಯಪ್ಪ
ಜಿಲ್ಲಾಧ್ಯಕ್ಷರು
ಬೆಂಗಳೂರು ಪಶ್ಚಿಮ
ಮಂಜುನಾಥ್
ಜಿಲ್ಲಾಧ್ಯಕ್ಷರು
ಬೆಂಗಳೂರು ದಕ್ಷಿಣ
ಡಿ.ಕೆ. ಮೋಹನ್ ಬಾಬು
ಜಿಲ್ಲಾಧ್ಯಕ್ಷರು
ಬೆಂಗಳೂರು ಪೂರ್ವ
ನಂದಕುಮಾರ್
ಜಿಲ್ಲಾಧ್ಯಕ್ಷರು
ಬೆಂಗಳೂರು ಕೇಂದ್ರ
ಅಬ್ದುಲ್ ವಾಜಿದ್
ಜಿಲ್ಲಾಧ್ಯಕ್ಷರು
ಬೆಂಗಳೂರು ಉತ್ತರ ಹಾಗೂ
ಮಾಜಿ ವಿರೋಧ ಪಕ್ಷದ ನಾಯಕರು. ಬಿ.ಬಿ.ಎಂ.ಪಿ
ಪ್ರಕಟಣೆ : ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳು.

prajavani.net prajavani
ಬುಧವಾರ, ಜೂನ್ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 153 | ಪುಟ 24
www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ವಾರ್ಟರ್‌ಗೆ ಸಬಲೆಂಕಾ
ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ (ಬೆಲರೂಸ್) ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಜಪಾನ್‌ನ ನವೋಮಿ ಒಸಾಕಾ ಅವರನ್ನು ಮಣಿಸಿ ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 74,649 | ನಿಫ್ಟಿ 23,483 | $/₹ 95.36 | ಚಿನ್ನ (Std. 10g) ₹1,60,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,82,700 (ಬೆಂಗಳೂರು)

ಕರುನಾಡ ಚುಕ್ಕಾಣಿ ಶಿವಕುಮಾರ್ ಕೈಗೆ

ಮುಖ್ಯಮಂತ್ರಿಯಾಗಿ ಶಿವಕುಮಾರ್ ಪ್ರಮಾಣ ಇಂದು
● 10ರಿಂದ 14 ಶಾಸಕರು ಸಂಪುಟ ಸೇರ್ಪಡೆ ಸಂಭವ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಕರ್ನಾಟಕದ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಹಾಗೂ 10ರಿಂದ 14 ಶಾಸಕರು ಸಚಿವರಾಗಿ ಲೋಕಭವನದಲ್ಲಿ ಬುಧವಾರ (ಜೂನ್ 3) ಸಂಜೆ 4.05ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರಮಾಣವಚನ ಬೋಧಿಸಲಿದ್ದಾರೆ.

ರಾಷ್ಟ್ರ ರಾಜಧಾನಿಯಲ್ಲಿ ಎರಡು ದಿನ ನಡೆದ ಹಲವು ಸುತ್ತಿನ ಸಭೆಗಳ ಬಳಿಕ ಸಂಪುಟಕ್ಕೆ ಸೇರುವವರ ಪಟ್ಟಿಗೆ ಅಂತಿಮ ರೂಪ ನೀಡಲಾಯಿತು ಎಂದು ಗೊತ್ತಾಗಿದೆ.

ಸಚಿವರ ಪಟ್ಟಿ ಅಖೈರುಗೊಳಿಸಲು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಜತೆಗೆ ಸೋಮವಾರ ರಾತ್ರಿ ಪ್ರತ್ಯೇಕ ಸಭೆ ನಡೆಸಿದ್ದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಮಂಗಳವಾರ ಮಹತ್ವದ ಸಭೆ ನಡೆಯಿತು. ಈ ಸಭೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ವೇಣುಗೋಪಾಲ್, ಸುರ್ಜೇವಾಲಾ, ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಭಾಗಿಯಾದರು. ಎರಡು ಗಂಟೆಯ ಚರ್ಚೆಯ ಬಳಿಕವೂ ನಾಯಕರು ಒಮ್ಮತಕ್ಕೆ ಬರಲಿಲ್ಲ. ಸಭೆ ಅಪೂರ್ಣಗೊಂಡಿತು.

ಸಂಜೆ ಮತ್ತೊಂದು ಸುತ್ತಿನ ಸಭೆಯಲ್ಲಿ ಉಭಯ ನಾಯಕರ ಸಮ್ಮುಖದಲ್ಲಿ ಸಚಿವರ ಪಟ್ಟಿಗೆ ಅಂತಿಮ ಸ್ಪರ್ಶ ನೀಡಲಾಯಿತು. ಬಳಿಕ ರಾಜ್ಯದ ನಾಯಕರು ಬೆಂಗಳೂರಿಗೆ ನಿರ್ಗಮಿಸಿದರು. ಮತ್ತೊಂದು ಸುತ್ತಿನ ಸಮಾಲೋಚನೆ ನಡೆಸಿದ ಹೈಕಮಾಂಡ್, ಮೊದಲ ಹಂತದಲ್ಲಿ ಪ್ರಮಾಣವಚನ ಸ್ವೀಕರಿಸುವವರ ಪಟ್ಟಿಯನ್ನು ಅಂತಿಮಗೊಳಿಸಿದೆ. ಬುಧವಾರ ಬೆಳಿಗ್ಗೆಯ ಹೊತ್ತಿಗೆ ಖಚಿತ ಮಾಹಿತಿಗಳು ಲಭ್ಯವಾಗಲಿವೆ ಎನ್ನಲಾಗಿದೆ.

▶6

ಸರ್ವಜಾತಿ–ಧರ್ಮ ಗುರುಗಳಿಗೆ ಆಮಂತ್ರಣ

ಶಿವಕುಮಾರ್ ನೇತೃತ್ವದ ಹೊಸ ಸಚಿವರು ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಹಾಗೂ ವಿವಿಧ ಸಮುದಾಯಗಳ ಧರ್ಮಗುರುಗಳಿಗೆ ಆಮಂತ್ರಣ ನೀಡಲಾಗಿದೆ.

ಇವರ ಜತೆಗೆ, ಶಿವಕುಮಾರ್ ಕಲಿತ ಕನಕಪುರ ದೊಡ್ಡಾಲಹಳ್ಳಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ಪೌರಕಾರ್ಮಿಕರು, ರೈತ ಮುಖಂಡರು, ದಲಿತ ಸಂಘಟನೆ ಮುಖಂಡರು, ಹಿಂದುಳಿದ ವರ್ಗಗಳ ಮುಖಂಡರು, ಸ್ತ್ರೀಶಕ್ತಿ ಸಂಘಗಳ ಪ್ರತಿನಿಧಿಗಳು, ಮಹಿಳಾ ಮುಖಂಡರು, ಉದ್ಯಮಿಗಳು, ವಿವಿಧ ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರಿಗೂ ಆಹ್ವಾನ ನೀಡಲಾಗಿದೆ.



ನಿಯೋಜಿತ ಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಶುಭಕೋರಿ ಬೆಂಗಳೂರಿನ ಹಲವೆಡೆ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ —ಚಿತ್ರ: ಪುಷ್ಕರ್ ವಿ.

ಕಾರ್ಯಕ್ರಮಕ್ಕೆ ಯಾರೆಲ್ಲ?

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಂಸದರು ಕಾರ್ಯಕ್ರಮಕ್ಕೆ ಬರಲಿದ್ದಾರೆ.

ಪೂರ್ವಾಭಿಮುಖವಾಗಿ ಪ್ರತಿಜ್ಞಾವಿಧಿ ಸ್ವೀಕಾರ

ಪ್ರಮಾಣವಚನಕ್ಕೆ ಲೋಕಭವನ ಸಿಂಗಾರಗೊಂಡಿದೆ. ಗಾಜಿನ ಮನೆ, ಉದ್ಯಾನ, ಹುಲ್ಲುಹಾಸಿನಲ್ಲಿ 2,500ಕ್ಕೂ ಹೆಚ್ಚು ಆಸನಗಳನ್ನು ಅಳವಡಿಸಲಾಗಿದೆ. ಇದೇ ಮೊದಲ ಬಾರಿಗೆ ಗಾಜಿನ ಮನೆಯಲ್ಲಿ ಪೂರ್ವಾಭಿಮುಖವಾಗಿ ಪ್ರತಿಜ್ಞಾವಿಧಿ ಕಾರ್ಯಕ್ರಮ ನಡೆಯಲಿದೆ. ಈವರೆಗೆ (ಹಿಂದಿನ ರಾಜಭವನ) ನಡೆದ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಗಳು ಪಶ್ಚಿಮಾಭಿಮುಖವಾಗಿ ಇರುವ ವೇದಿಕೆಯಲ್ಲಿ ನಡೆದಿದ್ದವು. ಪಶ್ಚಿಮಾಭಿಮುಖವಾಗಿ ಇರುವ ವೇದಿಕೆಯಲ್ಲಿ ಸರ್ವ ಧರ್ಮ ಸಮುದಾಯಗಳ ಧರ್ಮ ಗುರುಗಳಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗಿದೆ.

ಸಂಪುಟ ಸೇರಲಿರುವ ಸಚಿವರ ಕುಟುಂಬದವರಿಗೆ ವೇದಿಕೆಯ ಮೊದಲ ಸಾಲಿನಲ್ಲಿ, ನಂತರದ ಸಾಲುಗಳಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳು, ಲೋಕಾಯುಕ್ತರು, ವಿವಿಧ ಕ್ಷೇತ್ರಗಳ ಗಣ್ಯರಿಗೆ ವ್ಯವಸ್ಥೆ ಮಾಡಲಾಗಿದೆ. ಲೋಕಭವನದ ಒಳಗೆ ಆರು ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ.

ಅನುಕಂಪದ ನೌಕರಿ: ವಿವಾಹಿತ ಪುತ್ರಿಯರೂ ಅರ್ಹರು- ಸುಪ್ರೀಂ

ನವದೆಹಲಿ (ಪಿಟಿಐ): ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿಗೆ ನೇಮಕಾತಿ ಮಾಡುವ ಹಕ್ಕಿನಿಂದ ವಿವಾಹಿತ ಹೆಣ್ಣುಮಕ್ಕಳನ್ನು ಹೊರಗಿಡುವುದು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

'ಕುಟುಂಬ'ದ ವ್ಯಾಖ್ಯಾನದಿಂದ ವಿವಾಹಿತ ಪುತ್ರಿಯರನ್ನು ಹೊರಗಿಡುವುದು ನ್ಯಾಯಸಮ್ಮತವಲ್ಲ ಮತ್ತು ಸಾಂವಿಧಾನಿಕವಾಗಿ ಅದು ಸಿಂಧುವಲ್ಲ ಎಂದು ಅಭಿಪ್ರಾಯ ಪಟ್ಟಿದೆ.



ಅನುಕಂಪದ ಆಧಾರದಲ್ಲಿ ನೇಮಕಾತಿ ವಿಚಾರವಾಗಿ ವಿವಾಹಿತ ಪುತ್ರಿಯನ್ನು ಕುಟುಂಬದ ವ್ಯಾಖ್ಯಾನದಿಂದ ಹೊರಗಿಟ್ಟು ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರಿದ್ದ ಪೀಠವು ವಜಾ ಮಾಡಿತು.


ನ್ಯಾಯಬೆಲೆ ಅಂಗಡಿಯೊಂದರ ವಿತರಕ (ಡೀಲರ್) ಮೃತರಾದ ಬಳಿಕ ಅವರ ಪುತ್ರಿಯು ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಪೀಠವು ವಿಚಾರಣೆ ನಡೆಸಿತು.

'ಅವಲಂಬನೆ, ಹಣಕಾಸಿನ ಅಗತ್ಯ, ವಸತಿ ಹಾಗೂ ಡೀಲರ್‌ಶಿಪ್‌ಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ನಿರ್ವಹಿಸುವ ಅರ್ಜಿದಾರರ ಸಾಮರ್ಥ್ಯವನ್ನು ಪರಿಗಣಿಸಬೇಕಾಗುತ್ತದೆ. ಅವಲಂಬನೆಯು ವಾಸ್ತವದ ಪ್ರಶ್ನೆಯಾಗಿದ್ದು, ಮದುವೆಯಾದ ಮಾತ್ರಕ್ಕೆ ಮಗಳು ಆಕೆಯ ತವರಿನೊಂದಿಗಿನ ಬಾಂಧವ್ಯವನ್ನು ಕಡಿದುಕೊಳ್ಳುತ್ತಾಳೆ ಅಥವಾ ತವರು ಕುಟುಂಬದ ಮೇಲೆ ಆಕೆ ಅವಲಂಬನೆ ಹೊಂದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅದೇ ರೀತಿ ಹೆಚ್ಚಿನ ಸಂದರ್ಭಗಳಲ್ಲಿ ಪುತ್ರರು ಕುಟುಂಬದ ವ್ಯಾಖ್ಯಾನಕ್ಕೆ ಒಳಪಟ್ಟಿದ್ದರೂ ಕುಟುಂಬದ ಮೇಲೆ ಅವಲಂಬಿತರಾಗಿರುವುದಿಲ್ಲ' ಎಂದು ಪೀಠವು ಹೇಳಿದೆ.

'ಮದುವೆಯಾದ ಹೊರತಾಗಿಯೂ ಪುತ್ರರನ್ನು ಕುಟುಂಬದ ವ್ಯಾಖ್ಯಾನದಿಂದ ಕಾಯ್ದೆಯು ಹೊರಗಿಡುವುದಿಲ್ಲ. ಆದರೆ ಅದೇ ಕಾರಣಕ್ಕೆ ಹೆಣ್ಣುಮಕ್ಕಳನ್ನು ಹೊರಗಿಡಲಾಗುತ್ತದೆ. ಮದುವೆಯಾದ ಹೆಣ್ಣುಮಕ್ಕಳು ಬೇರೆ ಕುಟುಂಬದ ಭಾಗವಾಗುತ್ತಾರೆ ಹಾಗೂ ತವರು ಕುಟುಂಬದೊಂದಿಗಿನ ಎಲ್ಲ ಬಾಂಧವ್ಯಗಳನ್ನು ಕಳೆದುಕೊಳ್ಳುತ್ತಾರೆ ಎಂಬ ಹಳೆಯಕಾಲದ ಲಿಂಗ ತಾರತಮ್ಯ ಧೋರಣೆ ಇಲ್ಲಿದೆ. ಇದು ಸಂವಿಧಾನದಲ್ಲಿನ ಸಮಾನತೆಯ ಆಶಯಕ್ಕೆ ವಿರುದ್ಧವಾದದ್ದು' ಎಂದೂ ಅಭಿಪ್ರಾಯಪಟ್ಟಿದೆ.

▶12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೈಬರ್ ಅಪರಾಧ: ಕೋಟಿ ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ಕೆ.ಆರ್. ನಗರ ವ್ಯಾಪ್ತಿಯಲ್ಲಿ ದಾಖಲಾದ ಪ್ರಕರಣವೊಂದರ ತನಿಖೆ ನಡೆಸಿದ ಪೊಲೀಸರು, ಸೈಬರ್ ಅಪರಾಧವನ್ನೇ ದಂಧೆಯಾಗಿಸಿಕೊಂಡ ತಂಡವನ್ನು ಪತ್ತೆ ಹಚ್ಚಿದ್ದಾರೆ. ಈವರೆಗೆ ಅಂದಾಜು ₹189.49 ಕೋಟಿ ವಂಚನೆ ಮಾಡಿರುವುದನ್ನು ಬಯಲಿಗೆ ಎಳೆದಿದ್ದಾರೆ.

'ಮಹಾರಾಷ್ಟ್ರದ ಯತೀನ್ ರಮೇಶ್ ಜೈನ್ ಮತ್ತು ಮೊಹಮ್ಮದ್ ಶಾದಾಜ್ ಅಂಜುಮ್ ಎನ್ನುವವರನ್ನು ಈಗಾಗಲೇ ಬಂಧಿಸಲಾಗಿದೆ. ಪ್ರಮುಖ ಆರೋಪಿ ಪಂಜಾಬ್‌ನ ಅಮಿತ್ ಸಿಂಗ್ ತಲೆಮರೆಸಿಕೊಂಡಿದ್ದಾನೆ' ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು.

'ಜ.27ರಂದು ಕೆ.ಆರ್. ನಗರದ ಚಿನ್ನದ ವ್ಯಾಪಾರಿ ಜಿತೇಂದ್ರಕುಮಾರ್ ಖಂಡೇಲ್‌ವಾಲ್ ಅವರನ್ನು ಅಪರಿಚಿತರು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿ, ಪ್ರತಿ ಗ್ರಾಂ. ಚಿನ್ನವನ್ನು ಕಡಿಮೆ ಬೆಲೆಗೆ ಅಂದರೆ ₹600ಕ್ಕೆ ಕೊಡುವುದಾಗಿ ನಂಬಿಸಿದ್ದರು. ಮುಂಗಡವಾಗಿ 100 ಗ್ರಾಂ. ಚಿನ್ನಕ್ಕೆ ₹13.69 ಲಕ್ಷವನ್ನು ವಿವಿಧ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿಕೊಂಡು, ಚಿನ್ನ ಕೊಡದೆ ವಂಚಿಸಿದ್ದರು. ಈ ಬಗ್ಗೆ ಜಿಲ್ಲಾ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ತಿಳಿಸಿದರು.



'ಮೂವರು ಆರೋಪಿಗಳು ಭಾಗಿ ಆಗಿರುವುದು ಪತ್ತೆಯಾಗಿದೆ. ಕೂಲಿ ಕಾರ್ಮಿಕರು, ಅನಕ್ಷರಸ್ಥರಿಗೆ ಹಣದ ಆಸೆ ತೋರಿಸಿ ಅವರ ದಾಖಲೆ ಪಡೆದು, ಬ್ಯಾಂಕ್ ಖಾತೆ ಹಾಗೂ ಸಿಮ್ ಕಾರ್ಡ್ ಮಾಡಿಸಿಕೊಂಡು ಅದನ್ನು ಕೃತ್ಯಕ್ಕೆ ಬಳಸುತ್ತಿದ್ದರು. ಈ ರೀತಿಯ 56 ಬ್ಯಾಂಕ್ ಖಾತೆಗಳ ಮೇಲೆ ದೇಶದೆಲ್ಲೆಡೆ 196 ಸೈಬರ್ ಅಪರಾಧದ ದೂರುಗಳು ದಾಖಲಾಗಿವೆ. ಕರ್ನಾಟಕದಲ್ಲಿ ಇಂತಹ 12 ಪ್ರಕರಣಗಳಿವೆ' ಎಂದು ವಿವರಿಸಿದರು.

ಹೊರದೇಶದಿಂದ ವಂಚನೆ: 'ಈ ತಂಡವು ನಾಲ್ಕೈದು ವರ್ಷದಿಂದ ಹೂಡಿಕೆ, ಜಾಬ್‌ಟಾಸ್ಕ್, ಸಾಲ ನೀಡುವ ನೆಪದಲ್ಲಿ ವಂಚಿಸಿರುವುದು ತನಿಖೆಯಿಂದ ತಿಳಿದುಬಂದಿದೆ. ಅಮಿತ್ ಸಿಂಗ್ ಹೊರದೇಶದಲ್ಲಿದ್ದುಕೊಂಡು ಕೃತ್ಯ ನಡೆಸುತ್ತಿದ್ದ. ಆತನ ಪತ್ತೆಗೂ ಕ್ರಮ ಕೈಗೊಂಡಿದ್ದೇವೆ. ಪ್ರಕರಣ ದಾಖಲಾದ ಹೆಚ್ಚಿನ ಬ್ಯಾಂಕ್ ಖಾತೆಗಳಿಂದ ಹಣ ಬಿಡಿಸಿಕೊಳ್ಳಲಾಗದಂತೆ (ಫ್ರೀಜ್) ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ತಿಳಿಸಿದರು.

ರಾಜೀನಾಮೆ ಮರುಪರಿಶೀಲಿಸಲು ಅಣ್ಣಾಮಲೈಗೆ ಬಿಜೆಪಿ ಮನವಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಮಂಗಳವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಆದರೆ, 'ರಾಜೀನಾಮೆ ನಿರ್ಧಾರವನ್ನು ಮರುಪರಿಶೀಲಿಸಿ' ಎಂದು ಬಿಜೆಪಿ ಹೈಕಮಾಂಡ್ ಅಣ್ಣಾಮಲೈ ಅವರಿಗೆ ಮನವಿ ಮಾಡಿರುವುದಾಗಿ ಮೂಲಗಳು ತಿಳಿಸಿವೆ.



ಅಣ್ಣಾಮಲೈ

ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಎಐಎಡಿಎಂಕೆಯೊಂದಿಗೆ ಮೈತ್ರಿ ಮಾಡಿಕೊಂಡದ್ದಕ್ಕೆ ಮತ್ತು ಪಕ್ಷದ ರಾಜ್ಯ ಘಟಕವು ತಮ್ಮನ್ನು ಕಡೆಗಣಿಸುತ್ತಿರುವುದಕ್ಕೆ ಅಸಮಾಧಾನಗೊಂಡಿರುವ ಅಣ್ಣಾಮಲೈ ಅವರು ನವದೆಹಲಿಯಲ್ಲಿ ಮಂಗಳವಾರ ಬೆಳಿಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾಗಿ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

'ಯಾವುದೇ ಆತುರದ ನಿರ್ಧಾರಕ್ಕೆ ಬರಬೇಡಿ' ಎಂದು ಅಣ್ಣಾಮಲೈ ಅವರನ್ನು ಕೇಳಿಕೊಂಡ ನವೀನ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗುವಂತೆ ಸೂಚಿಸಿದ್ದಾರೆ. ಅದರಂತೆ, ಮಂಗಳವಾರ ಮಧ್ಯಾಹ್ನ ಅಮಿತ್ ಶಾ ಅವರನ್ನು ಅಣ್ಣಾಮಲೈ ಭೇಟಿಯಾಗಿದ್ದಾರೆ.

'ರಾಜೀನಾಮೆಯನ್ನು ಮರುಪರಿಶೀಲಿಸುವಂತೆ ಶಾ ಅವರು ಕೇಳಿಕೊಂಡರು ಮತ್ತು ಬಿಜೆಪಿ ಹೈಕಮಾಂಡ್ ಮತ್ತೆ ನಿಮ್ಮನ್ನು ಸಂಪರ್ಕಿಸುವವರೆಗೂ ದೆಹಲಿಯಲ್ಲೇ ಉಳಿದುಕೊಳ್ಳುವಂತೆ ಅಣ್ಣಾಮಲೈ ಅವರಿಗೆ ಸೂಚಿಸಿದರು' ಎಂದು ಮೂಲಗಳು ಹೇಳಿವೆ.

▶7

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ

ಮನೆಗೆಲಸದಾಕೆ ಬಂಧನ: ₹15 ಲಕ್ಷ ನಗದು ಜಪ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಲಸ ಮಾಡುತ್ತಿದ್ದ ಮನೆಯಲ್ಲೇ ₹25 ಲಕ್ಷ ಕಳ್ಳತನ ಮಾಡಿದ್ದ ಮನೆಗೆಲಸದಾಕೆಯನ್ನು ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿ, ₹15 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ.

ಜ್ಞಾನಭಾರತಿ ಲೇಔಟ್ ನಿವಾಸಿ ಬದರಿ ರಂಗನ್ ಎಂಬುವರ ಮನೆಯಲ್ಲಿ ರತ್ನಮ್ಮ ಎಂಬುವರು ಹತ್ತು ವರ್ಷಗಳಿಂದ ಮನೆಗೆಲಸ ಮಾಡಿಕೊಂಡಿದ್ದರು.

ಎರಡು ವರ್ಷದ ಹಿಂದೆ ಬದರಿ ರಂಗನ್ ಅವರು ಫ್ಲ್ಯಾಟ್‌ವೊಂದನ್ನು ಮಾರಾಟ ಮಾಡಿದ್ದು, ಅದರಿಂದ ಬಂದಿದ್ದ ₹25 ಲಕ್ಷ ಹಣವನ್ನು ಬೀರುವಿನಲ್ಲಿಟ್ಟಿದ್ದರು. ಇತ್ತೀಚೆಗೆ ನಿವೇಶನ ಖರೀದಿಸಲು ಮುಂಗಡ ಹಣ ನೀಡ-ಬೇಕಾಗಿದ್ದರಿಂದ ಬೀರುವನ್ನು ತೆರೆದು ನೋಡಿದಾಗ ಹಣ ಇರಲಿಲ್ಲ. ಗಾಬರಿಗೊಂಡ ಅವರು ಪತ್ನಿ ಮತ್ತು ತಾಯಿಯನ್ನು ವಿಚಾರಿಸಿದಾಗ ಹಣದ ಬಗ್ಗೆ ಗೊತ್ತಿಲ್ಲವೆಂದು ಹೇಳಿದ್ದಾರೆ.

ಬದರಿ ಅವರು ಅನುಮಾನಗೊಂಡು ಮನೆಯಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ರತ್ನಮ್ಮ ಅವರು ಹಣ ಕಳವು ಮಾಡಿರುವ ದೃಶ್ಯ ಸೆರೆಯಾಗಿದೆ.

ತಕ್ಷಣ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ ಪೊಲೀಸರು, ಆಕೆಯ ಮನೆಯನ್ನು ಶೋಧಿಸಿ ₹15 ಲಕ್ಷ ಹಣವನ್ನು ವಶಪಡಿಸಿಕೊಂಡಿದ್ದಾರೆ.

ಬೆಟ್ಟಿಂಗ್: ಕೋಟ್ಯಂತರ ವಹಿವಾಟು

8,750 ತಂತ್ರಾಂಶಗಳ ಕಾರ್ಯಚಟುವಟಿಕೆ ಪತ್ತೆ • ಬ್ಯಾಂಕ್ ಖಾತೆಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಐಪಿಎಲ್ ಸಮಯದಲ್ಲಿ ಆನ್‌ಲೈನ್ ಬೆಟ್ಟಿಂಗ್ ಜಾಲದ ಮೇಲೆ ಕಾರ್ಯಾಚರಣೆ ನಡೆಸಿರುವ ಸೈಬರ್ ಕಮಾಂಡ್ ಘಟಕವು, ಬೆಟ್ಟಿಂಗ್ ಆ್ಯಪ್, ವೈಬ್‌ಸೈಟ್ ಸೇರಿ 8,750 ತಂತ್ರಾಂಶಗಳ ಕಾರ್ಯಚಟುವಟಿಕೆ ಪತ್ತೆಹಚ್ಚಿದ್ದು, ತನಿಖೆ ವೇಳೆ ನೂರಾರು ಕೋಟಿ ರೂಪಾಯಿ ವಹಿವಾಟು ನಡೆದಿರುವುದು ಗೊತ್ತಾಗಿದೆ.

ಹಣದ ವಹಿವಾಟು ಸಂಬಂಧ ತನಿಖೆ ಚುರುಕುಗೊಳಿಸಿರುವ ಸೈಬರ್ ಘಟಕವು, 137 ವೆಬ್‌ಸೈಟ್ ಏಜೆನ್ಸಿಗಳಿಗೆ ಪತ್ರ ಬರೆದು ಶಾಶ್ವತವಾಗಿ ಬ್ಲಾಕ್ ಮಾಡುವಂತೆ ತಿಳಿಸಿದೆ. ವಿಚಾರಣೆಗೆ ಸಂಬಂಧಿಸಿದಂತೆ ಪೂರಕ ಮಾಹಿತಿ ನೀಡುವಂತೆಯೂ ಕೇಳಿದೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೈಬರ್ ಕಮಾಂಡ್ ಸೆಂಟರ್ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಚಂದ್ರಶೇಖರ್, 'ಈ ಅಕ್ರಮ ವೆಬ್‌ಸೈಟ್ ಹಾಗೂ ಆ್ಯಪ್‌ಗಳ ಮೂಲಕ ನೂರಾರು ಕೋಟಿ ರೂಪಾಯಿ ವಹಿವಾಟು ನಡೆದಿರುವುದು ಗೊತ್ತಾಗಿದೆ. ಹೀಗಾಗಿ ಅವುಗಳ ಮೂಲ ಕಂಡುಹಿಡಿಯಲು 37 ಸೇವಾ ಪೂರೈಕೆದಾರರ ಮೂಲಕ 127 ವೆಬ್‌ಸೈಟ್ ಏಜೆನ್ಸಿಗಳಿಗೆ ಪತ್ರ ಬರೆದು ಶಾಶ್ವತವಾಗಿ ಬ್ಲಾಕ್ ಮಾಡುವಂತೆ ಸೂಚಿಸಲಾಗಿದೆ. ಜತೆಗೆ ಕೆಲವೊಂದು ಮಾಹಿತಿ ನೀಡುವಂತೆಯೂ ಕೋರಲಾಗಿದೆ' ಎಂದರು.

'ಇಂಡಿಯನ್ ಸೈಬರ್ ಕ್ರೈಂ ಕೋ-ಆರ್ಡಿನೇಷನ್ ಸೆಂಟರ್ (ಐ4ಸಿ) ಸಹಕಾರದೊಂದಿಗೆ ದೇಶದಾದ್ಯಂತ ಅಕ್ರಮ ಬೆಟ್ಟಿಂಗ್ ಜಾಲತಾಣಗಳ ಯುಆರ್‌ಎಲ್‌ಗಳನ್ನು ಭೇದಿಸುವಲ್ಲಿ ಯಶಸ್ವಿಯಾಗಿತ್ತು. ಈ ವೇದಿಕೆಗಳನ್ನು ಬ್ಲಾಕ್ ಮಾಡಿದರೂ ನಕಲಿ ಯುಆರ್‌ಎಲ್ ಸೃಷ್ಟಿಸಿ ಮಿರರ್ ಡೊಮೈನ್ ಹಾಗೂ ಸಬ್‌ಡೊಮೈನ್‌ಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದವು. ಆದ್ದರಿಂದ ಶಾಶ್ವತವಾಗಿ ಬೆಟ್ಟಿಂಗ್ ದಂಧೆ ನಡೆಸದಂತೆ ಮೂಲ ಸೇವಾ ಪೂರೈಕೆದಾರರ ಮೂಲಕವೇ 137 ವೆಬ್‌ಸೈಟ್ ಏಜೆನ್ಸಿಗಳಿಗೆ ಪತ್ರ ಬರೆಯಲಾಗಿದೆ' ಎಂದು ತಿಳಿಸಿದರು.

'ಆನ್‌ಲೈನ್ ಕ್ರಿಕೆಟ್ ಬೆಟ್ಟಿಂಗ್‌ನಿಂದ ಸಾವಿರಾರು ಜನರು ಹಣ ಕಳೆದುಕೊಂಡು ಆರ್ಥಿಕ ನಷ್ಟ ಅನುಭವಿಸಿದ್ದಾರೆ. ಹಣಕಾಸಿನ ಮುಗ್ಗಟ್ಟಿನಿಂದ ಮಾನಸಿಕ ಖಿನ್ನತೆಗೆ ಜಾರಿದ್ದಾರೆ. ದೇಶದೆಲ್ಲೆಡೆ ಪಸರಿಸಿದ್ದ ಬೆಟ್ಟಿಂಗ್ ವೇದಿಕೆಗಳನ್ನು ಗುರುತಿಸಿ ನಿಷ್ಕ್ರಿಯಗೊಳಿಸಲಾಗಿದೆ. ಇದುವರೆಗೂ ನೂರಾರು ಕೋಟಿ ಹಣದ ವಹಿವಾಟು ನಡೆದಿರುವ ಸಾಧ್ಯತೆಯಿದೆ. ವಂಚಕ ಕಂಪನಿಗಳ ಹಣ ವರ್ಗಾವಣೆಯಾಗಿರುವ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದರು.

ಆನ್‌ಲೈನ್ ಬೆಟ್ಟಿಂಗ್ ಹಾಗೂ ಜೂಜು ನಿಷೇಧಿಸಿ 2025ರಲ್ಲಿ ಸರ್ಕಾರ ಹೊಸ ಕಾಯ್ದೆ ತಂದಿತ್ತು. ಅದನ್ನು ಪ್ರಶ್ನಿಸಿ ಬೆಟ್ಟಿಂಗ್ ಕಂಪನಿಗಳು ಸುಪ್ರೀಂ ಕೋರ್ಟ್ ಮೊರೆಹೋಗಿದ್ದವು. ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯ ಮೇ 27ರಂದು ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿತ್ತು. ಅದರಿಂದ ಆನ್‌ಲೈನ್ ಬೆಟ್ಟಿಂಗ್ ದಂಧೆ ಪತ್ತೆ ಹಚ್ಚಲು ಪೂರಕವಾಯಿತು ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಐಜಿ ಎಚ್‌.ಡಿ.ಆನಂದ್‌ಕುಮಾರ್ ಇದ್ದರು.

ಮೂರು ಹಂತದಲ್ಲಿ ತನಿಖೆ

'ಆನ್‌ಲೈನ್ ಕ್ರಿಕೆಟ್ ಬೆಟ್ಟಿಂಗ್ ವಂಚನೆ ಬಗ್ಗೆ ಮೂರು ಹಂತದಲ್ಲಿ ತನಿಖೆ ನಡೆಸಲಾಗುತ್ತಿದೆ. ಮೊದಲ ಹಂತದಲ್ಲಿ ಯುಆರ್‌ಎಲ್‌ಗಳ ಗುರುತಿಸಿ ಬ್ಲಾಕ್ ಮಾಡಿಸಲಾಗಿದೆ. ಜತೆಗೆ ಹೊಸದಾಗಿ ಬರುತ್ತಿರುವ ಯುಆರ್‌ಎಲ್ ಮೇಲೂ ನಿಗಾವಹಿಸಲಾಗಿದೆ. ಎರಡನೇ ಹಂತದಲ್ಲಿ ಸೇವಾ ಪೂರೈಕೆದಾರರ ಮೂಲಕ ಪತ್ರ ಬರೆದು ಹೊಸ ವೆಬ್‌ಸೈಟ್‌ಗಳನ್ನು ಬ್ಲಾಕ್ ಮಾಡಿಸಲಾಗಿದೆ. ಮೂರನೇ ಹಂತದಲ್ಲಿ ಬೆಟ್ಟಿಂಗ್ ಆ್ಯಪ್ ನಡೆಸುತ್ತಿರುವವರು ಹಾಗೂ ಹಣಕಾಸಿನ ವಹಿವಾಟು ಪತ್ತೆ ಹಚ್ಚಲಾಗುತ್ತಿದೆ' ಎಂದು ಎಡಿಜಿಪಿ ಚಂದ್ರಶೇಖರ್ ಹೇಳಿದರು.

ಮಾಂಜಾ ದಾರ ಕುತ್ತಿಗೆ ಕೊಯ್ದು ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾಯಕಾರಿಯಾದ ಗಾಳಿಪಟ ಹಾರಿಸಲು ಬಳಸುವ ಮಾಂಜಾ ದಾರ ಕುತ್ತಿಗೆ ಕೊಯ್ದು ಸವಾರನೊಬ್ಬ ಮೃತಪಟ್ಟಿರುವ ಘಟನೆ ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ತಾತಗುಣಿ ಸಮೀಪದ ಅರಸಪ್ಪ ಲೇಔಟ್ ನಿವಾಸಿ ಜಿ. ಕಿರಣ್ (29) ಮೃತ ದುರ್ದೈವಿ.

ಈ ಸಂಬಂಧ ಕಿರಣ್ ಪತ್ನಿ ನಂದಿನಿ ಎಂಬುವರು ನೀಡಿದ ದೂರಿನನ್ವಯ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯ ವಿವರ: ಕನಕಪುರ ರಸ್ತೆಯ ಗುಬ್ಬಾಳದಲ್ಲಿರುವ ಇಸ್ಕಾನ್ ದೇವಸ್ಥಾನದಲ್ಲಿ ಹೌಸ್ ಕೀಪಿಂಗ್ ಸೂಪರ್‌ವೈಸರ್ ಆಗಿ ಕಳೆದ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಕಿರಣ್ ಮೇ 30 ರಂದು ಮಧ್ಯಾಹ್ನ 12.30 ರ ಸುಮಾರಿಗೆ ತಲಘಟ್ಟಪುರ ಪೈಪ್‌ಲೈನ್ ರಸ್ತೆಯ ಮೂಲಕ ಬೈಕ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದಾಗ ಅಪರಿಚಿತರು ಗಾಳಿಪಟ ಹಾರಿಸಲು ಬಳಸುವ ದಾರವನ್ನು ಅಡ್ಡಲಾಗಿ ಬಿಟ್ಟಿದ್ದರು. ಇದನ್ನು ಗಮನಿಸದ ಕಿರಣ್ ಆ ರಸ್ತೆಯಲ್ಲಿ ಬಂದಿದ್ದು, ಮಾಂಜಾ ದಾರ ಕುತ್ತಿಗೆಯನ್ನು ಕೊಯ್ದಿದ್ದು ತೀವ್ರ ರಕ್ತಸ್ರಾವವಾಗಿದೆ. ಇದನ್ನು ಗಮನಿಸಿದ ಸಾರ್ವಜನಿಕರು ಕಿರಣ್ ಅವರನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹ: ಗಾಳಿಪಟ ಹಾರಿಸಲು ಬಳಸುವ ಮಾಂಜಾ ದಾರವು ಅತ್ಯಂತ ಅಪಾಯ ಕಾರಿಯಾಗಿದ್ದು, ದಾರವು ಮನುಷ್ಯನ ಕುತ್ತಿಗೆಗೆ ಸುತ್ತಿಕೊಂಡರೆ ಸಾವು ಸಂಭವಿಸುತ್ತದೆ ಎಂಬ ತಿಳಿವಳಿಕೆ ಇದ್ದರೂ ಕೂಡ ಗಾಳಿಪಟವನ್ನು ಹಾರಿಸಿದ್ದು, ಅದರ ದಾರವು ನನ್ನ ಪತಿ ಕಿರಣ್ ಅವರ ಕುತ್ತಿಗೆಗೆ ಸುತ್ತಿಕೊಂಡು ಕತ್ತು ಕೊಯ್ದಿದೆ. ನನ್ನ ಪತಿಯ ಸಾವಿಗೆ ಕಾರಣರಾದ ಆರೋಪಿಗಳನ್ನು ಪತ್ತೆ ಹಚ್ಚಿ, ಸೂಕ್ತ ಕಾನೂನು ಕ್ರಮ ಜರುಗಿಸಿ ಎಂದು ಕಿರಣ ಪತ್ನಿ ನಂದಿನಿ ಒತ್ತಾಯಿಸಿದ್ದಾರೆ.

ಕಿರಣ್ ಅವರು ಎರಡು ವರ್ಷಗಳ ಹಿಂದೆ ನಂದಿನಿ ಅವರನ್ನು ವಿವಾಹವಾಗಿದ್ದರು. ಒಂದು ವರ್ಷದ ಹೆಣ್ಣು ಮಗು ಕೂಡ ಇದೆ.

ಅಧಿಕ ಲಾಭದ ಆಮಿಷ: ₹5.95 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರೇಡಿಂಗ್‌ನಲ್ಲಿ ಹೂಡಿಕೆ ಮಾಡಿ ಅಧಿಕ ಲಾಭ ಪಡೆಯುವಂತೆ ಆಮಿಷವೊಡ್ಡಿದ ಸೈಬರ್ ವಂಚಕರು, ವ್ಯಕ್ತಿಯೊಬ್ಬರಿಗೆ ₹5.95 ಕೋಟಿ ವಂಚನೆ ಮಾಡಿದ್ದಾರೆ.

ಈ ಸಂಬಂಧ ಬಾಗಲಗುಂಟೆಯ ನಿವಾಸಿ ಮಲ್ಲಿಕಾರ್ಜುನ್ ನೀಡಿದ ದೂರಿನ ಮೇರೆಗೆ ಸೈಬರ್ ಕ್ರೈಂ ಠಾಣೆ ಪೊಲೀಸರು ಶಿಲ್ಪಾ ಶಿವಕುಮಾರ್ ಹಾಗೂ ಶಿವಕುಮಾರ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಟ್ರೇಡಿಂಗ್ ಸಲಹಾ ತಜ್ಞರ ಬಗ್ಗೆ ಗೂಗಲ್ ಮತ್ತು ಫೇಸ್‌ಬುಕ್‌ನಲ್ಲಿ ಹುಡುಕಾಟ ನಡೆಸುತ್ತಿದ್ದ ವೇಳೆ ಮಲ್ಲಿಕಾರ್ಜುನ್ ಅವರನ್ನು ಆರೋಪಿಗಳು ಸಂಪ-ರ್ಕಿಸಿದ್ದಾರೆ. ನಂತರ ತಾವು ಅನುಭವಿ ಟ್ರೇಡಿಂಗ್ ಸಲಹೆಗಾರರು ಎಂದು ನಂಬಿಸಿರುವುದರ ಜತೆಗೆ ಹಲವರು ಕೋಟ್ಯಂತರ ರೂಪಾಯಿ ಹಣ ಸಂಪಾದಿಸಿರು-ವುದಾಗಿ ಕೆಲವು ದಾಖಲೆಗಳನ್ನು ತೋರಿಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

ವಂಚಕರ ಮಾತು ನಂಬಿದ ಸಂತ್ರಸ್ತ, ಅವರು ಕಳುಹಿಸಿದ್ದ ನಕಲಿ ಲಿಂಕ್ ಮೂಲಕ ಟ್ರೇಡಿಂಗ್ ವೇದಿಕೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಆರಂಭದಲ್ಲಿ ಮಲ್ಲಿಕಾರ್ಜುನ ಅವರ ಖಾತೆಯಲ್ಲಿ ಲಾಭದ ಮೊತ್ತವನ್ನು ಕೋಟ್ಯಂತರ ರೂಪಾಯಿ ತೋರಿಸಿದ್ದಾರೆ. ಅಲ್ಲದೆ, ಕೆಲವೊಮ್ಮೆ ಸಣ್ಣ ಮೊತ್ತದ ಹಣ ಹಿಂಪಡೆಯಲು ಅವಕಾಶ ನೀಡುವ ಮೂಲಕ ಅವರಲ್ಲಿ ವಿಶ್ವಾಸ ಮೂಡಿಸಲಾಗಿದೆ. ಅದನ್ನೇ ನಂಬಿ ಹಂತ, ಹಂತವಾಗಿ ₹5.95 ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ವಿವರಿಸಿದರು.

ವಂಚಕರ ಸೂಚನೆಯಂತೆ ಹಣ ಹೂಡಿಕೆ ಮಾಡಿದಾಗ ಟ್ರೇಡಿಂಗ್ ಖಾತೆಯಲ್ಲಿ ಅಂದಾಜು ₹50 ಕೋಟಿ ಲಾಭ ತೋರಿಸಲಾಗಿದೆ. ಹಣ ಹಿಂಪಡೆಯಲು ಯತ್ನಿಸಿದಾಗ ತೆರಿಗೆ ಪಾವತಿಸಬೇಕು ಎಂದು ಹೇಳಿ ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಕೂಡಲೇ ಎಚ್ಚೆತ್ತುಕೊಂಡ ಮಲ್ಲಿಕಾರ್ಜುನ ಠಾಣೆಗೆ ದೂರು ನೀಡಿದ್ದಾರೆ ಎಂದು ಸೈಬರ್ ಕ್ರೈಂ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೆಟ್ರೊ: ಹಳದಿ ಮಾರ್ಗದಲ್ಲಿ ಎರಡು ರೈಲುಗಳ ಸೇರ್ಪಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಮ್ಮ ಮೆಟ್ರೊದ ಹಳದಿ ಮಾರ್ಗದಲ್ಲಿ ಜೂನ್ 3ರಿಂದ ಎರಡು ಹೆಚ್ಚುವರಿ ರೈಲುಗಳು ಸೇರ್ಪಡೆಯಾಗಲಿವೆ.

ಆರ್.ವಿ ರಸ್ತೆಯಿಂದ ಬೊಮ್ಮಸಂದ್ರ ವರೆಗೆ ಸಂಚರಿಸುವ ಹಳದಿ ಮಾರ್ಗದಲ್ಲಿ ಹೊಸ ಸೇರ್ಪಡೆಯೊಂದಿಗೆ 10 ರೈಲುಗಳು ಕಾರ್ಯನಿರ್ವಹಿಸಲಿವೆ. ಇದ ರಿಂದ ಸೇವಾ ಆವರ್ತನೆಯನ್ನು ಮತ್ತಷ್ಟು ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸೋಮವಾರದಿಂದ ಶುಕ್ರವಾರದವರೆಗೆ ಗರಿಷ್ಠ ದಟ್ಟಣೆ ಸಮಯದಲ್ಲಿ ಪ್ರಸ್ತುತ 9 ನಿಮಿಷಕ್ಕೆ ಇರುವ ರೈಲು ಇನ್ನು ಮುಂದೆ 7 ನಿಮಿಷದ ಅಂತರದಲ್ಲಿ ಸಂಚರಿಸಲಿದೆ.

ಸಾಮಾನ್ಯ ಸಮಯದಲ್ಲಿ ಸದ್ಯ 14 ನಿಮಿಷಕ್ಕೆ ಒಮ್ಮೆ ಸಂಚರಿಸುವ ರೈಲು ಇನ್ನು ಮುಂದೆ 10 ನಿಮಿಷದ ಅಂತರದಲ್ಲಿ ಸಂಚರಿಸಲಿದೆ. ವಾರಾಂತ್ಯದ ದಿನಗಳಲ್ಲಿ 10 ನಿಮಿಷದ ಅಂತರದಲ್ಲಿ ರೈಲುಗಳು ಸಂಚರಿಲಿವೆ.

ವಾರದ ಯಾವುದೇ ದಿನದಲ್ಲಿ ಆರ್.ವಿ ರಸ್ತೆ ಹಾಗೂ ಬೊಮ್ಮಸಂದ್ರ ಟರ್ಮಿನಲ್ ನಿಲ್ದಾಣಗಳಿಂದ ಹೊರಡುವ ಮೊದಲ ಹಾಗೂ ಕೊನೆಯ ರೈಲುಗಳ ವೇಳಾಪಟ್ಟಿ-ಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ವೇಶ್ಯಾವಾಟಿಕೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯನ್ನು ಬಾಡಿಗೆಗೆ ಪಡೆದು ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪದ ಮೇಲೆ ಮೂವರು ಮಹಿಳೆಯರು ಸೇರಿ ನಾಲ್ವರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಮೂವರು ಮಹಿಳೆಯರನ್ನು ರಕ್ಷಿಸಿದ್ದಾರೆ.

ನಗರದ ಟಿ ದಾಸರಹಳ್ಳಿ, ಜರಗನಹಳ್ಳಿ ಮತ್ತು ಮೂಡಲಪಾಳ್ಯ ಪ್ರದೇಶಗಳಲ್ಲಿ ಬಾಡಿಗೆ ಮನೆಗಳಲ್ಲಿ ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಮಾಹಿತಿ ಆಧರಿಸಿ ದಾಳಿ ನಡೆಸಲಾಗಿದೆ.

'ಅಧಿಕ ಹಣ ಗಳಿಸುವ ಉದ್ದೇಶದಿಂದ, ವೇಶ್ಯಾವಾಟಿಕೆಯ ಸೇವೆಗಳನ್ನು ಬಯಸುವ ಪುರುಷರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಗುತ್ತಿತ್ತು. ಬಾಡಿಗೆ ಮನೆಗಳಿಗೆ ಆಹ್ವಾನಿಸಿ, ಅಲ್ಲಿ ವೇಶ್ಯಾವಾಟಿಕೆ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು ಎಂದು ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆ, ಪುಟ್ಟೇನಹಳ್ಳಿ ಪೊಲೀಸ್ ಠಾಣೆ ಮತ್ತು ಚಂದ್ರಾ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ. ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆಯೊಬ್ಬರು ತಲೆಮರೆಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

₹4.39 ಕೋಟಿ ಮಾದಕ ವಸ್ತು ಜಪ್ತಿ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕರೊಬ್ಬರಿಂದ ₹4.39 ಕೋಟಿ ಮೌಲ್ಯದ 12.55 ಕೆ.ಜಿ ಹೈಡ್ರೋಪೊನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಮಂಗಳವಾರ ಜಪ್ತಿ ಮಾಡಿದ್ದಾರೆ.

ಬ್ಯಾಗ್‌ಗಳಲ್ಲಿ ಗಾಂಜಾ ಅಡಗಿಸಿಟ್ಟುಕೊಂಡು ಕಳ್ಳ ಸಾಗಣೆ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ ವೇಳೆ ಪತ್ತೆಯಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸಲಾಗಿದೆ. ಮಾದಕ ವಸ್ತುಗಳ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಹೊರ ವರ್ತುಲ ರಸ್ತೆ ಸುತ್ತಮುತ್ತ ಮಳೆ





ಕಾಡುಬೀಸನಹಳ್ಳಿಯಿಂದ ಬೆಳ್ಳಂದೂರಿಗೆ ಸಾಗುವ ರಸ್ತೆ ಜಲಾವೃತಗೊಂಡಿತ್ತು (ಎಡಚಿತ್ರ) ವರ್ತೂರು ಕೋಡಿಯ ಫೋರಂ ಮಾಲ್ ಬಳಿ ನೀರು ನಿಂತಿತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ವರ್ತುಲ ರಸ್ತೆ (ಒಆರ್‌ಆರ್), ಪಣತ್ತೂರು, ಬಳಗೆರೆ ಮತ್ತು ವರ್ತೂರು ಸುತ್ತಮುತ್ತ ಮಂಗಳವಾರ ಸಂಜೆ ಮಳೆಯಾಗಿದ್ದು ರಸ್ತೆಯಲ್ಲಿ ಮಳೆ ನೀರು ನಿಂತಿದ್ದರಿಂದ ವಾಹನ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ಎರಡು ಕಿಲೋಮೀಟರ್ ದೂರ ಕ್ರಮಿಸಲು ಒಂದು ಗಂಟೆ ಬೇಕಾಯಿತು ಎಂದು ಸ್ಥಳೀಯರು ಹೇಳಿದರು.

ದೇವರಬಿಸನಹಳ್ಳಿಯಲ್ಲಿ ಮುಖ್ಯರಸ್ತೆಯಲ್ಲಿ ವಾಹನ ಸಂಚಾರವನ್ನು ಸಂಚಾರ ಪೊಲೀಸರು ತಡೆಹಿಡಿದಿದ್ದರು. ಸಾಮಾನ್ಯವಾಗಿ ಅತಿಹೆಚ್ಚು ದಟ್ಟಣೆ ಇರುವ ಸಂಜೆ ವೇಳೆಯಲ್ಲಿ ವಾಹನ ದಟ್ಟಣೆ ಹೆಚ್ಚಿರುತ್ತದೆ. ಮಂಗಳವಾರ ಸಂಜೆ ಇದು ಇನ್ನಷ್ಟು ಅಧಿಕವಾಗಿ, ವಾಹನ ಸವಾರರು ಪರದಾಡಿದರು.

ಪಣತ್ತೂರು, ಬಳಗೆರೆ, ವರ್ತೂರು ನಿವಾಸಿಗಳು ಸ್ಥಳೀಯ ಪರಿಸ್ಥಿತಿಯನ್ನು ಹೇಳಿಕೊಳ್ಳಲು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡರು. ಜಿಆರ್‌ಟಿ ಜಂಕ್ಷನ್‌ನಲ್ಲಿ 90 ನಿಮಿಷ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು ಎಂದು ಪೋಸ್ಟ್ ಮಾಡಿದ್ದರು.

ಎಚ್‌ಎಎಲ್ ವಿಮಾನ ನಿಲ್ದಾಣದ ಸುತ್ತಮುತ್ತ ಅತಿಹೆಚ್ಚು (5 ಸೆಂ.ಮೀ) ಮಳೆಯಾಯಿತು. ಹೊರಮಾವು, ಮಾರತ್‌ಹಳ್ಳಿ, ದೊಡ್ಡನೆಕ್ಕುಂದಿ ಸುತ್ತಮುತ್ತ ತಲಾ 3 ಸೆಂ.ಮೀ, ಜಕ್ಕೂರು, ಹೂಡಿ, ರಾಮಮೂರ್ತಿನಗರ, ಬೆಳ್ಳಂದೂರು, ಅಟ್ಟೂರು, ಯಲಹಂಕ, ಕೆ.ಆರ್. ಪುರದಲ್ಲಿ ತಲಾ 2 ಸೆಂ.ಮೀ. ಮಳೆಯಾಯಿತು.

ಹೋಟೆಲ್‌ಗಳಲ್ಲಿ ದರ ಮತ್ತೆ ದುಬಾರಿ

ಮೂರು ತಿಂಗಳಲ್ಲೇ ಎರಡನೇ ಬಾರಿ ಬೆಲೆ ಏರಿಕೆ • ಗ್ರಾಹಕರಿಗೆ ತಟ್ಟಿದ ಬಿಸಿ

• ಉಮೇಶ ಭಟ್ಟ ಪಿ.ಎಚ್.



ಬೆಂಗಳೂರು: ಮೂರ್ನಾಲ್ಕು ತಿಂಗಳ ಅಂತರದಲ್ಲೇ ವಾಣಿಜ್ಯ ಸಿಲಿಂಡರ್ ಬೆಲೆ ಶೇ 35ರಷ್ಟು ಏರಿಕೆಯಾಗಿರುವ ಕಾರಣ ನಗರದ ಹೋಟೆಲ್‌ಗಳಲ್ಲಿ ತಿಂಡಿ, ಊಟದ ದರ ಎರಡನೇ ಬಾರಿಗೆ ದುಬಾರಿಯಾಗಿದೆ.

ಸಣ್ಣ, ಮಧ್ಯಮ, ದೊಡ್ಡ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಮಾರ್ಚ್‌ನಲ್ಲಿಯೇ ದರ ಏರಿಕೆ ಮಾಡಲಾಗಿತ್ತು. ಈಗ ಸಿಲಿಂಡರ್ ಬೆಲೆ ಮಾತ್ರವಲ್ಲದೇ ದಿನಸಿ ಪದಾರ್ಥಗಳು, ವಿದ್ಯುತ್ ದರ ಸೇರಿದಂತೆ ನಾನಾ ಕಾರಣಗಳಿಂದ ದರಗಳನ್ನು ಮತ್ತೆ ಹೆಚ್ಚಿಸಲಾಗಿದೆ. ಆಯಾ ಹೋಟೆಲ್‌ಗಳಲ್ಲಿ ನಿಗದಿಪಡಿಸಿದ್ದ ದರದಲ್ಲಿ ಹೆಚ್ಚಳವಾಗಿದ್ದು, ಗ್ರಾಹಕರಿಗೆ ಮತ್ತೊಮ್ಮೆ ಬೆಲೆ ಏರಿಕೆಯ ಬಿಸಿ ತಟ್ಟಿದೆ.

ಹೆಚ್ಚಿನ ಹೋಟೆಲ್‌ಗಳಲ್ಲಿ ತಿಂಡಿ, ಊಟದ ದರ ಶೇ 10ರಿಂದ 15ರಷ್ಟು ಹೆಚ್ಚಳವಾಗಿದೆ. ಕೆಲವು ಕಡೆ ದೋಸೆ, ಪೂರಿ ನೀಡುವುದನ್ನೂ ನಿಲ್ಲಿಸಲಾಗಿದೆ. ತಿಂಡಿಗೆ ₹5ರಷ್ಟು , ಊಟಕ್ಕೆ ₹10ರಿಂದ ₹15ವರೆಗೂ ಹೆಚ್ಚಳವಾಗಿದೆ. ಚಹಾ, ಕಾಫಿ ದರ ಕೆಲವು ಕಡೆ ₹12ರಷ್ಟು ಹೆಚ್ಚಾಗಿದ್ದರೆ, ಹಲವು ಕಡೆ ₹15ರಷ್ಟು ಹೆಚ್ಚಳವಾಗಿದೆ. ಇದರಿಂದ ಹೋಟೆಲ್ ಅನ್ನೇ ಅವಲಂಬಿಸುವವರು ದಿನಕ್ಕೆ ₹20 ರಿಂದ ₹30ರವರೆಗೂ ಹೆಚ್ಚು ವ್ಯಯಿಸುವ ಸ್ಥಿತಿ ನಿರ್ಮಾಣವಾಗಿದೆ.

'ಫೆಬ್ರುವರಿ ಅಂತ್ಯದಲ್ಲಿ ಇಸ್ರೇಲ್ ಹಾಗೂ ಇರಾನ್ ನಡುವೆ ಸಂಘರ್ಷ ಆರಂಭವಾದಾಗಿನಿಂದ ತೈಲೋತ್ಪನ್ನಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ವಾಣಿಜ್ಯ ಸಿಲಿಂಡರ್ ದರ ಏರಿಕೆಯಾಗಿರುವ ಜತೆಗೆ ಸರಿಯಾಗಿ ಸರಬರಾಜು ಆಗುತ್ತಿಲ್ಲ. ಸಿಲಿಂಡರ್ ಹೊರೆಯಿಂದ ತಪ್ಪಿಸಿಕೊಳ್ಳಲು ದರ ಹೆಚ್ಚಳ ನಿರ್ಧಾರ ಕೈಗೊಳ್ಳಲಾಗಿದೆ' ಎನ್ನುತ್ತಾರೆ ಹೋಟೆಲ್ ಉದ್ಯಮಿಗಳು.

ನಗರದಲ್ಲಿ ಹೋಟೆಲ್‌ಗಳ ಜತೆಗೆ ದರ್ಶಿನಿಗಳು, ರೆಸ್ಟೋರೆಂಟ್‌ಗಳಿಂದ ಹಿಡಿದು ಪಂಚತಾರಾ ಹೋಟೆಲ್‌ಗಳಿವೆ. ಎಲ್ಲವನ್ನೂ ಸೇರಿಸಿದರೆ ಅಂದಾಜು 25 ಸಾವಿರ ಆಗಬಹುದು. ಬೀದಿ ಬದಿ ನಡೆಯುವ ವಹಿವಾಟುಗಳನ್ನು ಸೇರಿಸಿದರೆ ಈ ಸಂಖ್ಯೆ 40 ಸಾವಿರಕ್ಕೂ ಅಧಿಕವಾಗಲಿದೆ.

ಸಿಲಿಂಡರ್ ಸಮಸ್ಯೆ: '19 ಕೆಜಿಯ ವಾಣಿಜ್ಯ ಸಿಲಿಂಡರ್ ಹಿಂದೆ ₹1,800ಕ್ಕೆ ಸಿಗುತ್ತಿತ್ತು. ಈಗ ₹3 ಸಾವಿರ ದಾಟಿದೆ. ಆದರೆ, ಮುಂಚಿನ ಹಾಗೆ ಸಿಗುವುದಿಲ್ಲ. ₹5 ಸಾವಿರ ನೀಡಿ ನಾಲ್ಕೈದು ಬಾರಿ ಖರೀದಿಸಿದ್ದೇನೆ. ಕೇಂದ್ರ ಸರ್ಕಾರ ಹಾಗೂ ತೈಲ ಕಂಪನಿಗಳು ಸಿಲಿಂಡರ್ ಸರಬರಾಜು ಸಹಜ ಸ್ಥಿತಿಗೆ ಬಂದಿದೆ ಎಂದು ತಿಳಿಸಿದರೂ ನಮಗಂತೂ ಸಿಗುತ್ತಿಲ್ಲ. ಇದನ್ನು ಮೊದಲು ಸರಿಪಡಿಸಬೇಕು' ಎಂದು ಒತ್ತಾಯಿಸುತ್ತಾರೆ ಹೋಟೆಲ್ ವ್ಯಾಪಾರಿಗಳು

'ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ನಾಲ್ಕೇ ತಿಂಗಳಲ್ಲಿ ₹1,884 ರಿಂದ ₹3,152ಕ್ಕೆ ಏರಿಕೆಯಾಗಿದೆ. ಜೊತೆಗೆ ದಿನಸಿ ವಸ್ತುಗಳು, ವಿದ್ಯುತ್ ದರ ಹಾಗೂ ಕಸದ ಸೆಸ್ ಏರಿಕೆಯಾಗಿದ್ದು, ಸಣ್ಣ ಹೋಟೆಲ್ ಮಾಲೀಕರ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿರುವುದರಿಂದ ದರ ಏರಿಕೆ ಅನಿವಾರ್ಯ. ಊಟದಲ್ಲಿ ಕಡಿತದ ಜೊತೆಗೆ ಕೆಲವು ತಿಂಡಿಗಳನ್ನು ಸ್ಥಗಿತ ಮಾಡಿದ್ದೇವೆ' ಎಂದು ಹೋಟೆಲ್ ವ್ಯಾಪಾರಿ ಗುರುಪ್ರಸಾದ್ ತಿಳಿಸಿದರು.

'ಮೂರು ತಿಂಗಳ ಹಿಂದೆಯೇ ಸಿಲಿಂಡರ್ ಸಮಸ್ಯೆಯಾದಾಗ ಮಿನಿ ಊಟದ ದರವನ್ನು ₹10 ಹೆಚ್ಚಿಸಿದ್ದೆವು. ಒಂದು ರೊಟ್ಟಿ, ಚಪಾತಿ ಬೆಲೆ ₹10ರಿಂದ ₹15ಕ್ಕೆ ಏರಿಕೆಯಾಗಿತ್ತು. ಈಗ ಸಿಲಿಂಡರ್ ಸರಿಯಾಗಿ ಸಿಗುತ್ತಿಲ್ಲ. ಹೆಚ್ಚು ದರ ಕೊಟ್ಟು ಖರೀದಿಸುವ ಸ್ಥಿತಿ ಇರುವುದರಿಂದ ಊಟದ ದರವನ್ನು ಏರಿಸಲು ಯೋಚಿಸುತ್ತಿದ್ದೇವೆ' ಎಂದು ಬಾಪೂಜಿನಗರದಲ್ಲಿ ಬಾಗಲಕೋಟೆ ಮೆಸ್ ನಡೆಸುವ ರಂಗಮ್ಮ ಹೇಳಿದರು.

'ಚಾಮರಾಜನಗರ ಜಿಲ್ಲೆಯಿಂದ ಬಂದು ಆರ್‌ಆರ್ ನಗರದ ಖಾಸಗಿ ಕಂಪನಿಯಲ್ಲಿ ಸೆಕ್ಯುರಿಟಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ತಿಂಡಿ, ಊಟದ ದರ ಹೆಚ್ಚಳವಾಗಿರುವುದು ಹೊಡೆತ ಬೀಳುತ್ತಿದೆ. ಒಬ್ಬನೇ ಇರುವುದರಿಂದ ಹೋಟೆಲ್ ಅನ್ನೇ ಅವಲಂಬಿಸಿದ್ದು, ಅನಿವಾರ್ಯವಾಗಿ ಹೆಚ್ಚು ಹಣ ಪಾವತಿಸುವಂತಾಗಿದೆ. ಸಂಬಳ ಹೆಚ್ಚಾದರೆ ಪರವಾಗಿಲ್ಲ. ಇಲ್ಲದೇ ಇದ್ದರೆ ಬದುಕು ನಿರ್ವಹಣೆ ಕಷ್ಟವಾಗಲಿದೆ' ಎಂದು ಸಿದ್ದರಾಜು ಪರಿಸ್ಥಿತಿ ಬಿಡಿಸಿಟ್ಟರು.

ಕನಿಷ್ಠ ವೇತನ ಹೆಚ್ಚಳದ ಆತಂಕ

ಹೋಟೆಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಿರುವುದು ಉದ್ಯಮ ವಲಯದ ಆತಂಕಕ್ಕೆ ಕಾರಣವಾಗಿದೆ.

ಸರ್ಕಾರವು ತಾಲ್ಲೂಕು ಮಟ್ಟದಲ್ಲಿ ಕೌಶಲರಹಿತ ಕಾರ್ಮಿಕರಿಗೆ ₹19,300 ರಿಂದ ₹23,376, ಜಿಲ್ಲಾ ವ್ಯಾಪ್ತಿಯಲ್ಲಿ ಕೌಶಲ ಹೊಂದಿದ ಕಾರ್ಮಿಕರಿಗೆ ₹31,100 ಕನಿಷ್ಠ ವೇತನ ನಿಗದಿಪಡಿಸಿದೆ. ಇದನ್ನು ಜಾರಿಗೊಳಿಸಿದರೆ ಹೊರೆಯಾಗಲಿದೆ ಎನ್ನುವ ಅಭಿಪ್ರಾಯ ಹೋಟೆಲ್ ಉದ್ಯಮಿಗಳಲ್ಲಿ ವ್ಯಕ್ತವಾಗಿದೆ.

'ವೇತನ ಪರಿಷ್ಕರಣೆ ಗ್ರಾಹಕರ ಮೇಲೆ ಗರಿಷ್ಠ ದುಷ್ಪರಿಣಾಮ ಬೀರಬಹುದು. ಹೋಟೆಲ್‌ಗಳಲ್ಲಿ ದರ ಹೆಚ್ಚಳವಾಗಬಹುದು. ರಾಜ್ಯ ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಬೇಕು. ಕಾನೂನು ಮೊರೆ ಹೋಗುವ ಕುರಿತು ಯೋಚಿಸುತ್ತಿದ್ದೇವೆ' ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ ದ (ಕೆಎಸ್‌ಎಚ್‌ಎ) ಅಧ್ಯಕ್ಷ ಜಿ.ಕೆ. ಶೆಟ್ಟಿ ತಿಳಿಸಿದರು.

ವಾಣಿಜ್ಯ ಸಿಲಿಂಡರ್ ದರ ಏರಿಕೆ (₹ಗಳಲ್ಲಿ)

ತೂಕ	ಮಾರ್ಚ್	ಏಪ್ರಿಲ್	ಮೇ	ಜೂನ್
5 ಕೆಜಿ	576.60	625.50	866.50	877
19 ಕೆಜಿ	1,938.50	2141	3,132	3,178
35 ಕೆಜಿ	3,571.50	3,845	5,770.50	5,854
47.5 ಕೆಜಿ	4,842.50	5,349	7,826	7,940.50

ಎಷ್ಟು ಹೆಚ್ಚಳ

ಮಿನಿ ಊಟ	₹50 ರಿಂದ ₹70
ಊಟ	₹100ರಿಂದ ₹120
ದೋಸೆ	₹50ರಿಂದ ₹60



ಅಡುಗೆ ಸಾಮಗ್ರಿಗಳ ದರದಲ್ಲೂ ಏರಿಕೆಯಾಗಿದೆ. ಗ್ರಾಹಕರಿಗೆ ಹೊರೆಯಾಗುತ್ತಿರುವುದು ನಿಜ. ಆದರೆ, ಹೋಟೆಲ್ ಉದ್ಯಮವನ್ನು ನಡೆಸುವುದೇ ಕಷ್ಟ ಎನ್ನುವ ಸ್ಥಿತಿ ಇರುವಾಗ ದರ ಏರಿಕೆ ಅನಿವಾರ್ಯ

ಜಿ.ಕೆ.ಶೆಟ್ಟಿ, ಅಧ್ಯಕ್ಷ,
ಕರ್ನಾಟಕರಾಜ್ಯಹೋಟೆಲುಗಳ ಸಂಘ

ವಿಧಾನ ಪರಿಷತ್ ಮಾಜಿ ಸದಸ್ಯನ ಅಪಹರಣ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೀಲಲಿಗೆ ಸಮೀಪ ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ಟಿ. ದಯಾನಂದರೆಡ್ಡಿ ಅವರನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣ ನಡೆದಿದೆ. ಸೂರ್ಯಸಿಟಿ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.



ದಯಾನಂದ ರೆಡ್ಡಿ

'ಸೋಮವಾರ ರಾತ್ರಿ 12.15 ಗಂಟೆ ಸಮಯದಲ್ಲಿ ಗೋಲ್ಡ್‌ಕಾಯಿನ್ ಕ್ಲಬ್‌ನಿಂದ ಮನೆಯತ್ತ ಬರುವಾಗ ಹೀಲಲಿಗೆ ಬಳಿ ಕಾರು ಅಡ್ಡಗಟ್ಟಿದ ದುಷ್ಕರ್ಮಿಗಳು ತಮಗೆ ಗಿಫ್ಟ್ ಇದೆ ಎಂದರು. ಆಗ ಚಾಲಕ ಕಾರು ನಿಲ್ಲಿಸಿದ ತಕ್ಷಣ ಕಾರು ಹತ್ತಿದ ದುಷ್ಕರ್ಮಿಗಳು, ತಲೆಗೆ ಗನ್ ಇಟ್ಟು ಜಿಗಣಿ ಸೂರ್ಯಸಿಟಿ 3ನೇ ಹಂತಕ್ಕೆ ಕರೆದೊಯ್ದರು' ಎಂದು ದಯಾನಂದರೆಡ್ಡಿ ಮಾಹಿತಿ ನೀಡಿದರು.

'ಬೆಳಗಿನ ಜಾವ 4.45ರವರೆಗೂ ನಾಲ್ವರು ದುಷ್ಕರ್ಮಿಗಳು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ಟ್ರೇಡಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದೇವೆ. ಕುಟುಂಬ ಸಾಗಿಸುವುದೇ ಕಷ್ಟವಾಗಿದೆ. ನಿಮ್ಮನ್ನು ಅಪಹರಣ ಮಾಡಲು ₹10 ಕೋಟಿ ಸುಪಾರಿ ಪಡೆದಿದ್ದೇವೆ. ಈ ಪೈಕಿ ₹3 ಕೋಟಿ ಖರ್ಚು ಮಾಡಿದ್ದೇವೆ' ಎಂದು ತಿಳಿಸಿದ್ದಾರೆ.

'₹3 ಕೋಟಿ ಹಣ ನೀಡಬೇಕು. ನಿಮಗೆ ಯಾವುದೇ ತೊಂದರೆ ಕೊಡುವ ಉದ್ದೇಶವಿಲ್ಲ. ನಿಮ್ಮ ಬಗ್ಗೆ ವಿಕಿಪಿಡಿಯಾದಲ್ಲಿ ತಿಳಿದುಕೊಂಡಿದ್ದೇವೆ. ಸಮಾಜಕ್ಕೆ ನೀವು ಅಪಾರ ಕೊಡುಗೆ ನೀಡಿದ್ದೀರಿ' ಎಂದಿದ್ದಾರೆ. ಈ ಸಮಯದಲ್ಲಿ ದಯಾನಂದರೆಡ್ಡಿ, 'ಹಣ ನೀಡಲು ಯಾವುದೇ ತೊಂದರೆಯಿಲ್ಲ. ಆದರೆ, ಈಗ ನಗದು ಹಣವಿಲ್ಲ. ಮೊಬೈಲ್ ಸಂಖ್ಯೆ ನೀಡಿ ಬೆಳಿಗ್ಗೆ ಹಣ ಕೊಡುತ್ತೇನೆ' ಎಂದು ಹೇಳಿ ಅಪಹರಣಕಾರರಿಂದ ಪಾರಾಗಿದ್ದಾರೆ.


ಇಬ್ಬರ ಪತ್ತೆ: ಪ್ರಕರಣದ ಬೆನ್ನು ಹತ್ತಿದ ಪೊಲೀಸರು, ಆರೋಪಿ ಪ್ರವೀಣ್ ಸೇರಿದಂತೆ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಇನ್ನಿಬ್ಬರ ಬಂಧನಕ್ಕೆ ಬಲೆ ಬೀಸಿದ್ದಾರೆ.

ಕೇರಳಂ ಮೂಲದ ದುಷ್ಕರ್ಮಿಗಳು ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದ ಪ್ರದೇಶ ಆಯ್ಕೆ ಮಾಡಿಕೊಂಡಿದ್ದಾರೆ. ಅವರ ಚಲನವಲನ ಗಮನಿಸಿ ಸೋಮವಾರ ಮಧ್ಯರಾತ್ರಿ ಅಪಹರಿಸಿದ್ದಾರೆ.

'ಮಾತಿಗಿಳಿದ ಚಿತ್ರ' ಪುಸ್ತಕಕ್ಕೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ ನೀಡುವ 2024ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಲಕ್ಷ್ಮಣ ಬಾದಾಮಿ ಅವರ 'ಮಾತಿಗಿಳಿದ ಚಿತ್ರ' ಕೃತಿ ಆಯ್ಕೆಯಾಗಿದೆ.



ಬಹುಮಾನಕ್ಕೆ ಒಟ್ಟು ಏಳು ಪುಸ್ತಕಗಳು ಬಂದಿದ್ದವು. ಆ ಪುಸ್ತಕಗಳನ್ನು ಮೌಲ್ಯಮಾಪಕರ ಪರಿಶೀಲನೆಗೆ ಕಳುಹಿಸಿ, ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತ ತಿಳಿಸಿದ್ದಾರೆ.



ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಬ್ರಾಹ್ಮಣರ ಸಂಘದಲ್ಲಿ ಶ್ರೀ ಮಂಜುನಾಥ ನೇತ್ರಾಲಯದಿಂದ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು. ಡಾ. ತುಂಗಪ್ಪ ಕೆ.ಎಸ್, ಬಿ. ಕೃಷ್ಣಮೂರ್ತಿ, ಬ್ರಾಹ್ಮಣರ ಸಂಘದ ಅಧ್ಯಕ್ಷ ಶ್ರೀಧರ ಮೂರ್ತಿ ಉಪಸ್ಥಿತರಿದ್ದರು

ಎಸ್‌ಐಆರ್: ಪಾರದರ್ಶಕ ಪಟ್ಟಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಅಡಿ ಮುಕ್ತ-ಪಾರದರ್ಶಕ ಪಟ್ಟಿ ಸಿದ್ಧಗೊಳಿಸಲು ಕ್ರಮ ಕೈಗೊಳ್ಳುವಂತೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹಾಗೂ ಪಶ್ಚಿಮ ನಗರ ಪಾಲಿಕೆ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

ಅರ್ಹ ಮತದಾರರು ಚುನಾವಣಾ ಪ್ರಕ್ರಿಯೆಯಿಂದ ವಂಚಿತರಾಗಬಾರದು ಮತ್ತು ಅನರ್ಹರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯಬಾರದು ಎಂಬ ಉದ್ದೇಶದಿಂದ ಕೇಂದ್ರ ಚುನಾವಣಾ ಆಯೋಗವು ರಾಜ್ಯದಾದ್ಯಂತ ಎಸ್‌ಐಆರ್ ಹಮ್ಮಿಕೊಂಡಿದೆ. ಮತದಾರರ ಪಟ್ಟಿಯನ್ನು ಪಾರದರ್ಶಕವಾಗಿ ನವೀಕರಿಸಲು ಚುನಾವಣಾ ಆಯೋಗವು ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂದು ಮಂಗಳವಾರ ನಡೆದ ಪ್ರತ್ಯೇಕ ಸಭೆಯಲ್ಲಿ ಹೇಳಿದರು.

ಮತದಾರರ ನೋಂದಣಾಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿ, ಬೂತ್ ಮಟ್ಟದ ಅಧಿಕಾರಿಗಳ ಮೇಲುಸ್ತುವಾರಿ ಹಾಗೂ ಬೂತ್ ಮಟ್ಟದ ಅಧಿಕಾರಿಗಳಿಗೆ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕುರಿತಂತೆ ಅಗತ್ಯ ತರಬೇತಿ ನೀಡಲಾಗಿದೆ ಎಂದು ದಕ್ಷಿಣ ನಗರ ಪಾಲಿಕೆ ಆಯುಕ್ತ ಹಾಗೂ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಕೆ.ಎನ್. ರಮೇಶ್ ತಿಳಿಸಿದರು.

ಮತದಾರರ ಪಟ್ಟಿಯ ಪರಿಷ್ಕರಣೆಗಾಗಿ ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ಅರ್ಜಿ ವಿತರಿಸಿ,



ಭರ್ತಿ ಮಾಡಿದ ಅರ್ಜಿಗಳನ್ನು ಸ್ಥಳದಲ್ಲೇ ಪಡೆಯುತ್ತಾರೆ ಎಂದರು.

ಎರಡು ತಿಂಗಳಲ್ಲಿ ಮ್ಯಾಪಿಂಗ್, ಅನ್ ಮ್ಯಾಪಿಂಗ್, ರಿ-ಮ್ಯಾಪಿಂಗ್ ಇತ್ಯಾದಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಪ್ರಾಮಾಣಿಕ ಪ್ರಯತ್ನ ಅಗತ್ಯ. ಈ ಕುರಿತಂತೆ ಬಿಎಲ್‌ಒಗಳು ಅಧಿಕೃತ ರಾಜಕೀಯ ಪಕ್ಷಗಳಿಂದ ನಿಯೋಜಿಸಲ್ಪಟ್ಟ ಮತಗಟ್ಟೆ ಏಜೆಂಟರ (ಬಿಎಲ್‌ಎ) ನೆರವು ಪಡೆದು, ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು. ಮತಗಟ್ಟೆಗಳಲ್ಲಿ ಬಿಎಲ್‌ಒಗಳಿಗೆ ಅಂತರ್ಜಾಲ ಇತ್ಯಾದಿ ಅಗತ್ಯ ಸೌಲಭ್ಯಗಳು ದೊರಕುವಂತೆ ಬಿಎಲ್‌ಒ ಸೂಪರ್‌ವೈಸರ್‌ಗಳು, ಇಆರ್‌ಒ, ಎಇಆರ್‌ಒಗಳು ವ್ಯವಸ್ಥೆ ಮಾಡಬೇಕು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಹಾಗೂ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

ಅರ್ಹ ಹೊಸ ಮತದಾರರನ್ನು ಪಟ್ಟಿಗೆ ಸೇರಿಸುವುದು, ದ್ವಿಪ್ರತಿ, ವರ್ಗಾವಣೆಗೊಂಡಿರುವ, ಮರಣ ಹೊಂದಿರುವ ಹಾಗೂ ಅನರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವುದು ಮತ್ತು ತಪ್ಪು ವಿವರಗಳನ್ನು ಸರಿಪಡಿಸಲು ನಿಗದಿತ ಅರ್ಜಿ ನಮೂನೆಗಳನ್ನು ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ಸ್ಥಳದಲ್ಲೇ ಸಂಗ್ರಹಿಸಲು ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

'ಕಾಮಗಾರಿ ಪೂರ್ಣಗೊಳಿಸಿ'

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) ಮತ್ತು ಯೋಜನಾತ್ಮಕ ಹೂಡಿಕೆ ಯೋಜನೆ (ಎಸ್‌ಐಪಿ) ಅಡಿ ಅನುಷ್ಠಾನವಾಗುತ್ತಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಸೂಚಿಸಿದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬಿಟುಮಿನ್ ದರಗಳು ಹಾಗೂ ಸ್ಟಾರ್ ರೇಟ್‌ಗಳಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಲ್ಲಿ ಉಂಟಾಗಿದ್ದ ಗೊಂದಲಗಳನ್ನು ಅಧಿಕಾರಿಗಳು ವಿವರಿಸಿ ಸ್ಪಷ್ಟನೆ ನೀಡಿದರು.

ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಾವುದೇ ತಾಂತ್ರಿಕ ಅಥವಾ ಆಡಳಿತಾತ್ಮಕ ಸಮಸ್ಯೆಗಳಿದ್ದಲ್ಲಿ ಅಧಿಕಾರಿಗಳ ಗಮನಕ್ಕೆ ತರುವಂತೆ ತಿಳಿಸಿದ ಅವರು, ಪಾಲಿಕೆಯ ವತಿಯಿಂದ ಅಗತ್ಯ ಸಹಕಾರ ಹಾಗೂ ಪರಿಹಾರ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ನೀರು ನಿಲ್ಲುವ ಪ್ರದೇಶಗಳು, ರಾಜಕಾಲುವೆಗಳ ಸ್ವಚ್ಛತೆ, ಚರಂಡಿ ನಿರ್ವಹಣೆ, ರಸ್ತೆ ಸ್ವಚ್ಛತೆ, ಸ್ವೀಪಿಂಗ್ ಯಂತ್ರಗಳ ಬಳಕೆ, ಡೆಬ್ರಿಸ್ ತೆರವು, ಆನ್-ಸ್ಟ್ರೀಟ್ ಮತ್ತು ಆಫ್-ಸ್ಟ್ರೀಟ್ ಪಾರ್ಕಿಂಗ್ ವ್ಯವಸ್ಥೆಗಳು ಹಾಗೂ ಸ್ಕೈವಾಕ್ ಟೆಂಡರ್ ಪ್ರಗತಿ ಕುರಿತು ಪರಿಶೀಲನೆ ನಡೆಸಲಾಯಿತು.



ಬೆಂಗಳೂರಿನ ಹೈಕೋರ್ಟ್ ಮಧ್ಯಸ್ಥಿಕೆ ಮತ್ತು ಸೌಹಾರ್ದ ಕೇಂದ್ರ ಹಾಗೂ ಅಲಯನ್ಸ್ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ನೀಡುವ ಒಪ್ಪಂದಕ್ಕೆ ಸಹಿ ಹಾಕಿದವು. ಕೇಂದ್ರದ ನಿರ್ದೇಶಕ ದಿನೇಶ್ ಹೆಗ್ಡೆ, ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಮತಂ ವಿಶ್ವನಾಥಯ್ಯ, ವಿಘ್ನೇಶ್ ಕುಮಾರ್, ಸುರೇಶಾ ಶೆಟ್ಟಿ, ಪ್ರೊ.ವಿ.ಶ್ಯಾಮ್ ಕಿಶೋರ್, ಪ್ರೊ.ಎನ್.ಜೆ.ದೇವಯ್ಯ, ಪ್ರೊ.ಕೆ.ಇ.ಚಂದ್ರಶೇಖರ್ ಪ್ರೊ.ಟಿ.ಜಯಶ್ರೀ, ಪ್ರೊ.ವಿಶಾಲ್ ರಣಾವರೆ, ಪ್ರೀತಿ ಜೈನ್ ಪಾಲ್ಗೊಂಡಿದ್ದರು

ಇಂಟರ್ನ್‌ಶಿಪ್‌ಗೆ ಅಲಯನ್ಸ್ ವಿ.ವಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ವಿದ್ಯಾರ್ಥಿಗಳಿಗೆ ಮಧ್ಯಸ್ಥಿಕೆ ಪ್ರಕ್ರಿಯೆಗಳ ಪ್ರಾಯೋಗಿಕ ಅನುಭವ ಪಡೆಯಲು ಅವಕಾಶ ನೀಡುವ ನಿಟ್ಟಿನಲ್ಲಿ ಅಲಯನ್ಸ್ ವಿಶ್ವವಿದ್ಯಾಲಯವು ಹೈಕೋರ್ಟ್‌ನ ಮಧ್ಯಸ್ಥಿಕೆ ಮತ್ತು ಸೌಹಾರ್ದ ಕೇಂದ್ರದೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಪರ್ಯಾಯ ವಿವಾದ ಪರಿಹಾರ (ಎಡಿಆರ್), ಮಧ್ಯಸ್ಥಿಕೆ ಮತ್ತು ಸೌಹಾರ್ದ ಕ್ಷೇತ್ರಗಳಲ್ಲಿ ಶೈಕ್ಷಣಿಕ ಸಹಕಾರ, ಸಂಶೋಧನ ಮತ್ತು ಕೌಶಲ ಅಭಿವೃದ್ಧಿಯನ್ನು 'ಇಂಟರ್ನ್‌ಶಿಪ್ ಸಹಯೋಗ ಕಾರ್ಯಕ್ರಮ'ದಡಿ (ಐಸಿಪಿ) ವಿದ್ಯಾರ್ಥಿಗಳು ಪಡೆಯಲಿದ್ದಾರೆ.

ಜಿಲ್ಲಾ ನ್ಯಾಯಾಧೀಶರೂ ಆದ ಮಧ್ಯಸ್ಥಿಕೆ ಮತ್ತು ಸೌಹಾರ್ದ ಕೇಂದ್ರದ ನಿರ್ದೇಶಕ ದಿನೇಶ್ ಹೆಗ್ಡೆ ಮತ್ತು ಅಲಯನ್ಸ್ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಮತಂ ವಿಶ್ವನಾಥಯ್ಯ ಒಪ್ಪಂದಕ್ಕೆ ಸಹಿಹಾಕಿದರು.

ಕೇಂದ್ರದ ಉಪ ನಿರ್ದೇಶಕ ವಿಘ್ನೇಶ್ ಕುಮಾರ್, ವಿಶ್ವವಿದ್ಯಾಲಯದ ಸುರೇಶಾ ಶೆಟ್ಟಿ, ಪ್ರೊ.ವಿ.ಶ್ಯಾಮ್ ಕಿಶೋರ್, ಪ್ರೊ.ಎನ್.ಜೆ.ದೇವಯ್ಯ, ಪ್ರೊ. ಕೆ.ಇ.ಚಂದ್ರಶೇಖರ್, ಪ್ರೊ.ಟಿ.ಜಯಶ್ರೀ, ಪ್ರೊ.ವಿಶಾಲ್ ರಣಾವರೆ, ಪ್ರೀತಿ ಜೈನ್ ಪಾಲ್ಗೊಂಡಿದ್ದರು.

ಮರ ಬಿದ್ದ ಜಾಗದಲ್ಲಿ ಗಿಡ ನೆಟ್ಟು ಪೋಷಿಸುವ ಅಭಿಯಾನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಗಾಳಿ ಹಾಗೂ ಮಳೆಗೆ ಮರಗಳು ಉರುಳಿ ಬಿದ್ದ ಜಾಗದಲ್ಲಿ ಸಸಿಗಳನ್ನು ನೆಟ್ಟು ಪೋಷಿಸುವ ಅಭಿಯಾನ ಜೂನ್ 5ರಿಂದ ಮೂರು ದಿನ ನಡೆಯಲಿದೆ.

ವಿಶ್ವ ಪರಿಸರ ದಿನದ ಆಚರಣೆ ಅಂಗವಾಗಿ, ಎಲ್ಲಿ ಮರಗಳು ಬಿದ್ದಿವೆಯೋ ಆ ಮರದ ಬುಡದ ಜಾಗದಲ್ಲಿ ಸಸಿ ನೆಟ್ಟು ಪೋಷಣೆ ಮಾಡಲಿದ್ದೇವೆ ಎಂದು ನೇಸರ ಫೌಂಡೇಶನ್ ಸಂಸ್ಥಾಪಕ ಬಿ.ಎಸ್. ಅನಿಲ್‌ಕುಮಾರ್ ತಿಳಿಸಿದರು.

'ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಎಲ್ಲಿಯಾದರೂ ಮರಗಳು ಉರುಳಿದ್ದರೆ ಅಲ್ಲಿನ ಸ್ಥಳೀಯ ನಿವಾಸಿಗಳಾಗಲಿ, ಮುಖಂಡರಾಗಲಿ ನಮಗೆ ಕರೆ (8970848586) ಮಾಡಿ ತಿಳಿಸಿದರೆ ನಾವು ಗಿಡ ನಿಟ್ಟು ಪೋಷಿಸುತ್ತೇವೆ. ಅಭಿಯಾನ ಮಾಡುತ್ತೇವೆ. ಇಂದಿನಿಂದ ಗಿಡ ನೆಡುವ ಅಭಿಯಾನ ಪ್ರಾರಂಭವಾಗಿದೆ' ಎಂದರು.

'ತಂತ್ರಜ್ಞಾನ ಮನುಷ್ಯರನ್ನೇ ಕೊಲ್ಲುತ್ತಿದೆ'

ನೃಪತುಂಗ ವಿ.ವಿ ಘಟಿಕೋತ್ಸವದಲ್ಲಿ ವಿಮರ್ಶಕ ಎಚ್.ಎಸ್.ರಾಘವೇಂದ್ರ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶತಶತಮಾನಗಳಿಂದಲೂ ವಿಜ್ಞಾನ ಮತ್ತು ಧರ್ಮದ ನಡುವೆ ಸಂಘರ್ಷ ನಡೆಯುತ್ತಿದ್ದು, ಆಧುನಿಕ ಕಾಲಘಟ್ಟದಲ್ಲೂ ಅದು ಮುಂದುವರಿದಿದೆ. ಪಟ್ಟಭದ್ರ ಹಿತಾಸಕ್ತಿಗಳು ತಂತ್ರಜ್ಞಾನವನ್ನೇ ವಿಜ್ಞಾನ ಎಂದು ಬಿಂಬಿಸುತ್ತಾ ಮನುಷ್ಯರನ್ನೇ ಕೊಲ್ಲುವ ಕೆಲಸ ಮಾಡುತ್ತಿದ್ದಾರೆ ಎಂದು ವಿಮರ್ಶಕ ಎಚ್.ಎಸ್.ರಾಘವೇಂದ್ರ ರಾವ್ ಹೇಳಿದರು.

ನೃಪತುಂಗ ವಿಶ್ವವಿದ್ಯಾಲಯದ ಎರಡು ಮತ್ತು ಮೂರನೇ ವರ್ಷದ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ವೈಜ್ಞಾನಿಕ ಮನೋಧರ್ಮಕ್ಕೂ ವಿಜ್ಞಾನದ ಕಲಿಕೆಗೂ ನಡುವಿನ ಕೊಂಡಿ ಕತ್ತರಿಸುವ ಅಪಾಯಕಾರಿ ಬೆಳವಣಿಗೆ. ಭೌತವಿಜ್ಞಾನ, ನಿಸರ್ಗ ವಿಜ್ಞಾನ, ಸಮಾಜ ವಿಜ್ಞಾನಗಳನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಲಾಗುತ್ತಿದ್ದು, ತಂತ್ರಜ್ಞಾನದ ಬೆನ್ನು ಹತ್ತಲಾಗಿದೆ. ತಂತ್ರಜ್ಞಾನವು ಯಂತ್ರ ನಾಗರಿಕತೆಯತ್ತ ವಾಲುತ್ತಿದೆ. ಮಾನವೀಯ ಮೌಲ್ಯಗಳನ್ನು ಬದಿಗೆ ಸರಿಸಲಾಗಿದೆ. ತಂತ್ರಜ್ಞಾನದ ಮೂಲ ಬೇರು ವಿಜ್ಞಾನವನ್ನೇ ಕಡೆಗಣಿಸಲಾಗಿದೆ ಎಂದರು.



ಚರಿತ್ರೆ ಅರ್ಥ ಮಾಡಿಕೊಂಡರೆ ಭವಿಷ್ಯ ರೂಪಿಸಲು ಸಾಧ್ಯ. ವೈಜ್ಞಾನಿಕವಾಗಿ ಎಷ್ಟೇ ಮುಂದುವರಿದರೂ ಮಾನವೀಯ ಮೌಲ್ಯಗಳನ್ನು ಕಳೆದುಕೊಂಡ ಸಮಾಜ ಎಂದಿಗೂ ಶ್ರೇಷ್ಠವಾಗದು

ಎಸ್.ಜಿ.ಸಿದ್ದರಾಮಯ್ಯ, ಸಾಹಿತಿ

ಮುಂದುವರಿದ ದೇಶಗಳು ಹೆಚ್ಚು ವಿನಾಶಕಾರಿ ಕ್ರಮಗಳನ್ನು ಕೈಗೊಳ್ಳುತ್ತಿವೆ. ಡ್ರೋನ್ ಮೂಲಕ ಬಾಂಬ್ ಹಾಕುವುದನ್ನಾಗಲೀ ವಿಜ್ಞಾನದ ಸಂಶೋಧನೆಗಳು ನಡೆಯುತ್ತಿವೆ ಎನ್ನುವ ವಾತಾವರಣವಿದೆ. ಈ ಕುರಿತು ಆತ್ಮಾವಲೋಕನ ನಡೆಯಬೇಕಿದೆ. ವಿಜ್ಞಾನವನ್ನು ಇಲ್ಲಿಯವರೆಗೂ ಪಾಶ್ಚಾತ್ಯ ನೆಲೆಗಟ್ಟಿನಲ್ಲಿಯೇ ನೋಡಲಾಗಿದೆ. ಭಾರತೀಯ ಪರಂಪರೆಯೂ ವಿಜ್ಞಾನದ ಅಮೂರ್ತ ಚಿಂತನೆ. ಸಂಶೋಧನೆ ನಡೆದಂತೆ ಹೊಸತನ ಬರುತ್ತದೆ ಎಂದು ಹೇಳಿದರು.

ವಿಜ್ಞಾನವನ್ನು ಸರಳ ಕನ್ನಡದಲ್ಲಿ ಕನ್ನಡಿಗರಿಗೆ ತಲುಪಿಸುವ ಕೆಲಸವಾಗಬೇಕು. ಇಂದಿಗೂ ಕನ್ನಡದಲ್ಲಿ ಮನಸ್ಸು ಅಥವಾ ಶಸ್ತ್ರಚಿಕಿತ್ಸೆಯ ಕೃತಿಗಳಿಲ್ಲ. ವಿಜ್ಞಾನದ ವಿಚಾರವನ್ನು ಕನ್ನಡಿಗರಿಗೆ ಸರಳ ಕನ್ನಡದಲ್ಲಿ ತಲುಪಿಸುವ ಕೆಲಸವನ್ನು ಯುವ ಜನರು ಮಾಡಬೇಕು ಎಂದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ.ಮೋಹನ್‌ಕುಮಾರ್, ಕುಲಸಚಿವೆ ಅದಾ ಫಾತಿಮಾ, ಪರೀಕ್ಷಾಂಗ ಕುಲಸಚಿವ ಟಿ.ಎಂ.ಮಂಜುನಾಥ್ ಉಪಸ್ಥಿತರಿದ್ದರು.



ನೃಪತುಂಗ ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳು –ಪ್ರಜಾವಾಣಿ ಚಿತ್ರ

ಜಯಮಾಲಾ ಸೇರಿ 6 ಗಣ್ಯರಿಗೆ ಗೌರವ ಡಾಕ್ಟರೇಟ್

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ರಾಮಚಂದ್ರ, ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಜಲಸಂಪನ್ಮೂಲ ನಿರ್ವಹಣಾ ತಜ್ಞ ಕೆ.ಜೈಪ್ರಕಾಶ್, ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ, ನಿವೃತ್ತ ಪೊಲೀಸ್ ಅಧಿಕಾರಿ ಎಸ್.ಮರಿಸ್ವಾಮಿ, ಬಾಲಭವನದ ಕಾರ್ಯದರ್ಶಿ ಬಿ.ಎಚ್.ನಿಶ್ಚಲ್ ಅವರಿಗೆ ವಿ.ವಿ.ಯಿಂದ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಪದವಿ, ಸ್ನಾತಕೋತ್ತರ ಪದವಿ ಪೂರೈಸಿದ 18 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 700 ಸ್ನಾತಕ ಮತ್ತು 1,081 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಮಲ್ಲೇಶ್ವರ: ನಿವಾಸಿಗಳು, ನಗರ ಯೋಜಕರ ಸಂವಾದ
ಸಮಸ್ಯೆಗಳ ಪರಿಹಾರಕ್ಕೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಸಮಸ್ಯೆಗಳನ್ನು ನಿವಾರಿಸಿ ಮಲ್ಲೇಶ್ವರದ 53ನೇ ವಾರ್ಡ್ ಅನ್ನು ನಡೆಯಲು ಯೋಗ್ಯವಾದ ವಾರ್ಡ್ ಮಾಡಬೇಕು ಎಂಬ ಏಕಧ್ವನಿ ಪ್ರತಿಧ್ವನಿಸಿತು.

ಮಲ್ಲೇಶ್ವರ ವಾರ್ಡ್ 53 ಅನ್ನು ಮರುರೂಪಿಸುವ ಬಗ್ಗೆ ನಿವಾಸಿಗಳು, ನಗರ ಯೋಜಕರು ಮತ್ತು ಸಂಚಾರ ತಜ್ಞರೊಂದಿಗೆ ನಡೆದ ಸಂವಾದ ಕಾರ್ಯಕ್ರಮವು ಇದಕ್ಕೆ ವೇದಿಕೆಯಾಯಿತು.

ಸುರಕ್ಷಿತ, ಸುಗಮ ಮತ್ತು ಸುಲಭವಾಗಿ ಪ್ರವೇಶಿಸಬಹುದಾದ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು. ಪಾದಚಾರಿಗಳ ಹಿತಾಸಕ್ತಿ ಮತ್ತು ವಾಹನ ನಿಲುಗಡೆಯ ಅಗತ್ಯತೆಗಳ ನಡುವೆ ಸಮತೋಲನ ಇರಬೇಕಿದ್ದರೆ ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಎಲ್ಲೆಂದರಲ್ಲಿ ಬೀದಿ ವ್ಯಾಪಾರ ನಡೆಸುವ ಬದಲು ಬೀದಿ ವ್ಯಾಪಾರಿಗಳಿಗೆ ನಿಗದಿತ ಜಾಗ ಕಲ್ಪಿಸಬೇಕು. ಸ್ವಚ್ಛ ಹಾಗೂ ಹೆಚ್ಚು ಉಪಯುಕ್ತ ಸಾರ್ವಜನಿಕ ಸ್ಥಳಗಳಿಗಾಗಿ ತ್ಯಾಜ್ಯ ವಿಲೇವಾರಿ ವ್ಯವಸ್ಥೆಯನ್ನು ಸುಧಾರಿಸಬೇಕು ಎಂಬ ನಾಲ್ಕು ಅಂಶಗಳು ಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾದವು.

ಆಡಳಿತ ನಡೆಸುವವರು ಮೊದಲು ನಿರ್ಧಾರ ಕೈಗೊಂಡು ಆಮೇಲೆ ಜನರಿಗೆ ತಿಳಿಸುವ ಬದಲು, ಜನರ ಸಮಸ್ಯೆಯನ್ನು ಆಲಿಸಿ ಅದಕ್ಕೆ ಸರಿಯಾದ ಪರಿಹಾರೋಪಾಯವನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಪ್ರೀತಿ ಸುಂದೇರಾಜನ್ ಆಯೋಜಿಸಿದ್ದ ಮತ್ತು ಗ್ರೀನ್‌ಪೀಸ್ ಇಂಡಿಯಾದ ಬೆಂಗಳೂರು ರೈಸಿಂಗ್ ಕ್ಯಾಂಪೇನ್ ವಿನ್ಯಾಸಗೊಳಿಸಿದ್ದ ಈ ಕಾರ್ಯಕ್ರಮದಲ್ಲಿ ಐಎಸ್‌ಸಿ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ ಆಶಿಶ್ ವರ್ಮಾ, ಸ್ಟ್ರೀಟ್ ಮ್ಯಾಟ್ರಿಕ್ಸ್‌ನ ರೀಶ್ಮಾ ಪಿ.ಎಸ್., ಆನ್ ಜಾಕೋಬ್, ಊರ್ವಾಣಿ ಫೌಂಡೇಷನ್‌ನ ಮೀರಾ ಕೆ., ಗ್ರೀನ್‌ಪೀಸ್ ಇಂಡಿಯಾದ ಬೆಂಗಳೂರು ರೈಸಿಂಗ್ ಕ್ಯಾಂಪೇನ್ ಪ್ರತಿನಿಧಿ ದೀಪಕ್ ಶ್ರೀನಿವಾಸನ್, ಪ್ರೀತಿ ಸುಂದೇರಾಜನ್ ಸೇರಿದಂತೆ ಹಲವರು ಸಲಹೆಗಳನ್ನು ನೀಡಿದರು.

ಸಿಡಬ್ಲುಸಿ ಸದಸ್ಯರಾಗಿ ಸಿದ್ದರಾಮಯ್ಯ ನೇಮಕ



ನವದೆಹಲಿ (ಪಿಟಿಐ): ಕರ್ನಾಟಕದ ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲುಸಿ) ಸದಸ್ಯರನ್ನಾಗಿ ಕಾಂಗ್ರೆಸ್ ಮಂಗಳವಾರ ನೇಮಕ ಮಾಡಿದೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಒಂದು ದಿನ ಮುಂಚೆ ಈ ಘೋಷಣೆ ಮಾಡಲಾಗಿದೆ.

'ಸಿದ್ದರಾಮಯ್ಯ ಅವರ ನೇಮಕವು ತಕ್ಷಣದಿಂದ ಜಾರಿಗೆ ಬರಲಿದೆ ಎಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆದೇಶಿಸಿದ್ದಾರೆ' ಎಂದು ಪಕ್ಷವು ಹೇಳಿಕೆಯಲ್ಲಿ ತಿಳಿಸಿದೆ.

ಕೆಪೆಕ್ ಸ್ವಾಧೀನಕ್ಕೆ ಶೀತಲ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂಜೇನಹಳ್ಳಿಯ ಸಮಗ್ರ ಶೀತಲ ಸರಪಳಿ ಘಟಕವನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮವು (ಕೆಪೆಕ್) ಮಂಗಳವಾರ ಸ್ವಾಧೀನಕ್ಕೆ ಪಡೆದುಕೊಂಡಿದೆ.

ದೇವನಹಳ್ಳಿ ತಾಲ್ಲೂಕಿನ ಕನ್ನಮಂಗಲ ಗ್ರಾಮದ ಪೂಜೇನಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ಘಟಕವನ್ನು ಕೆಪೆಕ್ ಸ್ಥಾಪಿಸಿತ್ತು. ಅದನ್ನು 2024ರ ಜೂನ್ 6ರಂದು ಫಿಜಾ ಗ್ಲೋಬಲ್ ಆಗ್ರೋವೆಂಚರ್ಸ್ ಸಂಸ್ಥೆಗೆ ಹಸ್ತಾಂತರ ಮಾಡಿತ್ತು.

ಬಾಡಿಗೆ ಪಾವತಿಸದಿರುವುದು ಮತ್ತು ಒಪ್ಪಂದ ಉಲ್ಲಂಘಿಸಿ ಘಟಕವನ್ನು ಅನ್ಯ ಉದ್ದೇಶಕ್ಕೆ ಬಳಸಿದ್ದ ಕಾರಣ ಘಟಕವನ್ನು ಹಿಂತಿರುಗಿಸಲು 2025ರ ಜುಲೈ 28ರಂದು ಒಪ್ಪಂದ ರದ್ದುಗೊಳಿಸಿ ಕೆಪೆಕ್ ನೋಟಿಸ್ ನೀಡಿತ್ತು.

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಆಕ್ರಮಣದಾರರನ್ನು ಒಕ್ಕಲೆಬ್ಬಿಸುವ) ಕಾಯ್ದೆ, 1974ರ ಅಡಿಯಲ್ಲಿ ಸ್ವಾಧೀನ ಅಧಿಕಾರಿಯಾಗಿ ಸರ್ಕಾರವು ಸಿ.ಎನ್. ಶಿವಪ್ರಕಾಶ್ ಅವರನ್ನು ನೇಮಿಸಿತ್ತು. ಅವರು ತೆರವು ಮಾಡಲು ಫಿಜಾ ಗ್ಲೋಬಲ್ ಆಗ್ರೋವೆಂಚರ್ಸ್‌ಗೆ 45 ದಿನಗಳ ಅವಕಾಶ ನೀಡಿ ಕಳೆದ ಏ.10ರಂದು ನೋಟಿಸ್ ನೀಡಿದ್ದರು.

'ನಿಗದಿತ ಅವಧಿಯಲ್ಲಿ ಘಟಕವನ್ನು ಕೆಪೆಕ್‌ಗೆ ಹಸ್ತಾಂತರಿಸದ ಕಾರಣ ಸ್ವಾಧೀನಪಡಿಸಿಕೊಳ್ಳಲಾಗಿದೆ' ಎಂದು ಸ್ವಾಧೀನ ಅಧಿಕಾರಿಯೂ ಆದ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬನಶಂಕರಿ ದೇವಸ್ಥಾನದಲ್ಲಿ ಭಕ್ತರಿಗೆ ಪಾರ್ಕಿಂಗ್ ಕಾಂಪ್ಲೆಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತಾದಿಗಳಿಗೆ ಸುಸಜ್ಜಿತವಾದ ಬಹು–ಅಂತಸ್ತಿನ ಪಾರ್ಕಿಂಗ್ ಕಾಂಪ್ಲೆಕ್ಸ್ ನಿರ್ಮಿಸಲು ಮುಜರಾಯಿ ಇಲಾಖೆ ನಿರ್ಧರಿಸಿದೆ.


ಬನಶಂಕರಿ ದೇವಸ್ಥಾನದ ಸುತ್ತಮುತ್ತ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದರಿಂದ, ಮಂಗಳವಾರ, ಶುಕ್ರವಾರ ಹಾಗೂ ವಿಶೇಷ ದಿನಗಳಂದು ಸಾವಿರಾರು ಭಕ್ತರಿಗೆ ಕಾರು– ದ್ವಿಚಕ್ರ ವಾಹನ ನಿಲ್ಲಿಸಲು ಸ್ಥಳಾವಕಾಶ ಇರುವುದಿಲ್ಲ. ಹೀಗಾಗಿ, ದೇವಸ್ಥಾನದ ಭಕ್ತರಿಗೆ ಮೀಸಲಾಗಿರುವ ಪಾರ್ಕಿಂಗ್ ಸ್ಥಳವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಪ್ರಸ್ತುತ ದೇವಸ್ಥಾನದ ಮುಂಭಾಗದಲ್ಲಿರುವ ದಾಸೋಹ ಭವನದ ಬಳಿ ವಾಹನ ನಿಲುಗಡೆಗೆ ನಿಯಮಿತ ಸ್ಥಳವಿದೆ. ಪ್ರಸ್ತಾವಿತ ಬಹು–ಅಂತಸ್ತಿನ ಪಾರ್ಕಿಂಗ್ ಕಾಂಪ್ಲೆಕ್ಸ್ ಅನ್ನು ದೇವಸ್ಥಾನಕ್ಕೆ ಸೇರಿದ 100 x 150 ಅಡಿ ಸ್ಥಳದಲ್ಲಿ ನಿರ್ಮಿಸಲಾಗುತ್ತದೆ. ಆರರಿಂದ ಎಂಟು ಅಂತಸ್ತುಗಳನ್ನು ಒಳಗೊಳ್ಳಲಿದೆ. ಪ್ರತಿಯೊಂದು ಅಂತಸ್ತಿನಲ್ಲಿ ಸುಮಾರು 80 ಕಾರುಗಳನ್ನು ನಿಲುಗಡೆ ಮಾಡಬಹುದು. ಒಟ್ಟಾರೆ, 700 ಕಾರುಗಳ ನಿಲುಗಡೆ ಸಾಮರ್ಥ್ಯದ ಕಾಂಪ್ಲೆಕ್ಸ್ ನಿರ್ಮಿಸಲಾಗುತ್ತದೆ.

'ದೇವಸ್ಥಾನಕ್ಕೆ ಬರುವ ಭಕ್ತರ ವಾಹನಗಳಿಗೆ ಆದ್ಯತೆ ನೀಡಲಾಗುತ್ತದೆ. ಹೆಚ್ಚಿನ ಸ್ಥಳಾವಕಾಶವಿದ್ದರೆ ಸಾರ್ವಜನಿಕರ ವಾಹನಗಳಿಗೂ ಅವಕಾಶ ನೀಡಲಾಗುತ್ತದೆ. ಪಾರ್ಕಿಂಗ್ ಕಟ್ಟಡ ನಿರ್ಮಿಸಲು ದೇವಸ್ಥಾನದ ನಿಧಿಯನ್ನು ಬಳಸಿಕೊಳ್ಳಲಾಗುತ್ತದೆ. ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದ್ದು, ವಿನ್ಯಾಸ ಹಾಗೂ ವಿಸ್ತೃತ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿದೆ' ಎಂದು ಬನಶಂಕರಿ ದೇವಸ್ಥಾನದ ಕಾರ್ಯಕಾರಿ ಅಧಿಕಾರಿ ಎನ್.ಕೃಷ್ಣಪ್ಪ ತಿಳಿಸಿದರು.

ನಗರದಲ್ಲಿ ಇಂದು

'ಮತ, ಧರ್ಮ ಮತ್ತು ಅದ್ವೈತ' ಕೃತಿ ಬಿಡುಗಡೆ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಎಚ್.ಡಿ.ದೇವೇಗೌಡ, ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಲೇಖಕ: ಎಂ.ಕೆ.ವೆಂಕಟರಾಮ್, ಆಯೋಜನೆ: ವಿಸ್ಮಯ ಬುಕ್‌ಹೌಸ್, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಶಿವಾನಂದವೃತ್ತ, ಸಂಜೆ 4.30



ನಿರ್ಮಲಾನಂದ ನಾಥ ಸ್ವಾಮೀಜಿ

26ನೇ ವರ್ಷದ ಪ್ರವಚನ ವಾಹಿನಿ: 'ಹದಿಬದೆಯ ಧರ್ಮ' ವಿಷಯದ ಬಗ್ಗೆ ಪ್ರವಚನ: ಸತೀಶ್ ಬೆಳ್ಳೂರು, ವೈಷ್ಣವಿ ಡಿ. ಆಚಾರ್ಯ, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಲವ್ ಲೆಟರ್ಸ್; ನಿನ್ನ ಪ್ರೀತಿಯ ನಾನು!' ನಾಟಕ: ರಚನೆ: ಎ.ಆರ್.ಗರ್ನಿ, ನಿರ್ದೇಶನ: ವೆಂಕಟೇಶ್ ಪ್ರಸಾದ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

ಚುಟುಕು ಸುದ್ದಿ

ಗುಂಡಾಶಾಸ್ತ್ರಿ, ಪ್ರಸಾದ್‌ಗೆ ಪ್ರಶಸ್ತಿ

ಬೆಂಗಳೂರು: ಸರಸ್ವತಿ ಸಂಗೀತ ವಿದ್ಯಾಲಯ ನೀಡುವ 'ಗೋವಿಂದ ಲಕ್ಷ್ಮೀ ಪುರಸ್ಕಾರ'ಕ್ಕೆ ತಬಲಾ ವಿದ್ವಾಂಸ ಎನ್.ಎಸ್. ಗುಂಡಾಶಾಸ್ತ್ರಿ ಹಾಗೂ 'ಶ್ಯಾಮಲ ಸ್ಮೃತಿ ಸಮ್ಮಾನ್' ಪುರಸ್ಕಾರ'ಕ್ಕೆ ಮ್ಯಾಂಡೊಲಿನ್ ವಿದ್ವಾಂಸ ಎನ್. ಎಸ್. ಪ್ರಸಾದ್ ಆಯ್ಕೆಯಾಗಿದ್ದಾರೆ.



ಎನ್.ಎಸ್. ಗುಂಡಾಶಾಸ್ತ್ರಿ

ಈ ಪ್ರಶಸ್ತಿಗಳು ತಲಾ ₹11 ಸಾವಿರ ನಗದು ಒಳಗೊಂಡಿವೆ. ವಿದ್ಯಾಲಯವು ಇದೇ 7ರಂದು ಸಂಜೆ 4.30ಕ್ಕೆ ಜಯನಗರದ 9ನೇ ಬ್ಲಾಕ್‌ನಲ್ಲಿರುವ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ಭಾರತೀಯ ನಾದ ಸೌರಭ ಸಂಗೀತೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.



ಎನ್.ಎಸ್. ಪ್ರಸಾದ್

ನವದೆಹಲಿಯ ಆಕಾಶವಾಣಿ ಕೇಂದ್ರದ ನಿವೃತ್ತ ಉಪ ಮಹಾನಿರ್ದೇಶಕ ಕೆ.ವಾಗೀಶ್ ಹಾಗೂ ತಬಲಾ ವಾದಕ ಸತೀಶ್ ಹಂಪಿಹೊಳಿ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಈ ಸಂಗೀತೋತ್ಸವದಲ್ಲಿ ವಾಗೀಶ ಭಟ್ ಅವರ ಹಿಂದೂಸ್ತಾನಿ ಗಾಯನ ಪ್ರಸ್ತುತಪಡಿಸಲಿದ್ದು, ಮಧುಸೂದನ್ ಮುತಾಲಿಕ್ (ತಬಲಾ), ಶಿವಕುಮಾರ್ ಮಹಂತ (ಹಾರ್ಮೋನಿಯಂ), ಸ್ಮೃತಿ ಎಸ್. ಭಟ್ (ಗಾಯನ), ಎಂ.ಪ್ರಣವ್ ಪ್ಲ್ರ (ತಬಲಾ) ಹಾಗೂ ಪ್ರಣವ್ ಪಟಿಯಾರ್ (ಹಾರ್ಮೋನಿಯಂ) ಅವರಿಂದ ಸಂಗೀತ ಕಛೇರಿ ನಡೆಯಲಿದೆ.

ಪುಸ್ತಕ ಖರೀದಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಚಿತ್ರಕಲಾ ಲೇಖಕರಿಂದ ಪ್ರಕಟಿತ ಪುಸ್ತಕಗಳ ಖರೀದಿಗೆ ಅರ್ಜಿ ಆಹ್ವಾನಿಸಿದೆ. ದೃಶ್ಯಕಲೆ ಸಾಹಿತ್ಯ ಮತ್ತು ಲೇಖಕರನ್ನು ಪ್ರೋತ್ಸಾಹಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. 2024ರಲ್ಲಿ ಪ್ರಕಟವಾದ ಅಥವಾ ಮರು ಮುದ್ರಣಗೊಂಡ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಶೀರ್ಷಿಕೆಯೊಂದನ್ನು ₹5 ಸಾವಿರದ ಮಿತಿಯಲ್ಲಿ ಖರೀದಿಸಲಾಗುತ್ತದೆ. ಕಲಾ ಬರಹಗಾರರು ಎಷ್ಟು ಪುಸ್ತಕಗಳನ್ನು ಬೇಕಿದ್ದರೂ ಆಯ್ಕೆ ಕೋರಿ ಅರ್ಜಿ ಸಲ್ಲಿಸಬಹುದು. ಅಕಾಡೆಮಿ ಖರೀದಿಸ ಬಹುದಾದ ಪುಸ್ತಕಗಳನ್ನು ಆಯ್ಕೆ ಸಮಿತಿ ಪರಿಶೀಲಿಸಿ, ಅಕಾಡೆಮಿಗೆ ಶಿಫಾರಸು ಮಾಡುತ್ತದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತ ತಿಳಿಸಿದ್ದಾರೆ.

ಆಯ್ಕೆಯಾದ ಬರಹಗಾರರು ಅಕಾಡೆಮಿ ಸೂಚಿಸಿದ ದಿನಾಂಕ ದೊಳಗೆ ₹5 ಸಾವಿರ ಮೌಲ್ಯದ ಪುಸ್ತಕಗಳನ್ನು ತಲುಪಿಸಬೇಕು. ಅರ್ಜಿಯೊಂದಿಗೆ ಪ್ರಕಟವಾದ ಪುಸ್ತಕಗಳ ತಲಾ 3 ಪ್ರತಿಗಳನ್ನು ಇದೇ 25ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–580 002 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಹಕರ ಸಮಾವೇಶ

ಬೆಂಗಳೂರು: ನಗರದ 'ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್' ಗ್ರಾಹಕರ ಕುಂದುಕೊರತೆಗಳನ್ನು ಆಲಿಸಲು ಗ್ರಾಹಕರ ಸಮಾವೇಶವನ್ನು ಆಯೋಜಿಸಿತ್ತು.

ಸಮಾವೇಶದಲ್ಲಿ ಬ್ಯಾಂಕ್‌ನ ಠೇವಣಿದಾರರು, ಸದಸ್ಯರು ಪಾಲ್ಗೊಂಡು ತಮ್ಮ ಅನಿಸಿಕೆಗಳು ಹಾಗೂ ಅಹವಾಲು ಗಳನ್ನು ವ್ಯಕ್ತಪಡಿಸಿದ್ದಾರೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ. ಈ ವೇಳೆ ಬ್ಯಾಂಕ್‌ನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಇತರರಿದ್ದರು.

'ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್' ಮಲ್ಲೇಶ್ವರದಲ್ಲಿ ಕೇಂದ್ರ ಕಚೇರಿ ಹೊಂದಿದ್ದು, ನಗರದಲ್ಲಿ 7 ಶಾಖೆಗಳನ್ನು ಹೊಂದಿದೆ. 30 ಸಾವಿರ ಗ್ರಾಹಕರನ್ನು ಹೊಂದಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಪ್ರಕಾರ ₹858 ಕೋಟಿ ಬಂಡವಾಳ ಹೊಂದಿದ್ದು, ಮುಂದಿನ ದಿನಗಳಲ್ಲಿ ₹1 ಸಾವಿರ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿದೆ.

ಪ್ರಮಾಣವಚನ ಸ್ವೀಕಾರ ಸಮಾರಂಭ • ಆಹ್ವಾನ ಪತ್ರಿಕೆ ಇದ್ದವರಿಗೆ ಲೋಕಭವನಕ್ಕೆ ಪ್ರವೇಶ

ಹಲವೆಡೆ ಸಂಚಾರ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಭವನದ ಗಾಜಿನ ಮನೆಯಲ್ಲಿ ಮುಖ್ಯಮಂತ್ರಿ ಅವರ ಪ್ರಮಾಣವಚನ ಸಮಾರಂಭ ನಡೆಯುವ ಕಾರಣ ಬುಧವಾರ ಹಲವು ಕಡೆ ಸಂಚಾರ ಮಾರ್ಪಾಡು ಮಾಡಲಾಗಿದೆ. ಲೋಕಭವನಕ್ಕೆ ಆಹ್ವಾನ ಪತ್ರಿಕೆ ಇದ್ದವರಿಗೆ ಮಾತ್ರ ಪ್ರವೇಶವಿದೆ.

ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಹಾಗೂ ರೇಸ್‌ಕೋರ್ಸ್ ರಸ್ತೆಯ ಸಾರ್ವಜನಿಕ ಕಾರ್ಯಕ್ರಮದ ನಿಮಿತ್ತ ಹೆಚ್ಚಿನ ಸಂಚಾರ ದಟ್ಟಣೆಯಾಗುವ ಸಾಧ್ಯತೆ ಇದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಮಧ್ಯಾಹ್ನ 12 ರಿಂದ ರಾತ್ರಿ 10ರವರೆಗೆ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ.

ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ ನಗರದ ವ್ಯಾಪ್ತಿಯಲ್ಲಿ ಭಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ಸಾರ್ವಜನಿಕರು ತಮ್ಮ ಪ್ರಯಾಣವನ್ನು ಮುಂಚಿತವಾಗಿ ಯೋಜಿಸಿಕೊಂಡು, ಸೂಚಿಸಲಾದ ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಸಂಚಾರ ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿರ್ಬಂಧ ರಸ್ತೆ

- ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಸಿ.ಟಿ.ಒ. ಜಂಕ್ಷನ್‌ವರೆಗೆ ಹಾಗೂ ಸಿ.ಟಿ.ಒ. ವೃತ್ತದಿಂದ ಲೋಕಭವನ ಜಂಕ್ಷನ್‌ವರೆಗೆ.
- ಬಾಳೇಕುಂದ್ರಿ ಜಂಕ್ಷನ್‌ನಿಂದ ಅಂಬೇಡ್ಕರ್ ವೀಧಿವರೆಗೆ
- ಡಾ.ಅಂಬೇಡ್ಕರ್ ರಸ್ತೆಯಲ್ಲಿ ಕೆ.ಆರ್. ಸರ್ಕಲ್ ಕಡೆಯಿಂದ ಕಾಫಿ ಬೋರ್ಡ್ ಜಂಕ್ಷನ್‌ವರೆಗೆ
- ರೇಸ್‌ಕೋರ್ಸ್ ರಸ್ತೆಯ ಟ್ರಿಲೈಟ್ ಜಂಕ್ಷನ್‌ನಿಂದ ಸುಬ್ಬಣ್ಣ ಜಂಕ್ಷನ್‌ವರೆಗೆ ಹಾಗೂ ಜಿಡಿಎಸ್‌ನ ಹಳೆಯ ಕಚೇರಿಯ ಕ್ರಾಸ್‌ನಿಂದ ಸುಬ್ಬಣ್ಣ ಜಂಕ್ಷನ್‌ವರೆಗೆ
- ಕ್ವೀನ್ಸ್ ಜಂಕ್ಷನ್ ಕಡೆಯಿಂದ ಸಿ.ಟಿ.ಒ ಕಡೆಗೆ
- ಕ್ವೀನ್ಸ್ ಜಂಕ್ಷನ್‌ನಲ್ಲಿ ಸೇಂಟ್ ಮಾರ್ಕ್ಸ್ ರಸ್ತೆಯಿಂದ ಸಿ.ಟಿ.ಒ. ಜಂಕ್ಷನ್ ಕಡೆಗೆ

ಈ ಮೇಲಿನ ಮಾರ್ಗಗಳಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿರುವ ವಾಹನಗಳನ್ನು ಹೊರತುಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಎಲ್ಲೆಲ್ಲಿ ವಾಹನಗಳ ನಿಲುಗಡೆ ನಿಷೇಧ

- ಡಾ: ಬಿ.ಆರ್.ಅಂಬೇಡ್ಕರ್ ರಸ್ತೆ, ಬಾಳೇಕುಂದ್ರಿ ವೃತ್ತದಿಂದ ಕೆ.ಆರ್.ವೃತ್ತದವರೆಗೆ ರಸ್ತೆಯ ಎರಡೂ ಬದಿ.
- ಲೋಕಭವನ ರಸ್ತೆ ಬಿ.ಆರ್.ವಿ. ವೃತ್ತದಿಂದ– ಲೋಕಭವನ ಜಂಕ್ಷನ್ ವರೆಗೆ
- ಎಲ್.ಎಚ್.ರಸ್ತೆ, ಲೋಕಭವನ ಜಂಕ್ಷನ್‌ನಿಂದ– ಚಾಲುಕ್ಯ ವೃತ್ತದವರೆಗೆ
- ಕ್ವೀನ್ಸ್ ರಸ್ತೆ, ಬಾಳೇಕುಂದ್ರಿ ಜಂಕ್ಷನ್‌ನಿಂದ– ಕ್ವೀನ್ಸ್ ವೃತ್ತದವರೆಗೆ
- ಪ್ಯಾಲೇಸ್ ರಸ್ತೆ, ಮೈಸೂರು ಬ್ಯಾಂಕ್ ವೃತ್ತದಿಂದ – ವಸಂತನಗರ ಕೆಳಸೇತುವೆವರೆಗೆ
- ದೇವರಾಜ ಅರಸ್ ರಸ್ತೆ, ಚಾಲುಕ್ಯ ವೃತ್ತದಿಂದ ಎಂ.ಎಸ್.ಬಿಲ್ಡಿಂಗ್‌ವರೆಗೆ (ಒಳಭಾಗದ ರಸ್ತೆ ಸೇರಿ)
- ರೇಸ್ ಕೋರ್ಸ್ ರಸ್ತೆ, ಟ್ರಿಲೈಟ್ ಜಂಕ್ಷನ್‌ನಿಂದ ಚಾಲುಕ್ಯ ವೃತ್ತದವರೆಗೆ
- ಪಾರ್ಕ್ ಹೌಸ್ ರಸ್ತೆ, ಎ.ಜಿ.ಎಸ್. ಜಂಕ್ಷನ್ ನಿಂದ ಸಿ.ಐ.ಡಿ. ವೃತ್ತದವರೆಗೆ
- ಕಬ್ಬನ್ ಉದ್ಯಾನದ ಒಳಭಾಗದ ರಸ್ತೆಗಳು
- ಮಿಲ್ಲರ್ ರಸ್ತೆ, ಎಲ್.ಆರ್.ಡಿ.ಇ. ಜಂಕ್ಷನ್‌ನಿಂದ ಬಸವೇಶ್ವರ ವೃತ್ತದವರೆಗೆ
- ಇನ್‌ಫೆಂಟ್ರಿ ರಸ್ತೆ, ಅಲಿ ಅಸ್ಕರ್ ರಸ್ತೆ ಜಂಕ್ಷನ್‌ನಿಂದ ಟ್ರಾಫಿಕ್ ಹೆಡ್ ಕ್ವಾರ್ಟರ್ ಜಂಕ್ಷನ್ ವರೆಗೆ
- ಅಲಿ ಅಸ್ಕರ್ ರಸ್ತೆ, ರಾಜಭವನ ಜಂಕ್ಷನ್‌ನಿಂದ ಅಲಿ ಅಸ್ಕರ್ ಕ್ರಾಸ್‌ವರೆಗೆ
- ಕೆ.ಜಿ.ರಸ್ತೆ, ಪೊಲೀಸ್ ಕಾರ್ನರ್‌ನಿಂದ ಮೈಸೂರು ಬ್ಯಾಂಕ್ ವೃತ್ತದವರೆಗೆ
- ಹಳೇ ಅಂಚೆ ಕಚೇರಿ ರಸ್ತೆ, ಮೈಸೂರು ಬ್ಯಾಂಕ್ ವೃತ್ತದಿಂದ ಕೆ.ಆರ್.ವೃತ್ತದವರೆಗೆ
- ನೃಪತುಂಗ ರಸ್ತೆ, ಕೆ.ಆರ್.ವೃತ್ತದಿಂದ ಪೊಲೀಸ್ ಕಾರ್ನರ್‌ವರೆಗೆ
- ಕಸ್ತೂರಬಾ ರಸ್ತೆ, ಹಡ್ಸನ್ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ
- ಮಲ್ಯ ಆಸ್ಪತ್ರೆ ರಸ್ತೆ, ಸಿದ್ದಲಿಂಗಯ್ಯ ವೃತ್ತದಿಂದ ಆರ್.ಆರ್.ಎಂ.ಆರ್. ಜಂಕ್ಷನ್‌ವರೆಗೆ
- ಆರ್.ಆರ್.ಎಂ.ಆರ್. ರಸ್ತೆ, ಆರ್.ಆರ್.ಎಂ.ಆರ್. ಜಂಕ್ಷನ್‌ನಿಂದ ಹಡ್ಸನ್ ವೃತ್ತದ ವರೆಗೆ
- ಕಬ್ಬನ್ ರಸ್ತೆ, ಸಿ.ಟಿ.ಒ. ವೃತ್ತದಿಂದ ಮಣಿಪಾಲ್ ಸೆಂಟರ್‌ವರೆಗೆ
- ಟಿ.ಚೌಡಯ್ಯ ರಸ್ತೆ, ಹಳೇ ಹೈಗ್ರೌಂಡ್ ಜಂಕ್ಷನ್‌ನಿಂದ ಕಾವೇರಿ ಜಂಕ್ಷನ್‌ವರೆಗೆ
- ರಮಣ ಮಹರ್ಷಿ ರಸ್ತೆ, ಕಾವೇರಿ ಜಂಕ್ಷನ್‌ನಿಂದ ಮೇಖ್ರಿ ವೃತ್ತದ ವರೆಗೆ

ವಾಹನಗಳ ನಿಲುಗಡೆ ಪ್ರದೇಶ (ಪಾಸ್ ಹೊಂದಿರುವ ವಾಹನಗಳು)

- ವಿಧಾನಸೌಧದ ಸಿಮೆಂಟ್ ಪಾರ್ಕಿಂಗ್ ಸ್ಥಳ ಹಾಗೂ ವಿಕಾಸಸೌಧದ ಸುತ್ತಮುತ್ತ
- ರಾಜಭವನ ಹಿಂಭಾಗದ ಎಲ್.ಎಚ್. ವಾಹನ ನಿಲುಗಡೆ ಸ್ಥಳ
- ನೆಹರೂ ತಾರಾಲಯದ ಆವರಣ

ಕಾರ್ಯಕ್ರಮಕ್ಕೆ ಬರುವ ಪಾಸ್ ಹೊಂದಿಲ್ಲದ ವಾಹನಗಳು

- ಕೊಂಡಜ್ಜಿ ಭವನ ಆವರಣ.
- ಶಿವಾಜಿನಗರ ಬಸ್ ನಿಲ್ದಾಣದ ಮೇಲ್ಭಾಗದ ಬಹುಹಂತದ ಪಾರ್ಕಿಂಗ್ ಸ್ಥಳ
- ಕಂಠೀರವ ಕ್ರೀಡಾಂಗಣ
- ಯು.ಬಿ. ಸಿಟಿ ಪಾರ್ಕಿಂಗ್ ಸ್ಥಳ
- ಸರ್ಕಾರಿ ಕಲಾ ಕಾಲೇಜು ಆವರಣ
- ಕಾರ್ಪೊರೇಷನ್ ಕಚೇರಿ ಸ್ಥಳ
- ಪ್ಯಾಲೇಸ್ ಮೈದಾನದ ಗೇಟ್ ನಂ. 2, 3 ಮತ್ತು 4ರಲ್ಲಿ

ಪರ್ಯಾಯ ಮಾರ್ಗ

- ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಸಿ.ಟಿ.ಒ. ಜಂಕ್ಷನ್ ವರೆಗೆ ಹಾಗೂ ಸಿ.ಟಿ.ಒ. ವೃತ್ತದಿಂದ ಲೋಕಭವನದವರೆಗೆ ಸಂಚರಿಸುವ ವಾಹನಗಳು ಬಿ.ಆರ್.ವಿ. ಜಂಕ್ಷನ್ ಬಳಿ ಶಿವಾಜಿನಗರ ಕಡೆಗೆ ಬಲ ತಿರುವು ಹಾಗೂ ಅನಿಲ್ ಕುಂಬ್ಳೆ ಜಂಕ್ಷನ್ ಕಡೆಗೆ ಎಡ ತಿರುವು ಪಡೆದು ಸಂಚರಿಸಬಹುದು.
- ಕ್ವೀನ್ಸ್ ರಸ್ತೆ ಹಾಗೂ ಶಿವಾಜಿನಗರ ಕಡೆಯಿಂದ ಬರುವ ವಾಹನಗಳು ಬಾಳೇಕುಂದ್ರಿ ಜಂಕ್ಷನ್ ಬಳಿ ಕನ್ನಿಂಗ್‌ಹ್ಯಾಮ್ ರಸ್ತೆಯ ಮುಖಾಂತರ ಸಾಗಬೇಕು.
- ಕೆ.ಆರ್. ಸರ್ಕಲ್ ಕಡೆಯಿಂದ ಕಾಫಿ ಬೋರ್ಡ್ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ನೃಪತುಂಗ ರಸ್ತೆಯ ಮೂಲಕ ಸಂಚರಿಸಬಹುದು.
- ರೇಸ್‌ಕೋರ್ಸ್ ರಸ್ತೆಯ ಟ್ರಿಲೈಟ್ ಜಂಕ್ಷನ್‌ನಿಂದ ಸುಬ್ಬಣ್ಣ ಜಂಕ್ಷನ್‌ವರೆಗೆ ಸಂಚರಿಸುವ ವಾಹನಗಳು ಟ್ರಿಲೈಟ್ ಜಂಕ್ಷನ್ ಕಡೆಯಿಂದ ಶಿವಾನಂದ ಜಂಕ್ಷನ್ ಮೂಲಕ ಎಸ್.ಸಿ. ರಸ್ತೆ, ಜಂಕ್ಷನ್ ತಲುಪಿ ಎಡ ತಿರುವು ಪಡೆದು ಸಾಗಬೇಕು.
- ಕ್ವೀನ್ಸ್ ಜಂಕ್ಷನ್ ಕಡೆಯಿಂದ ಲೋಕಭವನದ ಕಡೆಗೆ ಸಂಚರಿಸುವ ವಾಹನಗಳು ಅನಿಲ್ ಕುಂಬ್ಳೆ ಹಾಗೂ ಬಿ.ಆರ್.ವಿ. ಜಂಕ್ಷನ್ ಮುಖಾಂತರ ಸಂಚರಿಸಬಹುದು.
- ಹಲಸೂರು ಮತ್ತು ಹಳೇ ಏರ್‌ಪೋರ್ಟ್ ಕಡೆಯಿಂದ ಕೆಂಪೇಗೌಡ ಏರ್‌ಪೋರ್ಟ್ ಮತ್ತು ಬಸವೇಶ್ವರ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳ ಸವಾರರು ಬಿ.ಆರ್.ವಿ ಜಂಕ್ಷನ್ ಬಳಿ ಬಲ ತಿರುವು ಪಡೆದು ಶಿವಾಜಿನಗರ ಬಸ್ ನಿಲ್ದಾಣ ಮೂಲಕ ಬಾಳೇಕುಂದ್ರಿ ಜಂಕ್ಷನ್, ಕನ್ನಿಂಗ್ ಹ್ಯಾಂ ರಸ್ತೆ, ವಸಂತನಗರದಿಂದ ಹೆಬ್ಬಾಳ ಕಡೆಗೆ ಸಂಚರಿಸುವುದು.
- ಹಲಸೂರು ಮತ್ತು ಹಳೇ ಮದ್ರಾಸ್ ರಸ್ತೆ, ಕಡೆಯಿಂದ ಹೆಬ್ಬಾಳ ಕಡೆಗೆ ಸಂಚರಿಸುವ ವಾಹನಗಳ ಸವಾರರು ಹಲಸೂರು ಲೇಕ್ ಮೂಲಕ ಟ್ಯಾಂಕ್ ಫ್ಲಾಕ್ಟರಿ ಜಂಕ್ಷನ್ ಬಳಿಯಿಂದ ರಿಂಗ್ ರಸ್ತೆಯ ಮೂಲಕ ಹೆಬ್ಬಾಳ ಕಡೆಗೆ ಸಂಚರಿಸುವುದು.
- ಆಶೀರ್ವಾದಂ ವೃತ್ತ ಹಾಗೂ ಎಂ.ಜಿ. ರಸ್ತೆ, ಕಡೆಯಿಂದ ಬರುವಂತಹ ವಾಹನಗಳು ಬಿ.ಆರ್.ವಿ ಜಂಕ್ಷನ್ ಶಿವಾಜಿನಗರ ಬಸ್ ನಿಲ್ದಾಣ ಮೂಲಕ ಬಾಳೇಕುಂದ್ರಿ ಜಂಕ್ಷನ್, ಕನ್ನಿಂಗ್ ಹ್ಯಾಂ ರಸ್ತೆ, ವಸಂತನಗರದಿಂದ ಹೆಬ್ಬಾಳ ಕಡೆಗೆ ಸಂಚರಿಸುವುದು.

ಪೊಲೀಸ್ ಬಂದೋಬಸ್ತ್

ಬೆಂಗಳೂರು: ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಈ ಸಂಬಂಧ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಎಲ್ಲಾ ವಿಭಾಗದ ಜಂಟಿ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿಗಳು, ಸಂಚಾರ ವಿಭಾಗದ ಡಿಸಿಪಿಗಳ ಜೊತೆ ಸಭೆ ನಡೆಸಿ ಸಲಹೆ, ಸೂಚನೆ ನೀಡಿದ್ದಾರೆ.

ಸಭೆ ಬಳಿಕ ಮಾತನಾಡಿದ ಸೀಮಾಂತ್ ಕುಮಾರ್ ಸಿಂಗ್, 'ಲೋಕ ಭವನಕ್ಕೆ ಆಹ್ವಾನಿತರಿಗೆ ಮಾತ್ರ ಪವೇಶ ವಿರಲಿದೆ. ಉಳಿದವರಿಗೆ ಪ್ರವೇಶವಿಲ್ಲ. ಕಾರ್ಯಕ್ರಮಕ್ಕೆ ಪಾಸ್ ನೀಡಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವಿತರಿಸಿರುವ ಪಾಸ್‌ಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ಸಂಚಾರ ಮಾರ್ಗದಲ್ಲಿ ಕೆಲವೊಂದು ಬದಲಾವಣೆ ಮಾಡಲಾಗಿದೆ. ಹೊರ ರಾಜ್ಯದಿಂದಲೂ ಗಣ್ಯರು ಕಾರ್ಯಕ್ರಮಕ್ಕೆ ಬರುತ್ತಿದ್ದು, ಅವರ ಭದ್ರತೆಗೂ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ' ಎಂದರು.

'ಪ್ರಮಾಣ ವಚನ ಸ್ವೀಕಾರ ಸಮಾರಂಭದ ಬಳಿಕ ರೋಡ್ ಶೋ ನಡೆಯುವುದಿಲ್ಲ. ನಗರ ಪೊಲೀಸ್ ಸಿಬ್ಬಂದಿಯೊಂದಿಗೆ ಕೆಎಸ್‌ಆರ್‌ಪಿ, ಕ್ಷಿಪ್ರ ಕಾರ್ಯ ಪಡೆಗಳನ್ನು ನಿಯೋಜಿಸಲಾಗಿದೆ. ಡ್ರೋನ್‌ಗಳು ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾ ಗಳನ್ನು ಒಳಗೊಂಡ ನಿಗಾವ್ಯವಸ್ಥೆ ಇದೆ' ಎಂದರು.

ಸಾರ್ವಜನಿಕರು ಕಾರ್ಯಕ್ರಮವನ್ನು ವೀಕ್ಷಿಸಲು ಅನುಕೂಲವಾಗುವಂತೆ ಕೆಲ ಸ್ಥಳಗಳಲ್ಲಿ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ. ಇಲ್ಲಿ ಜನಸಂದಣಿ ನಿಯಂತ್ರಣಕ್ಕಾಗಿ ಭದ್ರತಾ ಸಿಬ್ಬಂದಿ ಯನ್ನು ನಿಯೋಜಿಸಲಾಗುತ್ತದೆ ಎಂದರು.

'ನೋ ಫ್ಲೈ ಜೋನ್'



ಸೀಮಾಂತ್ ಕುಮಾರ್ ಸಿಂಗ್

ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನಗರಕ್ಕೆ ಭೇಟಿ ನೀಡುತ್ತಿರುವುದರಿಂದ ಸೀಮಾಂತ್ ಕುಮಾರ್ ಸಿಂಗ್ ಅವರು 'ನೋ ಫ್ಲೈ ಜೋನ್' (ವಿಮಾನ ಹಾರಾಟ ನಿಷೇಧ ವಲಯ) ಘೋಷಿಸಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಚೇರಿಯ 1 ಕಿ.ಮೀ. ವ್ಯಾಪ್ತಿ ಮತ್ತು ರಾಹುಲ್ ವಾಸ್ತವ್ಯ ಹೂಡುವ ಶಾಂಗ್ರಿ-ಲಾ ಹೋಟೆಲ್‌ನ 1 ಕಿ.ಮೀ. ವ್ಯಾಪ್ತಿಯನ್ನು ವಿಮಾನ ಹಾರಾಟ ನಿಷೇಧ ವಲಯವು ಒಳಗೊಳ್ಳುತ್ತದೆ.

ಆದೇಶದ ಪ್ರಕಾರ, ಜೂನ್ 3 ರಂದು ಬೆಳಿಗ್ಗೆ 6 ರಿಂದ ರಾತ್ರಿ 10ರವರೆಗೆ ಕೆಪಿಸಿಸಿ ಕಚೇರಿ ಸುತ್ತ ಮತ್ತು ಜೂನ್ 3ರ ಬೆಳಿಗ್ಗೆ 6 ರಿಂದ ಜೂನ್ 4 ರ ಸಂಜೆ 6 ರವರೆಗೆ ಶಾಂಗ್ರಿ-ಲಾ ಹೋಟೆಲ್ ಸುತ್ತ ನಿಷೇಧವು ಜಾರಿಯಲ್ಲಿರುತ್ತದೆ.

ಸಲಹೆ– ಸೂಚನೆ

- ಪ್ರತಿ ಪಾಸ್‌ಗೆ ಒಬ್ಬರಿಗೆ ಮಾತ್ರ ಪ್ರವೇಶ
- ಕಡ್ಡಾಯವಾಗಿ ಮಧ್ಯಾಹ್ನ 2 ಗಂಟೆ ಒಳಗೆ ಲೋಕಭವನದ ಗಾಜಿನ ಮನೆಯಲ್ಲಿ ಆಸೀನರಾಗಿರಬೇಕು.
- ಗೋಪಾಲಗೌಡ ವೃತ್ತದಿಂದ ಪೊಲೀಸ್ ತಿಮ್ಮಯ್ಯ ವೃತ್ತದ ಮೂಲಕ ಲೋಕಭವನ ಪ್ರವೇಶ
- ಆಹ್ವಾನಿತರ ವಾಹನಗಳನ್ನು ಹೊರತುಪಡಿಸಿ, ಗೋಪಾಲಗೌಡ ವೃತ್ತವನ್ನು ದಾಟಿ ಮುಂದೆ ಹೋಗಲು ಯಾವುದೇ ವಾಹನ ಗಳಿಗೆ ಪ್ರವೇಶ ಇಲ್ಲ
- ಪಾಸ್ ದುರುಪಯೋಗ ಪಡಿಸಿಕೊಂಡಲ್ಲಿ ಸಂಬಂಧ ಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು

ಎನ್‌ಟಿಎ ರದ್ದತಿಗೆ ಆಗ್ರಹ

ಪ್ರಶ್ನೆಪತ್ರಿಕೆ ಸೋರಿಕೆ: ಪ್ರತಿಭಟನಕಾರರ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ಪ್ರಶ್ನೆಪತ್ರಿಕೆ ಸೋರಿಕೆಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಲೋಪವೇ ಕಾರಣವಾಗಿದ್ದು, ಈ ಸಂಸ್ಥೆಯನ್ನು ರದ್ದು ಮಾಡಬೇಕು' ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿತು.



ಪ್ರತಿಭಟನಕಾರರನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು

ಈ ಬಗ್ಗೆ ಒತ್ತಾಯಿಸಿ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸ ಲಾಯಿತು. 'ಪರೀಕ್ಷೆಗಳ ನಿರ್ವಹಣೆಯಲ್ಲಿ ಎನ್‌ಟಿಎ ತನ್ನ ಅಸಮರ್ಥತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಈ ಹಿಂದೆ ಹಲವಾರು ಅಕ್ರಮಗಳಿಗೆ ಕಾರಣ ವಾಗಿರುವ ಈ ಸಂಸ್ಥೆಯನ್ನು ರದ್ದುಗೊಳಿಸ ಬೇಕು. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ಕೇಂದ್ರದ ನರೇಂದ್ರ ಮೋದಿ ಸರ್ಕಾರವೇ ನೇರ ಹೊಣೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಎನ್‌ಟಿಎ ಸಂಸ್ಥೆ ವಿದ್ಯಾರ್ಥಿಗಳಿಗೆ ಪರಿಹಾರ ಒದಗಿಸಬೇಕು. ಕೇಂದ್ರ ಸರ್ಕಾರವು ಪರೀಕ್ಷೆಗಳಿಗೆ ಸಂಬಂಧಿಸಿ ದಂತೆ ತನ್ನ ಅವೈಜ್ಞಾನಿಕ ಮತ್ತು ಅಸಮರ್ಥ ಕೇಂದ್ರೀಕರಣ ಪ್ರಯತ್ನ ಗಳನ್ನು ನಿಲ್ಲಿಸಬೇಕು. ಎನ್‌ಟಿಎ ರದ್ದು ಗೊಳಿಸುವ ಜತೆಗೆ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಅಂಬ್ಲಿಕಲ್ ಶಿವಪ್ಪ, ಉಪಾಧ್ಯಕ್ಷರಾದ ಗಣೇಶ್ ರಾಥೋಡ್, ದೊಡ್ಡ ಬಸವರಾಜ ಗುಳೇದಾಳ, ಕಾರ್ಯದರ್ಶಿ ವಿಜಯಕುಮಾರ್, ಜಂಟಿ ಕಾರ್ಯದರ್ಶಿ ಚಂದ್ರ ರಾಥೋಡ್ ಪಾಲ್ಗೊಂಡಿದ್ದರು.

ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

'ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ಕೊಡಿಸಿ'

ಪೀಣ್ಯ ದಾಸರಹಳ್ಳಿ: 'ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮೊದಲನೇ ಹಂತ. ಹಾಗಾಗಿ ಮೌಲ್ಯಾಧಾರಿತ ಶಿಕ್ಷಣದೊಂದಿಗೆ ನಿಮ್ಮ ಮಕ್ಕಳ ಭವಿಷ್ಯ ರೂಪಿಸಿ' ಎಂದು ಅಸೆಂಟ್ ಪಿಯು ಕಾಲೇಜಿನ ಸಂಸ್ಥಾಪಕ ಬಿ.ಎಂ. ವೆಂಕಟೇಶ್ ಸಲಹೆ ನೀಡಿದರು.

ಹೆಸರಘಟ್ಟ ಮುಖ್ಯರಸ್ತೆಯ ಅಸೆಂಟ್ ಪಿಯು ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ದಿಕ್ಸೂಚಿ ಸಮಾರಂಭದಲ್ಲಿ ಮಾತನಾಡಿದರು.

'ಪೂರ್ವಜರು ನಮಗೆ ಭಗವದ್ಗೀತೆ, ಉಪನಿಷತ್ತು, ಸಂಪ್ರದಾಯ ಮೂಲಕ ಉತ್ತಮ ದಾರಿ ಹಾಕಿಕೊಟ್ಟಿದ್ದಾರೆ. ಆದರೆ, ಅವುಗಳ ಉಪಯೋಗ ಪಡೆಯುತ್ತಿಲ್ಲ. ಅದರ ವಿರುದ್ಧವಾಗಿ ಆಹಾರ, ವಿಹಾರದ ಸಂಸ್ಕೃತಿ ರೂಢಿಸಿಕೊಳ್ಳುತ್ತಿದ್ದೇವೆ. ಮನಸ್ಸಿಗೆ ರಾಕ್ಷಸಿ ಗುಣ ಆವರಿಸಿಕೊಳ್ಳುತ್ತಿದೆ. ಹೀಗಾಗಿಯೇ ಮನಸ್ಸಿಗೆ ಶಿಕ್ಷಣ ನೀಡಬೇಕಾಗಿದೆ. ಮಕ್ಕಳಲ್ಲಿ ವಿದ್ಯೆಯ ಜೊತೆ ಸದ್ಗುಣ ಸಚ್ಚಾರಿತ್ರ್ಯ ಬೆಳೆಸಬೇಕಾಗಿದೆ' ಎಂದರು.



ಹೆಸರಘಟ್ಟ ಮುಖ್ಯರಸ್ತೆಯ ಅಸೆಂಟ್ ಪಿಯು ಕಾಲೇಜಿನಲ್ಲಿ ಹೆಚ್ಚು ಅಂಕ ಪಡೆದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು

ಶಿಕ್ಷಣ ತಜ್ಞ ಸಂಜೀವ್ ಸಾಳುಂಕೆ ಮಾತನಾಡಿ, 'ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕಾದರೆ ಸತತ ಅಭ್ಯಾಸ ಅವಶ್ಯಕ. ಉತ್ತಮ ಅಂಕಗಳಿಸುವತ್ತ ಎಲ್ಲಾ ವಿದ್ಯಾರ್ಥಿಗಳು ಗಮನಹರಿಸಿ, ಸಮಾಜಕ್ಕೆ ಕೊಡುಗೆ ನೀಡಬೇಕು. ಒಳ್ಳೆಯ ವಿದ್ಯಾರ್ಥಿಗಳಾಗಿ ಶಾಲೆ, ಶಿಕ್ಷಕರಿಗೆ ಗೌರವ ತರುವ ಹಾಗೆ ಮಾಡಬೇಕು' ಎಂದು ಹೇಳಿದರು.

ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಶ್ರೀ ವಿದ್ಯಾಸಿರಿ ಎಜುಕೇಷನಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಶ್ವೇತ ವೆಂಕಟೇಶ್ ಉಪಸ್ಥಿತರಿದ್ದರು.



ಸುದ್ದಗುಂಟೆಪಾಳ್ಯದಲ್ಲಿ ಸಾಮಾಜಿಕ ಕಾರ್ಯಕರ್ತೆ ಕವಿತಾ ಶ್ರೀನಾಥ್ ಅವರು ಮಕ್ಕಳಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸಿದರು

ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಣೆ

ಬೆಂಗಳೂರು: ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಮಂಗಳವಾರ ಬಿಟಿಎಂ ಕ್ಷೇತ್ರದ ಸುದ್ದಗುಂಟೆ ಪಾಳ್ಯದಲ್ಲಿ ಬಡವರು ಹಾಗೂ ಆರ್ಥಿಕ ವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಸಾಮಾಜಿಕ ಕಾರ್ಯಕರ್ತೆ ಕವಿತಾ ಶ್ರೀನಾಥ್ ಅವರ ನೇತೃತ್ವದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಸುತ್ತ ಮುತ್ತಲಿನ ಬಡಾವಣೆಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕವಿತಾ ಶ್ರೀನಾಥ್, 'ಯಾವುದೇ ಮಗುವಿನ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಂಕಷ್ಟ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಬ್ಯಾಗ್ ವಿತರಣೆ ಮಾಡಲಾಗಿದೆ' ಎಂದರು.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಆರೋಗ್ಯ ಸೇವೆ

ವೈದ್ಯಕೀಯ ಉಪಕರಣಗಳ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಇಸಿ ಇಮೇಜಿಂಗ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಐ ಆಧಾರಿತ ಸ್ವದೇಶಿ ವೈದ್ಯಕೀಯ ಉಪಕರಣಗಳನ್ನು ಲೋಕಾರ್ಪಣೆ ಮಾಡಲಾಯಿತು.

ಆತ್ಮನಿರ್ಭರ ಪರಿಕಲ್ಪನೆಗೆ ಅನುಗುಣ ವಾಗಿ ಕೈಗೆಟುಕುವ ಹಾಗೂ ಸುಲಭವಾಗಿ ಲಭ್ಯವಾಗುವ ಸ್ವದೇಶಿ ವೈದ್ಯಕೀಯ ಉಪಕರಣಗಳನ್ನು ಆಸ್ಪತ್ರೆಗಳಿಗೆ ನೀಡಲು ಬಿಎಂಇಸಿ ಸಂಸ್ಥೆ ಮುಂದಾಗಿದ್ದು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಆರೋಗ್ಯ ಸೇವೆಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಮದ್ರಾಸ್ ಹೈಕೋರ್ಟ್‌ನ ನ್ಯಾಯ ಮೂರ್ತಿ ಜಿ.ಆರ್. ಸ್ವಾಮಿನಾಥನ್, ಬಿಎಂಇಸಿ ನಿರ್ದೇಶಕ ಜೆ.ಚಂದ್ರಶೇಖರನ್, ನಾಗೇಂದ್ರ ಕುಮಾರ್, ಪಿ.ಹನುಮಂತ ರಾವ್ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರನ್ನು ಸನ್ಮಾನಿಸಲಾಯಿತು. ಬಿಎಂಇಸಿ ನಿರ್ದೇಶಕ ಜೆ.ಚಂದ್ರಶೇಖರನ್, ನಾಗೇಂದ್ರ ಕುಮಾರ್, ಪಿ.ಹನುಮಂತರಾವ್ ಉಪಸ್ಥಿತರಿದ್ದರು

ನಿತ್ಯ ದಟ್ಟಣೆ: ಅಪಘಾತ, ಸಂಘರ್ಷ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಸೊಂಡೆಕೊಪ್ಪ ಮತ್ತು ಅರಿಶಿನಕುಂಟೆ ಅಂಡರ್ ಪಾಸ್ ಬಳಿಯ ಬೈಪಾಸ್ (ನೆಲಮಂಗಲ ಪಟ್ಟಣದ ಪ್ರವೇಶ) ಬಳಿ ನಿತ್ಯ ಸಂಚಾರ ದಟ್ಟಣೆ, ಅಪಘಾತ, ವಾಗ್ಯುದ್ಧಗಳು ನಿತ್ಯವೂ ನಡೆಯುತ್ತಿವೆ.

ಸಣ್ಣ ಪ್ರಮಾಣದ ಮಳೆಯಾದರೂ ಗಂಟೆಗಟ್ಟಲೆ ವಾಹನ ದಟ್ಟಣೆ ಉಂಟಾಗಿ ನರಕ ಯಾತನೆ ಅನುಭವಿಸ ಬೇಕಾಗುತ್ತದೆ. ಇದರಿಂದ ಮುಕ್ತಿಗಾಗಿ ಎರಡು ಕಡೆ ಸಿಗ್ನಲ್ ಅಳವಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮಳೆಯಿಂದ ಅಂಡರ್ ಪಾಸ್ ಆಶ್ರಯ ಬಯಸಿ, ತುರ್ತು ನಿರ್ಗಮಿಸುವ ಕಡೆ ನಿಲ್ಲುವುದರಿಂದ ಸಂಚಾರದಟ್ಟಣೆ ಉಂಟಾಗಿ ಹೆದ್ದಾರಿಯ ಎರಡು ಕಡೆ ವಾಹನಗಳು ಗಂಟೆಗಟ್ಟಲೆ ನಿಲ್ಲುವಂತಾಗಿದೆ. ಬೆಳಗಿನ ಶಾಲಾ ಅವಧಿ (7.30ರಿಂದ 9.30) ಮತ್ತು ಸಂಜೆ 6ರಿಂದ ರಾತ್ರಿ 8ರವರೆಗೆ ಸಂಚಾರ ಪೊಲೀಸರನ್ನು ಕಡ್ಡಾಯವಾಗಿ ಕರ್ತವ್ಯಕ್ಕೆ ನಿಯೋಜಿಸಲು ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು ಸಂಬಂಧಿಸಿದ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು.

'ಅರಿಶಿನಕುಂಟೆ ಅಂಡರ್ ಪಾಸ್ ಮತ್ತು ಸೊಂಡೆಕೊಪ್ಪ ಕ್ರಾಸ್ ಬಳಿ ನಿತ್ಯ ಮೂರು ನಾಲ್ಕು ಪ್ರತಿಷ್ಠೆಯ ಒಣ ಜಗಳಗಳು, ವಾಹನಗಳು ಅಡ್ಡಾದಿಡ್ಡಿ ನುಗ್ಗುವುದರಿಂದ ಅಪಘಾತ ಗಳು ಸಂಭವಿಸುತ್ತಿರುತ್ತವೆ. ನಮ್ಮ ಜನಕ್ಕೆ ಪೊಲೀಸರೇ ಹೇಳಬೇಕಾದ ಅನಿವಾರ್ಯವಿದೆ. ಯಾವುದೇ ನಿರ್ಬಂಧಗಳಿಲ್ಲದೆ ಅನುಕೂಲ ಸಿಂಧುವಾಗಿ ನುಗ್ಗುವುದರಿಂದ ದಟ್ಟಣೆ ಉಂಟಾಗುತ್ತದೆ. ನುಗ್ಗುವ ಭರದಲ್ಲಿ ವಾಹನಗಳು ಒಂದಕ್ಕೊಂದು ತಗುಲಿ ಸಂಘರ್ಷಗಳಾಗುತ್ತವೆ. ಇದನ್ನು ತಪ್ಪಿಸಲು ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಪೊಲೀಸರನ್ನು ನಿಯೋಜಿಸ ಬೇಕು' ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಜುಲೈ 7 ಮತ್ತು 8ರಂದು ವಿಜಯನಗರದ ಬಸವೇಶ್ವರ ಸುಜ್ಞಾನ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿರುವ 14ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರನ್ನು ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಅವರು ಮಂಗಳವಾರ ಆಹ್ವಾನಿಸಿದರು. ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಉಪಸ್ಥಿತರಿದ್ದರು

100 ವರ್ಷಕ್ಕಿಂತ ಹಳೆಯ ಹುಣಸೆ ಮರ • ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

ಮರ ತೆರವು ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲೆಗೆ ಅಡ್ಡಿಯಾಗುತ್ತಿದೆ ಎಂಬ ಕಾರಣ ನೀಡಿ ಅರಣ್ಯ ಇಲಾಖೆಯೇ 100 ವರ್ಷಕ್ಕಿಂತ ಹಳೆಯ ಹುಣಸೆ ಮರ ತೆರವುಗೊಳಿಸಿದ್ದನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಹಿತರಕ್ಷಣಾ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ದಕ್ಷಿಣ ತಾಲ್ಲೂಕು ಕನಕಪುರ ರಸ್ತೆಯ ಕಗ್ಗಲಿಪುರ ವಲಯ ಅರಣ್ಯ ವ್ಯಾಪ್ತಿಯ ಗಾಂಧಿನಗರ ಗ್ರಾಮದಲ್ಲಿ ಮಂಗಳವಾರ ಮರ ಕಡಿಯುವ ವಿಚಾರ ತಿಳಿದು ಸಂಘದ ಪ್ರಮುಖರು ಅಲ್ಲಿಗೆ ತೆರಳಿ ಕಡಿಯದಂತೆ ತಡೆಯುವ ಪ್ರಯತ್ನ ಮಾಡಿದರು.

ಸಂಘದ ಪ್ರಮುಖರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದರು. ಆದರೆ, ಶಾಲಾ ಮಕ್ಕಳಿಗೆ ತೊಂದರೆಯಾಗುತ್ತಿದೆ ಎನ್ನುವ ಮನವಿ ಬಂದಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸಮಜಾಯಿಷಿ ನೀಡಿದರು. ಇದನ್ನು ಒಪ್ಪದೇ ಇದ್ದಾಗ ಮರವನ್ನು ಕಡಿಯಲಾಯಿತು.

'ಹಸಿರು ಮರ ಕಡಿಯುವ ಪ್ರಯತ್ನ ಇದು ಮೊದಲೇನಲ್ಲ. ಅರಣ್ಯ ಇಲಾಖೆ ಅಧಿಕಾರಿಗಳು ಜೀವಂತ ಮರಗಳಿಗೆ ಕೊಡಲಿ ಹಾಕಲು ಹಲವು ಬಾರಿ ಪ್ರಯತ್ನ ನಡೆಸಿದ್ದು, ತಕರಾರು ಅರ್ಜಿ ನೀಡಿ ತಡೆದಿದ್ದೆವು. ವನರಕ್ಷಕರ ಹೆಸರಲ್ಲಿ ಇಲಾಖೆಯವರೇ ಮರಗಳಿಗೆ ಕೊಡಲಿ ಹಾಕುತ್ತಿರುವುದು ನೋವು ಉಂಟು ಮಾಡಿದೆ. ಇದರ ವಿರುದ್ಧ ಹೋರಾಟ ನಡೆಸುತ್ತೇವೆ' ಎಂದು ಸಂಘದ ಅಧ್ಯಕ್ಷ ನದೀಮ್ ಪಾಷ ಹೇಳಿದ್ದಾರೆ.

ಮುಖ್ಯಾಂಶಗಳು

- ಕರ್ನಾಟಕ ರಾಜ್ಯ ರೈತ ಹಿತರಕ್ಷಣಾ ಸಂಘದಿಂದ ಧರಣಿ
- ವನರಕ್ಷಕರ ಹೆಸರಿನಲ್ಲಿ ಮರಗಳಿಗೆ ಕೊಡಲಿ: ಆಕ್ರೋಶ



ಮರ ಕಡಿಯುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಹಿತರಕ್ಷಣಾ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲೂಕಿನ ಉತ್ತರಹಳ್ಳಿ ಹೋಬಳಿಯಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ 2026–27ನೇ ಸಾಲಿನ ಪ್ರಥಮ ವರ್ಷದ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕಂಪ್ಯೂಟರ್ ಸೈನ್ಸ್, ಎಂಜಿನಿಯ ರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಹಾಗೂ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮಷಿನ್ ಲರ್ನಿಂಗ್ ವಿಭಾಗಗಳಲ್ಲಿ ಪ್ರವೇಶ ಪಡೆಯಬಹುದು.

ಆಸಕ್ತ ವಿದ್ಯಾರ್ಥಿಗಳು dte.karnataka.gov.in ಅಥವಾ dtetech.karnataka.gov.in/kartechnical ಮೂಲಕ ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಬೆಂಗಳೂರು ದಕ್ಷಿಣ ಇಲ್ಲಿ ಖುದ್ದಾಗಿ ಹಾಜರಾಗಿ ಅರ್ಜಿಯನ್ನು ಭರ್ತಿ ಮಾಡಬಹುದಾಗಿದೆ.

ಅರ್ಜಿ ಸಲ್ಲಿಸಲು ಜೂನ್ 30 ಕೊನೇ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ gptbengalurusouth@gmail.com ಅಥವಾ ದೂರವಾಣಿ ಸಂಖ್ಯೆ 9611679274, 9845461035 ಸಂಪರ್ಕಿಸಬಹುದು.

ವಿಶೇಷ ಯೋಗ ಇಂದಿನಿಂದ

ಬೆಂಗಳೂರು: ನಗರದ ಆನಂದರಾವ್ ವೃತ್ತದಲ್ಲಿರುವ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ, ಯುನಾನಿ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಜೂನ್ 3ರಿಂದ 20ರವರೆಗೆ ವಿಶೇಷ ಯೋಗ ಕಾರ್ಯಕ್ರಮ ಆಯೋಜಿಸಲಾಗಿದೆ.

ನಿತ್ಯ ಬೆಳಿಗ್ಗೆ 7.30ರಿಂದ 8.30ರವರೆಗೆ ಯೋಗಾಭ್ಯಾಸ ಸೇರಿದಂತೆ ವಿವಿಧ ಕಾರ್ಯಕ್ರಮ ನಡೆಯಲಿದೆ. ಮಾಹಿತಿಗೆ ಮೊ.ಸಂ. 9845986119 ಸಂಪರ್ಕಿಸಬಹುದು.

ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 2004–2020ರ ಅವಧಿಯಲ್ಲಿ ಅನುತ್ತೀರ್ಣಗೊಂಡ ಪದವಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ ನೀಡಿದ್ದು, ಪಠ್ಯಕ್ರಮವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಜುಲೈ, ಆಗಸ್ಟ್‌ನಲ್ಲಿ ಪರೀಕ್ಷೆ ನಡೆಯಲಿದೆ. ಪಠ್ಯಕ್ರಮವನ್ನು ವಿಶ್ವವಿದ್ಯಾಲಯದ ಜಾಲತಾಣ https://bangalore university.karnataka.gov.inನಲ್ಲಿ ಪ್ರಕಟಿಸಲಾಗಿದೆ. 2014–2020ನೇ ಸಾಲಿನ ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಪದವಿ ಪೂರ್ವ ಸಿದ್ಧತಾ ವಿಭಾಗ, ಪರೀಕ್ಷಾ ಭವನ, ಬೆಂಗಳೂರು ವಿ.ವಿಯನ್ನು ಸಂಪರ್ಕಿಸಬಹುದು.

ಬಫರ್ ವಲಯಕ್ಕೆ ಕತ್ತರಿ: ನೋಟಿಸ್

ಆದರ್ಶ್ ಆರ್. ಅಯ್ಯರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪರಿಷ್ಕೃತ ಮಾಸ್ಟರ್ ಪ್ಲಾನ್ 2015ಕ್ಕೆ ತಿದ್ದುಪಡಿ: ಆಕ್ಷೇಪ
- ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠದಿಂದ ವಿಚಾರಣೆ
- 100 ರಾಜಕಾಲುವೆಗಳ ಒತ್ತುವರಿ ತೆರವು

ಬೆಂಗಳೂರು: ಪರಿಷ್ಕೃತ ಮಾಸ್ಟರ್ ಪ್ಲಾನ್ 2015ಕ್ಕೆ ತಿದ್ದುಪಡಿ ಮಾಡುವ ಮೂಲಕ ಬೆಂಗಳೂರು ಮಹಾನಗರದಲ್ಲಿನ ರಾಜಕಾಲುವೆಗಳ ಆಜುಬಾಜಿನ ಬಫರ್ ವಲಯ ಕುಗ್ಗಿಸಿರುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ 'ಜನಾಧಿಕಾರ ಸಂಘರ್ಷ ಪರಿಷತ್' ಸಹ ಅಧ್ಯಕ್ಷ ಆದರ್ಶ್ ಆರ್. ಅಯ್ಯರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜಿಬಿಎ ಮತ್ತು ಬಿಡಿಎ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಪ್ರತಿವಾದಿಗಳಿಗೆ ಸೂಚಿಸಿ ವಿಚಾರಣೆಯನ್ನು ಸೆಪ್ಟೆಂಬರ್ 2ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಸುಮನ ಹೆಗ್ಡೆ ವಕಾಲತ್ತು ವಹಿಸಿದ್ದಾರೆ.



ಅರ್ಜಿಯಲ್ಲಿ ಏನಿದೆ?: 'ಪರಿಷ್ಕತ ಮಾಸ್ಟರ್ ಪ್ಲಾನ್–2015 ಅನ್ನು ತಿದ್ದುಪಡಿ ಮಾಡುವ ಮೂಲಕ ರಾಜ್ಯ ಸರ್ಕಾರ, ಬೆಂಗಳೂರು ಮಹಾನಗರ ವ್ಯಾಪ್ತಿಯ ರಾಜಕಾಲುವೆಗಳ ಬಫರ್ ವಲಯಗಳನ್ನು ಗಣನೀಯವಾಗಿ ಕುಗ್ಗಿಸಿ ಅಧಿಸೂಚನೆ ಹೊರಡಿಸಿದೆ. ಇದರ ಪರಿಣಾಮವಾಗಿ ಪ್ರತಿ ಬಾರಿ ಮಳೆ ಸುರಿದಾಗಲೆಲ್ಲಾ ಭಾರಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದು ಜೀವಗಳು ಮತ್ತು ಆಸ್ತಿ ಪಾಸ್ತಿಗಳ ಹಾನಿಗೆ ಕಾರಣವಾಗುತ್ತಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಬೆಂಗಳೂರು ಮಹಾ ನಗರದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಲು ಕಾರಣವೇನು ಎಂಬುದನ್ನು 2021ರ ಸಿಎಜಿ ವರದಿಯಲ್ಲೂ ಉಲ್ಲೇಖಿಸಲಾಗಿದೆ. ಬಿಬಿಎಂಪಿ ಅವಧಿಯಲ್ಲಿ ಮಳೆ ನೀರು ಕಾಲುವೆಗಳನ್ನು ಮತ್ತು ರಾಜಕಾಲುವೆಗಳ ಸುತ್ತಮುತ್ತಲ ಬಫರ್ ವಲಯಗಳನ್ನೂ ಸರಿಯಾಗಿ ಗುರುತಿಸಿಲ್ಲ. ಸುಮಾರು 2,600 ರಾಜಕಾಲುವೆ ಒತ್ತುವರಿಗಳನ್ನು ಗುರುತಿಸಿದ್ದರೂ ಅವುಗಳಲ್ಲಿ ಕೇವಲ ನೂರು ಕಾಲುವೆಗಳನ್ನು ಮಾತ್ರವೇ ತೆರವುಗೊಳಿಸಲಾಗಿದೆ. ಚರಂಡಿಗಳಿಗೆ ಹೊಂದಿಕೊಂಡಂತೆ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ' ಎಂದು ದೂರಲಾಗಿದೆ.

'ಬಫರ್ ವಲಯ ಕುಗ್ಗಿಸಿರುವ ಬಗ್ಗೆ 2025ರ ಸೆಪ್ಟೆಂಬರ್ 30ರಂದು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆ ನಿರ್ಧಾರ ಪರಿಸರ ಕಾನೂನು ಮತ್ತು ನಿಯಮಗಳಿಗೆ ವಿರುದ್ಧವಾಗಿದೆ. ಅಷ್ಟೇ ಅಲ್ಲದೆ ಈ ನಿರ್ಧಾರ ಖಾಸಗಿ ರಿಯಲ್ ಎಸ್ಟೇಟ್ ವಲಯದ ಅಭಿವೃದ್ಧಿಗೆ ನೆರವು ನೀಡಿದಂತಾಗಿದೆ. ಆದ್ದರಿಂದ, ಬೆಂಗಳೂರು ಮೆಟ್ರೊ ಪ್ರದೇಶ ವ್ಯಾಪ್ತಿಯಲ್ಲಿರುವ ಪ್ರಾಥಮಿಕ, ದ್ವಿತೀಯ ಹಾಗೂ ಮೂರನೇ ಹಂತದ ಬಫರ್ ವಲಯಗಳ ಸುತ್ತಲಿನ ಗಡಿಯನ್ನು ತಕ್ಷಣವೇ ಗುರುತಿಸಲು ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ಮತ್ತು ಬಿಡಿಎಗೆ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ನಿರ್ದೇಶಿಸಬೇಕು. ಈ ಸಂಬಂಧ ನಗರಾಭಿವೃದ್ಧಿ ಇಲಾಖೆ 2025ರ ಅಕ್ಟೋಬರ್ 15ರಂದು ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.



ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರವು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣೆ, ರಕ್ತದಾನ ಮತ್ತು ನೇತ್ರದಾನ ನೋಂದಣಿ ಶಿಬಿರ ಉದ್ಘಾಟಿಸಿದ ಕುಲಪತಿ ಪ್ರೊ.ಬಿ.ರಮೇಶ್ ತಪಾಸಣೆಯನ್ನು ವೀಕ್ಷಿಸಿದರು

'ಆರೋಗ್ಯ ಕಾಳಜಿ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರವು ಮಂಗಳವಾರ ಆಯೋಜಿಸಿದ್ದ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ನೇತ್ರದಾನ ನೋಂದಣಿ ಶಿಬಿರವನ್ನು ಕುಲಪತಿ ಪ್ರೊ.ಬಿ.ರಮೇಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಕರ್ತವ್ಯದ ಜೊತೆಗೆ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ನೌಕರರು, ಸ್ವಚ್ಛತಾ ಮತ್ತು ಭದ್ರತಾ ಸಿಬ್ಬಂದಿಗೆ ಆರೋಗ್ಯ ತಪಾಸಣೆ ಆಯೋಜಿಸಲಾಗಿದೆ' ಎಂದರು.

ಯುವ ರೆಡ್‌ಕ್ರಾಸ್, ಲಯನ್ಸ್ ಕ್ಲಬ್, ಸರ್ಕಾರಿ ದಂತವೈದ್ಯ ಕಾಲೇಜಿನ ಸಹಯೋಗದಲ್ಲಿ ನಡೆದ ದಂತ, ನೇತ್ರ, ಹೃದ್ರೋಗ, ವಾಕ್ ಮತ್ತು ಶ್ರವಣ ಸಮಸ್ಯೆ, ಕ್ಯಾನ್ಸರ್, ಚರ್ಮ ರೋಗ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಯಿತು. ಅಭಿ ಆಯುರ್ ಸಂಸ್ಥೆಯು ಆಯುರ್ವೇದ ಚಿಕಿತ್ಸೆ ನೀಡಿತು. ರಕ್ತದಾನ ಶಿಬಿರ ಮತ್ತು ನಾರಾಯಣ ನೇತ್ರಾಲಯದಿಂದ ನೇತ್ರದಾನ ನೋಂದಣಿಯೂ ನಡೆಯಿತು.

ಕುಲಸಚಿವ ಎ.ನವೀನ್ ಜೋಸೆಫ್, ಹಣಕಾಸು ಅಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಕೃಷ್ಣರಾಮ್, ಕೆ.ಪಿ.ಪಾಟೀಲ್, ಶಿಲ್ಪಶ್ರೀ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯ ಅಬ್ದುಲ್ ಖಾದರ್. ಬಿ.ಕೆ.ಗಿರಿ, ಉತ್ಕರ್ಷ್ ಲೋಕೇಶ್, ಪ್ರಸಾರಾಂಗ ನಿರ್ದೇಶಕ ಪ್ರೊ.ಟಿ.ಎನ್. ತಾಂಡವಗೌಡ, ಎನ್‌ಎಸ್‌ಎಸ್ ಸಂಯೋಜಕ ಗೋವಿಂದೇಗೌಡ, ಪ್ರೊ.ಕೆ.ಆರ್.ಜಲಜಾ, ಪ್ರೊ.ಜ್ಯೋತಿ ವೆಂಕಟೇಶ್, ಪ್ರೊ.ಎಂ.ನಿರ್ಮಲಾ, ಪ್ರೊ.ರಿತಿಕಾ ಸಿನ್ಹಾ, ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ದೀಪಾ ಹಾಜರಿದ್ದರು.



ತಮ್ಮ ನಿವಾಸಕ್ಕೆ ಭೇಟಿ ನೀಡಿದ ದುರ್ಗಾ ಸ್ಟಾಲಿನ್ ಅವರನ್ನು ಶಾಸಕ ಜಿ.ಟಿ. ದೇವೇಗೌಡ ಮತ್ತು ಕುಟುಂಬದವರು ಸತ್ಕರಿಸಿದರು

ಬೆಟ್ಟಕ್ಕೆ ದುರ್ಗಾ ಸ್ಟಾಲಿನ್ ಭೇಟಿ

ಮೈಸೂರು: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಅವರು ಸೋಮವಾರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ನಾಡದೇವತೆ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಅವರ ಪುತ್ರಿ ಪೂರ್ಣಿಮಾ, ದುರ್ಗಾ ಅವರಿಗೆ ಸಾಥ್ ನೀಡಿದರು. ದೇವಿಯ ದರ್ಶನ ಹಾಗೂ ಪೂಜೆ ಬಳಿಕ ದುರ್ಗಾ ಶಾಸಕ ಜಿ.ಟಿ. ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿದರು.

ನಿವಾಸದಲ್ಲಿ ಜಿಟಿಡಿ ಕುಟುಂಬ ಸದಸ್ಯರೊಂದಿಗೆ ಒಂದು ಗಂಟೆ ಆತ್ಮೀಯವಾಗಿ ಮಾತುಕತೆ ನಡೆಸಿದರು. ಕುಟುಂಬ ಸದಸ್ಯರು ದುರ್ಗಾ ಅವರಿಗೆ ಅರಿಸಿನ–ಕುಂಕುಮ ನೀಡಿ ಗೌರವಿಸಿದರು. ಅವರು ಜಿಟಿಡಿ ದಂಪತಿ ಕಾಲಿಗೆ ಬಿದ್ದು ನಮಸ್ಕರಿಸಿದರು. ದುರ್ಗಾ ಅವರು ಮಂಡ್ಯ ಜಿಲ್ಲೆಯ ನಿಮಿಷಾಂಬ ದೇಗುಲಕ್ಕೆ ಭೇಟಿ ನೀಡಿ, ದರ್ಶನ ಪಡೆದರು.

ಸ್ಟಾಲಿನ್ ಹಾಗೂ ಅವರ ಪುತ್ರ ಉದಯನಿಧಿ ಸ್ಟಾಲಿನ್ ಅವರ ನಾಸ್ತಿಕ ನಿಲುವುಗಳ ನಡುವೆ, ದುರ್ಗಾ ಅವರ ದೇಗುಲ ದರ್ಶನ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಆಗುತ್ತಿದೆ.

ದೇವನಹಳ್ಳಿ ಎಸ್‌ಟಿಪಿ: ದೇಶಕ್ಕೇ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಮೂತ್ರ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ದೇವನಹಳ್ಳಿ ಬಳಿ ಭಾರತದ ಮೊದಲ ಪುರಸಭೆ ಮಟ್ಟದ 'ಮಲಮೂತ್ರ ತ್ಯಾಜ್ಯ ಸಂಸ್ಕರಣಾ ಘಟಕ' ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮಾಹಿತಿ ನೀಡಿದ್ದಾರೆ.

'ವೇಗವಾಗಿ ಬೆಳೆಯುತ್ತಿರುವ ನಗರ ಮತ್ತು ಅರೆ-ನಗರ ಪ್ರದೇಶಗಳಲ್ಲಿ ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ಮಹಾನಗರಗಳಲ್ಲಿ ಒಳಚರಂಡಿ ಜಾಲ ಲಭ್ಯವಿದ್ದರೂ, ಸಣ್ಣ ಪಟ್ಟಣಗಳಲ್ಲಿನ ಹೆಚ್ಚಿನ ಮನೆಗಳು ಸೆಪ್ಟಿಕ್ ಟ್ಯಾಂಕ್‌ಗಳು ಹಾಗೂ ಇತರೆ ಸ್ಥಳೀಯ ನೈರ್ಮಲ್ಯ ವ್ಯವಸ್ಥೆಗಳ ಮೇಲೆ ಅವಲಂಬಿತವಾಗಿವೆ. ಈ ವ್ಯವಸ್ಥೆಗಳಿಂದ ಉತ್ಪತ್ತಿಯಾಗುವ ಮಲಮೂತ್ರ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದಿರುವುದು ಪರಿಸರ ಮಾಲಿನ್ಯ, ಜಲಮೂಲಗಳ ಮಾಲಿನ್ಯ, ಸಾರ್ವಜನಿಕ ಆರೋಗ್ಯದ ಅಪಾಯಗಳಿಗೆ ಕಾರಣವಾಗುತ್ತದೆ. ಈ ಸವಾಲುಗಳನ್ನು ಮನಗಂಡು ದೇವನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ನೂತನ ಘಟಕ ಸ್ಥಾಪಿಸಲಾಗಿದೆ. ಈ ಘಟಕವು ವೈಜ್ಞಾನಿಕ ಹಾಗೂ ಸುಸ್ಥಿರ ನೈರ್ಮಲ್ಯ ನಿರ್ವಹಣೆಗೆ ಮಾದರಿಯಾಗಿದೆ' ಎಂದು ಹೇಳಿದರು.



> ದೇವನಹಳ್ಳಿ ಘಟಕದ ಯಶಸ್ಸು ದೇಶ, ವಿದೇಶದ ಗಮನ ಸೆಳೆದಿದೆ. ವಿಕೇಂದ್ರೀಕೃತ ತಂತ್ರಜ್ಞಾನದಿಂದ ನೈರ್ಮಲ್ಯ ಪರಿಹಾರ ಪಡೆಯಬಹುದು ಎಂಬುದಕ್ಕೆ ಇದು ಸಾಕ್ಷಿ
>
> **ಶಾಲಿನಿ ರಜನೀಶ್,** ಸರ್ಕಾರದ ಮುಖ್ಯಕಾರ್ಯದರ್ಶಿ

'ದೇವನಹಳ್ಳಿಯು ಬೆಂಗಳೂರಿನ ಸಮೀಪ ಇದ್ದು, 40,000 ಜನಸಂಖ್ಯೆ ಹಾಗೂ 7,105 ಕುಟುಂಬಗಳನ್ನು ಹೊಂದಿದೆ. ಪಟ್ಟಣದ ಬಹುತೇಕ ಮನೆಗಳು 5,110 ಸೆಪ್ಟಿಕ್ ಟ್ಯಾಂಕ್‌ಗಳ ಮೂಲಕ ನೈರ್ಮಲ್ಯ ವ್ಯವಸ್ಥೆಯನ್ನು ಅವಲಂಬಿಸಿವೆ. ಯೋಜನೆಯ ಅನುಷ್ಠಾನಕ್ಕೂ ಮೊದಲು ಈ ವ್ಯವಸ್ಥೆಗಳಿಂದ ಉತ್ಪತ್ತಿಯಾಗುವ ಮಲಮೂತ್ರ ತ್ಯಾಜ್ಯದ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಹಾಗೂ ವಿಲೇವಾರಿಗೆ ವ್ಯವಸ್ಥಿತವಾದ ವ್ಯವಸ್ಥೆ ಇರಲಿಲ್ಲ. ಹಾಗಾಗಿ, ಘಟಕ ಸ್ಥಾಪಿಸಲಾಯಿತು. ಘಟಕವು ಇದುವರೆಗೆ 1.8 ಮಿಲಿಯನ್ ಲೀಟರ್‌ಗಿಂತ ಅಧಿಕ ಮಲಮೂತ್ರ ತ್ಯಾಜ್ಯವನ್ನು ಸಂಸ್ಕರಿಸಿದೆ. 19,000 ಕಿ.ಗ್ರಾಂ. ಗಿಂತ ಹೆಚ್ಚು ಸಹ-ಕಾಂಪೋಸ್ಟ್ ಮಾರಾಟ ಮಾಡಲಾಗಿದೆ' ಎಂದು ತಿಳಿಸಿದರು.

ಸಮಗ್ರ ನಿರ್ವಹಣಾ ವ್ಯವಸ್ಥೆ

ಮಲಮೂತ್ರ ತ್ಯಾಜ್ಯ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಹಾಗೂ ವಿಲೇವಾರಿಯನ್ನು ಒಳಗೊಂಡ ಸಮಗ್ರ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು ಯೋಜನೆಯ ಪ್ರಮುಖ ಉದ್ದೇಶ ಎಂದು ಶಾಲಿನಿ ರಜನೀಶ್ ಹೇಳಿದರು.

'ಸಂಸ್ಕರಿಸದ ತ್ಯಾಜ್ಯವನ್ನು ಜಲಮೂಲಗಳು, ಖಾಲಿ ಜಾಗಗಳು ಹಾಗೂ ಒಳಚರಂಡಿ ಕಾಲುವೆಗಳಲ್ಲಿ ಅಕ್ರಮವಾಗಿ ಸುರಿಯುವುದನ್ನು ತಡೆಯುವುದು. ನೀರಿನಿಂದ ಹರಡುವ ಹಾಗೂ ನೈರ್ಮಲ್ಯಕ್ಕೆ ಸಂಬಂಧಿಸಿದ ರೋಗಗಳ ಹರಡುವಿಕೆಯನ್ನು ಕಡಿಮೆ ಮಾಡುವ ಮೂಲಕ ಸಾರ್ವಜನಿಕ ಆರೋಗ್ಯವನ್ನು ರಕ್ಷಿಸುವುದು. ತ್ಯಾಜ್ಯದಿಂದ ಕಾಂಪೋಸ್ಟ್ ಮತ್ತು ಜೈವಿಕ ಅನಿಲದಂತಹ ಮೌಲ್ಯಯುತ ಸಂಪನ್ಮೂಲಗಳನ್ನು ಮರುಪಡೆಯುವುದು' ಇತರೆ ಉದ್ದೇಶಗಳು ಎಂದು ಮಾಹಿತಿ ನೀಡಿದರು.

ಮೈಸೂರು ರೇಸ್

ಅಮೇಜಿಂಗ್ ಇಮ್ರಾರಿಫ ಗೆಲ್ಲುವ ನಿರೀಕ್ಷೆ

ವರಾಹಿ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಮೇಜಿಂಗ್ ಇಮ್ರಾರಿಫ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪೆಟ್ಟೀಸ್ ಚಾಯ್ಸ್ 1, ಬ್ರಾಕ್‌ಸ್ಟನ್ 4, ಅಲ್ಯೂರಿಂಗ್ ಬ್ಯೂಟಿ 5
2ನೇ ರೇಸ್: ಅರಿಕಟ್ಟು 1, ಚಾಯ್ಸ್ 1, ನಾಟಿ ಇನ್ ಬ್ಲೂ 9
3ನೇ ರೇಸ್: ಗಿಮ್ಮಿ 10, ನ್ಯಾಚುರಲ್ ಕ್ವೀನ್ 11, ಸಿಟಿ ಆಫ್ ಹಸ್ಲ್ 2
4ನೇ ರೇಸ್: ಲುಕಿಂಗ್ ಫಾರ್ ಲಾಡೂ 10, ದೇವತೆ 6, ನ್ಯಾಚುರಲ್ ಲುಕ್ 5
5ನೇ ರೇಸ್: ಸ್ಮೈಲ್ಸ್ ಆಫ್ ಫಾರ್ಚೂನ್ 6, ಡೆಕಕಾರ್ನ್ 1, ಡ್ರಿಸಾನ 10
6ನೇ ರೇಸ್: ಅಮೇಜಿಂಗ್ ಇಮ್ರಾರಿಫ 7, ಸ್ವರ್ಗ 3, ಶೀಬಾ 10
7ನೇ ರೇಸ್: ಮೈಂಡ್ ಗೇಮ್ಸ್ 1, ಪೋಲಾರ್ ವಿಂಡ್ 6, ಬೋಲ್ಡ್ ಶೋ 5
8ನೇ ರೇಸ್: ಅಲ್ಟಿಮೇಟ್ ಬ್ಲೂಸ್ 3, ನ್ಯಾಚುರಲ್ ಟೊರ್ನಾಡೊ 4, ಪ್ರಿನ್ಸ್ ಕಾರ್ಪೊರೇಟ್ 5

ಉತ್ತಮ ಬೆಟ್: ಮೈಂಡ್ ಗೇಮ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಫುಟ್‌ಬಾಲ್: ಅನ್ಸ್ ಸ್ಪೋರ್ಟ್ಸ್ ಕ್ಲಬ್‌ಗೆ ಗೆಲುವು

ಬೆಂಗಳೂರು: ಅರುಣ್ ಕುಮಾರ್ ಕೆ. ಅವರ ಅಮೋಘ ಆಟದ ನೆರವಿನಿಂದ ಅನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು ಮಂಗಳವಾರ ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 12–0ಯಿಂದ ಯಲಹಂಕ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅರುಣ್ ಐದು ಗೋಲು ದಾಖಲಿಸಿ, ಗೆಲುವಿನಲ್ಲಿ ಮಿಂಚಿದರು. ಶಿರಾಜ್ ಖಾನ್, ರಿಹಾನ್ ಅನ್ವರ್ ಮತ್ತು ಸಲೀಂ ಎ. ಅವರು ತಲಾ ಎರಡು ಗೋಲು ಗಳಿಸಿದರು. ಇ.ಎ. ಅಶ್ವಿನ್ ಕೃಷ್ಣ ಒಂದು ಗೋಲು ತಂದಿತ್ತರು. ಉಳಿದ ಪಂದ್ಯಗಳಲ್ಲಿ ಬ್ಲಾಕ್ ಮೂನ್ ಎಫ್‌ಸಿ 3–2ರಿಂದ ವಿಕ್ಟೋರಿಯಾ ಎಫ್‌ಸಿ ಬೆಂಗಳೂರು ವಿರುದ್ಧ ಗೆಲುವು ದಾಖಲಿಸಿತು. ರೊನಾಲ್ಡೊ ಎಫ್‌ಸಿ ಬೆಂಗಳೂರು ಗೋಲುರಹಿತವಾಗಿ ಪ್ಲೇ 360 ತಂಡದೊಂದಿಗೆ ಡ್ರಾ ಮಾಡಿಕೊಂಡಿತು.

ಹಾಕಿ: ಹಿಂದೂಸ್ತಾನ್ ಫ್ರೆಂಡ್ಸ್ ಜಯಭೇರಿ

ಬೆಂಗಳೂರು: ಹರಿಹರನ್ ಎಂ. ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಹಿಂದೂಸ್ತಾನ್ ಫ್ರೆಂಡ್ಸ್ ಕ್ಲಬ್ ತಂಡವು ಮಂಗಳವಾರ ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–1ರಿಂದ ಕರ್ನಾಟಕ ಅರಣ್ಯ ಇಲಾಖೆ ತಂಡವನ್ನು ಸೋಲಿಸಿತು.

ಕೆಎಸ್‌ಎಚ್‌ಎ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹಿಂದೂಸ್ತಾನ್ ಫ್ರೆಂಡ್ಸ್ ತಂಡದ ಆನಂದ್ ವೈ. (5ನೇ ನಿ.) ಆರಂಭಿಕ ಮುನ್ನಡೆ ತಂದುಕೊಟ್ಟರು. ನಂತರ, ಹರಿಹರನ್ (15ನೇ, 24ನೇ ಹಾಗೂ 33ನೇ ನಿ.) ಮೂರು ಬಾರಿ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿ, ಪಾರಮ್ಯ ಮೆರೆದರು. ಅರಣ್ಯ ಇಲಾಖೆ ತಂಡದ ದರ್ಶನ್ (49ನೇ ನಿ.) ಒಂದು ಗೋಲು ದಾಖಲಿಸಿದರು.

ಮೇಲುಕೋಟೆ ದೇಗುಲಕ್ಕೆ ಸಮಿತಿ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಲು ನಿರ್ದೇಶನ ನೀಡಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಮೇಲುಕೋಟೆಯ ವಿದ್ವಾನ್ ಎಂ.ಪಿ. ನರಸಿಂಹನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್, ಮುಜರಾಯಿ ಇಲಾಖೆಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ನಿರ್ದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 2ಕ್ಕೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: 'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಕಾಯ್ದೆ-1997ರ ಪ್ರಕಾರ ಚೆಲುವ ನಾರಾಯಣಸ್ವಾಮಿ ದೇವಸ್ಥಾನ ಎ ದರ್ಜೆ ದೇವಸ್ಥಾನ. ಇದು ವಾರ್ಷಿಕ ₹25 ಲಕ್ಷ ಆದಾಯ ಹೊಂದಿದೆ. ಕಾಯ್ದೆಯ ಕಲಂ 25ರ ಪ್ರಕಾರ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಬೇಕು. ಕೊನೆ ಬಾರಿಗೆ ರಚಿಸಲಾಗಿದ್ದ ಸಮಿತಿಯ ಅವಧಿ 2013-14ನೇ ಸಾಲಿಗೆ ಮುಕ್ತಾಯವಾಗಿದೆ. ಆ ಬಳಿಕ, ಆಡಳಿತಾಧಿಕಾರಿಯೇ ದೇವಸ್ಥಾನದ ನಿರ್ವಹಣೆ ಮಾಡುತ್ತಿದ್ದಾರೆ. 2023ರಲ್ಲಿ ವ್ಯವಸ್ಥಾಪನಾ ಸಮಿತಿ ರಚನೆಗೆ ಅಧಿಸೂಚನೆ ಹೊರಡಿಸಲಾಗಿದ್ದರೂ, ಈತನಕ ಯಾವುದೇ ಕ್ರಮ ಜರುಗಿಲ್ಲ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'2023ರ ಅಧಿಸೂಚನೆಗೆ ಅನುಗುಣವಾಗಿ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಲು ಮತ್ತು ನನ್ನನ್ನು ವ್ಯವಸ್ಥಾಪನಾ ಸಮಿತಿಗೆ ಪರಿಗಣಿಸುವಂತೆ ಕೋರಿ ಹಲವು ಬಾರಿ ಮನವಿ ಸಲ್ಲಿಸಿದರೂ ಅದನ್ನು ಪರಿಗಣಿಸಿಲ್ಲ. ಆದ್ದರಿಂದ, ಕೂಡಲೇ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸುವಂತೆ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಶಿರಸಿ ಸರ್ಕಾರಿ ಆಸ್ಪತ್ರೆ ಅಳಲು

ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 250 ಹಾಸಿಗೆಗಳ ಸರ್ಕಾರಿ ಜಿಲ್ಲಾ ಆಸ್ಪತ್ರೆ
- ನಿರ್ಮಾಣ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಲು ಆಗ್ರಹ
- ವೈದ್ಯಕೀಯ ಸಿಬ್ಬಂದಿ ನೇಮಕ ಮಾಡಲು ನಿರ್ದೇಶಿಸಲು ಅರ್ಜಿ

ಬೆಂಗಳೂರು: 'ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಿರ್ಮಿಸಲಾಗುತ್ತಿರುವ 250 ಹಾಸಿಗೆಗಳ ಸರ್ಕಾರಿ ಜಿಲ್ಲಾ ಆಸ್ಪತ್ರೆಯ ನಿರ್ಮಾಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನು ನೇಮಕ ಮಾಡಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಶಿರಸಿಯ 'ಅನಂತಮೂರ್ತಿ ಹೆಗಡೆ ಚಾರಿಟಬಲ್ ಟ್ರಸ್ಟ್' ಅಧ್ಯಕ್ಷ ಅನಂತ ಮೂರ್ತಿ ಹೆಗಡೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆ ನಿರ್ದೇಶಕ, ಮುಖ್ಯ ಎಂಜಿನಿಯರ್, ಉತ್ತರ ಕನ್ನಡ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ ವಿಚಾರಣೆ ಮುಂದೂಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪ್ರಭಾಕರ ಎಲ್.ಶೆಟ್ಟಿ ವಕಾಲತ್ತು ವಹಿಸಿದ್ದಾರೆ.



ಅರ್ಜಿಯಲ್ಲಿ ಏನಿದೆ?: 'ಶಿರಸಿಯಲ್ಲಿರುವ 100 ಹಾಸಿಗೆಗಳ ಪಂಡಿತ್ ಸಾರ್ವಜನಿಕ ಆಸ್ಪತ್ರೆಯನ್ನು 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಪರಿವರ್ತಿಸಲಾಗುವುದು. ಅದಕ್ಕಾಗಿ ₹26.8 ಕೋಟಿ ವ್ಯಯಿಸಲಾಗುವುದು. ಮೂರು ವರ್ಷಗಳಲ್ಲಿ ಈ ಯೋಜನೆ ಪೂರ್ಣಗೊಳಿಸಲಾಗುವುದು ಎಂದು ರಾಜ್ಯ ಸರ್ಕಾರ 2020-21ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿತ್ತು. ನಂತರ ಇದಕ್ಕಾಗಿ ಟೆಂಡರ್ ಅಂತಿಮಗೊಳಿಸಲಾಗಿತ್ತು. ಆದರೆ, ಐದು ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ. ವೈದ್ಯರು, ನರ್ಸ್, ಸಿಬ್ಬಂದಿಯನ್ನು ನಿಯೋಜಿಸಿಲ್ಲ ಹಾಗೂ ಜೀವ ಉಳಿಸುವ ವೈದ್ಯಕೀಯ ಉಪಕರಣಗಳನ್ನೂ ಖರೀದಿಸಿಲ್ಲ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಉತ್ತರ ಕನ್ನಡ ಜಿಲ್ಲೆಯಲ್ಲಿ ಸದ್ಯ ಹೃದ್ರೋಗ ಹಾಗೂ ನರ ತಜ್ಞರು, ಶಸ್ತ್ರಚಿಕಿತ್ಸೆಯ ನುರಿತ ವೈದ್ಯರು ಇಲ್ಲ. ಇದರಿಂದ ಶಿರಸಿ, ಸಿದ್ದಾಪುರ, ಮುಂಡಗೋಡು ಮತ್ತು ಹಾನಗಲ್ ಪ್ರದೇಶಗಳಲ್ಲಿ ಹೃದಯಾಘಾತ, ಮೆದುಳಿಗೆ ಪೆಟ್ಟು ತಿಂದ ರೋಗಿಗಳನ್ನು ತುರ್ತು ಚಿಕಿತ್ಸೆಗಾಗಿ 125 ಕಿ.ಮೀ ದೂರದ ಹುಬ್ಬಳ್ಳಿ ಆಸ್ಪತ್ರೆಗೆ ಕರೆದೊಯ್ಯಬೇಕಿದೆ. ಹಲವು ರೋಗಿಗಳು ಮಾರ್ಗ ಮಧ್ಯೆಯೇ ಸಾವನ್ನಪ್ಪಿದ ಸಂದರ್ಭಗಳಿವೆ' ಎಂಬ ಅಂಶವನ್ನು ಕಾಣಿಸಲಾಗಿದೆ.

'ಕಾಲಮಿತಿಯೊಳಗೆ ಪಂಡಿತ್ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಪೂರ್ಣಗೊಳಿಸಬೇಕು. ಹೃದ್ರೋಗ ಹಾಗೂ ನರ ತಜ್ಞರು ಸೇರಿದಂತೆ ವೈದ್ಯರು, ನರ್ಸ್, ಸಿಬ್ಬಂದಿಯನ್ನು ನೇಮಿಸಬೇಕು. ಜೀವ ಉಳಿಸುವ ವೈದ್ಯಕೀಯ ಉಪಕರಣಗಳು, ಸಿಟಿ, ಎಂಆರ್‌ಐ ಸ್ಕ್ಯಾನ್ ಯಂತ್ರಗಳನ್ನು ಆಸ್ಪತ್ರೆಯಲ್ಲಿ ಅಳವಡಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಸುದ್ದಿ 2 ನಿಮಿಷ

ಶಾಲಾ ಆವರಣ: ಚಿತ್ರೀಕರಣ ನಿಷೇಧ

ಬೆಂಗಳೂರು: ಸರ್ಕಾರಿ ಶಾಲೆ ಹಾಗೂ ಶಾಲಾ ಆವರಣದಲ್ಲಿ ಚಿತ್ರೀಕರಣ ನಿಷೇಧಿಸಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಚಲನಚಿತ್ರ, ಕಿರುಚಿತ್ರ, ಸಾಕ್ಷ್ಯಚಿತ್ರಗಳು, ದೂರದರ್ಶನ ಸೇರಿದಂತೆ ಯಾವುದೇ ವಿದ್ಯುನ್ಮಾನ ವಾಹಿನಿಗಳ ಧಾರಾವಾಹಿಗಳು ಹಾಗೂ ಸಾಮಾಜಿಕ ಜಾಲತಾಣಗಳಿಗಾಗಿ ರೂಪಿಸುವ ವಿಡಿಯೊ ಚಿತ್ರೀಕರಣಗಳಿಗೆ ಶಾಲಾ ವಿದ್ಯಾರ್ಥಿಗಳ ಗೋಪ್ಯತೆ, ಸುರಕ್ಷತೆ, ಕಲಿಕಾ ಪರಿಸರಕ್ಕೆ ಧಕ್ಕೆಯಾಗುವ ಕಾರಣಗಳಿಂದ ಅನುಮತಿ ನೀಡಬಾರದು ಎಂದು ಇಲಾಖೆಯ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಸೂಚಿಸಿದ್ದಾರೆ.

ಚಿತ್ರೀಕರಣಗಳಿಂದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಡಚಣೆಯಾಗುತ್ತಿದೆ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ. ಕೆಲವೆಡೆ ಚಿತ್ರೀಕರಣದ ಸಮಯದಲ್ಲಿ ಮಕ್ಕಳು ಭಾಗಿಯಾಗುವುದಕ್ಕೆ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳ ಸುರಕ್ಷತೆ ಹಾಗೂ ಶಾಲೆಯ ಮುಖ್ಯಶಿಕ್ಷಕರದ್ದಾಗಿದೆ. ಶಾಲೆಯ ಮಕ್ಕಳ ಭದ್ರತಾ ದೃಷ್ಟಿಯಿಂದಲೂ ಈ ಕ್ರಮ ಅನಿವಾರ್ಯ ಎಂದು ಹೇಳಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ ರಾಜ್ಯದ ಎಲ್ಲ ಶಾಲೆಗಳಿಗೂ ವಾರ್ಷಿಕ ಶೈಕ್ಷಣಿಕ ಕ್ರಿಯಾ ಯೋಜನೆಯ ವೇಳಾಪಟ್ಟಿ ಕಳುಹಿಸಿದ್ದು, ಶೈಕ್ಷಣಿಕ ಅವಧಿ, ಪಠ್ಯೇತರ ಚಟುವಟಿಕೆಗಳು, ರಜಾ ದಿನಗಳು ಮತ್ತು ವಾರ್ಷಿಕ ಕಾರ್ಯಸೂಚಿ ನಿಗದಿ ಮಾಡಿದೆ. ಆದರೆ, ಚಿತ್ರೀಕರಣದಂತಹ ಶಿಕ್ಷಣೇತರ ಚಟುವಟಿಕೆಗಳಿಗೆ ಅಸ್ಪದ ನೀಡಿಲ್ಲ ಎಂದು ವಿವರಿಸಿದ್ದಾರೆ.

ನಾಗರಹೊಳೆ: 'ಸಿಇಸಿ' ಭೇಟಿ



ಬೆಂಗಳೂರು: 'ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ವಿವಾದಿತ ಹೆದ್ದಾರಿ ವಿಸ್ತರಣೆ ಕಾಮಗಾರಿ ಮುಂದುವರಿಸುತ್ತಿರುವುದು' ಎಂದು ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಸೂಚನೆ ನೀಡಿದೆ.

ಸಿಇಸಿ ಸಮಿತಿ ಸದಸ್ಯ, ಮಹಾರಾಷ್ಟ್ರದ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುನಿಲ್ ಲಿಮಯೆ ಅವರಿದ್ದ ತಂಡವು ಸ್ಥಳಕ್ಕೆ ಭೇಟಿ ನೀಡಿ ಮೈಸೂರಿನಿಂದ ಹ್ಯಾಂಡ್‌ಪೋಸ್ಟ್ ಮಾರ್ಗವಾಗಿ ಕೇರಳದ ಮಾನಂದವಾಡಿಗೆ ಹಾದುಹೋಗುವ ಸುಮಾರು 21 ಕಿ.ಮೀ. ಉದ್ದಕ್ಕೂ ಕೈಗೊಂಡಿರುವ ರಸ್ತೆ ವಿಸ್ತರಣೆ ಕಾಮಗಾರಿ ಪರಿಶೀಲನೆ ನಡೆಸಿತು.

'ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಇರುವ ನಿರ್ದೇಶನ, ರಸ್ತೆ ವಿಸ್ತರಣೆ ಕಾಮಗಾರಿ ಕುರಿತು ಲೋಕೋಪಯೋಗಿ ಹಾಗೂ ಅರಣ್ಯ ಇಲಾಖೆ ಕೈಗೊಂಡಿರುವ ತೀರ್ಮಾನ, ಮುಂದೆ ವಹಿಸಬೇಕಾದ ಕ್ರಮಗಳ ಕುರಿತು ಚರ್ಚಿಸಿ ವರದಿ ನೀಡಬೇಕು. ಇದನ್ನಾಧರಿಸಿ ವಿಸ್ತೃತ ನಿರ್ದೇಶನವನ್ನು ಸಿಇಸಿ ನೀಡಲಿದೆ' ಎಂದು ಸುನಿಲ್ ಲಿಮಯೆ ಸೂಚಿಸಿದರು.

ಅಲ್ಲದೇ ಡಿಬಿ ಕುಪ್ಪೆ ಗ್ರಾಮದ ಬಳಿ ಪ್ರಾಣಿಗಳ ಸಂಚಾರಕ್ಕೆ ಅನುವಾಗುವಂತೆ ಹಿಂದೆಯೇ ನಿರ್ಮಿಸಿದ್ದ ಬಾಕ್ಸ್ ಮಾದರಿಯ ಸೇತುವೆಯನ್ನು ಬದಲಿಸುವ ಬದಲು ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಲಾಯಿತು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕೋರ್ ಏರಿಯಾದಲ್ಲಿ ಯಾವುದೇ ರಸ್ತೆ ವಿಸ್ತರಣೆಗೆ ಅವಕಾಶವಿಲ್ಲ ಎಂದು ಸುಪ್ರೀಂ ಕೋರ್ಟ್ ಹಿಂದೆಯೇ ನಿರ್ದೇಶನ ನೀಡಿದೆ. ಆದರೆ, ಬೃಹತ್ ವಾಹನಗಳನ್ನು ಬಳಸಿ ರಸ್ತೆ ವಿಸ್ತರಿಸುವ ಚಟುವಟಿಕೆ ಕೈಗೊಳ್ಳಲಾಗುತ್ತಿದೆ. ಇದನ್ನು ತಡೆಯಬೇಕಾದ ಅರಣ್ಯ ಇಲಾಖೆ ಮೌನ ವಹಿಸಿದೆ ಎಂದು ವನ್ಯಜೀವಿ ಸ್ವಯಂ ಸೇವಾ ಸಂಸ್ಥೆ ಪ್ರತಿನಿಧಿ ವಿನಯ ಮಾಧವ್ ಸಿಇಸಿಗೆ ದೂರು ನೀಡಿದ್ದರು. ಈ ಕುರಿತು 'ಪ್ರಜಾವಾಣಿ'ಯಲ್ಲಿ ಏಪ್ರಿಲ್ 19ರಂದು ವರದಿ ಪ್ರಕಟವಾಗಿತ್ತು.

ಜಡ್ಜ್ ಹೆಸರಲ್ಲಿ ಹಣಕ್ಕೆ ಬೇಡಿಕೆ

ಕೊಪ್ಪಳ: ಇಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಚಂದ್ರಶೇಖರ್ ಸಿ. ಅವರ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿದ ವ್ಯಕ್ತಿಯೊಬ್ಬ ಹಲವರಿಗೆ ಹಣಕ್ಕೆ ಬೇಡಿಕೆ ಇರಿಸಿರುವ ಘಟನೆ ನಡೆದಿದೆ.

+ 84946134743 ಸಂಖ್ಯೆ ಬಳಕೆ ಮಾಡಿಕೊಂಡು ಚಂದ್ರಶೇಖರ ಅವರ ಹೆಸರು ಹಾಗೂ ಭಾವಚಿತ್ರವನ್ನು ದುರುಪಯೋಗಪಡಿಸಿಕೊಂಡ ವ್ಯಕ್ತಿಯೊಬ್ಬ ವಾಟ್ಸ್‌ಆ್ಯಪ್ ಖಾತೆ ರಚಿಸಿದ್ದು, ತಾನೇ ನ್ಯಾಯಾಧೀಶ ಚಂದ್ರಶೇಖರ ಎಂದು ಪರಿಚಯ ಮಾಡಿಕೊಂಡಿದ್ದಾನೆ.

ನ್ಯಾಯಾಧೀಶರ ಪರಿಚಯಸ್ಥರು ಹಾಗೂ ಇತರೆ ಅಧಿಕಾರಿಗಳಿಗೆ ವಂಚಕನು ಮಿಜೋರಾಂ ಗ್ರಾಮೀಣ ಬ್ಯಾಂಕ್ ಖಾತೆಯ ಸಂಖ್ಯೆ ನೀಡಿ ಹಣ ಕಳುಹಿಸುವಂತೆ ಸಂದೇಶಗಳನ್ನು ರವಾನಿಸಿದ್ದಾನೆ. ಆದರೆ, ಯಾರೂ ಹಣ ಹಾಕಿಲ್ಲ ಎಂದು ಗೊತ್ತಾಗಿದೆ. ಈ ಕುರಿತು ಇಲ್ಲಿನ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳಕ್ಕೆ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಆದೇಶದಿಂದಾಗಿ ಭವಿಷ್ಯದಲ್ಲಿ ರಾಜ್ಯದಲ್ಲಿನ ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಸಾವಿರಾರು ಕೈಗಾರಿಕೆಗಳ ಲಕ್ಷಾಂತರ ಕಾರ್ಮಿಕರಿಗೆ ಸಮಸ್ಯೆ ಎದುರಾಗಲಿದೆ' ಎಂದು 'ಕರ್ನಾಟಕ ಉದ್ಯೋಗಿಗಳ ಸಂಘ' ಹೈಕೋರ್ಟ್‌ಗೆ ತನ್ನ ಆತಂಕ ಅರುಹಿದೆ.

ಕನಿಷ್ಠ ವೇತನ ಪರಿಷ್ಕರಣೆ ಅಧಿಸೂಚನೆ ಪ್ರಶ್ನಿಸಿ, 'ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್' ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಭಟ್ ಮತ್ತು 'ಎಥೆರಲ್ ಮಷಿನ್ಸ್ ಪ್ರೈವೆಟ್ ಲಿಮಿಟೆಡ್' ಕಂಪನಿಯ ಪ್ರಧಾನ ವ್ಯವಸ್ಥಾಪಕ ಎಂ.ಆರ್.ನಟರಾಜ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರು, 'ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ; ಕನಿಷ್ಠ ವೇತನವನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನಿಗದಿ ಮಾಡಲಾಗಿದೆ. ಇದರಿಂದ ನರ್ಸಿಂಗ್ ಹೋಮ್, ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ' ಎಂದು ಕಳವಳ ವ್ಯಕ್ತಪಡಿಸಿದರು.

ಅಖಿಲ ಭಾರತ ಟ್ರೇಡ್ ಯೂನಿಯನ್‌ಗಳ ಕೇಂದ್ರೀಯ ಒಕ್ಕೂಟದ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ಅವರು, '2017ರಲ್ಲಿ ಕೊನೆಯ ಬಾರಿಗೆ ವೇತನ ಪರಿಷ್ಕರಣೆ ಮಾಡಲಾಗಿದೆ. ಸದ್ಯ ಜಾಗತಿಕ ವಿದ್ಯಮಾನಗಳನ್ನು ಗಮನಿಸಿದಾಗ ಹಲವು ದೇಶಗಳಲ್ಲಿ ಯುದ್ಧ ನಡೆಯುತ್ತಿದೆ. ಇದರಿಂದ ದೈನಂದಿನ ಬಳಕೆಯ ವಸ್ತುಗಳ ಬೆಲೆ ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲೂ ಕಾರ್ಮಿಕರಿಗೆ ಹಳೆಯ ವೇತನವನ್ನೇ ಪಾವತಿಸಬೇಕೆ' ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು ಆಕ್ಷೇಪಣೆ ಸಲ್ಲಿಸಲು ಒಂದು ವಾರ ಕಾಲಾವಕಾಶ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಅರ್ಜಿಯಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವಂತೆ ನಿರ್ದೇಶಿಸಿ ವಿಚಾರಣೆಯನ್ನು ಜೂನ್ 9ಕ್ಕೆ ಮುಂದೂಡಿತು.


ಆಕ್ಷೇಪ: 'ನ್ಯಾಯಾಲಯದ ಅನುಮತಿ ಇಲ್ಲದೇ ಸಲಹಾ ಮಂಡಳಿಯ ಶಿಫಾರಸುಗಳನ್ನು ಜಾರಿಗೊಳಿಸಬಾರದು ಎಂದು ಈಗಾಗಲೇ ಹೈಕೋರ್ಟ್ ಮಧ್ಯಂತರ ಆದೇಶ ಮಾಡಿದೆ. ಆದರೂ ರಾಜ್ಯ ಸರ್ಕಾರ 2026 ಮೇ 22ರಂದು ಆಕ್ಷೇಪಾರ್ಹ ಅಂತಿಮ ಅಧಿಸೂಚನೆ ಹೊರಡಿಸಿದೆ. ವೇತನ ಪರಿಷ್ಕರಣೆಗೆ ಅಳವಡಿಸಿರುವ ನಿಯಮಗಳು, ಕನಿಷ್ಠ ವೇತನ ಕಾಯ್ದೆ ಹಾಗೂ ಸುಪ್ರೀಂ ಕೋರ್ಟ್ ರೂಪಿಸಿರುವ ಮಾನದಂಡಗಳಿಗೆ ಪೂರಕವಾಗಿಲ್ಲ ಎಂಬುದು ಅರ್ಜಿದಾರರ ಆಕ್ಷೇಪ.

ಶಾಂಘೈ ಸಹಕಾರ ಸಂಘ ಶೃಂಗ: ಎಚ್‌ಡಿಕೆ ಭಾಗಿ

ನವದೆಹಲಿ: ಕಿರ್ಗಿಜ್ ಗಣರಾಜ್ಯದಲ್ಲಿ ಬುಧವಾರದಿಂದ 'ಶಾಂಘೈ ಸಹಕಾರ ಸಂಘ'ದ ಸದಸ್ಯ ರಾಷ್ಟ್ರಗಳ ಶೃಂಗಸಭೆ ಆರಂಭವಾಗಲಿದ್ದು, ಸದಸ್ಯ ರಾಷ್ಟ್ರಗಳ ಕೈಗಾರಿಕಾ ಸಚಿವರ ಮಟ್ಟದ ಸಭೆಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾಗಿಯಾಗಲಿದ್ದಾರೆ.

ಮಂಗಳವಾರ ನವದೆಹಲಿಯಿಂದ ಹೊರಟ ಕುಮಾರಸ್ವಾಮಿ ಅವರು ರಾತ್ರಿ ವೇಳೆಗೆ ಕಿರ್ಗಿಜ್ ರಾಜಧಾನಿ ಬಿಷ್ಕೇಕ್ ನಗರ ತಲುಪಿದ್ದಾರೆ. ಎಸ್.ಎಂ.ಕೃಷ್ಣ ಅವರು ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದಾಗ ಶಾಂಘೈ ಸಹಕಾರ ಸಂಘದ ಶೃಂಗಸಭೆಯಲ್ಲಿ ಭಾಗಿಯಾಗಿದ್ದರು. ಆನಂತರ ಅಂತಹ ಸಭೆಯಲ್ಲಿ ಭಾಗಿಯಾಗುತ್ತಿರುವ ಮತ್ತೊಬ್ಬ ಕನ್ನಡಿಗ ಸಚಿವ ಕುಮಾರಸ್ವಾಮಿ ಎಂದು ಅವರ ಕಚೇರಿಯು ತಿಳಿಸಿದೆ.

ನಾಲ್ಕು ದಿನ ಈ ಶೃಂಗಸಭೆ ನಡೆಯಲಿದೆ. ಭಾರತದಲ್ಲಿ ಕೈಗಾರಿಕೆ ಮತ್ತು ಉದ್ಯಮಗಳ ಬೆಳವಣಿಗೆಗೆ ಇರುವ ಅವಕಾಶಗಳು, ಸರ್ಕಾರದ ಉತ್ತೇಜನ ಕ್ರಮಗಳ ಬಗ್ಗೆ ಸಭೆಯಲ್ಲಿ ಕುಮಾರಸ್ವಾಮಿ ಅವರು ತಿಳಿಸಲಿದ್ದಾರೆ. ಜತೆಗೆ, ವಿದ್ಯುತ್‌ಚಾಲಿತ ಸಾರಿಗೆ, ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಇತರ ದೇಶಗಳ ಸಚಿವರ ಜತೆಗೆ ಚರ್ಚಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿಪತ್ರ ಸಲ್ಲಿಸಿದ ಬಿಜೆಪಿ ನಿಯೋಗ

ಶಿವಲಿಂಗ ಅಪವಿತ್ರಗೊಳಿಸಿದವರ ಪ್ರಕರಣ ವಾಪಸ್: ರಾಜ್ಯಪಾಲರಿಗೆ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆ ಆಳಂದದಲ್ಲಿ ಶ್ರೀರಾಘವ ಚೈತನ್ಯ ಶಿವಲಿಂಗಕ್ಕೆ ಅಪಮಾನ ಮಾಡಿ, ಕೋಮು ಗಲಭೆ ಸೃಷ್ಟಿಸಿ, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡಿದ ಆರೋಪಿಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯಲು ಸರ್ಕಾರ ಆದೇಶ ಮಾಡಿದೆ. ಈ ಆದೇಶಕ್ಕೆ ತಡೆ ನೀಡಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಬಿಜೆಪಿ ನಿಯೋಗದೊಂದಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ಪ್ರಕರಣದ ಕುರಿತು ಮನವಿಪತ್ರ ಸಲ್ಲಿಸಿದರು.

ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, 'ವೋಟ್ ಬ್ಯಾಂಕ್ ರಾಜಕಾರಣ ಮತ್ತು ಅಲ್ಪಸಂಖ್ಯಾತರನ್ನು ಓಲೈಸುವ ಒಂದೇ ಉದ್ದೇಶದಿಂದ ಸರ್ಕಾರ ಕಾನೂನನ್ನು ಗಾಳಿಗೆ ತೂರಿದೆ' ಎಂದು ದೂರಿದರು.

'ಸಮಾಜಘಾತುಕ ಶಕ್ತಿಗಳ ಬೆನ್ನಿಗೆ ನಿಲ್ಲುವ ಮೂಲಕ ಕಾಂಗ್ರೆಸ್ ಸರ್ಕಾರ ತಾನು ಜನವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಈ ಹಿನ್ನೆಲೆಯಲ್ಲಿ, ಸಂವಿಧಾನ ವಿರೋಧಿ ಹಾಗೂ ಜನವಿರೋಧಿಯಾದ ಈ ಆದೇಶವನ್ನು ತಕ್ಷಣವೇ ರದ್ದುಪಡಿಸಬೇಕು ಎಂದು ರಾಜ್ಯಪಾಲರನ್ನು ಒತ್ತಾಯಿಸಿದೆವು' ಎಂದು ಹೇಳಿದರು.

'ರಾಘವ ಚೈತನ್ಯ ಮಂದಿರದಲ್ಲಿನ ಶಿವಲಿಂಗಕ್ಕೆ ಆರು ನೂರು ವರ್ಷಗಳ ಇತಿಹಾಸವಿದೆ. ಇಲ್ಲಿ ಪದೇ ಪದೇ ಗಲಭೆಗಳು ಆಗಿವೆ. ಜನರು ಪ್ರಾಣ ಕಳೆದುಕೊಂಡಿದ್ದಾರೆ. ದುಷ್ಕರ್ಮಿಗಳು ಉದ್ದೇಶಪೂರ್ವಕವಾಗಿ ಶಿವಲಿಂಗವನ್ನು ಅಪವಿತ್ರಗೊಳಿಸಿದ್ದರು. ಅದನ್ನು ಸ್ವಚ್ಛ ಮಾಡುತ್ತಿದ್ದ ಹಿಂದೂಗಳ ಮೇಲೆ ಸಾವಿರಾರು ಜನ ತಲವಾರು, ಮಚ್ಚಿನಿಂದ ದಾಳಿ ಮಾಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರಿಗೂ ರಕ್ತ ಬರುವಂತೆ ಹಲ್ಲೆ ಮಾಡಿದ್ದಾರೆ. ಪೊಲೀಸ್ ವಾಹನ ಜಖಂ ಮಾಡಿ, ಜಿಲ್ಲಾಧಿಕಾರಿಗಳ ಮೇಲೂ ದಾಳಿ ನಡೆಸಿದ್ದರು. ಇದೊಂದು ದೊಡ್ಡ ಘಟನೆ. ಆದರೆ, ರಾಜ್ಯ ಸರ್ಕಾರ ಇಷ್ಟೆಲ್ಲಾ ಆದರೂ ಏನೂ ಆಗಿಲ್ಲವೆಂಬಂತೆ ಪ್ರಕರಣವನ್ನು ಹಿಂದಕ್ಕೆ ಪಡೆದಿದೆ' ಎಂದು ದೂರಿದರು.

ದಲಿತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಿದರೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಾರೆ. ಕನ್ನಡಪರ ಸಂಘಟನೆಗಳ ಮುಖಂಡರು ಕನ್ನಡಪರ ಹೋರಾಟ ಮಾಡಿದರೆ ಕ್ರಿಮಿನಲ್ ಪ್ರಕರಣ ದಾಖಲಿಸುತ್ತಾರೆ. ಆದರೆ ಬಾಂಬ್ ಹಾಕಿ, ತಲವಾರುಗಳಿಂದ ಹಲ್ಲೆ ಮಾಡಿದವರಿಗೆ ಶಿಕ್ಷೆ ಕೊಡಿಸುವ ಬದಲು ಪ್ರಕರಣ ವಾಪಸ್ ಪಡೆಯುತ್ತಾರೆ ಎಂದು ನಾರಾಯಣಸ್ವಾಮಿ ಟೀಕಿಸಿದರು.

ನಿಯೋಗದಲ್ಲಿ ವಿಧಾನಪರಿಷತ್ ವಿರೋಧ ಪಕ್ಷದ ಉಪನಾಯಕ ಸುನಿಲ್ ವಲ್ಯಾಪುರೆ, ವಿಧಾನಪರಿಷತ್ ಸದಸ್ಯ ಶಶಿಲ್ ಜಿ.ನಮೋಶಿ ಮತ್ತು ಬಿ.ಜಿ. ಪಾಟೀಲ, ಶಾಸಕ ಅವಿನಾಶ್ ಜಾಧವ್, ಮಾಜಿ ಸಂಸದ ಉಮೇಶ್ ಜಾಧವ್ ಮತ್ತು ಇತರರು ಇದ್ದರು.

ತುಂಗಭದ್ರಾ: ಹೂಳು ಎತ್ತಿದ ರೈತರು

ಜಲಾಶಯದಿಂದ 60ಕ್ಕೂ ಅಧಿಕ ಟ್ರ್ಯಾಕ್ಟರ್‌ಗಳಲ್ಲಿ ಹೂಳು ಸಾಗಣೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದಲ್ಲಿ 33 ಟಿಎಂಸಿ ಅಡಿಯಷ್ಟು ಹೂಳು ತುಂಬಿದ್ದು, ಬಳ್ಳಾರಿ ರೈತ ಸಂಘದ ನೇತೃತ್ವದಲ್ಲಿ ರೈತರು ಮಂಗಳವಾರ ಹೂಳು ತೆಗೆಯುವ (ಎತ್ತುವ) ಕಾರ್ಯ ಕೈಗೊಂಡರು. ಗುಂಡಾ ಸಸ್ಯೋದ್ಯಾನ ಸಮೀಪದ ಹಿನ್ನೀರು ಪ್ರದೇಶದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿವಿಧ ಗ್ರಾಮಗಳ ರೈತರು ಭಾಗಿಯಾದರು.

ಕಂಪ್ಲಿ, ಕುರುಗೋಡು, ಸಿರುಗುಪ್ಪ ಭಾಗದಿಂದ ಬಂದ ರೈತರು, ಎರಡು ಜೆಸಿಬಿ ಮೂಲಕ ಹೂಳು ತೆಗೆದರು. ತೆಗೆದ ಹೂಳನ್ನು 60ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಲ್ಲಿ ತುಂಬಿಸಿಕೊಂಡು ಊರುಗಳಿಗೆ ಮರಳಿದರು.

‘2017ರಲ್ಲಿ ಹೂಳು ತೆಗೆಯುವ ಜಾತ್ರೆ ಒಂದು ತಿಂಗಳು ನಡೆದಿತ್ತು. ಆಗ ಹೂಳು ತೆಗೆಯಲು ಸರ್ಕಾರ ನಿರಾಕರಿಸಿತು. ನವಲಿಯಲ್ಲಿ ಸಮಾನಾಂತರ ಜಲಾಶಯ ನಿರ್ಮಿಸುವ ಬಗ್ಗೆ ಭರವಸೆ ನೀಡಿತ್ತು. ಆದರೆ, ಒಂಬತ್ತು ವರ್ಷಗಳಾದರೂ ಅದರ ಲಕ್ಷಣ ಕಾಣುತ್ತಿಲ್ಲ.

> **ಅಣೆಕಟ್ಟೆಯ ಶಿಥಿಲಗೊಂಡಿದ್ದ ಕ್ರೆಸ್ಟ್‌ಗೇಟ್‌ಗಳನ್ನು ಬದಲಿಸದಿದ್ದರೆ ಜನ ದಂಗೆ ಎದ್ದಾರು ಎಂಬ ಭಯದಲ್ಲಿ ಸರ್ಕಾರ ಗೇಟ್ ಬದಲಿಸಿತು. ಹೂಳಿನ ವಿಚಾರದಲ್ಲೂ ಜನ ಬುದ್ಧಿವಂತಿಕೆ ತೋರಬೇಕಿದೆ**
> **ಬಸವಲಿಂಗ ಸ್ವಾಮೀಜಿ,** ಕೊಟ್ಟೂರುಸ್ವಾಮಿ ಮಠ, ಹೊಸಪೇಟೆ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಗಮನಕ್ಕೆ ತರಲು ಸಾಂಕೇತಿಕವಾಗಿ ಹೂಳು ತೆಗೆದಿದ್ದೇವೆ. ಈಗಲಾದರೂ ಸರ್ಕಾರವು ನಮ್ಮ ಬೇಡಿಕೆಗೆ ಸ್ಪಂದಿಸಿ, ಹೂಳು ತೆಗೆಸಲಿ’ ಎಂದು ಬಳ್ಳಾರಿ ರೈತ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮ ಗೌಡ ಹೇಳಿದರು.

ಗಂಗಾಪೂಜೆ ನೆರವೇರಿಸಿ, ಜೆಸಿಬಿ ಯಂತ್ರದಿಂದ ಟ್ರ್ಯಾಕ್ಟರ್‌ಗೆ ಹೂಳು ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಿದ ಕೊಟ್ಟೂರುಸ್ವಾಮಿ ಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ನೀರಿನ ವಿಚಾರದಲ್ಲಿ ಸರ್ಕಾರಗಳು ಕಾಳಜಿ ವಹಿಸದೆ ಇರುವುದು ದುರದೃಷ್ಟಕರ, ರೈತರು ತಮ್ಮ ಭವಿಷ್ಯವನ್ನು ತಾವೇ ಭದ್ರಪಡಿಸಿಕೊಳ್ಳಬೇಕಾದ ಅಗತ್ಯ ಎದುರಾಗಿದೆ ಎಂದರು.

2017ರ ಹೂಳಿನ ಜಾತ್ರೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಂದಿಪುರ ಮಠದ ಮಹೇಶ್ವರ ಸ್ವಾಮೀಜಿ ಮಾತನಾಡಿ, ‘ಮುಂದಿನ ವರ್ಷ ಫೆಬ್ರುವರಿಯಲ್ಲಿಯೇ ಈ ಜಾತ್ರೆ ನಡೆಸುವ ಸಾಧ್ಯತೆ ಇದೆ. ಆಗ ಸಾವಿರಾರು ರೈತರು ಟ್ರ್ಯಾಕ್ಟರ್‌ನೊಂದಿಗೆ ಇಲ್ಲಿಗೆ ಬಂದು ಹೂಳು ಒಯ್ಯಲು ಪ್ರೋತ್ಸಾಹಿಸುವೆ’ ಎಂದರು.

ಹೂಳು ತೆಗೆದ ಸ್ಥಳದಲ್ಲೇ ರೈತರಿಗೆ ಗೋಧಿ ಹುಗ್ಗಿ ಊಟ ಬಡಿಸಿ ಅವರನ್ನು ಊರಿಗೆ ಕಳುಹಿಸಿಕೊಡಲಾಯಿತು.



ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ಮಂಗಳವಾರ ರೈತರೇ ವಾಹನ ಮತ್ತು ಸಾಧನಗಳನ್ನು ಬಳಸಿಕೊಂಡು ಹೂಳು ತೆರವುಗೊಳಿಸುವ ಕಾರ್ಯ ಕೈಗೊಂಡರು – ಪ್ರಜಾವಾಣಿ ಚಿತ್ರ/ ಲವ ಕೆ.

ಸಾಂಕೇತಿಕ ಪ್ರತಿಭಟನೆ

‘2017ರಲ್ಲಿ ನಡೆದಿದ್ದ ‘ಹೂಳಿನ ಜಾತ್ರೆ’ಯಲ್ಲಿ 30 ದಿನಗಳಲ್ಲಿ ಒಂದು ಟಿಎಂಸಿ ಅಡಿಯಷ್ಟು ಹೂಳು ತೆಗೆಯಲಾಗಿತ್ತು. ಮಂಗಳವಾರ ನಡೆದದ್ದು ಸಾಂಕೇತಿಕ ಪ್ರತಿಭಟನೆ ರೂಪದ ಹೂಳಿನ ಜಾತ್ರೆ. ಸರ್ಕಾರಗಳು ತಕ್ಷಣ ಹೂಳು ತೆಗೆಯುವ ನಿರ್ಧಾರ ಪ್ರಕಟಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸುತ್ತೇವೆ’ ಎಂದು ಅಭಿಯಾನದ ರೂವಾರಿ ಪುರುಷೋತ್ತಮ ಗೌಡ ಎಚ್ಚರಿಕೆ ನೀಡಿದರು.

‘ಕಾಗದರಹಿತ ವ್ಯವಸ್ಥೆ ಶೀಘ್ರ ಜಾರಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನ ಮಂಡಲದಲ್ಲಿ ಕಾಗದರಹಿತ ವ್ಯವಸ್ಥೆ ಜಾರಿಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದ್ದು, ಆರು ತಿಂಗಳಲ್ಲಿ ಇದು ಅನುಷ್ಠಾನಗೊಳ್ಳಲಿದೆ ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.



ಯು.ಟಿ. ಖಾದರ್

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ನ್ಯಾಷನಲ್ ಇ-ವಿಧಾನ್ ಆ್ಯಪ್ಲಿಕೇಷನ್ (ನೇವಾ) ಬಳಸಿ ವಿಧಾನಮಂಡಲದ ಪ್ರಕ್ರಿಯೆಗಳ ಡಿಜಿಟಲೀಕರಣ ಕೈಗೊಳ್ಳುವ ಕುರಿತು ಸಂಸತ್ತು ಹಾಗೂ ಕರ್ನಾಟಕ ವಿಧಾನಮಂಡಲಗಳ ಸಚಿವಾಲಯಗಳು ಈಚೆಗೆ ಒಪ್ಪಂದಕ್ಕೆ ಸಹಿ ಹಾಕಿವೆ ಎಂದರು.

‘ವಿಧಾನಮಂಡಲ ಪ್ರಕ್ರಿಯೆಗಳನ್ನು ಕಾಗದರಹಿತಗೊಳಿಸುವ ಬೇಡಿಕೆ ಹಿಂದಿನಿಂದಲೂ ಇದೆ. ಅದಕ್ಕಾಗಿ ಒಂದೋ, ನಾವೇ ಪ್ರತ್ಯೇಕ ಆ್ಯಪ್ ಸಿದ್ಧಪಡಿಸಬೇಕಿತ್ತು ಅಥವಾ ವಿಧಾನಮಂಡಲದ ಅಗತ್ಯಗಳಿಗೆ ಅನುಗುಣವಾಗಿ ಕೆಲವೊಂದು ಮಾರ್ಪಾಡು ಮಾಡಿ ನ್ಯಾಷನಲ್ ಇ-ವಿಧಾನ್ ಆ್ಯಪ್ ಅನ್ನೇ ಬಳಸುವ ಆಯ್ಕೆ ನಮ್ಮ ಮುಂದಿತ್ತು. ಈ ಆ್ಯಪ್ಲಿಕೇಷನ್ ಬಳಸುವ ಪ್ರಸ್ತಾವಕ್ಕೆ ಸರ್ಕಾರ ಅನುಮೋದನೆ ನೀಡಿದೆ’ ಎಂದರು.

‘ಈ ಆ್ಯಪ್ಲಿಕೇಷನ್ ಬಳಸಿದರೆ ಅದರ ಅನುಷ್ಠಾನದ ಶೇ 60ರಷ್ಟು ಪಾಲನ್ನು ಕೇಂದ್ರ ನೀಡಲಿದೆ. ನಾವು ವಿಧಾನಸೌಧ ಹಾಗೂ ಬೆಳಗಾವಿಯ ಸುವರ್ಣ ಸೌಧಗಳೆರಡನ್ನೂ ಡಿಜಿಟಲೀಕರಣಗೊಳಿಸಲಿದ್ದೇವೆ. ಅಧಿವೇಶನ ನಡೆಯುವಾಗ ಟ್ಯಾಬ್‌ಗಳನ್ನು ಅಳವಡಿಸುತ್ತೇವೆ. ಶಾಸಕರಿಗೆ ಐ-ಪ್ಯಾಡ್ ನೀಡಲಾಗುತ್ತದೆ. ವಿಧಾನ ಸಭೆಯ ಡಿಜಿಟಲೀಕರಣಕ್ಕೆ ₹72 ಕೋಟಿ ಹಾಗೂ ವಿಧಾನ ಪರಿಷತ್ತಿನ ಡಿಜಿಟಲೀಕರಣಕ್ಕೆ ₹52 ಕೋಟಿ ವೆಚ್ಚವಾಗಲಿದೆ’ ಎಂದರು.

ಅಧಿವೇಶನ ಸಂದರ್ಭದಲ್ಲಿ ಶಾಸಕರ ಸಹಿ ಪಡೆದು ಅವರ ಹಾಜರಾತಿಯನ್ನು ದಾಖಲಿಸಿಕೊಳ್ಳಲಾಗುತ್ತಿದೆ. ಇದಕ್ಕೂ ಹೊಸ ವ್ಯವಸ್ಥೆ ಬರಲಿದೆ. ಶಾಸಕರಿಗೆ ಪ್ರತ್ಯೇಕ ಮೊಬೈಲ್ ನೀಡಲಾಗುತ್ತದೆ. ಅಧಿವೇಶನದಲ್ಲಿ ಅವರಿಗೆ ಹಂಚಿಕೆ ಮಾಡಲಾದ ಆಸನದಲ್ಲಿ ಕುಳಿತಾಗ ಮಾತ್ರ ಹಾಜರಾತಿ ದಾಖಲಿಸುವ ವ್ಯವಸ್ಥೆ ಜಾರಿಯಾಗಲಿದೆ ಎಂದರು.

ಕಿಯಾಸ್ಕ್ ಅಳವಡಿಕೆ

ವಿಧಾನಸೌಧ ಕಟ್ಟಡದಲ್ಲಿ ವಿವಿಧ ಸಚಿವಾಲಯಗಳ ಕಚೇರಿಗಳು ಎಲ್ಲಿವೆ. ಯಾವ ಸಚಿವರ ಕಚೇರಿ ಎಲ್ಲಿದೆ ಎಂಬ ಮಾಹಿತಿ ನೀಡಲು ಪ್ರತಿ ಮಹಡಿಯಲ್ಲಿ ಎರಡು ಕಿಯಾಸ್ಕ್‌ಗಳನ್ನು ಅಳವಡಿಸಲಾಗುತ್ತದೆ ಎಂದು ಖಾದರ್ ಹೇಳಿದರು.

ಹೊಸ ಮಸೂದೆಗಳ ಕರಡು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಿ ಜನರ ಅಭಿಪ್ರಾಯ ಸಂಗ್ರಹಿಸುವ ಚಿಂತನೆಯೂ ಇದೆ. ವಿಧಾನಸಭೆಯಲ್ಲಿ ಸಚಿವರ, ಶಾಸಕರ ಭಾಷಣವನ್ನು ಕೃತಕ ಬುದ್ಧಿಮತ್ತೆ ಬಳಸಿ ಜನರಿಗೆ ಬೇಕಾದ ಭಾಷೆಯಲ್ಲಿ ತಲುಪಿಸುವ ವ್ಯವಸ್ಥೆ ಜಾರಿಗೊಳಿಸುವ ಉದ್ದೇಶವೂ ಇದೆ ಎಂದರು.

ರಾಜ್ಯದ ವಿವಿಧೆಡೆ ಹದ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಂಗಳವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ದಿನವಿಡೀ ಮೋಡ ಕವಿದ ವಾತಾವರಣ ಇತ್ತು. ಸಂಜೆ 5.30 ಸುಮಾರಿಗೆ ಶುರುವಾದ ಮಳೆ ಸುಮಾರು ಒಂದು ಗಂಟೆ ಕಾಲ ನಿರಂತರವಾಗಿ ಸುರಿಯಿತು. ಜಿಲ್ಲೆಯ ಗ್ರಾಮಾಂತರ ಭಾಗಗಳಲ್ಲೂ ವ್ಯಾಪಕವಾಗಿ ಮಳೆಯಾಯಿತು.

ಚಿಕ್ಕಮಗಳೂರು ಜಿಲ್ಲೆಯಲ್ಲಿ, ಚಿಕ್ಕಮಗಳೂರು ನಗರ, ಮೂಡಿಗೆರೆ, ಕೊಟ್ಟಿಗೆಹಾರ, ಜಾವಳಿ, ಕಳಸ, ಬಾಳೆಹೊನ್ನೂರು ಸೇರಿ ಹಲವೆಡೆ ಮಧ್ಯಾಹ್ನದ ನಂತರ ಮಳೆ ಸುರಿಯಿತು.

ವಿದ್ಯುತ್ ಕಂಬಗಳು ಧರೆಗೆ: (ಮೈಸೂರು ವರದಿ): ಮೈಸೂರು, ಕೊಡಗು, ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ವಿವಿಧೆಡೆ ಮಂಗಳವಾರ ಸಾಧಾರಣ ಮಳೆಯಾಯಿತು.

ಮೈಸೂರು ನಗರವೂ ಸೇರಿದಂತೆ ತಾಲ್ಲೂಕಿನ ವಿವಿಧೆಡೆ, ಪಿರಿಯಾಪಟ್ಟಣ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಚದುರಿದಂತೆ ಮಳೆಯಾಯಿತು. ಚಾಮರಾಜನಗರ ಜಿಲ್ಲೆಯಾದ್ಯಂತ ಒಂದೂವರೆ ತಾಸು ಉತ್ತಮ ಮಳೆಯಾಗಿದೆ. ಮಂಡ್ಯ ಜಿಲ್ಲೆಯ ಹಲವೆಡೆ ತುಂತುರು ಮಳೆ ಬಿದ್ದಿತು. ಪಾಂಡವಪುರದಲ್ಲಿ ಬಿರುಗಾಳಿ, ಮಳೆಗೆ ಹತ್ತಾರು ಮರಗಳು ಹಾಗೂ 16ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ತೋಟಗಾರಿಕೆ ಇಲಾಖೆ ಕಚೇರಿ ಸಮೀಪ ಮರ ಬಿದ್ದು ಕಾರು ಜಖಂಗೊಂಡಿತು. ಹಾಸನ ಜಿಲ್ಲೆಯ ಹಳೇಬೀಡು ಹಾಗೂ ಸುತ್ತಮುತ್ತ 40 ನಿಮಿಷ ಮಳೆ ಸುರಿಯಿತು.



ಬಳ್ಳಾರಿಯಲ್ಲಿ ಬಿರುಗಾಳಿ ಮಳೆಗೆ ಹೊಸ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿದ್ದ ಮರ ಉರುಳಿ ಆಟೊ ರಿಕ್ಷಾವೊಂದು ಜಖಂಗೊಂಡಿತು

ಧರೆಗುರುಳಿದ ಮರಗಳು

ಬಳ್ಳಾರಿ: ನಗರದಲ್ಲಿ ಮಂಗಳವಾರ ಸಂಜೆ ಸುರಿದ ಭಾರಿ ಮಳೆ ಮತ್ತು ಬಿರುಗಾಳಿಯ ಅಬ್ಬರಕ್ಕೆ ಹತ್ತಾರು ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದವು. ವಾಹನಗಳು ಜಖಂಗೊಂಡವು.


ಹೊಸ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿದ್ದ ಬೃಹತ್ ಮರ ಬಿದ್ದು, ಸಮೀಪದಲ್ಲಿ ನಿಲ್ಲಿಸಿದ್ದ ಆಟೊ ಮತ್ತು ಬೈಕ್‌ಗಳು ಜಖಂಗೊಂಡವು ಅಗ್ನಿಶಾಮಕ ದಳದ ಸಿಬ್ಬಂದಿ, ಮರದ ಕೊಂಬೆಗಳು ಮತ್ತು ದಿಮ್ಮಿಗಳನ್ನು ತೆರವುಗೊಳಿಸಿದರು.

ಗಾಳಿ ಮಳೆಗೆ ವಿದ್ಯುತ್ ಕಂಬಗಳೂ ಉರುಳಿವೆ. ಹೀಗಾಗಿ ನಗರದ ಬಹುತೇಕ ಕಡೆ ವಿದ್ಯುತ್ ಪೂರೈಕೆಯಲ್ಲಿ ತೀವ್ರ ವ್ಯತ್ಯಯ ಉಂಟಾಯಿತು. ಜೆಸ್ಕಾಂ ಅಧಿಕಾರಿಗಳು ವಿದ್ಯುತ್ ಪುನರ್ ಸ್ಥಾಪನೆಗೆ ಪ್ರಯತ್ನಿಸಿದರು.

ಆನೆ ಕೆರಳಿಸಿದ ಚಾಲಕ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಿಲ್ಲೆಯ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಸಮೀಪದಲ್ಲಿ ಕಾಡಾನೆಯನ್ನು ಕೆರಳಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಅರಣ್ಯ ಇಲಾಖೆ ಈ ವಿಡಿಯೊದ ನೈಜತೆ ಬಗ್ಗೆ ತನಿಖೆ ನಡೆಸುತ್ತಿದೆ.



ವಾಹನದತ್ತ ಓಡಿ ಬರುತ್ತಿರುವ ಕಾಡಾನೆ

50 ಸೆಕೆಂಡುಗಳ ವಿಡಿಯೊದಲ್ಲಿ ತೆರೆದ ಜೀಪಿನಲ್ಲಿ ಚಾಲಕ ಕಾಡಾನೆಯತ್ತ ಬೆರಳು ತೋರಿಸುತ್ತಾ ವಾಹನವನ್ನು ಅದರ ಸಮೀಪಕ್ಕೆ ಕೊಂಡೊಯ್ಯುತ್ತಾರೆ. ಆನೆ ವಾಹನದತ್ತ ದಾಳಿ ಮಾಡಲು ಮುಂದಾದಾಗ ಚಾಲಕ ವೇಗವಾಗಿ ವಾಹನವನ್ನು ಹಿಂದಕ್ಕೆ ತಿರುಗಿಸಿ ಕೊಂಡು ಹೋಗುತ್ತಾರೆ. ಬಳಿಕ ತಿರುಗಿಸಿ ಮತ್ತೆ ಅದೇ ಅನೆಯ ಸಮೀಪಕ್ಕೆ ಬರುತ್ತಾರೆ. ಮತ್ತೊಮ್ಮೆ ಆನೆ ಜೀಪ್ ಹಿಮ್ಮೆಟ್ಟಿಸುವ ದೃಶ್ಯ ವಿಡಿಯೊದಲ್ಲಿದೆ.

ವಿಡಿಯೊ ಗಮನಿಸಿದ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು, ವಾಹನ ಚಾಲಕನನ್ನು ಪತ್ತೆಹಚ್ಚಿ ವಿಚಾರಣೆ ನಡೆಸಿದ್ದಾರೆ. ಈ ಘಟನೆ ಸೋಮವಾರ ನಡೆದಿರುವುದಾಗಿ ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಆದರೆ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯೋ ಅಲ್ಲವೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಪುಲ್ಕಿತ್ ಮೀನಾ, ‘ವಾಹನ ಚಾಲಕನನ್ನು ಗುರುತಿಸಲಾಗಿದೆ. ಈ ವಾಹನವು ಸಂರಕ್ಷಿತ ಪ್ರದೇಶದ ಯಾವುದೇ ಅಧಿಕೃತ ಪ್ರವೇಶ ದ್ವಾರದಿಂದ ಪ್ರವೇಶಿಸಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಕೊಪ್ಪ ವಿಭಾಗದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪರಿಶೀಲಿಸಲಾಗುತ್ತಿದೆ. ಅರಣ್ಯ ಪ್ರದೇಶಕ್ಕೆ ಅಕ್ರಮ ಪ್ರವೇಶ ಮಾಡಿರುವುದು ದೃಢಪಟ್ಟರೆ ಹೆಚ್ಚಿನ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕನ್ನಡ ವಿದ್ಯಾರ್ಥಿಗಳಿಂದ ಹೈಕೋರ್ಟ್‌ಗೆ ಮೊರೆ

ಕಾಸರಗೋಡು: ಕೇರಳಂ ಸರ್ಕಾರ ಜಾರಿಗೆ ತಂದಿರುವ ಮಲಯಾಳ ಕಲಿಕೆ ಕಡ್ಡಾಯ ಕಾಯ್ದೆಯಿಂದ ಗಡಿನಾಡು ಕಾಸರಗೋಡು ಜಿಲ್ಲೆಯ ಕನ್ನಡ ಮಾಧ್ಯಮ ಶಾಲೆಗಳಿಗೆ ವಿನಾಯಿತಿ ನೀಡುವಂತೆ ಜಿಲ್ಲೆಯ 7 ವಿದ್ಯಾರ್ಥಿಗಳು ಕೇರಳ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಕನ್ನಡ ವಿದ್ಯಾರ್ಥಿಗಳಾದ ದೀಕ್ಷಾ, ತನಿಷಾ, ಧನುಷ್, ಹರ್ಷಶ್ರೀ, ಮುಹಮ್ಮದ್, ಶಿವಜಿತ್, ಮುಹಮ್ಮದ್ ರಿಯಾಜ್ ಅವರು ಹೈಕೋರ್ಟ್ ಮೊರೆ ಹೋದವರು.

ಈ ಕಾಯ್ದೆಯಿಂದ ಭಾಷಾ ಅಲ್ಪಸಂಖ್ಯಾತರ ಸಂವಿಧಾನಬದ್ಧ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಈ ವಿದ್ಯಾರ್ಥಿಗಳು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ನ್ಯಾಯಮೂರ್ತಿ ಬೆಚ್ಚು ಕುರಿಯನ್ ಥಾಮಸ್ ಅವರ ಏಕ ಸದಸ್ಯ ಪೀಠ ಈ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ್ದು, ರಾಜ್ಯ ಸರ್ಕಾರ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಕಾರ್ಯದರ್ಶಿಗೆ ತುರ್ತು ನೋಟಿಸ್ ಜಾರಿಗೊಳಿಸಿದೆ. ಮಧ್ಯಂತರ ತಡೆಯಾಜ್ಞೆ ಮನವಿ ಸಂಬಂಧದ ವಿಚಾರಣೆಯನ್ನು ಜೂನ್ 9ರಂದು ನಡೆಸಲಿದೆ.

ಪರ್ತಗಾಳಿ: ಭಕ್ತರಿಗೆ ವಸ್ತ್ರ ಸಂಹಿತೆ

ಕಾರವಾರ: ಇಲ್ಲಿಗೆ ಸಮೀಪದ ಗೋವಾ ರಾಜ್ಯದ ಪರ್ತಗಾಳಿಯಲ್ಲಿ ಇರುವ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಕ್ಕೆ ಬರುವ ಭಕ್ತರು ಕಡ್ಡಾಯವಾಗಿ ಭಾರತೀಯ ಸಾಂಪ್ರದಾಯಿಕ ಉಡುಪಿನಲ್ಲೇ ಪ್ರವೇಶಿಸಬೇಕು ಎಂದು ಮಠದ ಆಡಳಿತ ಮಂಡಳಿ ಸೂಚಿಸಿದೆ.

‘ಮಠದ ಪಾವಿತ್ರ್ಯ ಹಾಗೂ ಧಾರ್ಮಿಕ ಸಂಪ್ರದಾಯಗಳ ಸಂರಕ್ಷಣೆ ದೃಷ್ಟಿಯಿಂದ ಈ ನಿಯಮ ಕಟ್ಟುನಿಟ್ಟಾಗಿ ಪಾಲಿಸಬೇಕು. ಭಕ್ತರು ಭಾರತೀಯ ಶೈಲಿಯ ಉಡುಪು ಧರಿಸಬೇಕು. ಸ್ವಾಮೀಜಿ ದರ್ಶನ ಪಡೆಯಲು ಬರುವ ಎಲ್ಲ ಭಕ್ತರೂ ಮಠವು ಸೂಚಿಸಿದ ನಿಗದಿತ ಉಡುಪು ನಿಯಮ ಅನುಸರಿಸಬೇಕು. ಪುರುಷ ಭಕ್ತರು ಕೇಸರಿ ಅಥವಾ ಕಾವಿ ಬಣ್ಣದ ಧೋತಿ ಬದಲು ಬಿಳಿ ಬಣ್ಣದ ಧೋತಿ ಹಾಗೂ ಸಾಂಪ್ರದಾಯಿಕ ಉತ್ತರೀಯ ಧರಿಸಬಹುದು’ ಎಂದು ಮಠದ ಪ್ರಕಟಣೆ ತಿಳಿಸಿದೆ.

ಕಾಳಿಂಗ ಸರ್ಪ–ಉಡ ಕಾದಾಟ

ಪ್ರಜಾವಾಣಿ ವಾರ್ತೆ

ಹಾಸನ: ಸಕಲೇಶಪುರ ತಾಲ್ಲೂಕಿನ ಹರಗರಹಳ್ಳಿ ಗ್ರಾಮದಲ್ಲಿ ಉಡ ಮತ್ತು ಕಾಳಿಂಗ ಸರ್ಪದ ನಡುವೆ ನಡೆದ ಕಚ್ಚಾಟದಲ್ಲಿ ಉಡ ಮೃತಪಟ್ಟಿದೆ.

ಗ್ರಾಮದ ಜಯಶಂಕರ್ ಎಂಬವರ ಮನೆಯ ಸಮೀಪ ಉಡ ಕಾಣಿಸಿಕೊಂಡಿತ್ತು. ಅದನ್ನು ಹಿಂಬಾಲಿಸಿ ಬಂದ ಸುಮಾರು 12 ಅಡಿ ಉದ್ದದ ಕಾಳಿಂಗ ಸರ್ಪ, ಉಡವನ್ನು ಕಚ್ಚಿ ಹಿಡಿದುಕೊಂಡಿತು. ಕೆಲ ಹೊತ್ತು ಹೋರಾಡಿದ ಉಡ ಕೊನೆಯುಸಿರೆಳೆಯಿತು. ಸರ್ಪ ಉಡವನ್ನು ಎಳೆದೊಯ್ದಿದೆ ಎಂದು ಸ್ಥಳೀಯರು ತಿಳಿಸಿದರು.



ಉಡವನ್ನು ಕಚ್ಚಿಕೊಂಡಿರುವ ಕಾಳಿಂಗ ಸರ್ಪ

ಮನೆಯ ಸಮೀಪವೇ ಭಾರಿ ಗಾತ್ರದ ಕಾಳಿಂಗ ಸರ್ಪ ಕಾಣಿಸಿಕೊಂಡಿದ್ದರಿಂದ ಜಯಶಂಕರ್ ಕುಟುಂಬಸ್ಥರು ಮತ್ತು ಸುತ್ತಮುತ್ತಲಿನ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ.

ಗುಂಡೂರಾವ್‌ಗೆ ‘ಕನ್ನಡ ಸಾಹಿತ್ಯ ಕಲ್ಪತರು’ ಪ್ರಶಸ್ತಿ

ತಿಪಟೂರು: ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ ಕೊಡಮಾಡುವ ‘ಕನ್ನಡ ಸಾಹಿತ್ಯ ಕಲ್ಪತರು’ ರಾಜ್ಯಮಟ್ಟದ ಪ್ರಶಸ್ತಿಗೆ ಹಾಸ್ಯ ಸಾಹಿತಿ ವೈ.ವಿ.ಗುಂಡೂರಾವ್ ಭಾಜನರಾಗಿದ್ದಾರೆ.

ಪ್ರಶಸ್ತಿ ₹10 ಸಾವಿರ ನಗದು, ಫಲಕ ಒಳಗೊಂಡಿದೆ. ಜೂನ್ 13ರಂದು ನಗರದ ಸತ್ಯ ಗಣಪತಿ ಆಸ್ಥಾನ ಮಂಟಪದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಭಾನುಪ್ರಶಾಂತ್ ತಿಳಿಸಿದ್ದಾರೆ.



ಗುಂಡೂರಾವ್

ಪ್ರಮಾಣವಚನ: ಸಂಭ್ರಮ ಮುಗಿಲು

ಎಲ್ಲೆಡೆ ರಾರಾಜಿಸುತ್ತಿರುವ ಬ್ಯಾನರ್, ಫ್ಲೆಕ್ಸ್, ಕಟೌಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಮುಖ್ಯಮಂತ್ರಿಯನ್ನು ಎದುರುಗೊಳ್ಳಲು ನಗರದೆಲ್ಲೆಡೆ ಕಟೌಟ್, ಫ್ಲೆಕ್ಸ್, ಪೋಸ್ಟರ್‌ಗಳು ರಾರಾಜಿಸುತ್ತಿವೆ. ಅವರ ಅಭಿಮಾನಿಗಳು ಮತ್ತು ಪಕ್ಷದ ಕಾರ್ಯಕರ್ತರ ಸಂಭ್ರಮ ಮುಗಿಲುಮುಟ್ಟಿದೆ.

ಕಟೌಟ್ ತಯಾರಕರು ಹಾಗೂ ಮುದ್ರಕರಿಗೆ ಪ್ರವಾಹೋಪಾದಿಯಲ್ಲಿ ಬೇಡಿಕೆ ಬಂದಿದ್ದು, ಹಲವರು ನೂರಕ್ಕೂ ಹೆಚ್ಚು ಕಟೌಟ್ ಮತ್ತು ಫ್ಲೆಕ್ಸ್ ಸಿದ್ಧಪಡಿಸುವ ಮತ್ತು ಅಳವಡಿಸುವ ಕಾರ್ಯ ಮುಂದುವರಿಸಿರುವುದು ಮಂಗಳವಾರವೂ ಕಂಡುಬಂತು.

ರಾಜಭವನ ರಸ್ತೆ, ಅಂಬೇಡ್ಕರ್ ವೀದಿ, ರೇಸ್‌ಕೋರ್ಸ್ ರಸ್ತೆ, ಶೇಷಾದ್ರಿ ರಸ್ತೆ, ಕಾಂಗ್ರೆಸ್ ಕಚೇರಿ ಇರುವ ಕ್ವೀನ್ಸ್ ರಸ್ತೆ, ವಸಂತನಗರ, ಗಾಂಧಿನಗರದ ರಸ್ತೆಗಳ ಎರಡೂ ಬದಿಗಳಲ್ಲಿ ಸಾವಿರಾರು ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಕನಕಪುರ ರಸ್ತೆ, ಬಳ್ಳಾರಿ ರಸ್ತೆ ಹಾಗೂ ಮೈಸೂರು ರಸ್ತೆಗಳಲ್ಲೂ ಬ್ಯಾನರ್‌ಗಳು ರಾರಾಜಿಸುತ್ತಿವೆ. ರಸ್ತೆ ವಿಭಜಕಗಳಲ್ಲಿ ಕಾಂಗ್ರೆಸ್ ಪಕ್ಷದ ಬಾವುಟಗಳನ್ನು ಹಾರಿಸಲಾಗಿದೆ.

ಶಿವಕುಮಾರ್ ಅವರ ಸದಾಶಿವನಗರ ಮನೆಯ ಬಳಿಯಲ್ಲಿ ಭದ್ರತೆ ಇನ್ನಷ್ಟು ಹೆಚ್ಚಿಸಲಾಗಿದೆ. ಮನೆಯ ಬಳಿ 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು' ಎಂಬ ಬ್ಯಾನರ್‌ಗಳನ್ನು ಹಾಕಲಾಗಿದೆ. ಸದಾಶಿವ ನಗರದಿಂದ ಅರಮನೆ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಅರಮನೆ ರಸ್ತೆಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ.

ಸೋಮವಾರ ರಾತ್ರಿಯಿಂದಲೇ ಬ್ಯಾನರ್‌ಗಳನ್ನು ಅಳವಡಿಸುವ ಕೆಲಸ ಭರದಿಂದ ಸಾಗಿದೆ. ಬಹುತೇಕ ಬ್ಯಾನರ್‌ಗಳಲ್ಲಿ ಶಿವಕುಮಾರ್ ಅವರ ಚಿತ್ರವನ್ನು ಮುದ್ರಿಸಲಾಗಿದೆ. ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಅವರ ಚಿತ್ರಗಳಿರುವ ಬ್ಯಾನರ್‌ಗಳನ್ನು ಅಲ್ಲಲ್ಲಿ ಅಳವಡಿಸಲಾಗಿದೆ. ರೇಸ್‌ಕೋರ್ಸ್ ರಸ್ತೆಯಲ್ಲಿರುವ ಹಳೆಯ ಕಾಂಗ್ರೆಸ್ ಭವನದ ಆವರಣದಲ್ಲಿ ನೂತನ ಕಾಂಗ್ರೆಸ್ ಭವನದ ನಿರ್ಮಾಣಕ್ಕೆ ಶಂಕುಸ್ಥಾಪನಾ ಕಾರ್ಯಕ್ರಮವೂ ಬುಧವಾರ ನಡೆಯಲಿದೆ. ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದ ನಂತರ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಶಿವಕುಮಾರ್, ಸಿದ್ದರಾಮಯ್ಯ ಸೇರಿ ಹಲವು ನಾಯಕರು ಶಂಕುಸ್ಥಾಪನೆಯಲ್ಲಿ ಭಾಗಿಯಾಗಲಿದ್ದಾರೆ. ಇದಕ್ಕಾಗಿಯೂ ಭಾರಿ ಪ್ರಮಾಣದ ಸಿದ್ಧತೆ ನಡೆದಿದೆ.

ವಾರದಿಂದಲೂ ಕೆಲಸ : 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದಂತೆಯೇ ಕಟೌಟ್, ಫ್ಲೆಕ್ಸ್‌ಗಳ ತಯಾರಿಕೆಗೆ ಬೇಡಿಕೆ ಬಂದಿದೆ. ಮೇ 27ರಿಂದಲೇ ಕೆಲಸ ಬಿರುಸಾಗಿ ನಡೆದಿದ್ದು, ಈಗಾಗಲೇ ಅಧಿಕ ಮಂದಿ ಬುಕ್ಕಿಂಗ್ ಮಾಡಿರುವುದರಿಂದ ಅವಧಿಯೊಳಗೆ ಬೇಡಿಕೆ ಪೂರೈಸುವುದು ಸವಾಲಾಗಿದೆ' ಎನ್ನುತ್ತಾರೆ ರಾಜರಾಜೇಶ್ವರಿ ನಗರದ 'ಗಾನ್ಯ ಪ್ರಿಂಟ್ಸ್' ಮಾಲೀಕ ಮಂಜುನಾಥ.

'ಮುದ್ರಣ ಸಾಮರ್ಥ್ಯವನ್ನೂ ಮೀರಿ ಕಟೌಟ್ ತಯಾರಿಸಿ ಕೊಡುವುದಾಗಿ ಭರವಸೆ ನೀಡಿದ್ದ ಮುದ್ರಕರು, ಅವಧಿಯೊಳಗೆ ಕೆಲಸ ಮುಗಿಸಲು ಕಷ್ಟಪಡುತ್ತಿದ್ದಾರೆ. ಹಲವರು ನಮ್ಮ ಮಳಿಗೆಯತ್ತಲೂ ಬಂದಿದ್ದರು. ಅವರನ್ನು ವಾಪಸ್ ಕಳುಹಿಸಲಾಗಿದೆ. ಕಳೆದ ಒಂದು ವಾರದಲ್ಲಿ 500 ಬ್ಯಾನರ್‌ಗಳನ್ನು ತಯಾರಿಸಿದ್ದೇವೆ. ಶಿವಕುಮಾರ್ ಪ್ರಮಾಣವಚನ ಸ್ವೀಕರಿಸುವ ಸಂದರ್ಭವಾಗಿರುವ ಕಾರಣ, ಹೆಚ್ಚು ಬೇಡಿಕೆ ಬರುತ್ತಿದೆ. 2023ರಲ್ಲೂ ಇಷ್ಟೇ ಒತ್ತಡವಿತ್ತು' ಎಂದರು.

'ಚನ್ನಪಟ್ಟಣ, ಬಿಡದಿ, ರಾಮನಗರದ ಶಿವಕುಮಾರ್ ಅಭಿಮಾನಿಗಳಿಂದ ಅಭಿನಂದನೆಯ ಹೋರ್ಡಿಂಗ್ ತಯಾರಿಸಬೇಕೆಂದು ಬೇಡಿಕೆ ಬಂದಿದೆ. ನಗರದ ಹೊರ ಭಾಗಗಳಿಂದಲೂ ಗ್ರಾಹಕರು ಬರುತ್ತಿದ್ದಾರೆ' ಎನ್ನುತ್ತಾರೆ ಹೋರ್ಡಿಂಗ್ ಮಾತ್ರ ತಯಾರಿಸುತ್ತಿರುವ ನಾಯಂಡಹಳ್ಳಿಯ ಆದಿ ಡಿಜಿಟಲ್ ಪ್ರಿಂಟರ್ಸ್‌ ಅಮರ್.



ಹೈಕೋರ್ಟ್ ಎದುರು ಕಟೌಟ್ ನಿಲ್ಲಿಸಲು ಹಾಕಲಾಗಿದ್ದ ಸಾರುವೆಯನ್ನು ಕಾರ್ಮಿಕರು ತೆರವು ಮಾಡಿದರು –ಪ್ರಜಾವಾಣಿ ಚಿತ್ರ

ಕ್ಷೇತ್ರದ ಜನರಿಗೆಲ್ಲಾ ಲಾಡು



ಶಿವಕುಮಾರ್ ಅವರ ಬೆಂಬಲಿಗರು ಸಿಹಿ ಹಂಚಲು ಸಿದ್ಧತೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ನಗರದ ಹಲವೆಡೆ ಸಿಹಿ ಹಂಚಲು ಮುಂದಾಗಿದ್ದು, ದೊಡ್ಡ ಹೋಟೆಲ್‌ಗಳಿಂದ ಸಿಹಿ ಖರೀದಿಸಿದ್ದಾರೆ.

ನೆಲಮಂಗಲ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀನಿವಾಸ್ ತಮ್ಮ ಕ್ಷೇತ್ರದ ಪ್ರತಿಯೊಂದು ಮನೆಗೂ ಲಾಡು ಹಂಚಲಿದ್ದಾರೆ. ಇದಕ್ಕಾಗಿ ನೆಲಮಂಗಲದ ಬಳಿ ದೊಡ್ಡದಾಗಿ ಟೆಂಟ್ ಹಾಕಿಸಿ, ಲಾಡು ಸಿದ್ಧಪಡಿಸಲು ವ್ಯವಸ್ಥೆ ಮಾಡಿದ್ದಾರೆ. ಅಂದಾಜು 250 ಬಾಣಸಿಗರು, 50ರಷ್ಟು ಸಹಾಯಕರು ಸೋಮವಾರ ರಾತ್ರಿಯಿಂದಲೇ ಲಾಡು ತಯಾರಿಸುತ್ತಿದ್ದಾರೆ.



ಬೆಂಗಳೂರಿನ ಕನಕಪುರ ರಸ್ತೆಯಲ್ಲಿ ಬೃಹತ್ ಹೋರ್ಡಿಂಗ್‌ಗಳು

ಕಟೌಟ್ ನಿಲ್ಲಿಸಲು ತಡೆ

ಹೈಕೋರ್ಟ್ ಎದುರು ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಬೃಹತ್ ಕಟೌಟ್‌ಗಳನ್ನು ನಿಲ್ಲಿಸಲು ಅವರ ಅಭಿಮಾನಿಗಳು ಸಿದ್ಧತೆ ನಡೆಸಿದ್ದರು. ಇದಕ್ಕಾಗಿ ಸೋಮವಾರ ರಾತ್ರಿಯಿಂದಲೇ ಸುಮಾರು 30 ಅಡಿ ಎತ್ತರದ ಸಾರುವೆ ಕಟ್ಟುವ ಕೆಲಸ ಆರಂಭವಾಗಿತ್ತು.

ಆದರೆ ಹೈಕೋರ್ಟ್ ಸೂಚನೆಯ ಕಾರಣಕ್ಕೆ ಕಟೌಟ್ ನಿಲ್ಲಿಸುವುದಕ್ಕೆ ತಡೆ ಬಿತ್ತು. ಮಂಗಳವಾರ ಮಧ್ಯಾಹ್ನದ ನಂತರ ಸಾರುವೆ ಕಂಬಗಳನ್ನು ಬಿಚ್ಚಿ, ತೆರವು ಮಾಡಲಾಯಿತು. 2018ರಲ್ಲೇ ರಾಜಕೀಯ ಪಕ್ಷಗಳು ಅನುಮತಿ ಇಲ್ಲದೆ ಅಕ್ರಮವಾಗಿ ಬ್ಯಾನರ್, ಕಟೌಟ್‌ಗಳನ್ನು ಅಳವಡಿಸುವುದಕ್ಕೆ ನಿಷೇಧ ಹೇರಿತ್ತು.



ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿ ಕಾಂಗ್ರೆಸ್ ಬಾವುಟಗಳು

'ಹೊಸ ಸಿಎಂ: ಹೆಚ್ಚಿನ ನಿರೀಕ್ಷೆ ಇಲ್ಲ'

ಪ್ರಜಾವಾಣಿ ವಾರ್ತೆ



ಬಸನಗೌಡ ಪಾಟೀಲ

'ಡಿ.ಕೆ.ಶಿವಕುಮಾರ್ ಅವರಿಂದ ಹೆಚ್ಚಿನ ನಿರೀಕ್ಷೆ ಇಲ್ಲ. ಭ್ರಷ್ಟಾಚಾರ ಕಡಿಮೆ ಆಗುತ್ತದೆ, ನೀರಾವರಿಯಲ್ಲಿ ಉತ್ತರ ಕರ್ನಾಟಕಕ್ಕೆ ಹೆಚ್ಚು ಅನುದಾನ ಕೊಡಬಹುದು ಎಂಬ ನಿರೀಕ್ಷೆ ಇಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇವರು ಜಲಸಂಪನ್ಮೂಲ ಸಚಿವರಾಗಿದ್ದಾಗ ಕೃಷ್ಣಾ ಯೋಜನೆಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿಲ್ಲ. ಗುತ್ತಿಗೆದಾರರ ಬಾಕಿ ಬಿಲ್ ಪಾವತಿ ಆಗಿಲ್ಲ. ಮುಖ್ಯಮಂತ್ರಿ ಆದಮೇಲೆ ಮಾಡುತ್ತಾರೊ ಕಾದು ನೋಡಬೇಕು' ಎಂದರು.

'ಯಾರೇ ಹೊಸ ಮುಖ್ಯಮಂತ್ರಿ ಆಗುವಾಗ ಶುಭವನ್ನೇ ಕೋರಬೇಕು. ನಕಾರಾತ್ಮಕವಾಗಿ ಮಾತನಾಡಬಾರದು. ಆದಷ್ಟೂ ಎರಡು ವರ್ಷದ ಕೊನೆಯ ಅವಧಿಯ ಕಾಂಗ್ರೆಸ್ ಸರ್ಕಾರ ಇರುತ್ತದೆ. ಸಾಧ್ಯವಾದರೆ ಒಳ್ಳೆಯ ಕೆಲಸ ಮಾಡಲಿ' ಎಂದರು.

ಭ್ರಷ್ಟಾಚಾರ ಹೆಚ್ಚುತ್ತದೆ: ಸಿ.ಟಿ.ರವಿ

'ಯಾರೇ ಹೊಸ ಮುಖ್ಯಮಂತ್ರಿ ಆದರೂ ಕಾಂಗ್ರೆಸ್ ನೀತಿ ಬದಲಾಗದು. ಭ್ರಷ್ಟಾಚಾರ ಪ್ರಮಾಣ ಶೇ 60 ರಿಂದ ಶೇ 80ಕ್ಕೆ ಏರುವ ಸಾಧ್ಯತೆ ಇದೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದ್ದಾರೆ.



ಸಿ.ಟಿ.ರವಿ

'ತುಷ್ಟೀಕರಣ ನೀತಿ ಯಥಾ ಪ್ರಕಾರ ಮುಂದುವರೆಯುತ್ತದೆ. ದುರಾಡಳಿತದ ಕಾರಣ ಜನಾಕ್ರೋಶ, ಕಾಂಗ್ರೆಸ್‌ನ ಆಂತರಿಕ ಬೇಗುದಿ ಒಟ್ಟುಗೂಡಿ ರಾಜ ಗದ್ದುಗೆ ಮುಳ್ಳಿನ ಗದ್ದುಗೆ ಆಗಲಿದೆ' ಎಂದು ತಿಳಿಸಿದರು.

'ಅವರೂ ನೆಮ್ಮದಿಯಲ್ಲಿ ಇರಲ್ಲ. ರಾಜ್ಯದ ಜನರನ್ನೂ ನೆಮ್ಮದಿಯಲ್ಲಿ ಇಡಲಾರದ ಪರಿಸ್ಥಿತಿ ಬರಬಹುದು. ಆದರೆ, ಹೊಸ ಹುಮ್ಮಸ್ಸು, ಹಳೆ ಅನುಭವದೊಂದಿಗೆ ಆಡಳಿತ ಚುಕ್ಕಾಣಿ ಹಿಡಿಯಲು ಹೊರಟವರಿಗೆ ರಾಜ್ಯಕ್ಕೆ ಒಳ್ಳೆಯದು ಮಾಡುವ ದೃಷ್ಟಿ ಮತ್ತು ಮನಸ್ಸು ಬರಲಿ' ಎಂದು ಹಾರೈಸಿದ್ದಾರೆ.

ನೂತನ ಸಿ.ಎಂ ಕಚೇರಿಗೆ 'ವಾಸ್ತು' ಸಲಹೆ

ಬೆಂಗಳೂರು: ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರು ಆಡಳಿತ ನಡೆಸುವ 'ಮುಖ್ಯಮಂತ್ರಿ ಕಚೇರಿ'ಯ ವಾಸ್ತು ಹೇಗಿರಬೇಕು, ಅವರು ಕೂರುವ ಕುರ್ಚಿಯ ಸ್ಥಾನ ಮತ್ತು ದಿಕ್ಕು ಹೇಗಿರಬೇಕು ಎಂಬ ಬಗ್ಗೆ ಸಲಹೆ ನೀಡಲು ವಾಸ್ತು ತಜ್ಞ ವಿ.ವಿ.ಆರಾಧ್ಯ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮುಖ್ಯಮಂತ್ರಿ ಕಚೇರಿಯಲ್ಲಿ ಸುಮಾರು ಅರ್ಧ ಗಂಟೆ ಪರಿಶೀಲನೆ ನಡೆಸಿದರು. ಸಿದ್ದರಾಮಯ್ಯ ಇದ್ದಾಗ ಯಾವ ದಿಕ್ಕಿಗೆ ಅಭಿಮುಖವಾಗಿ ಕುರ್ಚಿ ಮತ್ತು ಮೇಜು ಇತ್ತು, ಶಿವಕುಮಾರ್ ಅವರ ಜನ್ಮಕುಂಡಲಿಗೆ ಅನುಗುಣವಾಗಿ ಹೇಗೆ ಬದಲಿಸಬಹುದು ಎಂಬುದರ ಲೆಕ್ಕಾಚಾರ ಹಾಕಿದರು. ಅವರು ಪರಿಶೀಲನೆ ನಡೆಸುವ ವೇಳೆಯಲ್ಲಿ ಕೊಠಡಿಯ ಎರಡೂ ಬಾಗಿಲುಗಳನ್ನು ಮುಚ್ಚಲಾಗಿತ್ತು. ಪರಿಶೀಲನೆಯ ಬಳಿಕ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಆರಾಧ್ಯ, 'ಕೊಠಡಿಯಲ್ಲಿ ವಾಸ್ತುಶಾಸ್ತ್ರಕ್ಕೆ ಅನುಗುಣವಾಗಿ ಕೆಲವು ಬದಲಾವಣೆ ಮಾಡಲು ಸೂಚಿಸಿದ್ದೇನೆ' ಎಂದರು. ಆ ಬದಲಾವಣೆಗಳು ಯಾವುವು ಎಂಬುದನ್ನು ಅವರು ಬಹಿರಂಗಪಡಿಸಲಿಲ್ಲ.

'ಜಮೀರ್‌ಗೂ ನನಗೂ ಪೈಪೋಟಿ ಇಲ್ಲ'



ಸಚಿವ ಸ್ಥಾನದ ವಿಚಾರದಲ್ಲಿ ಜಮೀರ್ ಅಹಮದ್ ಖಾನ್‌ಗೂ ನನಗೂ ಯಾವುದೇ ಪೈಪೋಟಿ ಇಲ್ಲ. ನಾವಿಬ್ಬರೂ ಪರಸ್ಪರ ಚೆನ್ನಾಗಿದ್ದೇವೆ. ಈ ಹಿಂದೆ ಸರ್ಕಾರ ರಚನೆಯಾಗುವಾಗಲೂ ಸಚಿವ ಸ್ಥಾನಕ್ಕೆ ನನ್ನ ಹೆಸರು ಮುಂಚೂಣಿಯಲ್ಲಿತ್ತು. ಈಗ ಸಚಿವನಾಗುತ್ತೇನೋ ಇಲ್ಲವೋ ಗೊತ್ತಿಲ್ಲ.

ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

40ಕ್ಕೂ ಹೆಚ್ಚು ಧರ್ಮಗುರುಗಳಿಗೆ ಆಹ್ವಾನ

ಬೆಂಗಳೂರು: ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕೆ ರಾಜ್ಯದ ವಿವಿಧ ಭಾಗಗಳ 40ಕ್ಕೂ ಹೆಚ್ಚು ಮಠಗಳ ಪೀಠಾಧಿಪತಿಗಳು, ಪಾದ್ರಿಗಳು ಹಾಗೂ ಮೌಲ್ವಿಗಳಿಗೆ ಆಹ್ವಾನ ನೀಡಲಾಗಿದೆ. ನೊಣವಿನಕೆರೆ ಕಾಡಸಿದ್ಧೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗಿ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠ ಸಿದ್ಧಲಿಂಗ ಸ್ವಾಮೀಜಿ, ಸಿರಿಗೆರೆ ತರಳಬಾಳು ಬೃಹನ್ಮಠ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಆರ್ಟ್ ಆಫ್ ಲಿವಿಂಗ್ ಆಶ್ರಮದ ರವಿಶಂಕರ ಗುರೂಜಿ ಅವರಿಗೆ ಆಹ್ವಾನ ನಿಡಲಾಗಿದೆ.

ಅಲ್ಲದೆ, ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಟ್ಟನಾಯಕನಹಳ್ಳಿ ಗುರು ಗುಂಡೇಶ್ವರ ಬೃಹನ್ಮಠದ ನಂಜಾವಧೂತ ಸ್ವಾಮೀಜಿ, ಮಹಾಬೋಧಿ ಸೊಸೈಟಿಯ ಆನಂದ ಬಿಕ್ಕು, ಬೆಂಗಳೂರು ಕ್ಯಾಥೋಲಿಕ್ ಚರ್ಚ್‌ನ ಆರ್ಚ್ ಬಿಷಪ್ ಡಾ.ಪೀಟರ್ ಮಚಾಡೊ, ಕಲಬುರಗಿ ದರ್ಗಾ ಹಜರತ್ ಖ್ವಾಜಾ ಬಂದೆ ನವಾಜ್‌ನ ಹಜರತ್ ಹಫೀಜ್ ಡಾ. ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್ ಆಹ್ವಾನ ಪಡೆದ ಪ್ರಮುಖರು.

ಲಂಚಕ್ಕೆ ಬೇಡಿಕೆ: ಮೂವರು ವಶಕ್ಕೆ

ಚಾಮರಾಜನಗರ: ನಗರಸಭೆಯಲ್ಲಿ ಇ–ಸ್ವತ್ತು ಮಾಡಿಕೊಡಲು ಲಂಚ ಪಡೆಯುವಾಗ ಇಬ್ಬರು ಅಧಿಕಾರಿಗಳು ಹಾಗೂ ಒಬ್ಬ ಮಧ್ಯವರ್ತಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.



ಹೇಮಂತ್ ಕುಮಾರ್



ಹಬೀಬ್

ಕಂದಾಯ ಅಧಿಕಾರಿ ಹೇಮಂತ್ ಕುಮಾರ್, ಕಂದಾಯ ನಿರೀಕ್ಷಕ ಶಕೀಲ್ ಅಹಮದ್ ಹಾಗೂ ಮಧ್ಯವರ್ತಿ ಹಬೀಬ್ ಲೋಕಾಯುಕ್ತ ಬಲೆಗೆ ಬಿದ್ದವರು.

ಪ್ರಕರಣದ ವಿವರ: ಮೀಸೆ ನಾಗರಾಜು ಎಂಬುವರಿಗೆ ಅವರ ನಿವೇಶನದ ಇ– ಸ್ವತ್ತು ಮಾಡಿಕೊಡಲು, ಕಂದಾಯ ಅಧಿಕಾರಿ ಹೇಮಂತ್ ಕುಮಾರ್ ಹಾಗೂ ಕಂದಾಯ ನಿರೀಕ್ಷಕ ಶಕೀಲ್ ಅಹಮದ್ ₹25ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬಳಿಕ ಮಧ್ಯವರ್ತಿ ಹಬೀಬ್‌ಗೆ ಹಣ ನೀಡುವಂತೆ ಸೂಚನೆ ನೀಡಿದ್ದರು. ಈ ಸಂಬಂಧ ನಾಗರಾಜ್ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಅದರಂತೆ ದೂರುದಾರರು ಮಧ್ಯವರ್ತಿ ಹಬೀಬ್‌ಗೆ ಹಣ ನೀಡುವಾಗ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಮೂವರು ಆರೋಪಿಗಳನ್ನು ಹಣದ ಸಮೇತ ವಶಕ್ಕೆ ಪಡೆದಿದ್ದಾರೆ.



ಶಕೀಲ್ ಅಹಮದ್

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್ ಲೋಹಿತ್ ಕುಮಾರ್ ಹಾಗೂ ತಂಡ ಕಾರ್ಯಾಚರಣೆ ನಡೆಸಿದೆ.

ಪ್ರಮಾಣ ವಚನ: ನೌಕರರಿಗೆ ಅರ್ಧ ದಿನ ರಜೆ

ಬೆಂಗಳೂರು: ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಜೂನ್ 3ರಂದು ಮಧ್ಯಾಹ್ನದ ನಂತರ ರಜೆ ಘೋಷಿಸಲಾಗಿದೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುತ್ತಿದ್ದು, ರಾಜಭವನದ ಸುತ್ತಮುತ್ತ ಸಂಚಾರ ದಟ್ಟಣೆಯ ಸಾಧ್ಯತೆ ಕಾರಣ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅರ್ಧ ದಿನ ರಜೆ ನೀಡಿ ಆದೇಶಿಸಿದೆ.

ರಾಜಭವನದ ವಿಧಾನಸೌಧ ಸುತ್ತಮುತ್ತ ಇರುವ ಶಾಲಾ, ಕಾಲೇಜುಗಳು ಮಧ್ಯಾಹ್ನದ ನಂತರ ರಜೆ ನೀಡಬೇಕು. ಮಧ್ಯಾಹ್ನದ ಒಳಗೆ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಮನೆಗೆ ತಲುಪುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಾಲಾ, ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಪೊಲೀಸರು ಸೂಚಿಸಿದ್ದಾರೆ.

ಉಡುಗೆ: ಶಿವಕುಮಾರ್ ಆಸಕ್ತಿಯ ವಿಷಯ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ದಿನಾಂಕ ನಿಗದಿಯಾದ ಬೆನ್ನಲ್ಲೇ, ಅವರ ಉಡುಗೆ–ತೊಡುಗೆಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆ ನಡೆಯುತ್ತಿದೆ.

ರಾಜಕೀಯ ವೇದಿಕೆಗಳಿರಲಿ, ಸಾಂಸ್ಕೃತಿಕ ಕಾರ್ಯಕ್ರಮಗಳಿರಲಿ, ಧಾರ್ಮಿಕ ವಿಧಿ–ವಿಧಾನಗಳಿರಲಿ ಶಿವಕುಮಾರ್ ಅವರು ತಮ್ಮ ಉಡುಗೆಯ ಬಗ್ಗೆ ಆಸ್ಥೆವಹಿಸುತ್ತಾರೆ. ಜುಬ್ಬಾ–ಪೈಜಾಮ, ರೇಷ್ಮೆ ಅಂಗಿ–ಪಂಚೆ, ಜುಬ್ಬಾ–ಪೈಜಾಮದ ಮೇಲೆ ನೆಹರೂ ಕೋಟ್, ಸೂಟ್, ಜೋಧ್‌ಪುರಿ ಸೂಟ್... ಹೀಗೆ ಅವರ ಉಡುಗೆಗಳ ಪಟ್ಟಿ ಬೆಳೆಯುತ್ತದೆ.

ಪ್ರತಿ ಕಾರ್ಯಕ್ರಮಕ್ಕೆ ಹೊಂದುವಂತಹ ಉಡುಗೆಯನ್ನು ತೊಡುವುದಷ್ಟೇ ವಿಶೇಷವಲ್ಲ; ಗಮನ ಸೆಳೆಯುವುದು ಅವುಗಳ ಬಣ್ಣ, ವಿನ್ಯಾಸ ಮತ್ತು ಬಹುಮುಖ್ಯವಾಗಿ ಬ್ರ್ಯಾಂಡ್‌ಗಳಿಂದ. ಗುಚ್ಚಿ, ಪ್ರಾಡಾ, ಫೆಂಡಿ, ಲೂಯಿ ವಿಟಾನ್, ಫೆರ್‌ಅಗಾಮೋ... ಜಗತ್ತಿನ ಅತ್ಯಂತ ದುಬಾರಿ ಮತ್ತು ಐಷಾರಾಮಿ ಬ್ರ್ಯಾಂಡ್‌ಗಳ ಬಟ್ಟೆಗಳು, ಚಪ್ಪಲಿ, ರುಮಾಲುಗಳನ್ನು ಅವರು ಬಳಸುತ್ತಾರೆ. ಅವುಗಳ ಸಾಲಿಗೆ ದುಬಾರಿ ಕನ್ನಡಕ, ಕೈಗಡಿಯಾರಗಳೂ ಸೇರುತ್ತವೆ.

ರಾಜಕೀಯ ಕಾರ್ಯಕ್ರಮದಲ್ಲಿ, ವಿಧಾನ ಮಂಡಲದ ಅಧಿವೇಶನದಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಎದುರಾಳಿ ಪಕ್ಷಗಳ ನಾಯಕರ ಸುದ್ದಿಗೋಷ್ಠಿಗಳಲ್ಲಿ ಅವರ ಐಷಾರಾಮಿ ಮತ್ತು ದುಬಾರಿ ಉಡುಗೆಗಳ ಬಗ್ಗೆ ಪ್ರಶ್ನೆ ಎದ್ದಿದ್ದಿದೆ. 'ನಾನು ನನಗಿಷ್ಟವಾದ ಬಟ್ಟೆ, ರುಮಾಲನ್ನು ಧರಿಸಬಾರದೇ' ಎಂದು ಒಮ್ಮೆ ಮರುಪ್ರಶ್ನೆ ಹಾಕುವ ಮೂಲಕ ಶಿವಕುಮಾರ್ ಅವರು ಎದುರಾಳಿಗಳನ್ನು ಸುಮ್ಮನಾಗಿಸಿದ್ದರು.

ಪ್ರತಿ ಕಾರ್ಯಕ್ರಮಕ್ಕೆ ಯಾವ ಬಟ್ಟೆ, ಬಣ್ಣ ಹೊಂದುತ್ತದೆ ಎಂಬುದನ್ನು ಶಿವಕುಮಾರ್ ಅವರು ತಮ್ಮ ಕುಟುಂಬದವರು ಮತ್ತು ಅತ್ಯಾಪ್ತರೊಂದಿಗೆ ಚರ್ಚಿಸಿ ನಿರ್ಧರಿಸುತ್ತಾರೆ. ಅಂತಹ ಭಿನ್ನ ಸಂಯೋಜನೆಯ ಹಲವು ಉಡುಗೆ–ತೊಡುಗೆಗಳ ಸಂಗ್ರಹವೇ ಅವರ ಬಳಿ ಇದೆ. ವರ್ಣರಂಜಿತ ರಾಜಕಾರಣಿ ಎಸ್.ಬಂಗಾರಪ್ಪ ಅವರ ಗರಡಿಯಲ್ಲಿ ಬೆಳೆದುದರಿಂದ, ಅವರಂತೆಯೇ ಶಿವಕುಮಾರ್ ಅವರೂ ಉಡುಗೆಯ ಬಗ್ಗೆ ಹೆಚ್ಚು ಗಮನ ನೀಡಲು ಆರಂಭಿಸಿದರು.



ಡಿಕೆಶಿ ಹೆಗಲೇರಿದ ಕೃಷ್ಣ ರುಮಾಲು

ಬಳಿಕ ಎಸ್.ಎಂ.ಕೃಷ್ಣ ಅವರ ಒಡನಾಟಕ್ಕೆ ಬಂದ ಶಿವಕುಮಾರ್, ಅವರ ಸಂಪುಟದಲ್ಲಿ ಸಚಿವರೂ ಆಗಿದ್ದರು. ತಮ್ಮ ಉಡುಗೆ–ತೊಡುಗೆಯ ವಿಷಯದಲ್ಲಿ ಹೆಚ್ಚಿನ ನಿಗಾವಹಿಸುತ್ತಿದ್ದ ಕೃಷ್ಣ ಅವರ ಪ್ರಭಾವಕ್ಕೆ ಒಳಗಾದರು. ಕೃಷ್ಣ ಅವರು ರುಮಾಲು ಬಳಸುತ್ತಿದ್ದುದು ಅವರಿಗೆ ವಿಶೇಷ ಆಕರ್ಷಣೆ ತಂದುಕೊಟ್ಟಿತ್ತು. ಕೃಷ್ಣ ಅವರು ನಿಧನರಾದ ಬಳಿಕ, ಅವರು ಉಪಯೋಗಿಸುತ್ತಿದ್ದ ವಿವಿಧ ಮಾದರಿಯ ರುಮಾಲು ಶಿವಕುಮಾರ್ ಕೈಸೇರಿತು.

ಪ್ರಮಾಣ ಸ್ವೀಕಾರಕ್ಕೆ ಉಡುಗೆಯೇನು?

ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಶಿವಕುಮಾರ್ ಅವರು ಯಾವ ರೀತಿಯ ಬಟ್ಟೆ ಧರಿಸುತ್ತಾರೆ ಎಂಬುದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆ ನಡೆಯುತ್ತಿದೆ. ಮೈಸೂರು ಕರ್ನಾಟಕ ಶೈಲಿಯ ಸಾಂಪ್ರದಾಯಿಕ ರೇಷ್ಮೆ ಅಂಗಿ–ಪಂಚೆ ಧರಿಸಬಹುದು ಎಂದು ಕೆಲವರು ನಿರೀಕ್ಷಿಸಿದ್ದರೆ, ಸೂಟು ಧರಿಸಬಹುದು ಎಂದು ಕೆಲವರು ಊಹಿಸಿದ್ದಾರೆ.

ಸದನವಿರಲಿ, ರಾಜಕೀಯ ವೇದಿಕೆಯಿರಲಿ ಡಿ.ಕೆ.ಶಿವಕುಮಾರ್ ಅವರ ವರ್ಣರಂಜಿತ ಬಟ್ಟೆ ಮತ್ತು ರುಮಾಲು ಸುದ್ದಿಯಲ್ಲಿ ಇರುತ್ತವೆ

ಕರ್ನಾಟಕದಲ್ಲಿ ಹೊಸ ಯುವ ಯುಗ: ಶಿವಕುಮಾರ್

ನವದೆಹಲಿ: 'ಕರ್ನಾಟಕದ ಜನತೆ ನನ್ನ ಮೇಲೆ ವಿಶ್ವಾಸ ಹೊಂದಿದ್ದಾರೆ. ರೈತರು, ಮಹಿಳೆಯರು ಹಾಗೂ ಯುವಪೀಳಿಗೆ ಸೇರಿ ಸಮಾಜದ ಪ್ರತಿಯೊಂದು ವರ್ಗವನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತೇನೆ. ಕರ್ನಾಟಕದಲ್ಲಿ ಹೊಸ ಯುವ ಯುಗ ಆರಂಭವಾಗಲಿದೆ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಆದ ಬಳಿಕ ಇದೇ ಮೊದಲ ಬಾರಿ ಅವರು ಮಾಧ್ಯಮಗಳ ಜತೆ ಮಾತನಾಡಿದರು.

'ನಾನು ಯಾವುದನ್ನೂ ಕನಸು ಎಂದು ಹೇಳುವುದಿಲ್ಲ. ಕಠಿಣ ಪರಿಶ್ರಮದ ಜತೆಗೆ ಸಮರ್ಪಣೆ ಎಂದು ಕರೆಯುತ್ತೇನೆ. ಇದು ಕಠಿಣ ಸಮಯ. ವಿಳಂಬವಾಗಿರಬಹುದು. ಆದರೆ ನಿರಾಕರಣೆಗೆ ಒಳಗಾಗಿಲ್ಲ. ಇಲ್ಲಿ ಶಿವಕುಮಾರ್ ಒಬ್ಬನ ವಿಚಾರವಲ್ಲ. ಕಾಂಗ್ರೆಸ್ ಪಕ್ಷದ ಇತಿಹಾಸದೊಂದಿಗೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟಿರುವ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತ ಪರಿಶ್ರಮದ ಫಲವಾಗಿದೆ' ಎಂದರು.

'ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸಕ್ಕೆ ನಾನು ತುಂಬಾ ಬದ್ಧನಾಗಿದ್ದೇನೆ ಮತ್ತು ನಾನು ಬಹಳಷ್ಟು ಕಷ್ಟಪಟ್ಟು ಕೆಲಸ ಮಾಡಿ ಎಲ್ಲರ ಆಶೋತ್ತರಗಳನ್ನು ಈಡೇರಿಸುತ್ತೇನೆ. ದಾರಿ ಅಷ್ಟು ಸುಲಭವಾಗಿಲ್ಲ. ಆದರೂ ಇದನ್ನು ನಿರ್ವಹಿಸಬೇಕು. ನಾನು ನನ್ನ ಕೆಲಸವನ್ನು ತುಂಬಾ ಪ್ರಾಮಾಣಿಕವಾಗಿ ಮತ್ತು ಸಮರ್ಪಣಾಭಾವದಿಂದ ಮಾಡುತ್ತೇನೆ' ಎಂದು ಹೇಳಿದರು.

'ನನ್ನ ಕೆಲಸಗಳ ಮೂಲಕ ನಾನು ಏನು ಎಂಬುದನ್ನು ಮರುನಿರೂಪಿಸಬೇಕಿದೆ. ಏಕೆಂದರೆ, ಜಗತ್ತು ಬೆಂಗಳೂರು ಮತ್ತು ಕರ್ನಾಟಕದ ಮೂಲಕ ಭಾರತವನ್ನು ನೋಡುತ್ತದೆ. ಕರ್ನಾಟಕ ಸುಂದರ ರಾಜ್ಯ. ನಾನು ಯಾರನ್ನು ಭೇಟಿಯಾದರೂ ಅವರು ಕರ್ನಾಟಕ ದೇಶದ ಪ್ರಮುಖ ರಾಜ್ಯ ಎಂದು ಹೇಳುತ್ತಾರೆ. ಹೀಗಾಗಿ ಜವಾಬ್ದಾರಿ ಹೆಚ್ಚಾಗಿದೆ' ಎಂದರು.

ಕರುನಾಡ ಚುಕ್ಕಾಣಿ ಶಿವಕುಮಾರ್ ಕೈಗೆ

ಒಂದನೇ ಪುಟದಿಂದ...

ಸತೀಶ ಜಾರಕಿಹೊಳಿ ಹಾಗೂ ಈಶ್ವರ ಖಂಡ್ರೆ ಅವರ ಪೈಕಿ, ಒಬ್ಬರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸುವ ಬಗ್ಗೆ ಹೈಕಮಾಂಡ್ ನಾಯಕರು ಗಂಭೀರ ಚಿಂತನೆ ನಡೆಸಿದ್ದಾರೆ. ಕೆ.ಎಚ್. ಮುನಿಯಪ್ಪ ಸಚಿವ ಸ್ಥಾನಕ್ಕೆ ತೀವ್ರ ಲಾಬಿ ನಡೆಸಿದ್ದಾರೆ. ಆದರೆ, ಮಹಿಳಾ ಕೋಟಾದಲ್ಲಿ ಮುನಿಯಪ್ಪ ಅವರ ಪುತ್ರಿ ರೂಪಾ ಶಶಿಧರ್ ಅವರಿಗೆ ಸಚಿವ ಸ್ಥಾನ ನೀಡುವ ಬಗ್ಗೆ ಚರ್ಚೆಯಾಗಿದೆ. ಯಾರನ್ನು ಸಚಿವರನ್ನಾಗಿ ಮಾಡಬೇಕು ಎಂಬ ಬಗ್ಗೆ ಚರ್ಚಿಸಿ ತಿಳಿಸುವಂತೆ ಮುನಿಯಪ್ಪ ಅವರಿಗೆ ತಿಳಿಸಲಾಗಿದೆ. ಯು.ಟಿ. ಖಾದರ್ ಸಚಿವರಾಗಲಿದ್ದಾರೆ. ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಹಿರಿಯ ಶಾಸಕರಾದ ಆರ್.ವಿ. ದೇಶಪಾಂಡೆ, ದಿನೇಶ್ ಗುಂಡೂರಾವ್ ಹಾಗೂ ಟಿ.ಬಿ. ಜಯಚಂದ್ರ ಹೆಸರು ಮುಂಚೂಣಿಗೆ ಬಂದಿದೆ. ಉಪಮುಖ್ಯಮಂತ್ರಿಯನ್ನಾಗಿ ಜಿ. ಪರಮೇಶ್ವರ ಅವರನ್ನು ನೇಮಿಸಬೇಕು ಎಂದು ಸಿದ್ದರಾಮಯ್ಯ ಪಟ್ಟು ಹಿಡಿದರು ಎಂದು ತಿಳಿದುಬಂದಿದೆ.

ಎಂ.ಸಿ. ವೇಣುಗೋಪಾಲ್ ಹೆಸರು ಮುನ್ನೆಲೆಗೆ: ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಅಭ್ಯರ್ಥಿಗಳ ಬಗ್ಗೆಯೂ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜೊತೆ ಹೈಕಮಾಂಡ್ ನಾಯಕರು ಚರ್ಚೆ ನಡೆಸಿದರು. ಅಭ್ಯರ್ಥಿಗಳ ಪಟ್ಟಿಯನ್ನು ಇದೇ 5 ರಂದು ಬಿಡುಗಡೆ ಮಾಡಲು ಹೈಕಮಾಂಡ್ ಚಿಂತನೆ ನಡೆಸಿದೆ. ರಾಜ್ಯಸಭಾ ಚುನಾವಣೆಗೆ ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಸಿ. ವೇಣುಗೋಪಾಲ್ ಅವರ ಹೆಸರು ಮುನ್ನೆಲೆಗೆ ಬಂದಿದೆ. ಸವಿತಾ ಸಮಾಜಕ್ಕೆ ಸೇರಿದ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದರೆ ಅತೀ ಹಿಂದುಳಿದ ಸಮಾಜಕ್ಕೆ ಪ್ರಾತಿನಿಧ್ಯ ನೀಡಿದಂತಾಗಿದೆ ಎಂದು ರಾಜ್ಯದ ಕೆಲವು ಮುಖಂಡರು ಹೈಕಮಾಂಡ್ ಗಮನಕ್ಕೆ ತಂದಿದ್ದಾರೆ.

ಕಾಂಗ್ರೆಸ್‌ಗೆ ಲಭ್ಯವಾಗುವ ಮೂರು ಸ್ಥಾನಗಳ ಪೈಕಿ ಮಲ್ಲಿಕಾರ್ಜುನ ಖರ್ಗೆ ಹಾಗೂ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷೆ ಶರ್ಮಿಳಾ ರೆಡ್ಡಿ ಅವರು ಹೆಸರು ಬಹುತೇಕ ಅಂತಿಮಗೊಂಡಿದೆ.

ದೊಡ್ಡ ಹುದ್ದೆಗೇರಿದ ದೊಡ್ಡ ಆಲಹಳ್ಳಿಯ 'ಬಂಡೆ' ಡಿ.ಕೆ. ಶಿವಕುಮಾರ್


ರಾಜ್ಯಕ್ಕೆ ಐವರು ಮುಖ್ಯಮಂತ್ರಿ ಕೊಟ್ಟ ಜಿಲ್ಲೆ

● ಓದೇಶ ಸಕಲೇಶಪುರ

ರಾಮನಗರ: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಕನಕಪುರದ ಡಿ.ಕೆ.ಶಿವಕುಮಾರ್ ಬುಧವಾರ ಪ್ರಮಾಣ ವಚನ ಸ್ವೀಕರಿಸಲು ಸಜ್ಜಾಗಿದ್ದು, ಕರ್ನಾಟಕಕ್ಕೆ ಅತಿ ಹೆಚ್ಚು ಮುಖ್ಯಮಂತ್ರಿಗಳನ್ನು ಕೊಟ್ಟ ಹೆಗ್ಗಳಿಕೆಗೆ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಪಾತ್ರವಾಗಲಿದೆ.

ಶಿವಕುಮಾರ್ ಸೇರಿದಂತೆ ಈವರೆಗೆ ಜಿಲ್ಲೆಯ ಐವರು ಮುಖ್ಯಮಂತ್ರಿ ಕುರ್ಚಿಯನ್ನು ಅಲಂಕರಿಸಿದಂತಾಗಿದೆ. ರಾಜಧಾನಿಯ ಮಗ್ಗುಲಲ್ಲಿರುವ ಜಿಲ್ಲೆಯು ವಿಸ್ತಾರದಲ್ಲಿ ಚಿಕ್ಕದಾದರೂ ರಾಜಕಾರಣದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಾರೆ. ಶಕ್ತಿ ಕೇಂದ್ರವಾದ ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ, ರಾಮಕೃಷ್ಣ ಹೆಗಡೆ, ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಈವರೆಗೆ ರಾಜ್ಯದ ಚುಕ್ಕಾಣಿ ಹಿಡಿದು ಅಧಿಕಾರ ನಡೆಸಿದ್ದಾರೆ. ಈ ಸಾಲಿಗೆ ಇದೀಗ ಶಿವಕುಮಾರ್ ಸೇರಲಿದ್ದಾರೆ.

ಜಿಲ್ಲೆಯಿಂದ ದೊಡ್ಡ ಹುದ್ದೆಗೇರಿದವರ ಪೈಕಿ ಕೆಂಗಲ್ ಹನುಮಂತಯ್ಯ, ಶಿವಕುಮಾರ್ ಕಾಂಗ್ರೆಸಿಗರು. ಹೆಗಡೆ ಜನತಾ ಪಕ್ಷದವರಾಗಿದ್ದು, ದೇವೇಗೌಡ, ಕುಮಾರಸ್ವಾಮಿ ಜೆಡಿಎಸ್‌ನಿಂದ ಈ ಹುದ್ದೆ ಅಲಂಕರಿಸಿದರು.



ಕೆಂಗಲ್ ಹನುಮಂತಯ್ಯ | ರಾಮಕೃಷ್ಣ ಹೆಗಡೆ | ದೇವೇಗೌಡ | ಕುಮಾರಸ್ವಾಮಿ | ಶಿವಕುಮಾರ್

ಹೆಚ್ಚು ಮುಖ್ಯಮಂತ್ರಿಗಳನ್ನು ನೀಡಿದ ಎರಡನೇ ಸ್ಥಾನದಲ್ಲಿ ಶಿವಮೊಗ್ಗ ಜಿಲ್ಲೆ ಇದೆ. ಜಿಲ್ಲೆಯವರಾದ ಕಡಿದಾಳ್ ಮಂಜಪ್ಪ, ಎಸ್. ಬಂಗಾರಪ್ಪ, ಬಿ.ಎಸ್. ಯಡಿಯೂರಪ್ಪ ಅಧಿಕಾರ ನಡೆಸಿದ್ದಾರೆ.

ಪೂರ್ಣಾವಧಿ ಅದೃಷ್ಟವಿಲ್ಲ: ಜಿಲ್ಲೆಯಿಂದ ಐವರು ಮುಖ್ಯಮಂತ್ರಿ ಹುದ್ದೆಗೇರಿದರೂ, ಯಾರಿಗೂ 5 ವರ್ಷಗಳ ಪೂರ್ಣಾವಧಿ ಅಧಿಕಾರ ಅನುಭವಿಸಲು ಸಾಧ್ಯವಾಗಿಲ್ಲ. ಕೆಂಗಲ್ ಅವರಿಗೆ 4 ವರ್ಷ 5 ತಿಂಗಳು ಅವಕಾಶ ಸಿಕ್ಕರೆ, ಹೆಗಡೆ ಕೇವಲ 1 ವರ್ಷವಷ್ಟೇ ಮುಖ್ಯಮಂತ್ರಿಯಾಗಿದ್ದರು. ದೇವೇಗೌಡ 17 ತಿಂಗಳು ಆಡಳಿತ ನಡೆಸಿದ್ದರು.

ಕುಮಾರಸ್ವಾಮಿ ಮೊದಲ ಅವಧಿಯಲ್ಲಿ 20 ತಿಂಗಳು ಮತ್ತು ಎರಡನೇ ಬಾರಿಗೆ 14 ತಿಂಗಳಷ್ಟೇ ಅಧಿಕಾರ ಅನುಭವಿಸಿದರು. ಇದೀಗ ಡಿ.ಕೆ. ಶಿವಕುಮಾರ್ ಅವರಿಗೆ 24 ತಿಂಗಳಷ್ಟೇ ಅಧಿಕಾರ ಸಿಗಲಿದೆ.

ಬೆಂಗಳೂರು ನಗರದಿಂದ 1986ರಲ್ಲಿ ಬೇರ್ಪಟ್ಟು ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಯಿತು. 2007ರಲ್ಲಿ ಗ್ರಾಮಾಂತರದಿಂದ ಪ್ರತ್ಯೇಕವಾಗಿ ರಾಮನಗರ ಜಿಲ್ಲೆಯಾಯಿತು. 2025ರಲ್ಲಿ ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣಗೊಂಡಿತು.

ಇಬ್ಬರು ಸ್ಥಳೀಯರು; ಮೂವರು ಹೊರಗಿನವರು

ಜಿಲ್ಲೆಯಿಂದ ಮುಖ್ಯಮಂತ್ರಿ ಸ್ಥಾನಕ್ಕೇರಿದವರಲ್ಲಿ ಇಬ್ಬರು ಸ್ಥಳೀಯರು ಹಾಗೂ ಮೂವರು ಹೊರಗಿನವರು. ಮೈಸೂರು ಸಂಸ್ಥಾನದ ಮೊದಲ ಚುನಾಯಿತ ಮುಖ್ಯಮಂತ್ರಿಯಾಗಿದ್ದ (1952–1956) ಕೆಂಗಲ್ ಹನುಮಂತಯ್ಯ ರಾಮನಗರ ತಾಲ್ಲೂಕಿನ ಲಕ್ಕಪ್ಪನಹಳ್ಳಿ ಗ್ರಾಮದವರು. ಡಿ.ಕೆ. ಶಿವಕುಮಾರ್ ಕನಕಪುರ ತಾಲ್ಲೂಕಿನ ದೊಡ್ಡ ಆಲಹಳ್ಳಿಯವರು.

ರಾಜ್ಯದ ಮೊದಲ ಕಾಂಗ್ರೆಸ್ಸೇತರ ಸರ್ಕಾರದ ಮುಖ್ಯಮಂತ್ರಿಯಾಗಿದ್ದ (1985-1988) ರಾಮಕೃಷ್ಣ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದವರು. ಎಚ್.ಡಿ. ದೇವೇಗೌಡ (1994–1996) ಮತ್ತು ಕುಮಾರಸ್ವಾಮಿ (2006–07 ಮತ್ತು 2018–19) ಹಾಸನ ಜಿಲ್ಲೆಯ ಹೊಳೆನರಸಿಪುರ ತಾಲ್ಲೂಕಿನ ಹರದನಹಳ್ಳಿಯವರು. ಬದಲಾದ ಕಾಲಘಟ್ಟ ಮತ್ತು ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಜಿಲ್ಲೆಗೆ ಬಂದು ರಾಜಕೀಯ ಅಸ್ತಿತ್ವ ಕಂಡುಕೊಂಡರು. ದೇವೇಗೌಡರು ಇಲ್ಲಿಂದಲೇ ಪ್ರಧಾನಿ ಹುದ್ದೆಗೇರಿದ್ದು ವಿಶೇಷ.

ಪ್ರತ್ಯೇಕ ಸಚಿವಾಲಯ ಸ್ಥಾಪನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ


ಹುಬ್ಬಳ್ಳಿ: ರಾಜ್ಯದಲ್ಲಿ ಹಿರಿಯ ನಾಗರಿಕರ ಸಮಸ್ಯೆ ಬಗೆಹರಿಸಲು ಮತ್ತು ಅವರ ಕಲ್ಯಾಣಕ್ಕಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಿ, ಸಚಿವರನ್ನು ನೇಮಿಸಬೇಕು ಎಂದು ಕರ್ನಾಟಕ ರಾಜ್ಯ ಹಿರಿಯ ನಾಗರಿಕರು ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಎ.ಪಾಟೀಲ ಆಗ್ರಹಿಸಿದ್ದಾರೆ.

ಹಿರಿಯ ನಾಗರಿಕರಿಗೆ ಸಿಗಬೇಕಾದ ಕಾನೂನುಬದ್ಧ ಸೌಲಭ್ಯಗಳನ್ನು ಪಡೆಯಲು ಸಂಘವು 10 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ದೂರಿದ್ದಾರೆ. ಕೇರಳ ರಾಜ್ಯ ಸರ್ಕಾರ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಿ, ಸಚಿವರನ್ನು ನೇಮಿಸಿದೆ. ಅಲ್ಲದೆ, ತಿಂಗಳಿಗೆ ₹3 ಸಾವಿರ ವೃದ್ಧಾಪ್ಯವೇತನ ಮಂಜೂರು ಮಾಡಿದೆ. ರಾಜ್ಯ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಮರು ಮೌಲ್ಯಮಾಪನಕ್ಕೆ ಪೋರ್ಟಲ್

ಜೂನ್ 6ರ ಮಧ್ಯರಾತ್ರಿವರೆಗೆ ಕಾರ್ಯನಿರ್ವಹಣೆ: ಸಿಬಿಎಸ್‌ಇ

ನವದೆಹಲಿ: ಉತ್ತರ ಪತ್ರಿಕೆಯ ಸ್ಕ್ಯಾನ್ಡ್ ಪ್ರತಿಗಳಲ್ಲಿ ಸಮಸ್ಯೆಗಳಿದ್ದರೆ, ಮೌಲ್ಯಮಾಪನದ ಬಗ್ಗೆ ತಕರಾರುಗಳಿದ್ದರೆ ಈ ಬಗ್ಗೆ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಲು ಪೋರ್ಟಲ್ ಅನ್ನು ಸಿಬಿಎಸ್‌ಇ ಮಂಗಳವಾರ ತೆರೆದಿದೆ. ಜೂನ್ 6 ಮಧ್ಯರಾತ್ರಿವರೆಗೆ ಇದು ಕಾರ್ಯನಿರ್ವಹಿಸಲಿದೆ. ಆ ನಂತರ ಬಂದ ಯಾವುದೇ ಅರ್ಜಿಯನ್ನೂ ಪರಿಗಣಿಸುವುದಿಲ್ಲ ಮತ್ತು ಸ್ಕ್ಯಾನ್ಡ್ ಪ್ರತಿಗಳನ್ನು ಪಡೆದುಕೊಂಡ ವಿದ್ಯಾರ್ಥಿಗಳು ಮಾತ್ರವೇ ಪರಿಶೀಲನೆಗೆ ಅರ್ಜಿ ಸಲ್ಲಿಸಬಹುದು ಎಂದು ಸಿಬಿಎಸ್‌ಇ ಸ್ಪಷ್ಟಪಡಿಸಿದೆ. ಮೇ 29ಕ್ಕೆ ಪೋರ್ಟಲ್ ತೆರೆಯುವುದಾಗಿ ಸಿಬಿಎಸ್‌ಇ ಈ ಹಿಂದೆ ಘೋಷಿಸಿತ್ತು.



4.04 ಲಕ್ಷ ಸ್ಕ್ಯಾನ್ಡ್ ಪ್ರತಿಗಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಸಂಖ್ಯೆ

ವಿದ್ಯಾರ್ಥಿಗಳು ಏನು ಮಾಡಬೇಕು?

- ಆಧಾರ್ ಸಂಖ್ಯೆ ಮೂಲಕ ಲಾಗ್‌ಇನ್ ಆಗಬೇಕು. ವಿದ್ಯಾರ್ಥಿಯದ್ದೇ ಆಧಾರ್ ಕಾರ್ಡ್ ಇಲ್ಲದಿದ್ದರೆ ಪೋಷಕರ ಆಧಾರ್ ಸಂಖ್ಯೆ ಮೂಲಕವೂ ಲಾಗ್‌ಇನ್ ಆಗಬಹುದು. ಪೋಷಕರ ಆಧಾರ್ ಸಂಖ್ಯೆಯಿಂದ ಲಾಗ್‌ಇನ್ ಮಾಡಿದರೆ, ಜನ್ಮ ದಿನಾಂಕ, ಲಿಂಗ ಸೇರಿದಂತೆ ಎಲ್ಲ ಮಾಹಿತಿಗಳನ್ನೂ ಪೋಷಕರದ್ದೇ ನೀಡಬೇಕು
- ತಮ್ಮ ಉತ್ತರ ಪತ್ರಿಕೆಯ ಸ್ಕ್ಯಾನ್ಡ್ ಪ್ರತಿಯಲ್ಲಿ ಪುಟಗಳು ಅಥವಾ ಉತ್ತರ ಪತ್ರಿಕೆಯ ಪೂರಕ ಪುಟಗಳು ಕಾಣೆಯಾಗಿದ್ದರೆ, ನಕ್ಷೆ ಅಥವಾ ಗ್ರಾಫ್‌ಗಳು ಕಾಣೆಯಾಗಿದ್ದರೆ, ನೀಡಿದ ಸ್ಕ್ಯಾನ್ಡ್ ಪ್ರತಿಗಳು ಅಸ್ಪಷ್ಟವಾಗಿ ಕಾಣುತ್ತಿದ್ದರೆ, ಬೇರೆಯವರ ಉತ್ತರ ಪತ್ರಿಕೆ ನೀಡಲಾಗಿದ್ದರೆ, ಕೇಳಿದ ವಿಷಯದ ಉತ್ತರ ಪತ್ರಿಕೆ ಬದಲಿಗೆ ಬೇರೆ ವಿಷಯದ ಉತ್ತರ ಪತ್ರಿಕೆ ನೀಡಲಾಗಿದ್ದರೆ ಅರ್ಜಿ ಸಲ್ಲಿಸಬಹುದು

ಶುಲ್ಕ ಹೇಗಿರಲಿದೆ?

- ಉತ್ತರ ಪತ್ರಿಕೆಯಲ್ಲಿನ ಸಮಸ್ಯೆಗಳ ಪರಿಶೀಲನೆಗೆ ಒಂದು ಉತ್ತರ ಪತ್ರಿಕೆಗೆ ₹100
- ಮರು ಮೌಲ್ಯಮಾಪನಕ್ಕಾಗಿ ಪ್ರತಿ ಪ್ರಶ್ನೆಗೆ ₹25
- ಯುಪಿಐ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮತ್ತು ಆನ್‌ಲೈನ್ ಬ್ಯಾಂಕಿಂಗ್ ಮೂಲಕ ಶುಲ್ಕ ಪಾವತಿಸಬೇಕು
- ಸ್ಕ್ಯಾನ್ಡ್ ಪ್ರತಿಗಳಲ್ಲಿ ಸಮಸ್ಯೆಗಳಿದ್ದರೆ, ಮರು ಮೌಲ್ಯಮಾಪನ ಆಗಬೇಕಿದ್ದರೆ– ಒಂದು ಪರಿಶೀಲನೆಗೆ ಒಂದು ಅರ್ಜಿಯನ್ನು ಮಾತ್ರವೇ ಸಲ್ಲಿಸಬೇಕಾಗುತ್ತದೆ. ಆದ್ದರಿಂದ ಒಂದು ಅರ್ಜಿ ಸಲ್ಲಿಸಬೇಕೆ ಅಥವಾ ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಬೇಕೇ ಎಂಬುದನ್ನು ವಿದ್ಯಾರ್ಥಿಗಳು ಮೊದಲೇ ನಿರ್ಧರಿಸಬೇಕಾಗುತ್ತದೆ
- 'ಫ್ರೀಜ್ ಆ್ಯಂಡ್ ಪ್ರೊಸೀಡ್' ಬಟನ್ ಒತ್ತಿದ ಬಳಿಕ, ವಿದ್ಯಾರ್ಥಿಗಳು ನೀಡಿದ ಎಲ್ಲ ವಿವರಗಳು ಲಾಕ್ ಆಗುತ್ತವೆ. ಇದಾದ ಬಳಿಕ, ಯಾವುದೇ ಬದಲಾವಣೆಗೆ ಅವಕಾಶವಿಲ್ಲ
- ಶುಲ್ಕ ಪಾವತಿಯಾದ ಬಳಿಕವಷ್ಟೇ ಅರ್ಜಿ ಸ್ವೀಕೃತವಾಗುತ್ತದೆ

'ಸೈಬರ್‌ದಾಳಿ ನಡೆಸಲಾಗಿದೆ'



'ಪರಿಶೀಲನೆಗಾಗಿ ರೂಪಿಸಲಾದ ಪೋರ್ಟಲ್ ಮೇಲೆ ಸೈಬರ್ ದಾಳಿಯಾಗಿದೆ. ಎರಡು ನಿಮಿಷಗಳಲ್ಲಿ 15 ಲಕ್ಷ ಬಾರಿ ಪೋರ್ಟಲ್‌ಗೆ ಪ್ರವೇಶ ಪಡೆಯಲು ಯತ್ನಿಸಲಾಗಿದೆ ಮತ್ತು ಪೋರ್ಟಲ್‌ನಲ್ಲಿರುವ ಕಡತಗಳನ್ನು ಕದಿಯಲು 1 ಲಕ್ಷ ಬಾರಿ ಯತ್ನಿಸಲಾಗಿದೆ' ಎಂದು ಸಿಬಿಎಸ್‌ಇ ಹೇಳಿದೆ.

ಪೋರ್ಟಲ್‌ನಲ್ಲಿ ತಾಂತ್ರಿಕ ಸಮಸ್ಯೆಗಳಿವೆ ಎಂದು ವಿದ್ಯಾರ್ಥಿಗಳು ಆಕ್ರೋಶ ಹೊರಹಾಕಿದ ಬೆನ್ನಲ್ಲೇ ಸಿಬಿಎಸ್‌ಇ ಈ ಮಾಹಿತಿ ನೀಡಿದೆ. 'ನಮ್ಮ ತಾಂತ್ರಿಕ ತಂಡವು ಎಲ್ಲ ಸಮಸ್ಯೆಗಳನ್ನು ಬಗೆಹರಿಸಿದೆ. ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿದ ಬಳಿಕ ಇನ್ನಷ್ಟು ಹೆಚ್ಚಿನ ಎಚ್ಚರಿಕೆ ವಹಿಸಲಾಗಿದೆ' ಎಂದು ಸಿಬಿಎಸ್‌ಇ ಹೇಳಿದೆ.

'ಜೂನ್ 2ರ ಮಧ್ಯಾಹ್ನ 3ರವರೆಗೆ 16 ಸಾವಿರ ವಿದ್ಯಾರ್ಥಿಗಳು ಪೋರ್ಟಲ್ ಮೂಲಕ ಅರ್ಜಿಗಳನ್ನು ಯಶಸ್ವಿಯಾಗಿ ಸಲ್ಲಿಸಿದ್ದಾರೆ. 8 ಸಾವಿರ ಮಂದಿ ಪೋರ್ಟಲ್‌ಗೆ ಏಕಕಾಲದಲ್ಲಿ ಪ್ರವೇಶ ಪಡೆಯಬಹುದಾಗಿದೆ' ಎಂದಿದೆ.

ಅಧಿಕಾರಿಗಳ ವರ್ಗಾವಣೆ, ಸಮಿತಿ ರಚನೆ

- ಸಿಬಿಎಸ್‌ಇ ಮುಖ್ಯಸ್ಥ ರಾಹುಲ್ ಸಿಂಗ್ ಮತ್ತು ಕಾರ್ಯದರ್ಶಿ ಹಿಮಾಂಶು ಗುಪ್ತಾ ಅವರನ್ನು ಮಂಗಳವಾರ ವರ್ಗಾವಣೆ ಮಾಡಲಾಗಿದೆ
- ಒಎಸ್‌ಎಂ ಸಮಸ್ಯೆಗಳ ಕುರಿತು ತನಿಖೆ ನಡೆಸಲು ಏಕ ಸದಸ್ಯ ಸಮಿತಿಯೊಂದನ್ನು ಕೇಂದ್ರ ಸರ್ಕಾರ ರಚಿಸಿದೆ. ಸಾಮರ್ಥ್ಯ ವೃದ್ಧಿ ಆಯೋಗದ ಮುಖ್ಯಸ್ಥರಾದ ಎಸ್. ರಾಧಾ ಚೌಹಾಣ್ ಅವರನ್ನು ಸಮಿತಿಗೆ ನೇಮಿಸಲಾಗಿದೆ. ಒಂದು ತಿಂಗಳ ಒಳಗಾಗಿ ವರದಿ ನೀಡಲು ಸೂಚಿಸಲಾಗಿದೆ

'ಶಿಕ್ಷಣ ಸಚಿವರನ್ನು ಕೆಳಗಿಳಿಸಿ'

ಸಿಬಿಎಸ್‌ಇ ಮುಖ್ಯ–ವರ್ಗಾವಣೆ
ಸಿಬಿಎಸ್‌ಇ ಕಾರ್ಯದರ್ಶಿ–ವರ್ಗಾವಣೆ
ಏಕ ಸದಸ್ಯ ತನಿಖಾ ಸಮಿತಿ– ರಚನೆ
ಮತ್ತು ನಿಜವಾದ ಅಪರಾಧಿ, ಧರ್ಮೇಂದ್ರ ಪ್ರಧಾನ್– ಸುರಕ್ಷಿತ
ಅಧಿಕಾರಿಗಳು ವರ್ಗ, ಮಂತ್ರಿ ಸುರಕ್ಷಿತ: ಇದು ಹೊಣೆಗಾರಿಕೆ ಅಲ್ಲ– ಕಣ್ಣೊರೆಸುವ ತಂತ್ರವಷ್ಟೆ. ಶಿಕ್ಷಣ ಸಚಿವರನ್ನು ಕೆಳಗಿಳಿಸಿ, ಸ್ವತಂತ್ರ ನ್ಯಾಯಾಂಗ ತನಿಖೆಗೆ ಆದೇಶಿಸಿ

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಸಂಸದೀಯ ಸಮಿತಿ ಮುಂದೆ ಸಾರ್ಥಕ್ ಹಾಜರು

ಒಎಸ್‌ಎಂ ವ್ಯವಸ್ಥೆ ನಿರ್ವಹಿಸುತ್ತಿರುವ ಕಂಪನಿಗೆ ಅನುಕೂಲ ಮಾಡಿಕೊಡಲು ಗುತ್ತಿಗೆ ನಿಯಮಗಳಲ್ಲಿನ ಬದಲಾವಣೆ ಮಾಡಲಾಗಿದೆ ಎಂದು ಆರೋಪಿಸಿ 'ಎಕ್ಸ್'ನಲ್ಲಿ ವಿಡಿಯೊ ಮಾಡಿದ್ದ ಜಾರ್ಖಂಡ್‌ನ 17 ವರ್ಷದ ಸಾರ್ಥಕ್ ಸಿದ್ಧಾಂತ್ ಅವರು ಶಿಕ್ಷಣ, ಮಹಿಳೆ, ಮಕ್ಕಳು, ಯುವಕರು ಮತ್ತು ಕ್ರೀಡೆಗಳ ಕುರಿತ ಸಂಸದೀಯ ಸ್ಥಾಯಿ ಸಮಿತಿ ಮುಂದೆ ಮಂಗಳವಾರ ಹಾಜರಾದರು.

'ತಾನು ಪತ್ತೆಹಚ್ಚಿದ ಸಮಸ್ಯೆಗಳ ಬಗ್ಗೆ ಸಾರ್ಥಕ್ ಅವರು ಏಳು ಪುಟಗಳ ವರದಿಯೊಂದನ್ನು ಸಮಿತಿಗೆ ನೀಡಿದರು. ಜೊತೆಗೆ, ಗುತ್ತಿಗೆ ಪ್ರಕ್ರಿಯೆ ಕುರಿತು ಸಾರ್ಥಕ್ ಅವರು ಹಲವು ಪ್ರಶ್ನೆಗಳನ್ನೂ ಸಿಬಿಎಸ್‌ಇ ಅಧಿಕಾರಿಗಳ ಮುಂದಿಟ್ಟರು' ಎಂದು ಮೂಲಗಳು ತಿಳಿಸಿವೆ. ಕಾಂಗ್ರೆಸ್ ಸಂಸದ ದಿಗ್ವಿಜಯ ಸಿಂಗ್ ಅವರು ಈ ಸಮಿತಿಯ ಅಧ್ಯಕ್ಷ.

ಕಾಂಗ್ರೆಸ್ ನಾಯಕನ ಹೇಳಿಕೆಗೆ ಬಿಜೆಪಿ ತೀವ್ರ ಆಕ್ಷೇಪ

ವಂದೇ ಮಾತರಂ ಪೂರ್ಣ ಹಾಡುವುದು ಅನಗತ್ಯ: ತರೂರ್

ತಿರುವನಂತಪುರ (ಪಿಟಿಐ): ಸರ್ಕಾರದ ಅಧಿಕೃತ ಕಾರ್ಯಕ್ರಮಗಳ ಆರಂಭದಲ್ಲಿ ಹಾಗೂ ಕೊನೆಯಲ್ಲಿ 'ವಂದೇ ಮಾತರಂ' ಗೀತೆಯ ಎಲ್ಲ ಐದು ಚರಣಗಳನ್ನು ಹಾಡುವ ಅನಿವಾರ್ಯವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಪ್ರಶ್ನಿಸಿದ್ದು, 'ಇದು ಅನಗತ್ಯ ಹೊರೆ' ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕನ ಹೇಳಿಕೆಗೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.


ಶಶಿ ತರೂರ್

'ವಂದೇ ಮಾತರಂ' ಹಾಡುವುದಕ್ಕೆ ಸಂಬಂಧಿಸಿದಂತೆ ಕೇರಳಂನಲ್ಲಿ ಎದ್ದಿರುವ ವಿವಾದದ ನಡುವೆ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ತರೂರ್, 'ವಂದೇ ಮಾತರಂ ಗೀತೆಯನ್ನು ಎಲ್ಲರೂ ಗೌರವಿಸುತ್ತಾರೆ. ಆದರೆ ಪ್ರತಿ ಕಾರ್ಯಕ್ರಮದಲ್ಲಿ ಪೂರ್ಣವಾಗಿ ಹಾಡುವುದನ್ನು ಕಡ್ಡಾಯಗೊಳಿಸುವುದನ್ನು ಸಮರ್ಥಿಸುವುದು ಕಷ್ಟ' ಎಂದು ಹೇಳಿದರು.

'ವಂದೇ ಮಾತರಂ 'ರಾಷ್ಟ್ರೀಯ ಗೀತೆ'ಯಾಗಿದ್ದು, ಅದನ್ನು ಹಾಡುವಾಗ ನಾವು ಎದ್ದು ನಿಂತು ಗೌರವ ಸಲ್ಲಿಸುತ್ತೇವೆ. ಈ ಗೀತೆಯ ಮೊದಲ ಚರಣ ಅಥವಾ ಮೊದಲ ಕೆಲವು ಸಾಲುಗಳು ಹೆಚ್ಚಿನ ಜನರಿಗೆ ಕಂಠಪಾಠ ಆಗಿವೆ' ಎಂದರು.

'ಸಾಂಪ್ರದಾಯಿಕವಾಗಿ ಈ ಗೀತೆಯನ್ನು ಕಾರ್ಯಕ್ರಮದ ಆರಂಭದಲ್ಲಿ ಒಮ್ಮೆ ಹಾಡಲಾಗುತ್ತದೆ. ಆದರೆ, ಈಗ ಅವರು ಪ್ರತಿ ಕಾರ್ಯಕ್ರಮದ ಆರಂಭದಲ್ಲಿ ಮತ್ತು ಕೊನೆಯಲ್ಲಿ ಗೀತೆಯ ಎಲ್ಲಾ ಐದು ಚರಣಗಳನ್ನು ಹಾಡಬೇಕೆಂದು ಬಯಸುತ್ತಾರೆ. ಅದು ಅನಗತ್ಯ ಹೊರೆ ಎಂದು ನಾನು ಭಾವಿಸುತ್ತೇನೆ' ಎಂದು ಹೇಳಿದರು.

'ವಂದೇ ಮಾತರಂ ಗೀತೆಯನ್ನು ಪೂರ್ಣವಾಗಿ ಹಾಡುವುದು ಕಡ್ಡಾಯವಲ್ಲ ಎಂಬುದನ್ನು ಕೇರಳಂ ಸರ್ಕಾರ ಸಮರ್ಥಿಸಿಕೊಂಡಿದೆ. ಆದರೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ವಿಭಿನ್ನ ದೃಷ್ಟಿಕೋನ ಹೊಂದಿದಂತೆ ತೋರುತ್ತದೆ' ಎಂದು ತರೂರ್ ತಿಳಿಸಿದರು.

ಕೇರಳಂ ವಿಧಾನಸಭೆಯಲ್ಲಿ ಕಳೆದ ಶುಕ್ರವಾರ ಯುಡಿಎಫ್ ಸರ್ಕಾರದ ನೀತಿ ಘೋಷಣೆ ಕಾರ್ಯಕ್ರಮದಲ್ಲಿ 'ವಂದೇ ಮಾತರಂ ಗೀತೆಯನ್ನು ಪೂರ್ಣವಾಗಿ ಹಾಡಿಲ್ಲ' ಎಂದು ರಾಜ್ಯಪಾಲರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

ರಾಷ್ಟ್ರೀಯ ಗೀತೆ ಹಾಡುವುದಕ್ಕೆ ತಮಗೆ ಯಾವುದೇ ಆಕ್ಷೇಪವಿಲ್ಲ ಎಂಬುದನ್ನು ಒತ್ತಿ ಹೇಳಿದ ತರೂರ್, 'ನಾವೆಲ್ಲರೂ ವಂದೇ ಮಾತರಂ ಗೀತೆಯನ್ನು ಗೌರವಿಸುತ್ತೇವೆ. ನಾನು ನಿಮಗಾಗಿ ಅದನ್ನು ಸಂತೋಷದಿಂದ ಹಾಡಬಲ್ಲೆ' ಎಂದರು.

ನವದೆಹಲಿಯಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಭಾಗವಹಿಸಿದ್ದ ಪುಸ್ತಕ ಜನಾರ್ಪಣೆ ಸಮಾರಂಭವನ್ನು ನೆನಪಿಸಿಕೊಂಡ ತರೂರ್, 'ಕಾರ್ಯಕ್ರಮದ ಆರಂಭದಲ್ಲಿ ಮತ್ತು ಕೊನೆಯಲ್ಲಿ ಪೂರ್ಣ ಹಾಡನ್ನು ನುಡಿಸಲಾಗಿದೆ. ಪ್ರೇಕ್ಷಕರಿಗೆ ಎರಡು ಸಲ ದೀರ್ಘ ಅವಧಿಗೆ ಎದ್ದು ನಿಲ್ಲುವುದು ಸಮಸ್ಯೆಯಾಯಿತು' ಎಂದು ಹೇಳಿದರು.

ಮುಸ್ಲಿಂ ಲೀಗ್‌ಗೆ ಕಾಂಗ್ರೆಸ್ ಶರಣು: ಬಿಜೆಪಿ

ನವದೆಹಲಿ: ಶಶಿ ತರೂರ್ ಹೇಳಿಕೆಯನ್ನು ಬಿಜೆಪಿ ಮಂಗಳವಾರ ಖಂಡಿಸಿದ್ದು, 'ಕೇರಳಂನಲ್ಲಿ ಆಡಳಿತಾರೂಢ ಕಾಂಗ್ರೆಸ್, ಮಿತ್ರ ಪಕ್ಷವಾದ ಮುಸ್ಲಿಂ ಲೀಗ್‌ಗೆ ಮತ್ತೊಮ್ಮೆ 'ಶರಣಾಗಿದೆ' ಎಂದು ಆರೋಪಿಸಿದೆ.

'ಕಾಂಗ್ರೆಸ್ ಪಕ್ಷವು ರಾಷ್ಟ್ರೀಯತೆಗೆ ವಿರುದ್ಧವಾಗಿದೆ ಎಂಬುದನ್ನು ತೋರಿಸಿದೆ. ವಂದೇ ಮಾತರಂನ ಎಲ್ಲ ಚರಣಗಳನ್ನು ಹಾಡುವುದು ಅನಗತ್ಯ ಹೊರೆ ಎಂದು ಶಶಿ ತರೂರ್ ಹೇಳುತ್ತಾರೆ' ಎಂದು ಬಿಜೆಪಿಯು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ವಂದೇ ಮಾತರಂ ಗೀತೆಯ ವಿಚಾರದಲ್ಲಿ ಕಾಂಗ್ರೆಸ್, ಈ ಹಿಂದೆಯೂ ಒತ್ತಡಕ್ಕೆ ಮಣಿದಿತ್ತು. ಮೊಹಮ್ಮದ್ ಅಲಿ ಜಿನ್ನಾ ಅವರ ಅತೀವ ಒತ್ತಡದಿಂದಾಗಿ ಹಾಗೂ ಮುಸ್ಲಿಮರನ್ನು ಓಲೈಸುವ ಉದ್ದೇಶದಿಂದ, ಜವಾಹರ ಲಾಲ್ ನೆಹರೂ ಅವರೂ ಗೀತೆಯ ಕೆಲವು ಚರಣಗಳನ್ನು ಕೈಬಿಟ್ಟಿದ್ದರು. ಇದೀಗ ಕಾಂಗ್ರೆಸ್ ಮತ್ತೊಮ್ಮೆ ಮುಸ್ಲಿಂ ಲೀಗ್ ಮನಃಸ್ಥಿತಿಗೆ ಶರಣವಾಗಿದೆ. ಅದೇ ಮುಸ್ಲಿಂ ಲೀಗ್ ಜತೆ ಇಂದು ಅವರು ಕೇರಳಂನಲ್ಲಿ ಸರ್ಕಾರ ನಡೆಸುತ್ತಿದ್ದಾರೆ' ಎಂದು ಟೀಕಿಸಿದೆ.

ವಂದೇ ಮಾತರಂ ಗೀತೆಯನ್ನು ಪೂರ್ಣವಾಗಿ ಹಾಡುವುದನ್ನು ವಿರೋಧಿಸುವ ಮೂಲಕ ಕಾಂಗ್ರೆಸ್ ಪಕ್ಷ, ರಾಷ್ಟ್ರೀಯ ಗೀತೆಗೆ ಅಗೌರವ ತೋರಿಸಿದೆ

ಶೆಹಜಾದ್ ಪೂನಾವಾಲಾ, ಬಿಜೆಪಿ ರಾಷ್ಟ್ರೀಯ ವಕ್ತಾರ

ರಾಷ್ಟ್ರೀಯತೆ ಮತ್ತು ರಾಷ್ಟ್ರೀಯ ಚಿಹ್ನೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕಾಂಗ್ರೆಸ್ ದ್ವಿಮುಖ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿದೆ.

'ರಾಜ್ಯ ಸರ್ಕಾರಗಳು ರಾಜಕೀಯ ಲಾಭಕ್ಕಾಗಿ ರಾಷ್ಟ್ರೀಯ ಶಿಷ್ಟಾಚಾರಗಳನ್ನು ನಿರ್ಲಕ್ಷಿಸುತ್ತಾ ಬಂದರೆ, ರಾಷ್ಟ್ರೀಯ ಏಕತೆಯ ಕಲ್ಪನೆ ದುರ್ಬಲಗೊಳ್ಳುತ್ತದೆ' ಎಂದು ಬಿಜೆಪಿಯ ಇನ್ನೊಬ್ಬ ವಕ್ತಾರ ಪ್ರದೀಪ್ ಭಂಡಾರಿ ಹೇಳಿದ್ದಾರೆ.

ಎಸ್‌ಐಆರ್‌ಗೆ ಅಡ್ಡಿ 31 ಜನರ ವಿರುದ್ಧ ಆರೋಪಪಟ್ಟಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಮಾಲ್ಡಾದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ನಿರತರಾಗಿದ್ದ ನ್ಯಾಯಾಂಗ ಅಧಿಕಾರಿಗಳನ್ನು ಅಕ್ರಮವಾಗಿ ಕೂಡಿ ಹಾಕಿದ್ದ ಮತ್ತು ರಸ್ತೆ ತಡೆ ನಡೆಸಿರುವ ಆರೋಪಗಳಿಗೆ ಸಂಬಂಧಿಸಿದ ನಾಲ್ಕು ಪ್ರತ್ಯೇಕ ಪ್ರಕರಣಗಳ ಕುರಿತು ಸಲ್ಲಿಸಿರುವ ದೋಷಾರೋಪ ಪಟ್ಟಿಗಳಲ್ಲಿ ರಾಷ್ಟ್ರೀಯ ತನಿಖಾ ದಳ(ಎನ್‌ಐಎ) 31 ಜನರ ಹೆಸರನ್ನು ಉಲ್ಲೇಖಿಸಿದೆ.



ವಿಧಾನಸಭೆ ಚುನಾವಣೆಗೂ ಮುನ್ನ ನಡೆದಿದ್ದ ಈ ಘಟನೆಯ ಕುರಿತು ಹಲವು ಸಾಕ್ಷಿಗಳ ವಿಚಾರಣೆ ಹಾಗೂ ಡಿಜಿಟಲ್/ತಾಂತ್ರಿಕ, ಲಿಖಿತ ಮತ್ತು ಮೌಖಿಕ ಸಾಕ್ಷ್ಯಗಳ ಆಧಾರದಲ್ಲಿ ಕೋಲ್ಕತ್ತದಲ್ಲಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ.

'ದೋಷಾರೋಪ ಪಟ್ಟಿಯಲ್ಲಿ ಹೆಸರು ಉಲ್ಲೇಖವಾಗಿರುವ ಪ್ರತಿಯೊಬ್ಬರು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಅವರಿಂದ ಚುನಾವಣಾ ಕಾರ್ಯ ಮತ್ತು ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಯಾಗಿದೆ' ಎಂದು ಎನ್‌ಐಎ ತಿಳಿಸಿದೆ.

'ಸಾಂವಿಧಾನಿಕ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡುವ ಪಿತೂರಿ ಮತ್ತು ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇತರ ಆರೋಪಿಗಳ ಪತ್ತೆಗೂ ತನಿಖೆ ಮುಂದುವರಿದಿದೆ' ಎಂದು ಎನ್‌ಐಎ ಹೇಳಿದೆ.

ಪ್ರಕರಣಗಳ ತನಿಖೆಯನ್ನು ಎನ್‌ಐಎಗೆ ವಹಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಚಹಾ ತೋಟ

ಪಿಟಿಐ ಚಿತ್ರ



ಅಸ್ಸಾಂನ ಗೋಲಾಘಾಟ್‌ನಲ್ಲಿರುವ ಚಹಾ ತೋಟವೊಂದರಲ್ಲಿ ಕಾರ್ಮಿಕರು ಸಾಲಾಗಿ ಸಾಗಿದ ದೃಶ್ಯ ಮಂಗಳವಾರ ಕಂಡುಬಂತು

ಗ್ರಾಮಸ್ಥರಿಗೆ 'ಕಟ್ ಮನಿ' ವಾಪಸು

ಮಾಥಾಭಾಂಗ/ನಾಮಖಾನಾ (ಪಶ್ಚಿಮ ಬಂಗಾಳ) (ಪಿಟಿಐ): ಈ ಹಿಂದಿನ ಟಿಎಂಸಿ ನೇತೃತ್ವದ ಸರ್ಕಾರದ ಆಡಳಿತದ ಅವಧಿಯಲ್ಲಿ ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಸ್ಥಳೀಯ ಗೂಂಡಾಗಳಿಗೆ ನೀಡಲಾಗುತ್ತಿತ್ತು ಎನ್ನಲಾದ 'ಕಟ್ ಮನಿ'ಯನ್ನು-(ಲಂಚ) ಪಶ್ಚಿಮ ಬಂಗಾಳದ ಕೂಚ್ ಬೆಹಾರ್ ಮತ್ತು ದಕ್ಷಿಣ 24 ಪರಗಣ ಜಿಲ್ಲೆಯ ಕೆಲ ಗ್ರಾಮಗಳ ಜನರಿಗೆ ವಾಪಸು ನೀಡಲಾಗಿದೆ.

ಟಿಎಂಸಿ ಜೊತೆ ನಂಟಿರುವ ಸ್ಥಳೀಯ ಗೂಂಡಾಗಳು ಸಂಗ್ರಹಿಸುತ್ತಿದ್ದರು ಎನ್ನಲಾದ 'ಕಟ್ ಮನಿ'ಯನ್ನು ವಾಪಸು ಕೊಡಬೇಕು ಎಂಬ ಕೂಗು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಬಲವಾಗಿ ಕೇಳಿಬರುತ್ತಿದೆ. ಈಗ, ದುಷ್ಕರ್ಮಿಗಳು ಕೆಲ ಗ್ರಾಮಸ್ಥರಿಗೆ ಹಣ ಹಿಂದಿರುಗಿಸಿದ್ದಾರೆ ಎನ್ನಲಾಗಿದೆ.

ಮಾಥಾಭಾಂಗ ಪಟ್ಟಣದ ಸುಭಾಷ್‌ಪಲ್ಲಿ ಪ್ರದೇಶದಲ್ಲಿ ವಸತಿ ಯೋಜನೆಯಡಿ ಧನಸಹಾಯ ಪಡೆಯುವುದಕ್ಕಾಗಿ ಫಲಾನುಭವಿಗಳು 'ಕಟ್ ಮನಿ' ನೀಡಿದ್ದರು. ಈ ಪೈಕಿ 14 ಜನರಿಗೆ ದುಷ್ಕರ್ಮಿಗಳು ಹಣ ವಾಪಸು ನೀಡಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

'ಕೆಲವರು 'ಕಟ್ ಮನಿ' ವಾಪಸು ಪಡೆದ ಬಳಿಕ ಸ್ಥಳೀಯ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿದ್ದಾರೆ' ಎಂದು ಬಿಜೆಪಿಯ ಸ್ಥಳೀಯ ಮುಖಂಡರೊಬ್ಬರು ತಿಳಿಸಿದ್ದಾರೆ.

'2021ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಟಿಎಂಸಿ ಗೆದ್ದು ಅಧಿಕಾರಕ್ಕೆ ಬಂತು. ಆಗ, ವಸತಿ ಯೋಜನೆಯಡಿ ಧನಸಹಾಯ ಪಡೆಯಲು ಅಥವಾ ಜಮೀನು ಇಲ್ಲವೇ ಮನೆಗಳ ಖರೀದಿ/ಮಾರಾಟಕ್ಕೆ, ವ್ಯವಹಾರ ಮಾಡುವುದಕ್ಕಾಗಿ ಸ್ಥಳೀಯ ಗೂಂಡಾಗಳಿಗೆ 'ಕಟ್ ಮನಿ' ನೀಡಬೇಕಾಗಿತ್ತು' ಎಂದು ಗ್ರಾಮಸ್ಥರು ಹಾಗೂ ವ್ಯಾಪಾರಿಗಳು ಹೇಳಿದ್ದಾರೆ.

ಇನ್ನೊಂದೆಡೆ, 'ಗ್ರಾಮಸ್ಥರು ಅಥವಾ ವ್ಯಾಪಾರಿಗಳಿಂದ ಈ ರೀತಿ ಕಾನೂನು ಬಾಹಿರವಾಗಿ ಹಣ ಸಂಗ್ರಹಿಸುತ್ತಿದ್ದುದಕ್ಕೂ ಹಾಗೂ ಪಕ್ಷಕ್ಕೂ ಯಾವ ಸಂಬಂಧ ಇಲ್ಲ' ಎಂದು ಟಿಎಂಸಿಯ ಕೂಚ್ ಬೆಹಾರ್ ಜಿಲ್ಲಾ ಘಟಕದ ನಾಯಕರು ಹೇಳಿದ್ದಾರೆ.

ನಿವೃತ್ತ ಮೇಜರ್ ಜನರಲ್ ವಿ.ಕೆ. ಸಿಂಗ್ ವಿರುದ್ಧ ದಾಖಲಾದ ಪ್ರಕರಣ

'ಆರೋಪಿಗೆ ದಾಖಲೆ ನಿರಾಕರಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧಿಕೃತ ರಹಸ್ಯ ಕಾಯ್ದೆಯಡಿ (ಒಎಸ್‌ಎ) ಪ್ರಕರಣ ದಾಖಲಾದ ಮಾತ್ರಕ್ಕೆ ಆರೋಪಿಗೆ ದೋಷಾರೋಪ ಪಟ್ಟಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಲು ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ಅತುಲ್ ಎಸ್. ಚಾಂದೂರ್ಕರ್ ಅವರನ್ನೊಳಗೊಂಡ ಪೀಠವು, 'ಸಂವಿಧಾನದ 21ನೇ ವಿಧಿಯಡಿ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಅವಿಭಾಜ್ಯ ಅಂಗವಾಗಿರುವ ನ್ಯಾಯಸಮ್ಮತ ವಿಚಾರಣೆಯ ಹಕ್ಕು ಪ್ರತಿಯೊಬ್ಬರಿಗೂ ಇದೆ. ದೇಶದ ಭದ್ರತೆಯ ಕಾರಣ ನೀಡಿ ದಾಖಲೆಗಳನ್ನು ನೀಡಲು ನಿರಾಕರಿಸುವುದರಿಂದ ಆರೋಪಿಯ ನ್ಯಾಯಯುತ ವಿಚಾರಣೆಯ ಹಕ್ಕಿಗೆ ಗಂಭೀರ ಧಕ್ಕೆಯಾಗಲಿದೆ. ಹೀಗಾಗಿ, ರಹಸ್ಯವನ್ನು ಕಾಯ್ದುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಿಕೊಂಡು ಅಗತ್ಯ ದಾಖಲೆಗಳನ್ನು ಒದಗಿಸಬೇಕು' ಎಂದು ಸೂಚಿಸಿದೆ.

ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಪೊಲೀಸರು ತನಿಖೆ ಮುಗಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದಾಗ, ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್, ಸಾಕ್ಷಿಗಳ ಹೇಳಿಕೆಗಳು ಸೇರಿದಂತೆ ಮುಖ್ಯ ದಾಖಲೆಗಳ ಪ್ರತಿಗಳನ್ನು ಆರೋಪಿಗೆ ಉಚಿತವಾಗಿ ನೀಡಬೇಕು. ಸಾವಿರಾರು ಪುಟಗಳ ದಾಖಲೆಗಳಿದ್ದಾಗ ಮಾತ್ರ, ಆರೋಪಿಯು ನ್ಯಾಯಾಲಯಕ್ಕೆ ಬಂದು ಮೂಲ ದಾಖಲೆಗಳನ್ನು ಪರಿಶೀಲಿಸಲು ನ್ಯಾಯಾಧೀಶರು ಅನುಮತಿ ನೀಡಬಹುದು ಎಂದು ಹೇಳಿದೆ.

ಭಾರತೀಯ ಸೇನೆಯ ನಿವೃತ್ತ ಮೇಜರ್ ಜನರಲ್ ವಿ.ಕೆ. ಸಿಂಗ್ ಅವರು ಸಲ್ಲಿಸಿದ್ದ ಅರ್ಜಿ ಸಂಬಂಧ ಪೀಠವು ಈ ಆದೇಶ ನೀಡಿದೆ. ಸಿಂಗ್ ಅವರು 2000 ಮತ್ತು 2004ರ ನಡುವೆ ಸಂಪುಟ ಸಚಿವಾಲಯದ ಜಂಟಿ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದರು.

ಸಿಂಗ್ ಅವರು 2007ರಲ್ಲಿ ಬರೆದ 'ಇಂಡಿಯಾಸ್ ಎಕ್ಸ್‌ಟರ್ನಲ್ ಇಂಟೆಲಿಜೆನ್ಸ್– ಸೀಕ್ರೆಟ್ಸ್ ಆಫ್ ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್ (ರಾ)' ಎಂಬ ಪುಸ್ತಕದ ಕಾರಣಕ್ಕೆ ಅವರ ವಿರುದ್ಧ ಅಧಿಕೃತ ರಹಸ್ಯಗಳ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.

'ಈ ಪುಸ್ತಕವು ಅಧಿಕಾರಿಗಳ ಹೆಸರುಗಳು, ಸ್ಟೇಷನ್ ಕೋಡ್‌ಗಳು, ತಾಂತ್ರಿಕ ಯೋಜನೆಗಳು ಮತ್ತು ಗುಪ್ತಚರ ಮಾಹಿತಿ ಸೇರಿದಂತೆ ರಹಸ್ಯ ಮಾಹಿತಿಗಳನ್ನು ಬಹಿರಂಗಪಡಿಸಿದೆ. ಆ ಮೂಲಕ ರಾಷ್ಟ್ರೀಯ ಭದ್ರತೆಗೆ ಧಕ್ಕೆ ತಂದಿದೆ' ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು. ಪ್ರಕಾಶಕ ವಿವೇಕ್ ಗರ್ಗ್ ಅವರನ್ನೂ ಆರೋಪಿಯನ್ನಾಗಿ ಹೆಸರಿಸಲಾಗಿದೆ.

2008ರಲ್ಲಿ ರಹಸ್ಯ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಇಡಬೇಕೆಂಬ ಮನವಿಯೊಂದಿಗೆ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು. ಇದರಲ್ಲಿ ಉಲ್ಲೇಖಿಸಿರುವ ಕೆಲವು ದಾಖಲೆಗಳ ಪ್ರತಿಗಳನ್ನು ನೀಡುವಂತೆ ಕೋರಿ ಸಿಂಗ್ ಅವರು ಸಿಆರ್‌ಪಿಸಿ ಸೆಕ್ಷನ್ 207ರಡಿ ಅರ್ಜಿ ಸಲ್ಲಿಸಿದ್ದರು. ವಿಚಾರಣಾ ನ್ಯಾಯಾಲಯವು 2009ರಲ್ಲಿ ಈ ಅರ್ಜಿಯನ್ನು ಪುರಸ್ಕರಿಸಿದರೂ, ದೆಹಲಿ ಹೈಕೋರ್ಟ್ ಆ ಆದೇಶವನ್ನು ಮಾರ್ಪಡಿಸಿ, ಕೆಲ ದಾಖಲೆಗಳ ಪರಿಶೀಲನೆಗೆ ಮಾತ್ರ ಅನುಮತಿ ನೀಡಿತ್ತು.

ಅಗಸ್ತ್ಯಮಲೈ ಒತ್ತುವರಿ ತೆರವಿಗೆ ಆದೇಶ

ನವದೆಹಲಿ (ಪಿಟಿಐ): ತಮಿಳುನಾಡು ಮತ್ತು ಕೇರಳಂನಲ್ಲಿ ವ್ಯಾಪಿಸಿರುವ ಅಗಸ್ತ್ಯಮಲೈ ಜೀವವೈವಿಧ್ಯ ಸಂರಕ್ಷಿತ ಪ್ರದೇಶದಲ್ಲಿನ ಒತ್ತುವರಿ ತೆರವಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಒತ್ತುವರಿಯನ್ನು ಕಾಲಮಿತಿಯಲ್ಲಿ ತೆರವುಗೊಳಿಸುವ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ ನ್ಯಾಯಪೀಠವು, ಒತ್ತುವರಿದಾರರು ಎಂದು ಗುರುತಿಸಲಾದ 118 ಹಾಲಿ ಮತ್ತು ನಿವೃತ್ತ ಸರ್ಕಾರಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಮತ್ತು ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದೆ.

ಥೇಣಿ ಜಿಲ್ಲಾಧಿಕಾರಿಯವರು ಸಲ್ಲಿಸಿರುವ ವರದಿಯಲ್ಲಿ, ಜಿಲ್ಲೆಯಾದ್ಯಂತ ಇರುವ ಸಂರಕ್ಷಿತ ಅರಣ್ಯ ಪ್ರದೇಶದ 5.072 ಹೆಕ್ಟೇರ್ ಜಮೀನನ್ನು 4,601 ಮಂದಿ ಒತ್ತುವರಿ ಮಾಡಿಕೊಂಡಿದ್ದಾರೆ. ಅರಣ್ಯ ಜಮೀನಿನ ಒಳಗೆ ಅನುಮತಿ ಪಡೆಯದೆಯೇ 116 ಸರ್ಕಾರಿ ಮತ್ತು ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂಬ ಮಾಹಿತಿ ಇದೆ ಎಂದು ನ್ಯಾಯಪೀಠ ತಿಳಿಸಿದೆ.

ಬಳಿಕ ಅರ್ಜಿಯ ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಿದೆ.

ಅಧಿಕಾರ ಸ್ವೀಕರಿಸಿದ ಐವರು ನ್ಯಾಯಮೂರ್ತಿಗಳು

ಸುಪ್ರೀಂ ಕೋರ್ಟ್‌ನ ಐವರು ನೂತನ ನ್ಯಾಯಮೂರ್ತಿಗಳಿಗೆ ಭಾರತದ ಮುಖ್ಯ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಅವರು ಮಂಗಳವಾರ ಪ್ರಮಾಣವಚನ ಬೋಧಿಸಿದರು.

ಪಂಜಾಬ್ ಮತ್ತು ಹರಿಯಾಣ ಹೈ ಕೋರ್ಟ್ ಮುಖ್ಯನ್ಯಾಯಮೂರ್ತಿಯಾಗಿದ್ದ ಶೀಲ್ ನಾಗು, ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ, ಮಧ್ಯಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಸಚ್‌ದೇವ, ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಅರುಣ ಪಳ್ಳಿ ಹಾಗೂ ಹಿರಿಯ ವಕೀಲೆ ವೆಂಕಿತಾ ಸುಬ್ರಮಣಿ ಮೋಹನಾ ಅವರು ಅಧಿಕಾರ ಸ್ವೀಕರಿಸಿದರು.

ಇದರಿಂದಾಗಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 37ಕ್ಕೆ ಏರಿದ್ದು, ಇದು ಈವರೆಗಿನ ನ್ಯಾಯಮೂರ್ತಿಗಳ ಗರಿಷ್ಠ ಸಂಖ್ಯೆ ಎನಿಸಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಜೂನ್ 16 ಹಾಗೂ ಜೆ.ಕೆ. ಮಾಹೇಶ್ವರಿ ಅವರು 28ರಂದು ನಿವೃತ್ತರಾಗಲಿದ್ದಾರೆ.

ರಾಜೀನಾಮೆ ಮರುಪರಿಶೀಲಿಸಲು ಅಣ್ಣಾಮಲೈಗೆ ಬಿಜೆಪಿ ಮನವಿ

ಒಂದನೇ ಪುಟದಿಂದ...

ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ ಆಗಿರುವ ಅಣ್ಣಾಮಲೈ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗುವ ಸಾಧ್ಯತೆಯಿದೆ.

ಅಣ್ಣಾಮಲೈ ಅವರು ರಾಜೀನಾಮೆ ನೀಡಲು ನಿರ್ಧರಿಸಿರುವ ವಿಚಾರದ ಕುರಿತು ಚರ್ಚಿಸಲು ಶಾ ಮತ್ತು ನಿತಿನ್ ನವೀನ್ ಅವರು ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ನೈನಾರ್ ನಾಗೇಂದ್ರನ್ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದಾರೆ ಎಂದು ಹೇಳಲಾಗಿದೆ.

'ಅಣ್ಣಾಮಲೈ ಅವರು ಶಾ ಸೂಚನೆಯಂತೆ ನವದೆಹಲಿಯಲ್ಲೇ ಉಳಿದುಕೊಂಡಿದ್ದು, ಬುಧವಾರ ಮಧ್ಯಾಹ್ನ ಚೆನ್ನೈಗೆ ವಾಪಸಾಗುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

2025ರ ಏಪ್ರಿಲ್‌ನಲ್ಲಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ಬಳಿಕ ತಮಿಳುನಾಡಿನ ಬಿಜೆಪಿ ನಾಯಕರು ತಮ್ಮನ್ನು ಕಡೆಗಣಿಸಿದ್ದಕ್ಕೆ ಮತ್ತು ಎಐಎಡಿಎಂಕೆ ಜತೆಗಿನ ಸೀಟು ಹಂಚಿಕೆ ಮಾತುಕತೆ ರೀತಿ ಬಗ್ಗೆ ವರಿಷ್ಠರ ಮುಂದೆ ಅಣ್ಣಾಮಲೈ ಅಸಮಾಧಾನ ವ್ಯಕ್ತಪಡಿಸಿದರು ಎಂದು ಹೇಳಿವೆ.

ತೃಣಮೂಲ ಕಾಂಗ್ರೆಸ್ ಪಕ್ಷದಲ್ಲಿ ಬಂಡಾಯದ ವದಂತಿ

'ಹೆಚ್ಚಿನ ಶಾಸಕರು ಮಮತಾ ಜತೆಗಿದ್ದಾರೆ'

ಕೋಲ್ಕತ್ತ (ಪಿಟಿಐ): 'ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಹೆಚ್ಚಿನ ಶಾಸಕರು ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಜತೆಗಿದ್ದಾರೆ' ಎಂದು ಪಕ್ಷದ ಮುಖಂಡ ಶೋಭನ್ ದೇಬ್ ಚಟ್ಟೋಪಾಧ್ಯಾಯ ಮಂಗಳವಾರ ಹೇಳಿದ್ದಾರೆ.

ಟಿಎಂಸಿಯಲ್ಲಿ ಭಿನ್ನಮತ ತಲೆದೋರಿದೆ ಎಂಬ ಊಹಾಪೋಹಗಳ ನಡುವೆಯೇ ಅವರು ಈ ಹೇಳಿಕೆ ನೀಡಿದ್ದಾರೆ. ಪಕ್ಷದಿಂದ ಉಚ್ಚಾಟನೆಗೊಂಡಿರುವ ಶಾಸಕ ರುತಬ್ರತಾ ಬ್ಯಾನರ್ಜಿ ಅವರ ನೇತೃತ್ವದಲ್ಲಿ ಶಾಸಕರ ಒಂದು ಗುಂಪು ಬಂಡಾಯ ಏಳಲಿದೆ ಎಂಬ ವದಂತಿ ದಟ್ಟವಾಗಿ ಹರಡಿದೆ.

ಆಡಳಿತಾರೂಢ ಬಿಜೆಪಿಯು ವಿರೋಧ ಪಕ್ಷವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಸುತ್ತಿದೆ ಎಂದು ಶೋಭನ್ ಆರೋಪಿಸಿದರು. 'ಪಕ್ಷವನ್ನು ಒಡೆಯುವ ಪ್ರಯತ್ನ ಫಲಿಸದು. ಟಿಎಂಸಿಯು ಒಗ್ಗಟ್ಟಾಗಿ ಉಳಿದಿದೆ' ಎಂದು ಒತ್ತಿ ಹೇಳಿದರು.

ರುತಬ್ರತಾ ನೇತೃತ್ವದಲ್ಲಿ ಶಾಸಕರ ಒಂದು ಗುಂಪು ಕೋಲ್ಕತ್ತದ ಹೋಟೆಲ್ ಮತ್ತು ಎಂಎಲ್‌ಎ ಹಾಸ್ಟೆಲ್‌ನಲ್ಲಿ ಸರಣಿ ಸಭೆ ನಡೆಸಿದೆ ಎಂದು ವರದಿಯಾಗಿದೆ.

ಟಿಎಂಸಿಯು ಇಬ್ಭಾಗವಾಗಲಿದೆ ಎಂಬ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ಹೊರಬೀಳದಿದ್ದರೂ, ಬಂಡಾಯ ಗುಂಪಿನ ಜತೆ 20ರಿಂದ 50 ಶಾಸಕರು ಸಂಪರ್ಕದಲ್ಲಿದ್ದಾರೆ ಎನ್ನಲಾಗಿದೆ. 294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಯಲ್ಲಿ ಟಿಎಂಸಿ 80 ಸ್ಥಾನಗಳನ್ನು ಗೆದ್ದಿದೆ. ಆದರೆ, ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಇಬ್ಬರು ಶಾಸಕರನ್ನು (ರುತಬ್ರತಾ ಬ್ಯಾನರ್ಜಿ ಮತ್ತು ಸಂದೀಪನ್ ಸಹಾ) ಸೋಮವಾರ ಉಚ್ಚಾಟಿಸಲಾಗಿದೆ.

'ಆಡಳಿತ ಪಕ್ಷವು ಹಣದ ಹೊಳೆ ಹರಿಸುತ್ತಿರುವುದರಿಂದ ಟಿಎಂಸಿಯ ಕೆಲವು ಶಾಸಕರು ಬಂಡಾಯ ಏಳಲು ಪ್ರಯತ್ನಿಸುತ್ತಿದ್ದಾರೆ. ನಾವು ಎಲ್ಲ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ' ಎಂದು ಶೋಭನ್ ದೇಬ್ ಹೇಳಿದ್ದಾರೆ.

'ಆಡಳಿತ ಪಕ್ಷದ ಒತ್ತಡಕ್ಕೆ ಕೆಲವರು ಮಣಿಯಬಹುದು. ಆದರೆ ದೊಡ್ಡ ಮಟ್ಟದ ಬಂಡಾಯ ನಡೆಯುವ ಭಯವಿಲ್ಲ. ಬಹುಪಾಲು ಶಾಸಕರು ಮಮತಾ ಅವರ ಜತೆಗಿದ್ದು, ಈಗ ಇರುವ ನಾಯಕತ್ವವೇ ಪಕ್ಷದ ಮೇಲಿನ ಹಿಡಿತವನ್ನು ಮುಂದುವರಿಸಲಿದೆ' ಎಂದಿದ್ದಾರೆ.

ಟಿಎಂಸಿಯ ಹಲವು ನಾಯಕರು ಮತ್ತು ಶಾಸಕರಲ್ಲಿ ಅತೃಪ್ತಿ ಹೆಚ್ಚುತ್ತಿದ್ದು, ಪಕ್ಷವು ವಿಭಜನೆಯತ್ತ ಸಾಗುತ್ತಿದೆ. ಮಹಾರಾಷ್ಟ್ರದಲ್ಲಿ (ಶಿವಸೇನಾ ಇಬ್ಭಾಗ) ಆದಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ

ತಪಸ್ ರಾಯ್, ಬಿಜೆಪಿ ನಾಯಕ

ಕಾರ್ಯಕರ್ತರನ್ನು ಕೈಬಿಡಲ್ಲ: ಮಮತಾ

ಬಂಗಾಳದಲ್ಲಿ ಬಿಜೆಪಿ ಗೆಲುವಿನ ಬಳಿಕ ಟಿಎಂಸಿ ಕಾರ್ಯಕರ್ತರು ಹಾಗೂ ನಾಯಕರ ಮೇಲೆ ನಡೆದ ದಾಳಿಯನ್ನು ಖಂಡಿಸಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಮಂಗಳವಾರ ಕೋಲ್ಕತ್ತದಲ್ಲಿ ಧರಣಿ ನಡೆಸಿದರು.


ಮಮತಾ ಬ್ಯಾನರ್ಜಿ ಕೋಲ್ಕತ್ತದಲ್ಲಿ ಮಂಗಳವಾರ ಧರಣಿಯಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಈ ವೇಳೆ ಮಾತನಾಡಿದ ಅವರು, 'ಚುನಾವಣೆಯ ಸೋಲಿನ ಬಳಿಕ ಪಕ್ಷದ ಕಾರ್ಯಕರ್ತರನ್ನು ನಡುನೀರಿನಲ್ಲಿ ಕೈಬಿಡಲಾರೆ' ಎಂದು ಹೇಳಿದರು. ಬಿಜೆಪಿಯನ್ನು ವಿರೋಧಿಸುವ ಪಕ್ಷಗಳು ಶೀಘ್ರದಲ್ಲೇ ದೇಶದಾದ್ಯಂತ ಅಭಿಯಾನ ಆರಂಭಿಸಲಿವೆ ಎಂದರು.

'ಎಲ್ಲ ವಿರೋಧ ಪಕ್ಷಗಳು ಅತಿಶೀಘ್ರದಲ್ಲೇ ದೆಹಲಿಯಲ್ಲಿ ಸಭೆ ಸೇರಲಿವೆ. ದೇಶದಾದ್ಯಂತ ಬಿಜೆಪಿ ವಿರುದ್ಧ ಕೈಗೊಳ್ಳಲಿರುವ ಅಭಿಯಾನದ ಬಗ್ಗೆ ಅಲ್ಲಿ ನಿರ್ಧಾರ ತೆಗೆದುಕೊಳ್ಳಲಿದ್ದೇವೆ' ಎಂದು ಹೇಳಿದರು. ಮುಂದಿನ ವಾರ ನಡೆಯಲಿರುವ 'ಇಂಡಿಯಾ' ಮೈತ್ರಿಕೂಟದ ಸಭೆಯನ್ನು ಉಲ್ಲೇಖಿಸಿ ಅವರು ಈ ಮಾತು ಹೇಳಿದ್ದಾರೆ.

ಸ್ಪೀಕರ್‌ಗೆ ಪತ್ರ

ಶೋಭನ್ ದೇಬ್ ಚಟ್ಟೋಪಾಧ್ಯಾಯ ಅವರನ್ನು ವಿರೋಧ ಪಕ್ಷದ ನಾಯಕರಾಗಿ ನೇಮಿಸಲು ಪಕ್ಷವು ನಿರ್ಧರಿಸಿರುವುದರ ಬಗ್ಗೆ ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಸ್ಪೀಕರ್ ರತೀಂದ್ರ ಬೋಸ್ ಅವರಿಗೆ ಮತ್ತೊಂದು ಪತ್ರ ಬರೆದಿದ್ದಾರೆ.

'ಪತ್ರವನ್ನು ಸ್ವೀಕರಿಸಲು ಬೋಸ್ ಅವರ ಕಚೇರಿಯ ಕಾರ್ಯದರ್ಶಿ ನಿರಾಕರಿಸಿದ್ದಾರೆ. ಆ ಬಳಿಕ ಸ್ಪೀಕರ್ ಅವರಿಗೆ ಇ–ಮೇಲ್ ಮೂಲಕ ಪತ್ರ ಕಳುಹಿಸಲಾಗಿದೆ' ಎಂದು ಟಿಎಂಸಿ ಮೂಲಗಳು ಖಚಿತಪಡಿಸಿವೆ.

'ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ದೇಶದ ಸಾರ್ವಭೌಮತೆಯೇ ಮಿಗಿಲು'

ಡ್ರಗ್ಸ್ ಜಾಲ: ವ್ಯಕ್ತಿ ಜಾಮೀನು ರದ್ದು

ನವದೆಹಲಿ (ಪಿಟಿಐ): ಎಲ್ಲ ಪ್ರಕರಣಗಳಲ್ಲಿ ಅದರಲ್ಲೂ ವಿಶೇಷವಾಗಿ ಮಾದಕ ವಸ್ತುಗಳನ್ನು ಒಳಗೊಂಡ ಪ್ರಕರಣಗಳಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕಿಂತ ದೇಶದ ಸಾರ್ವಭೌಮತೆಯೇ ಮುಖ್ಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

'ಡ್ರಗ್ಸ್ ಸಾಗಣೆ ಅಥವಾ ಬೇರೆ ರೀತಿಯಲ್ಲಿ ದೇಶದ ವಿರುದ್ಧ ಯುದ್ಧ ಸಾರಿದಾಗ ಅದು ರಾಷ್ಟ್ರದ ಆರ್ಥಿಕತೆ ಮತ್ತು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ದೇಶದ ಸಾರ್ವಭೌಮತೆಯಲ್ಲಿ ಯಾವುದೇ ಮುಖ್ಯ ಎಂಬ ಸಂಘರ್ಷದ ಅಗತ್ಯ ಇದೆಯೇ? ಒಂದು ವೇಳೆ, ಅಂತಹ ಸಂಘರ್ಷ ಕಂಡುಬಂದಲ್ಲಿ, ನಿಸ್ಸಂದೇಹವಾಗಿ ರಾಷ್ಟ್ರದ ಸಾರ್ವಭೌಮತೆಯೇ ಆಗ ಮುಖ್ಯವಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸೆರೆವಾಸದಲ್ಲಿದ್ದರೂ ಮೊಬೈಲ್ ಫೋನ್‌ಗಳನ್ನು ಬಳಸಿಕೊಂಡು ಡ್ರಗ್ಸ್ ಕಳ್ಳಸಾಗಣೆ ಜಾಲ ನಡೆಸುತ್ತಿದ್ದ ಆರೋಪ ಹೊತ್ತ ವ್ಯಕ್ತಿಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿ ಆದೇಶಿಸಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಎನ್.ಕೋಟೀಶ್ವರ್ ಸಿಂಗ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ವ್ಯಕ್ತಿಯು ಒಂದು ವರ್ಷ ಏಳು ತಿಂಗಳಿಂದ ಸೆರೆವಾಸ ಅನುಭವಿಸುತ್ತಿದ್ದು, ಈಗ ಎದುರಿಸುತ್ತಿರುವ ಆರೋಪಗಳು ಸಾಬೀತಾದಲ್ಲಿ ಆತನಿಗೆ ಗರಿಷ್ಠ 20 ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಆತನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ಪರಿಗಣಿಸಿ ಸಂವಿಧಾನದ 21ನೇ ವಿಧಿ ಅನ್ವಯ ಆತನಿಗೆ ಜಾಮೀನು ನೀಡಬೇಕು ಎಂದು ಹೇಳಲು ಸಾಧ್ಯ ಇಲ್ಲ' ಎಂದು ಪೀಠ ಹೇಳಿದೆ.

'ಅನೇಕ ಪ್ರಕರಣಗಳಲ್ಲಿ ದೀರ್ಘಕಾಲದ ಸೆರೆವಾಸ ಅನುಭವಿಸಿದ ಕಾರಣಕ್ಕೆ ಆರೋಪಿಗಳಿಗೆ ಜಾಮೀನು ನೀಡಿದ ಉದಾಹರಣೆಗಳಿವೆ. ಆದರೆ, ಎಲ್ಲ ಪ್ರಕರಣಗಳಲ್ಲಿಯೂ ಸಂವಿಧಾನದ 21ನೇ ವಿಧಿ ಅನ್ವಯಿಸಿ, ಜಾಮೀನು ನೀಡಲು ಸಾಧ್ಯ ಇಲ್ಲ' ಎಂದು ಪೀಠ ಸ್ಪಷ್ಟಪಡಿಸಿದೆ.

ಕ್ಯಾನ್ಸರ್‌ಕೋಶಗಳ ಪತ್ತೆಗೆ ಎಐ ಅಸ್ತ್ರ

ದಿನವಿಡೀ ನೂರಾರು ಬಯಾಪ್ಸಿ ವರದಿಗಳನ್ನು ಪರಿಶೀಲಿಸುವ ರೋಗಶಾಸ್ತ್ರಜ್ಞರಿಗೆ ಈ ನೂತನ ತಂತ್ರಜ್ಞಾನ ದೊಡ್ಡ ವರವಾಗಲಿದೆ.



• ಸುಧೀರ ಎಚ್.ಎಸ್.

ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚುವುದು ಮತ್ತು ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವುದು ವೈದ್ಯಕೀಯ ಲೋಕದ ದೊಡ್ಡ ಸವಾಲುಗಳಲ್ಲಿ ಒಂದು.

ಸಾಮಾನ್ಯವಾಗಿ ಕ್ಯಾನ್ಸರ್‌ಕೋಶಗಳನ್ನು ಪತ್ತೆಹಚ್ಚಲು ರೋಗಿಯ ದೇಹದ ಅಂಗಾಂಶಗಳ ಬಯಾಪ್ಸಿಯನ್ನು ಸೂಕ್ಷ್ಮ ದರ್ಶಕದ ಅಡಿಯಲ್ಲಿ ಪರೀಕ್ಷಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವೈದ್ಯರು ನೂರಾರು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಿರುವುದರಿಂದ ತೀವ್ರ ದಣಿವು ಮತ್ತು ಮಾನಸಿಕ ಒತ್ತಡಕ್ಕೆ ಒಳಗಾಗುವುದು ಸಹಜ. ಇಂತಹ ಸಂದರ್ಭಗಳಲ್ಲಿ ಸಣ್ಣ ತಪ್ಪುಗಳಾಗುವ ಸಾಧ್ಯತೆಯೂ ಇರುತ್ತದೆ. ಆದರೆ ಈಗ ಭಾರತ ಮತ್ತು ಬ್ರಿಟನ್ ದೇಶಗಳ ವಿಜ್ಞಾನಿಗಳ ಜಂಟಿ ತಂಡವೊಂದು ವೈದ್ಯರಿಗೆ ನೆರವಾಗಬಲ್ಲ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ (ಎ.ಐ.) ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ.

‘ಹಿಸ್ಟೋ-ಯೂನೆಟ್’ (HISTO-UNet) ಹೆಸರಿನ ಈ ಹೊಸ ಕಂಪ್ಯೂಟರ್ ಪ್ರೋಗ್ರಾಂ, ಕ್ಯಾನ್ಸರ್ ಗಡ್ಡೆಗಳು ಮತ್ತು ಗ್ರಂಥಿಗಳ ನಿಖರವಾದ ಆಕಾರವನ್ನು ಗುರುತಿಸುವುದಲ್ಲದೆ, ತನಗೆ ಗೊಂದಲವಿರುವ ಜಾಗಗಳನ್ನು ಸ್ವತಃ ಎದ್ದು ಕಾಣುವಂತೆ ಗುರುತು ಮಾಡಿ ವೈದ್ಯರನ್ನು ಎಚ್ಚರಿಸುತ್ತದೆ.

ಕರ್ನಾಟಕದಾದ್ಯಂತ ಪ್ರಮುಖ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ದಿನನಿತ್ಯ ಸಾವಿರಾರು ರೋಗಿಗಳು ತಪಾಸಣೆಗೆ ಬರುತ್ತಾರೆ. ಅಲ್ಲಿನ ಪ್ರಯೋಗಾಲಯಗಳಲ್ಲಿ ದಣಿವರಿಯದೆ ಕೆಲಸ ಮಾಡುವ ರೋಗಶಾಸ್ತ್ರಜ್ಞರಿಗೆ (ಪೆಥಾಲಜಿಸ್ಟ್) ಈ ತಂತ್ರಜ್ಞಾನವು ಒಂದು ‘ಸ್ಮಾರ್ಟ್ ಸಹಾಯಕ’ನಂತೆ ಕೆಲಸ ಮಾಡಬಲ್ಲದು. ಈ ಸಂಶೋಧನಾ ತಂಡದಲ್ಲಿ ಭಾರತದ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳಾದ ಭೋಪಾಲ್‌ನ ಐಐಎಸ್‌ಇಆರ್ (IISER), ಏಮ್ಸ್ (AIIMS), ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜು ಹಾಗೂ ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಭಾಗವಹಿಸಿದ್ದಾರೆ.

ಹಾಗಾದರೆ ಈ ಹಿಸ್ಟೋ-ಯೂನೆಟ್ ಹಿಂದಿನ ತಂತ್ರಜ್ಞಾನ ಹೇಗೆ ಕೆಲಸ ಮಾಡುತ್ತದೆ? ವಿಜ್ಞಾನಿಗಳು ಇದನ್ನು ಮಾನವನ ಮಿದುಳು ಕಲಿಯುವ ಮಾದರಿಯನ್ನು ಆಧರಿಸಿದ ನರಮಂಡಲ ತರಹದ ಜಾಲ (ನ್ಯೂರಲ್ ನೆಟ್‌ವರ್ಕ್) ಬಳಸಿ ರೂಪಿಸಿದ್ದಾರೆ. ಈ ಹಿಂದಿನ ತಂತ್ರಜ್ಞಾನಗಳು ಕೇವಲ ಚಿತ್ರಗಳನ್ನು ನೋಡಿ ಒಂದು ಅಂದಾಜಿನ ಮೇಲೆ ಕ್ಯಾನ್ಸರ್ ಕೋಶಗಳ ರೂಪುರೇಷೆಯನ್ನು ಗುರುತಿಸುತ್ತಿದ್ದವು. ಇದರಿಂದಾಗಿ ಅಂಗಾಂಶಗಳ ನೈಜ ಜೈವಿಕ ಆಕಾರಗಳು ಕಂಪ್ಯೂಟರ್ ಪರದೆಯ ಮೇಲೆ ಕತ್ತರಿಸಿದಂತೆ ಅಥವಾ ಕೆಲವೊಮ್ಮೆ ತಪ್ಪಾಗಿ ಕಾಣಿಸುತ್ತಿದ್ದವು. ಆದರೆ ನಮ್ಮ ವಿಜ್ಞಾನಿಗಳು ಈ ಹೊಸ ಮಾದರಿಗೆ ಕೆಲವು ಕಟ್ಟುನಿಟ್ಟಾದ ಗಣಿತದ ನಿಯಮಗಳನ್ನು ಅಳವಡಿಸಿದ್ದಾರೆ. ಈ ನಿಯಮಗಳು ಕಂಪ್ಯೂಟರ್ ಕಡ್ಡಾಯವಾಗಿ ಅಂಗಾಂಶದ ಮೂಲ ರಚನೆ ಮತ್ತು ಅದರ ಕೇಂದ್ರಭಾಗವನ್ನು ನಿಖರವಾಗಿ ಗುರುತಿಸುವಂತೆ ಮಾಡುತ್ತವೆ. ಪರಿಣಾಮವಾಗಿ ಕ್ಯಾನ್ಸರ್ ಕೋಶಗಳ ರೂಪುರೇಷೆಯು ಸ್ಪಷ್ಟವಾಗಿ ಮತ್ತು ನೈಜ ಆಕಾರದಲ್ಲಿ ಮೂಡಿಬರುತ್ತದೆ.

ಈ ತಂತ್ರಜ್ಞಾನದ ಅತ್ಯಂತ ವೈಶಿಷ್ಟ್ಯವೆಂದರೆ ಅದು ತನಗೆ ತಾನೇ ತಪ್ಪುಗಳನ್ನು ಹುಡುಕಿಕೊಳ್ಳುವುದು ಮತ್ತು ಗೊಂದಲಗಳಿದ್ದರೆ ಮುಕ್ತವಾಗಿ ಒಪ್ಪಿಕೊಳ್ಳುವುದು.

ವೈದ್ಯಕೀಯ ಕ್ಷೇತ್ರದಲ್ಲಿ ಶೇ 100ರಷ್ಟು ನಿಖರತೆ ಅತ್ಯಗತ್ಯ.ಹಿಂದಿನ ಕಂಪ್ಯೂಟರ್ ಮಾದರಿಗಳು ತಮಗೆ ಗೊಂದಲವಿದ್ದರೂ ಏನೋ ಒಂದು ಅಂದಾಜು ಉತ್ತರವನ್ನು ನೀಡಿ ಸುಮ್ಮನಾಗುತ್ತಿದ್ದವು. ಇದು ರೋಗಿಗಳ ಆರೋಗ್ಯಕ್ಕೆ ಅಪಾಯಕಾರಿಯಾಗಬಲ್ಲದು. ಇದನ್ನು ಮನಗಂಡ ಸಂಶೋಧಕರು ‘ಡ್ಯುಯಲ್ ಅನ್‌ಸರ್ಟೇನ್ಟಿ ಕ್ವಾಂಟಿಫಿಕೇಶನ್’, ಎಂದರೆ ದ್ವಿಗುಣ ಅನಿಶ್ಚಿತತೆಯ ಅಳತೆ ಎಂಬ ಪ್ರಕ್ರಿಯೆಯನ್ನು ಇದರಲ್ಲಿ ಅಳವಡಿಸಿದ್ದಾರೆ. ಈ ವ್ಯವಸ್ಥೆಯು ಕೇವಲ ಒಂದು ಬಾರಿ ಚಿತ್ರವನ್ನು ನೋಡಿ ತೀರ್ಮಾನಕ್ಕೆ ಬರುವುದಿಲ್ಲ; ಬದಲಿಗೆ ಒಂದೇ ಚಿತ್ರವನ್ನು ವಿಭಿನ್ನ ಕೋನಗಳಲ್ಲಿ ಬರೋಬ್ಬರಿ ಇಪ್ಪತ್ತೈದು ಬಾರಿ ಸೂಕ್ಷ್ಮವಾಗಿ ಪರಿಶೀಲಿಸುತ್ತದೆ.

ಹೀಗೆ ಹಲವು ಬಾರಿ ಪರಿಶೀಲಿಸುವಾಗ ಕಂಪ್ಯೂಟರ್ ನೀಡುವ ಉತ್ತರಗಳಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ, ತಂತ್ರಜ್ಞಾನವು ಎರಡು ರೀತಿಯ ಗೊಂದಲಗಳನ್ನು ಗುರುತಿಸುತ್ತದೆ. ಮೊದಲನೆಯದಾಗಿ, ಪ್ರಯೋಗಾಲಯದಲ್ಲಿ ರಾಸಾಯನಿಕ ಬಣ್ಣಗಳನ್ನು ಬಳಸುವಾಗ ಚಿತ್ರದಲ್ಲಿ ಉಂಟಾಗುವ ಮಸುಕುತನ. ಎರಡನೆಯದಾಗಿ, ಸ್ವತಃ ಕಂಪ್ಯೂಟರ್‌ಗೆ ಆ ಚಿತ್ರವನ್ನು ಅರ್ಥಮಾಡಿಕೊಳ್ಳಲು ಇರುವ ತರಬೇತಿಯ ಕೊರತೆ.

ಈ ಎರಡೂ ಗೊಂದಲದ ಜಾಗಗಳನ್ನು ತಂತ್ರಜ್ಞಾನವು ಪ್ರತ್ಯೇಕವಾಗಿ ಗುರುತಿಸಿ, ‘ಇಲ್ಲಿ ನನಗೆ ಪೂರ್ಣ ನಂಬಿಕೆಯಿಲ್ಲ, ಒಮ್ಮೆ ನೀವೇ ದೃಢಪಡಿಸಿ’ ಎಂದು ವೈದ್ಯರಿಗೆ ಎಚ್ಚರಿಕೆಯ ಸಂದೇಶ ನೀಡುತ್ತದೆ. ಪ್ರಸ್ತುತ ಲಭ್ಯವಿರುವ ಯಾವುದೇ ತಂತ್ರಜ್ಞಾನದಲ್ಲೂ ಇವೆರಡೂ ವೈಶಿಷ್ಟ್ಯಗಳು ಒಟ್ಟಿಗೆ ಇರಲಿಲ್ಲ. ಮೂರು ಪ್ರಮುಖ ವೈದ್ಯಕೀಯ ದತ್ತಾಂಶಗಳ ಮೇಲೆ ನಡೆಸಿದ ಕಠಿಣ ಪರೀಕ್ಷೆಗಳಲ್ಲಿ ಹಿಸ್ಟೋ-ಯೂನೆಟ್ ಹಳೆಯ ಎಲ್ಲಾ ಮಾದರಿಗಳಿಗಿಂತ ಹೆಚ್ಚು ನಿಖರ ಮತ್ತು ನಂಬಿಕಸ್ಥ ಫಲಿತಾಂಶವನ್ನು ನೀಡಿದೆ. ಆದರೆ ಚಿತ್ರವನ್ನು ಹಲವು ಬಾರಿ ಪ್ರಕ್ರಿಯೆಗೊಳಿಸಬೇಕಿರುವುದರಿಂದ ಇದು ಸಾಮಾನ್ಯ ಕಂಪ್ಯೂಟರ್‌ಗಳಿಗಿಂತ ಸ್ವಲ್ಪ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ ಅಷ್ಟೇ.

ನಮ್ಮ ನಗರಗಳ ದೊಡ್ಡ ಆಸ್ಪತ್ರೆಗಳಲ್ಲಿ ದಿನವಿಡೀ ನೂರಾರು ಬಯಾಪ್ಸಿ ವರದಿಗಳನ್ನು ಪರಿಶೀಲಿಸುವ ರೋಗಶಾಸ್ತ್ರಜ್ಞರಿಗೆ ಈ ತಂತ್ರಜ್ಞಾನ ದೊಡ್ಡ ವರವಾಗಲಿದೆ.

ಇಡೀ ಅಂಗಾಂಶದ ಚಿತ್ರವನ್ನು ಜಾಲಾಡುವ ಬದಲು, ಹಿಸ್ಟೋ-ಯೂನೆಟ್ ಗುರುತಿಸಿಕೊಡುವ ಅತ್ಯಂತ ಕ್ಲಿಷ್ಟಕರವಾದ ಮತ್ತು ಗೊಂದಲದ ಜಾಗಗಳನ್ನು ಮಾತ್ರ ವೈದ್ಯರು ತಪಾಸಣೆ ಮಾಡಿದರೆ ಸಾಕಾಗುತ್ತದೆ. ಇದರಿಂದ ವೈದ್ಯರ ಅಮೂಲ್ಯ ಸಮಯ ಉಳಿತಾಯವಾಗುವುದಲ್ಲದೆ, ರೋಗಿಗಳಿಗೆ ಅತ್ಯಂತ ವೇಗವಾಗಿ ಮತ್ತು ಸುರಕ್ಷಿತವಾಗಿ ನಿಖರವಾದ ವರದಿಗಳು ಸಿಗಲಿವೆ.

ಮುಂಬರುವ ದಿನಗಳಲ್ಲಿ ತನ್ಮೂಲಕ ಕ್ಯಾನ್ಸರ್‌ಗೆ ತಡವಿಲ್ಲದೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಆರಂಭಿಸಿ, ಲಕ್ಷಾಂತರ ಜನರ ಪ್ರಾಣ ಉಳಿಸಲು ಭಾರತೀಯ ಮೂಲದ ಈ ನೂತನ ತಂತ್ರಜ್ಞಾನ ನಾಂದಿ ಹಾಡಲಿದೆ. ❖

ಕ್ಯಾನ್ಸರ್-ಕೊಲೆಸ್ಟ್ರಾಲ್ ಮೈತ್ರಿಯ ಮುರಿದ ತಂತ್ರ!

• ಅಮೃತೇಶ್ವರಿ ಬಿ.

ದೇಹದ ಕೊಲೆಸ್ಟ್ರಾಲ್ ಕರಗಿಸಲು ಜನ ಒದ್ದಾಡುತ್ತಿರುವುದು ಈಗ ಸಾಮಾನ್ಯ ವಿಷಯ. ಆದರೆ ಅದು ಅಂದುಕೊಂಡಷ್ಟು ಸುಲಭದ ಮಾತಲ್ಲ! ಅದು ನಮ್ಮ ನಿಮ್ಮೆಲ್ಲರ ಕಥೆಯಾದರೆ. ನಮ್ಮ ಜೀವಕೋಶಗಳೊಳಗೆ ಸೂಕ್ಷ್ಮಮಟ್ಟದಲ್ಲಿ ಬೇರೆಯದೇ ಕಥೆ ಜರುಗುತ್ತಿದೆ ನೋಡಿ; ಅದುವೇ ಕ್ಯಾನ್ಸರ್‌ಕೋಶಗಳು ಕೊಲೆಸ್ಟ್ರಾಲ್‌ಗಾಗಿ ಬಯಕೆ ಹೊತ್ತು ಕುಳಿತಿವೆ ಎನ್ನುವುದು.

ಹೌದು, ಕ್ಯಾನ್ಸರ್ ರೋಗಿಗಳ ದೇಹದಲ್ಲಿ ಕ್ಯಾನ್ಸರ್ ಗಡ್ಡೆಗಳು ಬೆಳೆಯಲು ಕೊಲೆಸ್ಟ್ರಾಲ್ ಅನ್ನು ಬಳಸಿಕೊಳ್ಳಲು ಪಟ್ಟುಹಿಡಿದು ಕುಳಿತಿರುತ್ತವೆಯಂತೆ. ಕೆಲವು ಗಡ್ಡೆಗಳಂತು ತಮಗೆ ಎಷ್ಟು ಸಾಧ್ಯವೋ ಅಷ್ಟೂ, ಆರೋಗ್ಯಕರ ಕೋಶಗಳಿಗಿಂತಲೂ ಹೆಚ್ಚಿನ ಕೊಲೆಸ್ಟ್ರಾಲ್ ಅನ್ನು ಬಳಸಿಕೊಳ್ಳುವ ದಾಹ ಪಡೆದಿರುತ್ತವಂತೆ!

ಆದರೆ ಮೊನ್ನೆ, ಸ್ಯಾನ್‌ಫೋರ್ಡ್ ಬರ್ನ್ಹ್ಯಾಮ್ ಪ್ರೆಬೀಸ್ ಸಂಸ್ಥೆಯ ವಿಜ್ಞಾನಿಗಳು ಈ ಕ್ಯಾನ್ಸರ್‌ಗಡ್ಡೆಗಳ ಈ ಕೊಲೆಸ್ಟ್ರಾಲ್ ಬಯಕೆಯನ್ನು ಪತನಗೊಳಿಸಿ, ಅದರ ಕಥೆಯನ್ನು ಬದಲಿಸಿರುವ ವರದಿಯು ‘ಸೈನ್ಸ್ ಅಡ್ವಾನ್ಸಸ್ ಪತ್ರಿಕೆ’ಯಲ್ಲಿ ವರದಿ ಆಗಿದೆ.

ಈ ಕ್ರಿಯೆಯಲ್ಲಿ ಕಿಣ್ವಗಳು ತೊಡಗಿವೆ ಎನ್ನುವುದು ಈಗಾಗಲೇ ತಿಳಿದಿದ್ದರಿಂದ ಅವರು ಆ ಕಿಣ್ವಗಳಾದ ‘ಫಾಸ್ಫೋಇನ್ನೋಸಿಟೈಡ್ಸ್’ ಮತ್ತು ‘ಕೈನೇಸ್ ಕಿಣ್ವಗಳು’ (PI5P4Ks)ಅನ್ನು ಅಧ್ಯಯನ ಮಾಡಿದ್ದಾರೆ. ನಮ್ಮ ದೇಹದಲ್ಲಿರುವ ಕೊಲೆಸ್ಟ್ರಾಲ್, ಎಲ್ಲ ಜೀವಕೋಶಗಳ ಸುತ್ತ ಚಲಿಸಬೇಕಾದರೂ ಈ ಕಿಣ್ವಗಳ ಅಗತ್ಯವಿದೆ. ನಮ್ಮ ದೇಹದಲ್ಲಿರುವ ಪ್ರತಿ ಅಂಗಗಳಿಗೂ ಪ್ರತಿ ಕಾರ್ಯಗಳಿಗೂ ಈ ಕೊಲೆಸ್ಟರಾಲಿನ ಅವಶ್ಯಕತೆಯಿದೆ. ಹಾಗಾಗಿ ಕೊಲೆಸ್ಟ್ರಾಲ್ ನಮ್ಮ ದೇಹದ ತುಂಬೆಲ್ಲಾ ಚಲಿಸುತ್ತಲೇ ಇರಬೇಕು. ಆದರೆ ಈ ಕಿಣ್ವಗಳಿಲ್ಲದೇ ಕೊಲೆಸ್ಟ್ರಾಲ್ ಚಲಿಸುವುದಿಲ್ಲ.

ಇನ್ನು ನಮ್ಮ ದೇಹದಲ್ಲಿ ಸ್ವಾಭಾವಿಕವಾಗಿಯೇ ರಕ್ಷಾಕವಚವಾಗಿ ಕೆಲವು ಜೀನ್‌ಗಳಿವೆ. ಅಂತೆಯೇ ಕ್ಯಾನ್ಸರ್‌ಕೋಶಗಳನ್ನು ಅಡಗಿಸಬಲ್ಲ ಜೀನೊಂದಿದೆ. ಅದುವೇ ‘ಟಿಪಿ53’ (TP53). ಇದನ್ನು ‘ಜೀನೋಮು ರಕ್ಷಕರು’ ಎನ್ನುತ್ತೇವೆ. ಇವು ಪ್ರತಿ ಜೀವಕೋಶಗಳಲ್ಲಿಯೂ ಇರುತ್ತವೆ. ಕ್ಯಾನ್ಸರ್‌ಗೆ ತುತ್ತಾಗಿರುವ ಕೋಶಗಳಲ್ಲಿಯೂ ಇರುತ್ತವೆ. ಆದರೆ, ಕ್ಯಾನ್ಸರ್ ಗಡ್ಡೆಗಳಲ್ಲಿರುವ ಈ ಜೀನುಗಳು ಮ್ಯುಟೇಷನ್ ಅಥವಾ ರೂಪಾಂತರಕ್ಕೆ ಒಳಗಾಗಿಬಿಡುತ್ತವೆ; ಮತ್ತು ಅವಕ್ಕೆ ಬೇಕಿರುವ ಕೊಲೆಸ್ಟ್ರಾಲ್ ಅನ್ನು ತಾವೇ ಉತ್ಪಾದಿಸಿಕೊಂಡು ಬಿಡುತ್ತವೆ. ಕೈನೇಸ್ ಕಿಣ್ವಗಳನ್ನು ಕೋಶಗಳಿಂದ ಡಿಲೀಟ್ ಮಾಡಿದರೆ ಕ್ಯಾನ್ಸರ್‌ಗಡ್ಡೆಗಳು ಬೆಳೆಯುವುದು ಅಸಾಧ್ಯ; ರೋಗಿಯೂ ಪ್ರತಿಶತ 100ರಷ್ಟು ಪ್ರಾಣಹಾನಿಯಿಂದ ಸುರಕ್ಷಿತ ಎನ್ನುವುದು ವಿಜ್ಞಾನಿಗಳಿಗೆ ಈಗಾಗಲೇ ತಿಳಿದಿತ್ತು. ಆದರೆ ಹೇಗೆ ಎಂದು ಅರ್ಥವಾಗಿರಲಿಲ್ಲ.



ಈ ಒಗಟನ್ನು ಬಿಡಿಸಿದ ವಿಜ್ಞಾನಿಗಳಿಗೆ, ಈ ಕಿಣ್ವಗಳು ಕೊಲೆಸ್ಟ್ರಾಲ್ ಅನ್ನು ಸಾಗಿಸುತ್ತಿದ್ದು, ಕ್ಯಾನ್ಸರ್ ಬೆಳವಣಿಗೆಯಲ್ಲಿ ಕೊಲೆಸ್ಟ್ರಾಲ್ ತೊಡಗಿಕೊಂಡಿರುವುದು ಗೊತ್ತಾಗಿದೆ. ಹಾಗಾಗಿ ಈ ಕಿಣ್ವವನ್ನೇ ಡಿಲೀಟ್ ಮಾಡಿಬಿಟ್ಟರೆ ಕ್ಯಾನ್ಸರ್‌ಗಡ್ಡೆಗಳಿಗೆ ಬೇಕಾಗಿರುವ ಕೊಲೆಸ್ಟ್ರಾಲ್ ದೊರಕುವುದಿಲ್ಲ ಎನ್ನುವುದು ಇವರ ಉಪಾಯ. ಅದಕ್ಕಾಗಿ ಈ ಕೊಲೆಸ್ಟ್ರಾಲ್ ಅನ್ನು ನಿಯಂತ್ರಿಸುವ ಕಿಣ್ವಗಳ ಹರಿವನ್ನು ನಿಯಂತ್ರಣದಲ್ಲಿಟ್ಟರೆ ಕೊಲೆಸ್ಟ್ರಾಲ್ ದಟ್ಟಣೆ ಉಂಟಾಗುತ್ತದೆ. ಅರ್ಥಾತ್, ಅವು ಚಲಿಸದೆ ಕೋಶಕೇಂದ್ರದ ಬಳಿಯಲ್ಲಿಯೇ ಉಳಿದಿರುತ್ತದೆ. ಕ್ಯಾನ್ಸರ್‌ಕೋಶಗಳ ಬೆಳವಣಿಗೆಗೆ ಸಿಗುವುದಿಲ್ಲ. ಆಗ ಅವುಗಳ ಬೆಳವಣಿಗೆಗೆ ಬ್ರೇಕ್ ಬೀಳುತ್ತದೆ!

ಮೊದಲು ಹೇಳಿದ ‘ಟಿಪಿ53’ (TP53) ರಕ್ಷಕಜೀನುಗಳು ಸುಮಾರು ಅರ್ಧದಷ್ಟು ಕ್ಯಾನ್ಸರ್‌ಕೋಶಗಳಲ್ಲಿ ರೂಪಾಂತರವಾಗಿಬಿಟ್ಟಿರುತ್ತವೆ. ಅರ್ಥಾತ್, ಅವುಗಳಿಗೆ ಬೇಕಾದ ಕೊಬ್ಬನ್ನು ಆ ಕೋಶಗಳೇ ಉತ್ಪಾದಿಸಿಕೊಳ್ಳುತ್ತವೆ. ಸ್ತನಕ್ಯಾನ್ಸರ್ ಕೋಶಗಳಲ್ಲಿ ಈ ರೂಪಾಂತರ ಇತರೆ ಕ್ಯಾನ್ಸರ್‌ಗಳಿಗಿಂತ ಸುಮಾರು ಪ್ರತಿಶತ 20-40ರಷ್ಟು ಹೆಚ್ಚು ಇರುತ್ತವೆಯಂತೆ. ಹಾಗಾಗಿ ಸ್ತನಕ್ಯಾನ್ಸರ್ ರೋಗಿಗಳಲ್ಲಿ ಈ ರೂಪಾಂತರವನ್ನು ತಡೆಯುವುದು ರಿಯಾನ್ ಮತ್ತು ಸಂಗಡಿಗರ ಮುಖ್ಯ ಉದ್ದೇಶ.

ಸದ್ಯ ಇಲಿಗಳು ಹಾಗೂ ಮಾನವ ಕ್ಯಾನ್ಸರ್‌ಕೋಶಗಳನ್ನು ಮೇಲೆ ಪ್ರಯೋಗ ಮಾಡಿದಾಗ ಜೀನೋಮು ರಕ್ಷಕರೆಂದು ಕರೆಸಿಕೊಂಡಿರುವ ಟಿಪಿ53 ಜೀನುಗಳನ್ನು ಕಳೆದುಕೊಳ್ಳುತ್ತಿದ್ದಂತೆ ನಾಲ್ಕರಿಂದ ಎಂಟು ತಿಂಗಳೊಳಗೆ ಕ್ಯಾನ್ಸರ್-ರೋಗಿ ಇಲಿಗಳು ಸಾಯುತ್ತವೆ ಎಂದು ಗೊತ್ತಾಗಿದೆ.

ಜೀವಕೋಶಗಳಲ್ಲಿ ‘ಲೈಸೋಸೋಮು’ ಎನ್ನುವ ಸಣ್ಣ ಭಾಗಗಳಿದ್ದು ಅವು ಕೊಲೆಸ್ಟ್ರಾಲ್ ಅನ್ನು ಸಂಗ್ರಹಿಸಿಕೊಂಡಿರುತ್ತವೆ. ಕೊಲೆಸ್ಟ್ರಾಲ್ ಸಾಗಾಣಿಕೆಯೇ ಮುಖ್ಯ ಕೆಲಸವಾಗಿರುವ ಕೈನೇಸು ಕಿಣ್ವಗಳು, ನ್ಯೂಕ್ಲಿಯಸ್ ಬಳಿಯಿರುವ ಲೈಸೋಸೋಮುಗಳನ್ನೆಲ್ಲಾ ಜೀವಕೋಶದ ಹೊರಭಾಗಕ್ಕೆ ಸಾಗಿಸಿಬಿಡುತ್ತದೆ. ಕ್ಯಾನ್ಸರ್ ಕೋಶಗಳಿಗೆ ಕೊಲೆಸ್ಟ್ರಾಲ್ ಸಿಗಬೇಕಾದರೆ ಅವುಗಳಿರುವ ಜಾಗ ಬಹಳ ಮುಖ್ಯ. ಜೀವಕೋಶದ ಹೊರಗಿದ್ದಾಗ ಅಲ್ಲಿರುವ ರಿಸೆಪ್ಟಾರ್ ಪ್ರೋಟೀನುಗಳು, ಕಿಣ್ವಗಳು ಹಾಗೂ ಇವುಗಳನ್ನು ಸ್ವೀಕರಿಸುವ ಅಣುಗಳು (Signalling Molecules), ಜೀವಕೋಶಗಳಿಗೆ ಏನು ಮಾಡಬೇಕೆಂದು ನಿರ್ದೇಶಿಸುತ್ತವೆ. ರಿಸೆಪ್ಟಾರ್ ಪ್ರೋಟೀನುಗಳೆಂದರೆ ಸಿಕ್ಕ ಮಾಹಿತಿಯನ್ನು ಬಳಸಿಕೊಂಡು ಜೀವಕೋಶಗಳು ಹೇಗೆ ವರ್ತಿಸಬೇಕೆನ್ನುವುದನ್ನು ನಿಯಂತ್ರಿಸುವ ಪ್ರೋಟೀನುಗಳು.

ಸಾಮಾನ್ಯವಾಗಿ ಎಲ್ಲಾ ಜೀವಕೋಶಗಳಲ್ಲಿ ಬೆಳವಣಿಗೆ, ಚಯಾಪಚಯ ಕ್ರಿಯೆ, ಪ್ರೋಟೀನಿನ ಉತ್ಪಾದನೆ ಇವೆಲ್ಲವನ್ನೂ ನಿಯಂತ್ರಿಸುವುದು ‘ರ್‍ಯಾಪಾಮೈಸಿನ್ ಕಾಂಪ್ಲೆಕ್ಸ್ 1’ ಎನ್ನುವ ಮತ್ತೊಂದು ಕಿಣ್ವ. ಕ್ಯಾನ್ಸರ್‌ಕೋಶಗಳಲ್ಲಿ ಈ ಕಿಣ್ವಗಳು ಅತಿಯಾಗಿ ಸಕ್ರಿಯವಾಗಿಬಿಡುತ್ತವೆ. ಆಗ ಕೋಶಗಳು ಯಥೇಚ್ಛವಾಗಿ ಬೆಳವಣಿಗೆಯಾಗಲು ಆರಂಭವಾಗುತ್ತದೆ. ಕ್ಯಾನರ್ ಎಂದರೆ ಕೋಶಗಳ ಅನಿಯಂತ್ರಿತ ಬೆಳವಣಿಗೆಯಲ್ಲವೇ. ಈಗ ಸಿಗ್ನಲಿಂಗ್ ಅಣುಗಳು ‘ಕೋಶಗಳ ಬೆಳವಣಿಗೆ’ ಎಂದು ಸಂದೇಶ ಕೊಟ್ಟರೆ, ರಿಸೆಪ್ಟಾರುಗಳು ಅದನ್ನು ಜೀವಕೋಶಗಳಿಗೆ ಹೇಳಿ ಅನಿಯಂತ್ರಿತವಾಗಿ ಬೆಳೆಯುವಂತೆ ಮಾಡುತ್ತವೆ.

ಒಟ್ಟಾರೆ, ಲೈಸೋಸೋಮುಗಳು ‘ರ್‍ಯಾಪಾಮೈಸಿನ್ ಕಾಂಪ್ಲೆಕ್ಸ್ 1’ರಿಂದ ದೂರ ಉಳಿಯಬೇಕು. ಆಗ ರಿಸೆಪ್ಟಾರುಗಳಿಗೆ ಬೇಕಾದ ಆಹಾರ ಸಿಗದಂತಾಗಿ ‘ಬೆಳವಣಿಗೆ’ ಸಂದೇಶಗಳು ತಗ್ಗುತ್ತವೆ. ಕ್ಯಾನ್ಸರ್ ಕೋಶಗಳ ಬೆಳವಣಿಗೆಯೂ ತಗ್ಗುತ್ತವೆ. ಹಾಗಾಗಿ ಈ ಕೈನೇಸು ಕಿಣ್ವಗಳನ್ನು ಬಂಧಿಸುವುದು ಹಾಗೂ ‘ರ್‍ಯಾಪಾಮೈಸಿನ್ ಕಾಂಪ್ಲೆಕ್ಸ್ 1’ರ ಮೇಲೆ ಗಮನ ಇಡಬೇಕಾದದ್ದು ಈ ಚಿಕಿತ್ಸೆಯ ಮುಖ್ಯ ಭಾಗ ಎನ್ನುತ್ತಾರೆ, ಸಂಶೋಧಕರಾದ ರಿಯಾನ್ ಮತ್ತು ಎಮರ್ಲಿಂಗ್.

ಅಂತೂ ಈ ಪ್ರಕ್ರಿಯೆಯಲ್ಲಿ ಯಾವ ಕಿಣ್ವಗಳನ್ನು ಬಂಧಿಸಬೇಕು ಎಂದು ಅರ್ಥವಾಗಿರುವುದರಿಂದ, ಈಗ ಕ್ಯಾನ್ಸರ್-ಔಷಧದ ತಯಾರಿಕೆ ಸುಲಭವಾಗಿರುವುದು ಸಂತಸದ ಸಂಗತಿ! ❖


ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

16) ನೀರಿನ ವಿದ್ಯುದ್ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಅಂದವಾದ ಚಿತ್ರವನ್ನು ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



17) ರಾಸಾಯನಿಕ ಕ್ರಿಯೆಯಲ್ಲಿ ಹಲವು ವಿಧಗಳಿವೆ ಅವುಗಳನ್ನು ಹೆಸರನ್ನು ಬರೆಯಿರಿ

ಉತ್ತರ:– ರಾಸಾಯನಿಕ ಕ್ರಿಯೆಗಳಲ್ಲಿ ಹಲವು ವಿಧಗಳಿವೆ
1) ರಾಸಾಯನಿಕ ಸಂಯೋಗ ಕ್ರಿಯೆ
2) ರಾಸಾಯನಿಕ ವಿಭಜನೆ ಕ್ರಿಯೆ
3) ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ
4) ರಾಸಾಯನಿಕ ದ್ವಿಸ್ಥಾನಪಲ್ಲಟ ಕ್ರಿಯೆ.

18) ಅಂತರುಷ್ಣಕ ರಾಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಉಷ್ಣವನ್ನು ಹೀರಿಕೊಳ್ಳುವ ರಾಸಾಯನಿಕ ಕ್ರಿಯೆಗಳಿಗೆ ಅಂತರುಷ್ಣಕ ರಾಸಾಯನಿಕ ಕ್ರಿಯೆ ಎನ್ನುವರು.

19) ಬಹಿರುಷ್ಣಕ ರಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಉಷ್ಣ ಬಿಡುಗಡೆ ಮಾಡುವ ರಾಸಾಯನಿಕ ಕ್ರಿಯೆಗಳಿಗೆ ಬಹುರುಷ್ಣಕ ರಾಸಾಯನಿಕ ಕ್ರಿಯೆಗಳು ಎನ್ನುವರು.

20) ಉಸಿರಾಟವನ್ನು ಬಹಿರುಷ್ಣಕ ಕ್ರಿಯೆ ಎಂದು ಏಕೆ ಪರಿಗಣಿಸಲಾಗಿದೆ?

ಉತ್ತರ:– ಉಸಿರಾಟದ ಕ್ರಿಯೆಯಲ್ಲಿ ಜೀವಕೋಶಗಳಲ್ಲಿರುವ ಗ್ಲುಕೋಸ್ ಆಕ್ಸಿಜನ್ನೊಂದಿಗೆ ಪ್ರತಿವರ್ತಿಸಿ (ದಹನಗೊಂಡು) ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಕೊಡುತ್ತದೆ ಈ ಕ್ರಿಯೆಯಲ್ಲಿ ಉಷ್ಣ ಬಿಡುಗಡೆ ಆಗುವುದರಿಂದ ಇದನ್ನು ಬಹಿರುಷ್ಣಕ ಕ್ರಿಯೆ ಎಂದು ಪರಿಗಣಿಸುತ್ತಾರೆ.

21) ರಾಸಾಯನಿಕ ಸಂಯೋಜನೆ ಎಂದರೇನು?

ಉತ್ತರ:– ಎರಡು ಇಲ್ಲವೇ ಹೆಚ್ಚು ಪದಾರ್ಥಗಳು ರಾಸಾಯನಿಕವಾಗಿ ಒಟ್ಟುಗೂಡಿ ಕೇವಲ ಒಂದೇ ಒಂದು ಉತ್ಪನ್ನವನ್ನು ಉಂಟು ಮಾಡುವ ರಾಸಾಯನಿಕ ಕ್ರಿಯೆಗಳಿಗೆ ರಾಸಾಯನಿಕ ಸಂಯೋಗ ಕ್ರಿಯೆಗಳು ಎಂದು ಕರೆಯುತ್ತಾರೆ ಇದಕ್ಕೆ ರಾಸಾಯನಿಕ ಸಂಯೋಜನೆ ಎಂದು ಕರೆಯುತ್ತಾರೆ.

22) ಸುಟ್ಟಸುಣ್ಣಕ್ಕೆ ನೀರು ಸುರಿದರೆ ದ್ರಾವಣವು ಕುದಿಯುತ್ತದೆ ಇದಕ್ಕೆ ಕಾರಣ ಕೊಡಿ

ಉತ್ತರ:– ಸುಟ್ಟ ಸುಣ್ಣಕ್ಕೆ (ಕ್ಯಾಲ್ಸಿಯಂ ಆಕ್ಸೈಡ್) ಸಂಯುಕ್ತವು ನೀರಿನೊಂದಿಗೆ ಕ್ಷಿಪ್ರವಾಗಿ ಪ್ರತಿವರ್ತಿಸಿ ಅರಳಿದ ಸುಣ್ಣ(ಕ್ಯಾಲ್ಸಿಯಂ ಹೈಡ್ರಾಕ್ಸೈಡ್)ಅನ್ನು ಉಂಟು ಮಾಡುವುದರೊಂದಿಗೆ ಅಪಾರ ಉಷ್ಣವನ್ನು ಬಿಡುಗಡೆ ಮಾಡುತ್ತದೆ, ಹೀಗಾಗಿ ದ್ರಾವಣ ಕುದಿಯುತ್ತದೆ.

23) ಆಕ್ಸಿಜನ್‌ನೊಂದಿಗೆ ಹೈಡ್ರೋಜನ್ ಪ್ರತಿವರ್ತಿಸಿದಾಗ ನೀರು ಉಂಟಾಗುತ್ತದೆ, ಅದು ಯಾವ ವಿಧದ ರಾಸಾಯನಿಕ ಕ್ರಿಯೆಯಾಗಿದೆ?

ಉತ್ತರ:– ಇಲ್ಲಿ ಎರಡು ಪ್ರತಿವರ್ತಕಗಳು ರಾಸಾಯನಿಕವಾಗಿ ಒಗ್ಗೂಡಿ ನೀರು ಉಂಟಾಗುತ್ತದೆ ಇದು ರಾಸಾಯನಿಕ ಸಂಯೋಗ ಕ್ರಿಯೆಯಾಗಿದೆ.


24) ವಿಭಜನ ಕ್ರಿಯೆ ಎಂದರೇನು?

ಉತ್ತರ:– ಒಂದು ರಾಸಾಯನಿಕ ಸಂಯುಕ್ತವು ರಾಸಾಯನಿಕವಾಗಿ ಒಡೆದು ಎರಡು ಇಲ್ಲವೇ ಇನ್ನೂಹೆಚ್ಚು ಸರಳ ಪದಾರ್ಥಗಳನ್ನು ನೀಡುವ ಕ್ರಿಯೆಗೆ ರಾಸಾಯನಿಕ ವಿಭಜನ ಕ್ರಿಯೆ ಎಂದು ಕರೆಯುತ್ತಾರೆ. ಇದಕ್ಕೆ ರಾಸಾಯನಿಕ ವಿಭಜನೆ ಎಂದು ಕರೆಯುತ್ತಾರೆ.

ಉದಾ:– ಫೆರಸ್ ಸಲ್ಫೇಟ್ ಸಂಯುಕ್ತವನ್ನು ಕಾಯಿಸಿದಾಗ ರಾಸಾಯನಿಕವಾಗಿ ಒಡೆದು ನಿರ್ಜಲ ಫೆರಸ್ ಸಲ್ಫೇಟ್ ಮತ್ತು ನೀರು ಉಂಟಾಗುತ್ತದೆ,

25) ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವುದು ಮತ್ತು ಮೆಗ್ನೇಸಿಯಂ ಆಕ್ಸೈಡ್ ಅನ್ನು ವಾಚ್‌ಗ್ಲಾಸ್‌ನಲ್ಲಿ ಸಂಗ್ರಹಿಸುವುದರ ಚಿತ್ರ ಬರೆಯಿರಿ

ಉತ್ತರ:–



26) ಉಷ್ಣ ವಿಭಜನ ಕ್ರಿಯೆ ಎಂದರೇನು?

ಉತ್ತರ:– ಉಷ್ಣ ಶಕ್ತಿಯ ನೆರವಿನಿಂದ ಒಂದು ರಾಸಾಯನಿಕ ಸಂಯುಕ್ತವು ಎರಡು ಇಲ್ಲವೇ ಹೆಚ್ಚು ಉತ್ಪನ್ನಗಳಾಗಿ ಒಡೆದು ಹೋಗುವ ಕ್ರಿಯೆಗೆ ಉಷ್ಣ ವಿಭಜನ ಕ್ರಿಯೆ ಎಂದು ಹೆಸರು.

27 ಸಸ್ಯ ಜನ್ಯ ವಿಘಟನೆಯಿಂದ ಕಾಪೋಸ್ಟ್ ಮಾಡಲಾಗುತ್ತದೆ. ಅದೂ ಯಾವ ರೀತಿಯ ಕ್ರಿಯೆಗೆ ಉದಾಹರಣೆಯಾಗಿದೆ?

ಉತ್ತರ:– ಬಹಿರುಷ್ಣಕ ಕ್ರಿಯೆ

28) ದ್ಯುತಿ ವಿಭನ ಕ್ರಿಯೆ ಎಂದರೇನು?

ಉತ್ತರ:– ಬೆಳಕಿನ ಸಾನಿಧ್ಯದಲ್ಲಿ ಒಂದು ರಾಸಾಯನಿಕ ಸಂಯುಕ್ತವು ಒಡೆದು ಹೋಗಿ ಎರಡು ಇಲ್ಲವೇ ಹೆಚ್ಚು ಹೊಸ ಪದಾರ್ಥಗಳನ್ನು ಉಂಟುಮಾಡುವ ರಾಸಾಯನಿಕ ಕ್ರಿಯೆಗೆ ದ್ಯುತಿ ವಿಭಜನ ಕ್ರಿಯೆ ಎಂದು ಹೆಸರು.

ಉದಾ:– ಸೂರ್ಯನ ಬೆಳಕಿನ ಸಾನಿಧ್ಯದಲ್ಲಿ ಬೆಳ್ಳಿಯ ಕ್ಲೋರೈಡ್ ಸಂಯುಕ್ತವು ರಾಸಾಯನಿಕವಾಗಿ ವಿಭನೆ ಹೊಂದಿ ಬೆಳ್ಳಿ ಮತ್ತು ಕ್ಲೋರಿನ್ ಅನಿಲಗಳನ್ನು ಕೊಡುತ್ತದೆ,

29) ಸೂರ್ಯನ ಬೆಳಕಿನಲ್ಲಿ ಸಿಲ್ವರ್ ಕ್ಲೋರೈಡ್ ವಿಭಜನೆಗೊಳ್ಳುತ್ತದೆ ಎಂದು ಹೇಗೆ ತೋರಿಸುವಿರಿ?

ಉತ್ತರ:– ಒಂದು ಚೀನಾ ಪಾತ್ರೆಯಲ್ಲಿ ಸುಮಾರು 2 ಗ್ರಾಂ ಬೆಳ್ಳಿಯ ಕ್ಲೋರೈಡ್ ತೆಗೆದುಕೊಳ್ಳಿ, ಈ ಪಾತ್ರೆಯನ್ನು ಸ್ವಲ್ಪ ಸಮಯ ಸೂರ್ಯನ ಬೆಳಕಿನಲ್ಲಿಡಿ ಬೆಳ್ಳಿಯ ಕ್ಲೋರೈಡ್‌ನ ಬಣ್ಣದಲ್ಲಿ ಉಂಟಾಗುವ ಬದಲಾವಣೆಯನ್ನು ಗಮನಿಸಿ. ಬೆಳ್ಳಿಯ ಕ್ಲೋರೈಡಿನ ಬಿಳಿಯ ಹರಳುಗಳು ಸೂರ್ಯನ ಬೆಳಕಿನಲ್ಲಿ ಬೂದು ಬಣ್ಣಕ್ಕೆ ತಿರುಗುತ್ತದೆ, ಬೆಳ್ಳಿಯ ಕ್ಲೋರೈಡ್ ಸಂಯುಕ್ತವು ಸೂರ್ಯನ ಬೆಳಕಿನಲ್ಲಿ ರಾಸಾಯನಿಕ ವಿಭಜನೆಗೆ ಒಳಗಾಗಿ ಬೆಳ್ಳಿಯನ್ನು ಕ್ಲೋರಿನ್ ಅನಿಲವನ್ನು ಕೊಡುತ್ತದೆ.,

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Types of Solutions

16) Components of a binary mixture of two liquids A and B were separated by distillation. After some time separation of components stopped and the composition of the vapour phase became the same as that of the liquid phase. Both the components started coming in the distillate. Explain why this happened.

Ans: When the composition of a binary mixture of two liquids A and B in the liquid state and in the vapour phase is the same, the mixture is known as an azeotropic mixture. In any azeotropic mixture, liquids are boils at the same temperature without undergoing any change in composition.

17) When two perfect solutions with volume V each are combined, What is the volume of the solution as a result?

Ans:- 2V (When two perfect solutions are mixed, there is no change in volume.)

18) What is an example of camphor in N2 gas?

Ans:- Solid in gas solution

Solid in gaseous solution is an example of camphor in N2 gas. Gaseous solution refers to a solution in which the solvent is gaseous. Other gaseous solutions include air (O2 + N2), iodine vapors in air, humidity in air, and so on.

19) What type of furnace is used (1) Calcination (2) Smelting

Ans:- Calcination - Reverberatory furnace
Smelting - Blast furnace

20) What happens when a solute crystal is added to a supersaturated solution?

Ans:- The solute precipitates out of the solution

Solute particles leave the solution and form a crystalline precipitate when a solute crystal is added to a supersaturated solution. Seeding refers to the addition of the solute crystal.

21) Concentration terms such as mass percentage, ppm, mole fraction and molality are independent of temperature; however molarity is a function of temperature. Explain.

Ans. By definition, molarity takes into account the volume of the solution which changes with change in temperature. All other terms, for expressing the concentration of a solution involve the mass of the solvent which is not influenced by the temperature.

22) What is the significance of Henry's Law constant K_H?

Ans:- Henry's Law constant (K_H) helps in comparing the relative solubilities of different gases in the same solvent (e.g. water). In general, lesser the value of K_H, more is the solubility of a gas.

23) Why are aquatic species more comfortable in cold water in comparison to warm water?

Ans:- For breathing, aquatic species need oxygen. In general the solubility of a gas in water or any other solvent decreases with the rise in temperature. Therefore, oxygen is more soluble in cold water than in warm water. As a result, aquatic species feel more comfortable in cold water compared to warm water.

24) Why is vapour pressure of an aqueous solution of glucose lower than that of water?

Ans:- Evaporation of liquid is a surface phenomenon. More the surface area available, more is the evaporation of the liquid. Now glucose is a non-volatile solute. It occupies certain surface area of water. This means evaporation of water from the surface gets reduced and its vapour presence also gets lowered.

25) How does sprinkling of salt help in clearing the snow covered roads in hilly areas? Explain the phenomenon involved in the process.

Ans:- The phenomenon involved in the melting of snow in snow covered roads is the depression in freezing point which is caused by the addition of non-volatile impurities to a liquid. Addition of salt (sodium chloride) lowers the freezing point temperature of water and thus, helps in the melting of snow.

26) How can the hard calcium carbonate layer of the egg be removed without damaging its semipermeable membrane? Can this egg be inserted into a bottle with a narrow neck without distorting its shape? Explain the process involved.

Ans:- The hard layer of egg white in colour, consists of calcium carbonate.

It can be removed by placing the egg in dilute hydrochloric acid for sometime. It dissolves calcium carbonate, leaving behind the egg without damaging its soft semipermeable membrane. The size of the egg can be reduced or it shrinks by placing in saline water (contains NaCl) for sometime. The fluid from the egg slowly escapes and passes into saline water which is at higher osmotic pressure (hypertonic in nature). Now, the egg with reduced size can be inserted in a bottle with narrow neck. If the bottle contains water, the egg will regain its original shape and size due to osmosis of water (hypotonic) through the semipermeable membrane.

27) What are azeotropes or azeotropic mixtures? Give an example.

Ans: Binary liquid mixtures having the same composition in liquid and vapour phase and boil at constant temperature are called azeotropic mixtures. A classic example is a mixture of ethanol and water at a specific ratio (95.63% ethanol and 4.37% water), which boils at a constant temperature of 78.2°C

Note: In azeotropic mixtures the components cannot be separated by fractional distillation

28) Name the types of azeotropes or azeotropic mixtures. (Contd.....)

ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ



ಸಿನಿ ಸಮ್ಮಾನ: 'ಅತ್ಯುತ್ತಮ ನಟಿ' ಸ್ಪರ್ಧೆಯಲ್ಲಿ...


4ನೇ ಆವೃತ್ತಿ ಜೂನ್ 19ಕ್ಕೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ನಟಿ' ವಿಭಾಗದಲ್ಲಿ ನಾಮನಿರ್ದೇಶಿತಗೊಂಡ ನಟಿಯರನ್ನು ಪರಿಚಯಿಸುವ ಸಮಯ.

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ



• 'ಕಾಂತಾರ:ಅಧ್ಯಾಯ 1'ರಲ್ಲಿನ ನಟನೆಗಾಗಿ **'ರುಕ್ಮಿಣಿ ವಸಂತ್'** ನಾಮನಿರ್ದೇಶನಗೊಂಡಿದ್ದಾರೆ. ಲಂಡನ್‌ನ 'ರಾಯಲ್ ಅಕಾಡೆಮಿ ಆಫ್ ಡ್ರಾಮಾಟಿಕ್ ಆರ್ಟ್ಸ್'ನಲ್ಲಿ ತರಬೇತಿ ಪಡೆದು ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಟ್ಟಿದ್ದ ರುಕ್ಮಿಣಿ 'ಬೀರ್‌ಬಲ್' ಸಿನಿಮಾ ಮೂಲಕ ಚಂದನವನ ಪ್ರವೇಶಿಸಿದರು. ರುಕ್ಮಿಣಿ ವಸಂತ್ ಸಿನಿಪಯಣಕ್ಕೆ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ದೊಡ್ಡ ತಿರುವು ನೀಡಿತ್ತು. ಅವರ ಸಹಜ ನಟನೆ ಗಮನಸೆಳೆದಿತ್ತು. ಬಳಿಕ 'ಬಾನದಾರಿಯಲ್ಲಿ', 'ಬಘೀರ', 'ಭೈರತಿ ರಣಗಲ್' ಸಿನಿಮಾದಲ್ಲಿ ನಟಿಸಿದರು. ಕಾಲಿವುಡ್‌ಗೂ ಹೆಜ್ಜೆ ಇಟ್ಟಿರುವ ರುಕ್ಮಿಣಿ, ಬಹುಭಾಷಾ ನಟ ವಿಜಯ್ ಸೇತುಪತಿ ಅವರೊಂದಿಗೆ ತೆರೆಹಂಚಿಕೊಂಡರು. 'ಕಾಂತಾರ: ಅಧ್ಯಾಯ 1'ರ ಮೂಲಕ ಪ್ಯಾನ್ ಇಂಡಿಯಾಗೆ ಪರಿಚಿತರಾದರು. ಇದೀಗ ಯಶ್ ಜೊತೆಗಿನ 'ಟಾಕ್ಸಿಕ್' ಹಾಗೂ ತೆಲುಗಿನಲ್ಲಿ ಜೂ.ಎನ್‌ಟಿಆರ್ ಜೊತೆಗಿನ 'ಡ್ರ್ಯಾಗನ್' ಸಿನಿಮಾ ಬಿಡುಗಡೆಗೆ ಅವರು ಎದುರು ನೋಡುತ್ತಿದ್ದಾರೆ.



• **'ಗತವೈಭವ'** ಚಿತ್ರದ ನಟನೆಗಾಗಿ **ಆಶಿಕಾ ರಂಗನಾಥ್** ನಾಮನಿರ್ದೇಶನಗೊಂಡಿದ್ದಾರೆ. ಕನ್ನಡ, ತೆಲುಗು ಮತ್ತು ತಮಿಳು ಚಿತ್ರರಂಗಗಳಲ್ಲಿ ಸಕ್ರಿಯರಾಗಿರುವ ಇವರು ತುಮಕೂರಿನವರು. 'ಕ್ರೇಜಿ ಬಾಯ್' ಚಿತ್ರದ ಮೂಲಕ 2016ರಲ್ಲಿ ಚಿತ್ರರಂಗ ಪ್ರವೇಶಿಸಿದರು. ಶಿವರಾಜ್‌ಕುಮಾರ್ ಜೊತೆಗೆ 'ಮಾಸ್ ಲೀಡರ್' ಚಿತ್ರದಲ್ಲಿ ಕಾಣಿಸಿಕೊಂಡರು. ಗಣೇಶ್ ನಟನೆಯ 'ಮುಗುಳು ನಗೆ' ಚಿತ್ರದಲ್ಲಿ ಸಹಜ ನಟನೆಯಿಂದ ಗಮನ ಸೆಳೆದರು. ತಮಿಳು, ತೆಲುಗಿನ ಸ್ಟಾರ್ ನಟರುಗಳ ಜತೆಯೂ ನಟಿಸಿದ್ದಾರೆ. ತಮ್ಮ ಗ್ಲಾಮರಸ್ ನೋಟ, ಸಹಜ ನಟನೆಯಿಂದ ಜನಪ್ರಿಯರಾದ ಇವರು ಈತನಕ 20ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ. ಜತೆಗೆ ಕೆಲವಷ್ಟು ಪ್ರಶಸ್ತಿಗಳನ್ನೂ ತಮ್ಮದಾಗಿಸಿಕೊಂಡಿದ್ದಾರೆ.



• **'ದಿಲ್ಮಾರ್'** ಸಿನಿಮಾದಲ್ಲಿನ ನಟನೆಗಾಗಿ **ಅದಿತಿ ಪ್ರಭುದೇವ** ನಾಮನಿರ್ದೇಶನಗೊಂಡಿದ್ದಾರೆ. ಕಿರುತೆರೆಗೆ ಮೊದಲ ಹೆಜ್ಜೆ ಇಟ್ಟು, 'ನಾಗಕನ್ನಿಕೆ'ಯಾಗಿ ಗಾಂಧಿನಗರದ ಗಮನ ಸೆಳೆದವರು. 'ಧೈರ್ಯಂ' ಸಿನಿಮಾ ಮೂಲಕ ಹಿರಿತೆರೆಗೆ ಜಿಗಿದರು. ದಾವಣಗೆರೆ ಇವರ ಊರು. ವಿಜಯ್‌ಪ್ರಸಾದ್ ನಿರ್ದೇಶನದ 'ತೋತಾಪುರಿ' ಸರಣಿ, ಶ್ರೀನಿ ನಿರ್ದೇಶನದ 'ಓಲ್ಡ್ ಮಾಂಕ್', ಗಣೇಶ್ ಅವರ ಜೊತೆ 'ತ್ರಿಬಲ್ ರೈಡಿಂಗ್'ನಲ್ಲೂ ಅವರು ಪಯಣಿಸಿದ್ದಾರೆ. 'ಆನ'ದಂಥ ನಾಯಕಿ ಪ್ರಧಾನ ಸಿನಿಮಾದಲ್ಲೂ ಬಣ್ಣಹಚ್ಚಿದ್ದಾರೆ. 'Once upon a time in ಜಮಾಲಿಗುಡ್ಡ' ಸಿನಿಮಾದಲ್ಲಿ ಅದಿತಿ ಪಾತ್ರ ಮೆಚ್ಚುಗೆ ಪಡೆದಿತ್ತು. 'ತೋತಾಪುರಿ–2', 'ಅದೊಂದಿತ್ತು ಕಾಲ', '5ಡಿ', 'ಮಾಫಿಯಾ', 'ಮ್ಯಾಟ್ನಿ' ಮುಂತಾದ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ.




• **'ಸು ಫ್ರಮ್ ಸೋ'** ಚಿತ್ರದಲ್ಲಿನ ನಟನೆಗಾಗಿ **ಸಂಧ್ಯಾ ಅರಕೆರೆ** ನಾಮನಿರ್ದೇಶನಗೊಂಡಿದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಯವರು ಸಂಧ್ಯಾ. ಮೈಸೂರಿನಲ್ಲಿ ಪದವಿ ಪೂರ್ಣಗೊಳಿಸಿ ನೀನಾಸಂ ಸೇರಿಕೊಂಡು ತಿರುಗಾಟ ಮಾಡಿ, ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟವರು. ಸಿನಿಮಾ ಜೊತೆಗೆ ರಂಗಭೂಮಿಯಲ್ಲಿ ಹೆಚ್ಚಾಗಿ ಕಾಣಿಸಿಕೊಂಡವರು. 'ಸುಳಿ' ಸಿನಿಮಾ ಮೂಲಕ ಬೆಳ್ಳಿಪರದೆಗೆ ಬಂದವರು. 'ಸ್ವಾತಿ ಮುತ್ತಿನ ಮಳೆ ಹನಿಯೇ', 'ಟೋಬಿ', 'ಫೋಟೋ', 'ತನುಜಾ', 'ಪೆಪೆ' ಸೇರಿದಂತೆ 13 ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಸು ಫ್ರಮ್ ಸೋ' ಸಿನಿಮಾದಲ್ಲಿ 'ಭಾನು' ಪಾತ್ರದಲ್ಲಿ ಅವರ ಮುಗ್ಧ ನಟನೆ ಪ್ರೇಕ್ಷಕರ ಮೆಚ್ಚುಗೆ ಪಡೆದಿತ್ತು. ಎರಡು ಹೊಸ ಸಿನಿಮಾಗಳು ಅವರ ಕೈಯಲ್ಲಿವೆ.



• **'ಎಕ್ಕ'** ಸಿನಿಮಾದ ನಟನೆಗಾಗಿ **ಸಂಪದ** ನಾಮನಿರ್ದೇಶನಗೊಂಡಿದ್ದಾರೆ. 'ಮಿಥುನ ರಾಶಿ' ಧಾರಾವಾಹಿ ಮೂಲಕ ನಟನೆಗೆ ಕಾಲಿಟ್ಟರು. ಈ ಧಾರಾವಾಹಿಯಲ್ಲಿ ಸುರಕ್ಷಾ ಎಂಬ ಖಳನಾಯಕಿ ಪಾತ್ರದ ಮೂಲಕ ಗಮನ ಸೆಳೆದರು. ನಿಖಿಲ್ ಕುಮಾರಸ್ವಾಮಿ ಅಭಿನಯದ 'ರೈಡರ್' ಸಿನಿಮಾದಲ್ಲಿ ನಟಿಸುವ ಮೂಲಕ ಬೆಳ್ಳಿತೆರೆ ಪ್ರವೇಶಿಸಿದರು. ನಂತರ ತೆಲುಗು ಚಿತ್ರರಂಗಕ್ಕೆ ಕಾಲಿಟ್ಟು, 'ಶ್ರೀ ಶ್ರೀ ಶ್ರೀ ರಾಜವಾರು', 'ಮಾಸ್ ಮಹಾರಾಜು' ಸಿನಿಮಾಗಳಲ್ಲಿ ನಟಿಸಿದರು. ಪ್ರಮುಖ ಪಾತ್ರಗಳ ಮೂಲಕ ಚಿತ್ರರಂಗದಲ್ಲಿ ನೆಲೆ ಗಟ್ಟಿಮಾಡಿಕೊಂಡ ಇವರು, ನಾಯಕಿ ಪಾತ್ರಕ್ಕೆ ಬಡ್ತಿ ಪಡೆದರು. ಪ್ರಜ್ವಲ್ ದೇವರಾಜ್ ಅಭಿನಯದ 'ಕರಾವಳಿ' ಸಿನಿಮಾದಲ್ಲಿಯೂ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ.



• **'ಕಂಗ್ರಾಜುಲೇಷನ್ಸ್ ಬ್ರದರ್'** ಸಿನಿಮಾದಲ್ಲಿನ ನಟನೆಗಾಗಿ **ಸಂಜನಾ ದಾಸ್** ನಾಮನಿರ್ದೇಶನಗೊಂಡಿದ್ದಾರೆ. ಬೆಂಗಳೂರಿನ ಇವರು ಭರತನಾಟ್ಯ ಕಲಾವಿದೆ. ಚಿಕ್ಕವಯಸ್ಸಿನಲ್ಲೇ ಸಿನಿಮಾದತ್ತ ಆಕರ್ಷಣೆಗೊಂಡು, ಕಾಲೇಜು ದಿನಗಳಲ್ಲಿ ಸಿನಿಮಾ ಕ್ಷೇತ್ರಕ್ಕೇ ಕಾಲಿಡಬೇಕು ಎಂದು ನಿರ್ಧರಿಸಿದವರು. 2019ರಲ್ಲಿ ಬಣ್ಣದ ಲೋಕಕ್ಕೆ ಕಾಲಿಟ್ಟ ಇವರ ಮೊದಲ ಸಿನಿಮಾ 'ಮನಸ್ಮಿತ'. ಬಳಿಕ ದೀಕ್ಷಿತ್ ಶೆಟ್ಟಿ ಜೊತೆ 'ಕೆಟಿಎಂ', 'ಎಲ್ಲೋ ಜೋಗಪ್ಪ ನಿನ್ನರಮನೆ' ಸಿನಿಮಾಗಳಲ್ಲಿ ನಟಿಸಿ ಮಲಯಾಳ ಚಿತ್ರರಂಗಕ್ಕೂ ಕಾಲಿಟ್ಟರು. 'ನೀ ನಂಗೆ ಅಲ್ಲವಾ' ಮ್ಯೂಸಿಕ್ ವಿಡಿಯೊದಲ್ಲಿ ಮಿಂಚಿದವರು.



• **'ಏಳುಮಲೆ'** ಸಿನಿಮಾದಲ್ಲಿನ ನಟನೆಗಾಗಿ **ಪ್ರಿಯಾಂಕಾ ಆಚಾರ್** ನಾಮನಿರ್ದೇಶನಗೊಂಡಿದ್ದಾರೆ. ಮೈಸೂರಿನವರಾದ ಇವರು ಜೀ ಕನ್ನಡ ವಾಹಿನಿಯ 'ಮಹಾನಟಿ' ರಿಯಾಲಿಟಿ ಶೋ ವಿಜೇತೆ. ಅದೇ ಶೋನಲ್ಲಿ ತೀರ್ಪುಗಾರರಾಗಿದ್ದ ತರುಣ್ ಸುಧೀರ್ ನಿರ್ಮಾಣದ 'ಏಳುಮಲೆ' ಸಿನಿಮಾಕ್ಕೆ ನಾಯಕಿಯಾಗಿ ಆಯ್ಕೆಗೊಂಡರು. ಚಿತ್ರದಲ್ಲಿನ ಇವರ ನಟನೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿತ್ತು. ಸದ್ಯ 'ಸೆಲೆಬ್ರೆಟಿ' ಚಿತ್ರದಲ್ಲಿ ನಟಿಸುತ್ತಿದ್ದಾರೆ. 'ಏಳುಮಲೆ' ಆದ ಬಳಿಕ ಕನ್ನಡ ಮಾತ್ರವಲ್ಲದೆ ತೆಲುಗು, ತಮಿಳು, ಮಲಯಾಳದಿಂದಲೂ ಇವರಿಗೆ ಅವಕಾಶಗಳು ಬರುತ್ತಿವೆ. ಇವರ ನಟನೆಯ ಮತ್ತೊಂದು ಚಿತ್ರ ಶೀಘ್ರದಲ್ಲಿಯೇ ಘೋಷಣೆಯಾಗಲಿದೆ.



• **'ಅರಸಯ್ಯನ ಪ್ರೇಮ ಪ್ರಸಂಗ'** ಸಿನಿಮಾದಲ್ಲಿನ ನಟನೆಗಾಗಿ **ರಶ್ಮಿತಾ ಗೌಡ** ನಾಮನಿರ್ದೇಶನಗೊಂಡಿದ್ದಾರೆ. ಚಿಕ್ಕಮಗಳೂರಿನ ರಶ್ಮಿತಾ ಅವರು ಭರತನಾಟ್ಯದಲ್ಲಿ ವಿದ್ವತ್ ಪಡೆದಿದ್ದಾರೆ. 20 ವರ್ಷದಿಂದ ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಇವರು ಮಾಡೆಲಿಂಗ್ ಕ್ಷೇತ್ರದಲ್ಲೂ ಗುರುತಿಸಿಕೊಂಡವರು. 'ಮಿಸ್ ಕ್ವೀನ್ ಆಫ್ ಇಂಡಿಯಾ'ಯ ರನ್ನರ್ ಅಪ್ ಮುಡಿಗೇರಿಸಿಕೊಂಡವರು. 2018–19ರಲ್ಲಿ ಬಣ್ಣದ ಲೋಕಕ್ಕೆ ಕಾಲಿಟ್ಟ ಇವರು 'ಅರಸಯ್ಯನ ಪ್ರೇಮ ಪ್ರಸಂಗ'ದಲ್ಲಿ 'ಕುಮಾರಿ'ಯಾಗಿ ಗಮನಸೆಳೆದರು. ಸದ್ಯ ಹೊಸ ಕಥೆಗಳನ್ನು ಕೇಳುತ್ತಿರುವ ರಶ್ಮಿತಾ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವಂಥ ಪಾತ್ರಗಳ ಹುಡುಕಾಟದಲ್ಲಿದ್ದಾರೆ.

ಟ್ವಿಶಾ ಸಾವು: ಪತಿ, ಅತ್ತೆಗೆ ನ್ಯಾಯಾಂಗ ಬಂಧನ

ಭೋಪಾಲ್ (ಪಿಟಿಐ): ನಟಿ ಟ್ವಿಶಾ ಶರ್ಮಾ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಪತಿ ಸಮರ್ಥ್ ಸಿಂಗ್ ಹಾಗೂ ಅತ್ತೆ, ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿ ಭೋಪಾಲ್‌ನ ನ್ಯಾಯಾಲಯವು ಮಂಗಳವಾರ ಆದೇಶಿಸಿದೆ.



ಭೋಪಾಲ್‌ನಲ್ಲಿರುವ ಮನೆಯಲ್ಲಿ ಟ್ವಿಶಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಗಿತ್ತು. ವರದಕ್ಷಿಣೆ ಕಿರುಕುಳದ ಆರೋಪದಡಿ ಇಬ್ಬರನ್ನೂ ಬಂಧಿಸಲಾಗಿದೆ.

ಪ್ರಾಥಮಿಕ ಹಂತದ ತನಿಖೆ ಪೂರ್ಣಗೊಳಿಸಿರುವ ಸಿಬಿಐ ಅಧಿಕಾರಿಗಳು, ಇಬ್ಬರೂ ಆರೋಪಿಗಳನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಜೂನ್ 16ರವರೆಗೆ ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.

ಟ್ವಿಶಾ ಅವರ ಪತಿಯ ನಿವಾಸದಲ್ಲಿ ಕೃತ್ಯದ ಮರುಸೃಷ್ಟಿ ಮಾಡಿ ಸಿಬಿಐ ಅಧಿಕಾರಿಗಳು ಸೋಮವಾರ ಸಾಕ್ಷ್ಯ ಸಂಗ್ರಹಿಸಿದ್ದರು.

ವೇದಾಂತ ಸಮೂಹದ ಮೇಲೆ ಇ.ಡಿ ದಾಳಿ

ನವದೆಹಲಿ (ಪಿಟಿಐ): ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ (ಎಫ್‌ಇಎಂಎ) ಉಲ್ಲಂಘನೆ ಆರೋಪದಡಿ ಜಾರಿ ನಿರ್ದೇಶನಾಲಯವು (ಇ.ಡಿ) ವೇದಾಂತ ಸಮೂಹದ ಮೇಲೆ ದಾಳಿ ನಡೆಸಿ, ಶೋಧ ಕಾರ್ಯಾಚರಣೆ ನಡೆಸಿದೆ.

ಗಣಿಗಾರಿಕೆ ಸಂಸ್ಥೆಯ ಕಚೇರಿಗಳಲ್ಲಿ ಸೋಮವಾರ ಶೋಧ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಕೋಟ್ಯಧಿಪತಿ ಅನಿಲ್ ಅಗರ್ವಾಲ್ ಅವರ ವಿರುದ್ಧ ಇ.ಡಿ ತನಿಖೆ ಆರಂಭಿಸಿದ ಬೆನ್ನಲ್ಲೇ ಈ ದಾಳಿ ನಡೆದಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಬಿರುಗಾಳಿ: ಇಬ್ಬರು ಮಕ್ಕಳು ಸೇರಿ ಮೂವರ ಸಾವು

ಜೈಪುರ/ಜೈಸಲ್ಮೇರ್ (ಪಿಟಿಐ): ರಾಜಸ್ಥಾನದ ಪಶ್ಚಿಮದಲ್ಲಿ ಮಳೆ ಸಹಿತ ಭಾರಿ ಬಿರುಗಾಳಿಯ ಪರಿಣಾಮವಾಗಿ ಜನಪದ ಕಲಾವಿದರೊಬ್ಬರು ಮತ್ತು ಇಬ್ಬರು ಮಕ್ಕಳು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಬಿರುಗಾಳಿಯು ಜೈಸಲ್ಮೇರ್, ಬಾರ್ಮೆರ್ ಮತ್ತು ಫಲೋಡಿ ಜಿಲ್ಲೆಗಳಲ್ಲಿ ಭಾರಿ ಹಾನಿ ಉಂಟುಮಾಡಿದೆ.

ಜೈಸಲ್ಮೇರ್‌ನ ರೆಸಾರ್ಟ್‌ವೊಂದರಲ್ಲಿ ಸೋಮವಾರ ರಾತ್ರಿ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಕಾಂಕ್ರೀಟ್ ಗೋಡೆ ಕುಸಿದುಬಿದ್ದ ಪರಿಣಾಮ ಜನಪದ ಕಲಾವಿದ ಸ್ವರೂಪ್ ಖಾನ್(25) ಮೃತಪಟ್ಟಿದ್ದಾರೆ. ಇಬ್ಬರು ನರ್ತಕಿಯರು ಸೇರಿದಂತೆ ಮೂವರು ಗಾಯಗೊಂಡಿದ್ದಾರೆ.




ಪ್ರತ್ಯೇಕ ಅವಘಡದಲ್ಲಿ, ಬಿರುಗಾಳಿಯ ಪರಿಣಾಮ ಮನೆಯ ಗೋಡೆ ಕುಸಿದು ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಗಾಳಿಗೆ ಹಾರಿ ಬಿದ್ದ ಶೀಟ್ ತಗುಲಿ ಇಬ್ಬರು ಯುವಕರು ಗಾಯಗೊಂಡಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಒಡಲೆಂಬ ಹುತ್ತಕ್ಕೆ ನಾಲಿಗೆ ಸರ್ಪ.

–ಸರ್ವಜ್ಞ

ಸಂಪಾದಕೀಯ

ಪರೀಕ್ಷೆಯಲ್ಲಿ ಫೇಲಾದ ಸಿಬಿಎಸ್‌ಇ ವಿದ್ಯಾರ್ಥಿಗಳ ವಿಶ್ವಾಸಕ್ಕೆ ಪೆಟ್ಟು

ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ಹನ್ನೆರಡನೇ ತರಗತಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದ ಅವ್ಯವಸ್ಥೆ ಹಾಗೂ 'ರಾಷ್ಟ್ರೀಯ ಪರೀಕ್ಷಾ ಸಂಸ್ಥೆ' (ಎನ್‌ಟಿಎ) ನಡೆಸಿದ 'ನೀಟ್' ಪರೀಕ್ಷೆಯಲ್ಲಿನ ಪ್ರಶ್ನೆಪತ್ರಿಕೆ ಸೋರಿಕೆಯ ಘಟನೆಗಳು, ಪ್ರಮುಖ ಪರೀಕ್ಷೆಗಳನ್ನು ನಿರ್ವಹಿಸುವ ಸಂಸ್ಥೆಗಳ ಸಾಮರ್ಥ್ಯದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಮೌಲ್ಯಮಾಪನ ಮತ್ತು ಫಲಿತಾಂಶ ಪ್ರಕಟಣೆಗೆ ಸಂಬಂಧಿಸಿದಂತೆ ಈ ಹಿಂದಿನ ಪದ್ಧತಿಗಿಂತಲೂ ಹೆಚ್ಚು ಪರಿಣಾಮಕಾರಿ ಹಾಗೂ ಪಾರದರ್ಶಕ ಎಂದು ಬಿಂಬಿಸಲಾಗಿದ್ದ, ಡಿಜಿಟಲ್ ಮೌಲ್ಯಮಾಪನದ ಭಾಗವಾದ 'ಆನ್‌ಸ್ಕ್ರೀನ್ ಮ್ಯಾಪಿಂಗ್' (ಒಎಸ್‌ಎಂ) ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಈ ವೈಫಲ್ಯ ಸುಮಾರು 18 ಲಕ್ಷ ವಿದ್ಯಾರ್ಥಿಗಳನ್ನು ಆತಂಕಕ್ಕೆ ದೂಡಿರುವುದರ ಜೊತೆಗೆ, ಅನಿಶ್ಚಿತ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಸಿಬಿಎಸ್‌ಇ ಪರೀಕ್ಷೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಕನಿಷ್ಠ ಉತ್ತೀರ್ಣತೆಯ ಪ್ರಮಾಣ ದಾಖಲಾಗುತ್ತಿದೆ. ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿ ವಿದ್ಯಾರ್ಥಿಗಳು ಮರು ಮೌಲ್ಯಮಾಪನ ಬಯಸಿ, ತಮ್ಮ ಉತ್ತರ ಪತ್ರಿಕೆಗಳ ನಕಲು ಪ್ರತಿ ಪಡೆದಾಗ, ಮೌಲ್ಯಮಾಪನ ವ್ಯವಸ್ಥೆಯ ಲೋಪದೋಷಗಳು ಬೆಳಕಿಗೆ ಬಂದಿವೆ. ಸ್ಕ್ಯಾನಿಂಗ್ ಸಮರ್ಪಕವಾಗಿ ನಡೆಯದೆ ಇರುವುದರಿಂದ ಉತ್ತರ ಪತ್ರಿಕೆಗಳು ಮಸುಕಾಗಿವೆ. ಕೆಲವು ಉತ್ತರ ಪತ್ರಿಕೆಗಳು ಒಂದರೊಳಗೊಂದು ಸೇರಿಕೊಂಡು, ಮೌಲ್ಯಮಾಪನಕ್ಕೆ ಒಳಪಡದೆ ಉಳಿದಿದ್ದರೆ, ಸರಿಯಾದ ಉತ್ತರಗಳಿಗೆ ಅಂಕಗಳನ್ನು ನೀಡದಿರುವ ಉದಾಹರಣೆಗಳೂ ಬೆಳಕಿಗೆ ಬಂದಿವೆ.



ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಮೌಲ್ಯಮಾಪನದಲ್ಲಿನ ಅವ್ಯವಸ್ಥೆಯು ಪರೀಕ್ಷಾ ನಿರ್ವಹಣೆಯ ಹೊಣೆ ಹೊತ್ತವರ ವೈಫಲ್ಯವಾಗಿದೆ. ಈ ವೈಫಲ್ಯವು ಪರೀಕ್ಷಾ ವ್ಯವಸ್ಥೆಯ ಬಗ್ಗೆಯೇ ಅಪನಂಬಿಕೆ ಮೂಡಿಸುವಂತಿದೆ.

ಮೌಲ್ಯಮಾಪನದ ಅವ್ಯವಸ್ಥೆ ಬಹಿರಂಗಗೊಂಡಾಗ ಅದನ್ನು ಸರಿಪಡಿಸುವ ಬದಲು, ಮುಚ್ಚಿಹಾಕುವ ಪ್ರಯತ್ನವನ್ನು ಸಿಬಿಎಸ್‌ಇ ನಡೆಸಿತು. ಸಮಸ್ಯೆಯನ್ನು ಮೊದಲ ಬಾರಿಗೆ ಸಾರ್ವಜನಿಕಗೊಳಿಸಿದ ವಿದ್ಯಾರ್ಥಿಯು ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ ಮತ್ತು ನಿಂದನೆಗೆ ಗುರಿಯಾಗಬೇಕಾಯಿತು. ಹನ್ನೆರಡನೇ ತರಗತಿಯ ಫಲಿತಾಂಶವು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ನಿರ್ಣಾಯಕವಾದುದು. ಸಿಬಿಎಸ್‌ಇ ಅದಕ್ಷತೆಯಿಂದಾಗಿ ಪ್ರಸ್ತುತ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಫಲಿತಾಂಶ ಮತ್ತು ಅಂಕಗಳ ಕುರಿತು ಗೊಂದಲಕ್ಕೊಳಗಾಗಿದ್ದಾರೆ. ವರದಿಗಳ ಪ್ರಕಾರ, ನಾಲ್ಕು ಲಕ್ಷ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಒಎಸ್‌ಎಂ ವ್ಯವಸ್ಥೆಯನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ವಹಿಸಲಾದ ಸಂಸ್ಥೆಗೆ ಅಗತ್ಯವಾದ ಅರ್ಹತೆಗಳು ಇಲ್ಲದಿರುವುದು ಹಾಗೂ ಆ ಸಂಸ್ಥೆ ಈ ಹಿಂದೆಯೂ ವಿವಾದಗಳಲ್ಲಿ ಸಿಲುಕಿದ್ದುದು ಈಗ ಬೆಳಕಿಗೆ ಬಂದಿದೆ. ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಜಾರಿಗೆ ತರುವ ಮೊದಲು ಸಿಬಿಎಸ್‌ಇ ಸಮರ್ಪಕ ಸಿದ್ಧತೆ ನಡೆಸಿಲ್ಲ ಹಾಗೂ ಶಿಕ್ಷಕರಿಗೆ ಅಗತ್ಯವಾದ ತರಬೇತಿಯನ್ನೂ ನೀಡಿಲ್ಲ. ಹೊಸ ವ್ಯವಸ್ಥೆಯನ್ನು ಅವಸರದಲ್ಲಿ ಜಾರಿಗೊಳಿಸುವುದು ಬೇಡ ಎಂದು ಶಿಕ್ಷಕರು ಹಾಗೂ ತಜ್ಞರು ನೀಡಿದ್ದ ಎಚ್ಚರಿಕೆಗಳನ್ನೂ ಸಿಬಿಎಸ್‌ಇ ನಿರ್ಲಕ್ಷಿಸಿದೆ. ಈಗ, ಇಡೀ ಪ್ರಕ್ರಿಯೆ ನಗೆಪಾಟಲಿಗೀಡಾದ ಸಂದರ್ಭದಲ್ಲೂ ತನ್ನ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈಗಿನ ವ್ಯವಸ್ಥೆಯನ್ನು ಬೆಂಬಲಿಸುವ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವಂತೆ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಸಹಿರಹಿತ ಸಂದೇಶಗಳನ್ನು ಸಿಬಿಎಸ್‌ಇ ಕಳುಹಿಸಿರುವುದಾಗಿ ವರದಿಯಾಗಿದೆ.

ಒಎಸ್‌ಎಂ ವ್ಯವಸ್ಥೆಯಲ್ಲಿನ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸುವ ಹೊಣೆಗಾರಿಕೆಯನ್ನು 'ಐಐಟಿ ಮದ್ರಾಸ್'ಗೆ ವಹಿಸಲಾಗಿದೆ. ಅವ್ಯವಸ್ಥೆಯ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕೆನ್ನುವ ಒತ್ತಡಗಳು ವ್ಯಕ್ತವಾಗಿದ್ದು, ಆ ಒತ್ತಡಕ್ಕೆ ಪೂರಕ ಕಾರಣಗಳೂ ಇವೆ. ಕಳೆದ ವಾರ ನಡೆದ 'ಕಾಮನ್ ಯುನಿವರ್ಸಿಟಿ ಎಂಟ್ರನ್ಸ್ ಟೆಸ್ಟ್ ಯುಜಿ 2026' ರಾಷ್ಟ್ರೀಯ ಪರೀಕ್ಷೆಯ ಸಂದರ್ಭದಲ್ಲೂ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ತಾಂತ್ರಿಕ ಸಮಸ್ಯೆ ತಲೆದೋರಿದೆ. ಮಹತ್ವದ ಪರೀಕ್ಷೆಗಳ ಸಂದರ್ಭದಲ್ಲಿ ಎದುರಾಗುತ್ತಿರುವ ವೈಫಲ್ಯಗಳು ಪರೀಕ್ಷಾ ವ್ಯವಸ್ಥೆಯ ಮೇಲೆ ವಿದ್ಯಾರ್ಥಿಗಳು ಹಾಗೂ ಪೋಷಕರು ನಂಬಿಕೆ ಕಳೆದುಕೊಳ್ಳುವಂತೆ ಮಾಡುತ್ತವೆ. 'ನೀಟ್' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ, ಪ್ರಕರಣದ ಹೊಣೆಗಾರಿಕೆಯನ್ನು ನಿಶ್ಚಯಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಈ ವಿಷಯದ ಮೇಲ್ವಿಚಾರಣೆಯನ್ನು ಸ್ವತಃ ಪ್ರಧಾನಮಂತ್ರಿಯವರೇ ನಡೆಸುತ್ತಿದ್ದಾರೆ ಎಂದು ಸರ್ಕಾರ ಕೋರ್ಟ್‌ಗೆ ತಿಳಿಸಿತ್ತು. ಹಾಗಾದರೆ, ಇಲ್ಲಿಯವರೆಗೂ ಪರಿಣಾಮಕಾರಿ ಮೇಲ್ವಿಚಾರಣೆಯ ಕೊರತೆಯನ್ನು 'ನೀಟ್' ಪರೀಕ್ಷಾ ಪ್ರಕ್ರಿಯೆ ಎದುರಿಸುತ್ತಿತ್ತೇ? ಪರೀಕ್ಷಾ ವ್ಯವಸ್ಥೆಯ ಉನ್ನತ ಹೊಣೆಗಾರಿಕೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಸಾದ್ ಅವರದ್ದಾಗಿದೆ. ವೈಫಲ್ಯಗಳ ಸರಣಿಯ ಹೊಣೆಗಾರಿಕೆಯನ್ನು ಹೊರುವುದಾಗಿ ಅವರು ಹೇಳಿದ್ದರೂ, ಹುದ್ದೆಯಲ್ಲಿಯೇ ಮುಂದುವರಿದಿರುವುದು ದುರದೃಷ್ಟಕರ. ಪ್ರಜಾಪ್ರಭುತ್ವದಲ್ಲಿ ಹೊಣೆಗಾರಿಕೆ ಎನ್ನುವುದು ಕಾರ್ಯದಲ್ಲಿ ವ್ಯಕ್ತಗೊಳ್ಳಬೇಕೇ ಹೊರತು, ಮಾತುಗಳಲ್ಲಿ ಅಲ್ಲ.

ಜಾಲತಾಣ

ಒಳ್ಳೆಯ ರಾಜಕಾರಣಿಯಾಗಲಿ



ರಾಜಕಾರಣ ಪರಮ ಪವಿತ್ರ ಕೆಲಸ. ಡಿ.ಕೆ. ಶಿವಕುಮಾರ್ ಅವರು ಅದನ್ನು ಅಪವಿತ್ರಗೊಳಿಸದೆ ಪ್ರಾಮಾಣಿಕವಾಗಿ ಕರ್ತವ್ಯ ನಿಭಾಯಿಸಲಿ. ಆಗ ಧರ್ಮವೇ ಅವರನ್ನು ಪೊರೆಯುತ್ತದೆ.

ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



₹4 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯನವರು, ₹7.64 ಲಕ್ಷ ಕೋಟಿ ಸಾಲ ಬಿಟ್ಟು ಹೋಗಿದ್ದಾರೆ. ಈ ವರ್ಷದ ಬಜೆಟ್‌ನ ಕೊರತೆ ₹94,428 ಕೋಟಿ ಆಗಿದೆ. ಅಭಿವೃದ್ಧಿಗೆ ಹಣವೇ ಇಲ್ಲ. ಹಾಗಾಗಿ, ಡಿ.ಕೆ. ಶಿವಕುಮಾರ್ ಅವರು ಮುಂದಿನ ದಿನಗಳಲ್ಲಿ ಜನರ ಮೇಲೆ ಇನ್ನಷ್ಟು ತೆರಿಗೆ ಬರೆ ಎಳೆಯುವುದು ಗ್ಯಾರಂಟಿ.

ಆರ್. ಅಶೋಕ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 3-6-2001

• ದೊರೆ ಬೀರೇಂದ್ರ, ರಾಣಿ ಸೇರಿ 13 ಜನರ ಕಗ್ಗೊಲೆ

ಕಠ್ಮಂಡು, ಜೂನ್ 2 (ಪಿಟಿಐ)– ರಾಜಮನೆತನಗಳ ಇತಿಹಾಸದಲ್ಲಿಯೇ ಅತ್ಯಂತ ಭೀಕರ ಎನ್ನಬಹುದಾದ ಘಟನೆಯಲ್ಲಿ ನೇಪಾಳದ ದೊರೆ ಬೀರೇಂದ್ರ (55), ರಾಣಿ ಐಶ್ವರ್ಯ (52), ಒಬ್ಬ ರಾಜಕುಮಾರ ಮತ್ತು ಒಬ್ಬ ರಾಜಕುಮಾರಿ ಹಾಗೂ ರಾಜ ಕುಟುಂಬದ ಇತರ ಒಂಬತ್ತು ಮಂದಿ ಬರ್ಬರ ರೀತಿಯಲ್ಲಿ ಕೊಲೆಯಾಗಿದ್ದಾರೆ.

ತನ್ನ ವಿವಾಹಕ್ಕೆ ಸಂಬಂಧಿಸಿದಂತೆ ಉಂಟಾದ ವಿವಾದದಿಂದ ಸಿಟ್ಟಿಗೆದ್ದ (ರಾಜ ಸಿಂಹಾಸನಕ್ಕೆ ನಿಯೋಜನೆಗೊಂಡಿದ್ದ) ರಾಜಕುಮಾರ ದೀಪೇಂದ್ರ ತನ್ನ ಸ್ವಂತ ತಂದೆ, ತಾಯಿ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ್ದಾರೆ. ಇಡೀ ಕುಟುಂಬವನ್ನೇ ವರೆಸಿ ಹಾಕುವಂತೆ ಕುಟುಂಬದ ಇತರ ಹನ್ನೊಂದು ಜನರ ಮೇಲೂ ಗುಂಡು ಹಾರಿಸಿದ್ದಲ್ಲದೆ ರಾಜಕುಮಾರ ದೀಪೇಂದ್ರ ತನ್ನ ಹಣೆಪಕ್ಕದ ಜಾಗಕ್ಕೂ ಗುಂಡು ಹಾರಿಸಿಕೊಂಡಿರುವ ಘಟನೆ ಶುಕ್ರವಾರ ಮಧ್ಯರಾತ್ರಿ ನಡೆದಿದೆ.

ರಾಜಕುಮಾರ ತನ್ನ 35ನೇ ವರ್ಷಕ್ಕಿಂತ ಮೊದಲು ಮದುವೆಯಾಗಿ ಮಕ್ಕಳನ್ನು ಪಡೆದರೆ ಅದು ರಾಜಕುಮಾರನ ತಂದೆಯ ಸಾವಿಗೆ ಕಾರಣವಾಗುತ್ತದೆ ಎಂದು ಜ್ಯೋತಿಷಿಯೊಬ್ಬರು ಭವಿಷ್ಯ ನುಡಿದಿದ್ದರು. ಈ ಜ್ಯೋತಿಷ ನಂಬಿದ್ದ ರಾಣಿ, ರಾಜಕುಮಾರ ಇನ್ನೂ ಆರು ವರ್ಷ ಮದುವೆಯಾಗದಂತೆ ಉಳಿಯಬೇಕೆಂದು ಸೂಚಿಸಿದ್ದರು.

75 ವರ್ಷಗಳ ಹಿಂದೆ

ಭಾನುವಾರ, 3-6-1951

• ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳ ಮೀಸಲು

ಬೆಂಗಳೂರು, ಜೂ. 2– 'ಟೆಕ್ನಿಕಲ್ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಕಾದಿರಿಸುವ ಸಂಬಂಧದಲ್ಲಿ ಸುಪ್ರೀಂ ಕೋರ್ಟ್ ಇತ್ತಿರುವ ತೀರ್ಪು ಸರ್ಕಾರದ ಗಮನಕ್ಕೆ ಬಂದಿದೆ, ಹಿಂದುಳಿದ ಕೋಮುಗಳ ವಿದ್ಯಾರ್ಥಿಗಳ ಹಿತರಕ್ಷಣೆ ಬಗ್ಗೆ ನಿರ್ಧಾರ ಕೈಗೊಳ್ಳಲು ರಾಜ್ಯಾಂಗ ತಿದ್ದುಪಡಿಗಳ ಮೇಲೆ ಪಾರ್ಲಿಮೆಂಟ್‌ನ ತೀರ್ಮಾನವನ್ನು ಕಾಯಲಾಗಿದೆ' ಎಂದು ಶಿಕ್ಷಣ ಸಚಿವ ಆರ್. ಚೆನ್ನಿಗರಾಮಯ್ಯನವರು, ಇಂದು ಶಾಸನಸಭೆಯಲ್ಲಿ ಎಚ್‌.ಸಿ. ಲಿಂಗಾರೆಡ್ಡಿಯವರ ಅಲ್ಪ ಕಾಲಾವಧಿ ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟು ತಿಳಿಸಿದರು.

ಚೀನಾ ಮೇಲೆ ವಿಶ್ವದ ಕಣ್ಣು!



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ (ಮೇ 13–15) ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ (ಮೇ 19–20) ಒಂದು ವಾರದ ಅಂತರದಲ್ಲಿ ಚೀನಾಕ್ಕೆ ಭೇಟಿ ನೀಡಿದ್ದಾರೆ. ಈ ಭೇಟಿಗಳನ್ನು ಜಗತ್ತು ಕುತೂಹಲದಿಂದ ಗಮನಿಸಿದೆ. ಟ್ರಂಪ್ ಅವರಿಗೆ ಸಿಕ್ಕ ಗೌರವ ಮತ್ತು ಕೆಂಪುಹಾಸಿನ ಸ್ವಾಗತ ಹಾಗೂ ಪುಟಿನ್ ಅವರಿಗೆ ದೊರೆತ ಆತಿಥ್ಯ ಒಂದೇ ಪ್ರಮಾಣದ್ದಾಗಿತ್ತೇ ಎಂಬ ತುಲನೆ ನಡೆದಿದೆ.

ಪುಟಿನ್ ಹಾಗೂ ಟ್ರಂಪ್ ಅವರ ಜೊತೆಗೆ ಷಿ ಜಿನ್‌ಪಿಂಗ್ ಎಷ್ಟು ಸೆಕೆಂಡುಗಳವರೆಗೆ ಹಸ್ತಲಾಘವ ಮಾಡಿದರು, ಯಾರ ಜೊತೆಗೆ ಆತ್ಮೀಯವಾಗಿ ನಡೆದುಕೊಂಡರು– ಹೀಗೆ ಪ್ರತೀಕ್ಷಣವನ್ನೂ ಮಸೂರನೋಟದಲ್ಲಿ ನೋಡಲಾಗಿದೆ. ಎರಡು ದೊಡ್ಡಮಟ್ಟದ ಸಂಘರ್ಷಗಳು ಚಾಲ್ತಿಯಲ್ಲಿರುವಾಗ, ಇರಾನ್ ಜೊತೆಗಿನ ಅಮೆರಿಕದ ಸಂಘರ್ಷ ತೈಲ ಬಿಕ್ಕಟ್ಟಿಗೆ ಕಾರಣವಾಗಿರುವಾಗ, ಮೂರು ದಿಗ್ಗಜ ಹಾಗೂ ನಿರ್ಣಾಯಕ ರಾಷ್ಟ್ರಗಳ ನಾಯಕರ ಭೇಟಿ ಜಗತ್ತಿನ ಗಮನ ಸೆಳೆದುದು ಸಹಜವೇ.

ಅಮೆರಿಕದ ಅಧ್ಯಕ್ಷರು ಚೀನಾಕ್ಕೆ ಭೇಟಿ ನೀಡುವ ಮತ್ತು ಚೀನಾದ ವರಿಷ್ಠರು ಅಮೆರಿಕದ ಅಧ್ಯಕ್ಷರೊಂದಿಗೆ ಆಪ್ತವಾಗಿ ನಡೆದುಕೊಳ್ಳುವ ದೃಶ್ಯಗಳು ಅಪರೂಪ. ಡೊನಾಲ್ಡ್ ಟ್ರಂಪ್ ತಮ್ಮ ಮೊದಲ ಅಧ್ಯಕ್ಷೀಯ ಅವಧಿಯಲ್ಲಿ ಚೀನಾಕ್ಕೆ ಭೇಟಿಯಿತ್ತಿದ್ದರು. ಷಿ ಜಿನ್‌ಪಿಂಗ್ ಕೂಡ ಅಮೆರಿಕಕ್ಕೆ ಹೋಗಿ ಬಂದಿದ್ದರು. ಅದು ಬಿಟ್ಟರೆ ಉಭಯ ನಾಯಕರು ಜಾಗತಿಕ ವೇದಿಕೆಗಳಲ್ಲಿ ಕೆಲವು ಬಾರಿ ಕೈ ಕುಲುಕಿದ್ದರು. ಅಮೆರಿಕ ಮತ್ತು ಚೀನಾಕ್ಕೆ ಹೋಲಿಸಿದರೆ, ಚೀನಾ ಮತ್ತು ರಷ್ಯಾದ ಸಂಬಂಧ ನಿಕಟ ಎನ್ನಬಹುದು. ಕಳೆದ 12 ವರ್ಷಗಳಲ್ಲಿ ಷಿ ಜಿನ್‌ಪಿಂಗ್ ಅವರು ರಷ್ಯಾಕ್ಕೆ 10 ಬಾರಿ ಭೇಟಿಯಿತ್ತಿದ್ದಾರೆ. ಪುಟಿನ್ ಅವರು ಚೀನಾಕ್ಕೆ 14 ಬಾರಿ ಬಂದು ಹೋಗಿದ್ದಾರೆ. ಕೋವಿಡ್ ತೀವ್ರತೆಯಿದ್ದ 2020 ಮತ್ತು 2021ನ್ನು ಹೊರತುಪಡಿಸಿದರೆ ಪ್ರತೀವರ್ಷ ಪುಟಿನ್ ಚೀನಾಕ್ಕೆ ಭೇಟಿಯಿತ್ತಿದ್ದಾರೆ! ಅದಕ್ಕೆ ಕಾರಣವೂ ಇದೆ.

ಚೀನಾ ಮತ್ತು ರಷ್ಯಾ ಇತ್ತೀಚಿನ ವರ್ಷಗಳಲ್ಲಿ ಹಲವು ಜಾಗತಿಕ ವಿಷಯಗಳಲ್ಲಿ ಜೊತೆಯಾಗಿ ಹೆಜ್ಜೆಯಿಡುತ್ತಿವೆ. ಚೀನಾ ಮತ್ತು ಅಮೆರಿಕದ ನಡುವಿನ ವಾಣಿಜ್ಯ ಸಮರ, ರಷ್ಯಾ ಮತ್ತು ಅಮೆರಿಕ ನಡುವಿನ ಹಲವು ದಶಕಗಳ ಪೈಪೋಟಿ ಹಾಗೂ ಉಕ್ರೇನ್ ಕುರಿತ ನಿಲುವು ರಷ್ಯಾ ಹಾಗೂ ಚೀನಾದ ದೃಷ್ಟಿಯಲ್ಲಿ ಅಮೆರಿಕವನ್ನು ಸಮಾನ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದೆ. ಇದೀಗ ಉಕ್ರೇನ್, ಇರಾನ್ ಮತ್ತು ತೈವಾನ್ ವಿಷಯಗಳು ಈ ತ್ರಿಪಕ್ಷೀಯ ಸಂಬಂಧವನ್ನು ಮರುರೂಪಿಸುತ್ತಿರುವಂತೆ ಕಾಣುತ್ತಿದೆ.

ಟ್ರಂಪ್ ಅವರು ಚೀನಾಕ್ಕೆ ಭೇಟಿಯಿತ್ತಾಗ ಇರಾನ್ ಬಿಕ್ಕಟ್ಟಿನ ಕುರಿತು ಮಾತುಕತೆ ನಡೆಯಬಹುದೇ, ಚೀನಾ ಮಧ್ಯವರ್ತಿಯಾದೀತೆ ಎಂಬ ಪ್ರಶ್ನೆಗಳು ಇದ್ದವು. ಟ್ರಂಪ್ ಅವರು ಚೀನಾಕ್ಕೆ ಭೇಟಿ ನೀಡುವ ವಾರದ ಮೊದಲು (ಮೇ 6ರಂದು) ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಚೀನಾಕ್ಕೆ ಭೇಟಿಯಿತ್ತಿದ್ದರು. ಚೀನಾದ ಕಚ್ಚಾತೈಲದ ಹಡಗುಗಳಿಗೆ ಹೊರ್ಮುಜ್ ಜಲಸಂಧಿಯಲ್ಲಿ ಯಾವುದೇ ತೊಂದರೆಯಾಗುವುದಿಲ್ಲ ಎಂಬ ಭರವಸೆಯನ್ನು ಇರಾನ್ ನೀಡಿತ್ತು. ಅಮೆರಿಕ ಮತ್ತು ಇಸ್ರೇಲ್‌ನ ಜಂಟಿ ದಾಳಿಯನ್ನು ಇರಾನ್ ಸಮರ್ಥವಾಗಿ ಎದುರಿಸಲು ಸಾಧ್ಯವಾಗಿರುವುದು ಚೀನಾ ಮತ್ತು ರಷ್ಯಾಗಳ ಸಹಕಾರದಿಂದ ಎಂಬುದು ಗುಟ್ಟಾಗಿ ಉಳಿದಿಲ್ಲ. ಈ ಹಿನ್ನೆಲೆಯಲ್ಲಿ ಟ್ರಂಪ್ ಮತ್ತು ಷಿ ಜಿನ್‌ಪಿಂಗ್ ಅವರ ಭೇಟಿ ಕುತೂಹಲ ಕೆರಳಿಸಿತ್ತು.

ಆದರೆ, ಇರಾನ್ ಬಿಕ್ಕಟ್ಟಿನ ಕುರಿತು ದೀರ್ಘವಾದ ಚರ್ಚೆಗಳು ನಡೆಯಲಿಲ್ಲ. ಪ್ರಾಯಶಃ, ಚೀನಾ ಅದರಲ್ಲಿ ಆಸಕ್ತಿ ತೋರಿಸಿಲ್ಲದೇ ಇರಬಹುದು. ಹಾಗಾಗಿ, ಇರಾನ್ ಬಿಕ್ಕಟ್ಟಿನ ಪರಿಹಾರಕ್ಕೆ ಚೀನಾದ ಸಹಾಯ ಬೇಕಿಲ್ಲ ಎಂಬ ಮಾತನ್ನು ಟ್ರಂಪ್ ಆಡಿದರು. ಇರಾನ್ ಅಣ್ವಸ್ತ್ರ ರಾಷ್ಟ್ರವಾಗುವುದನ್ನು ಮತ್ತು ಹೊರ್ಮುಜ್ ಜಲಸಂಧಿಯ ಮೇಲೆ ನಿಯಂತ್ರಣ ಸಾಧಿಸುವುದನ್ನು ಚೀನಾ ಒಪ್ಪುವುದಿಲ್ಲ ಎಂಬ ಮಾತು ಪ್ರಸ್ತಾಪವಾಯಿತೇ ಹೊರತು ಬಿಕ್ಕಟ್ಟನ್ನು ಬಗೆಹರಿಸುವ ನಿಟ್ಟಿನಲ್ಲಿ ಚೀನಾ ಸಕ್ರಿಯವಾಗಿ ತೊಡಗಿಕೊಳ್ಳಬಹುದೇ ಎಂಬ ಕುರಿತು ಚರ್ಚೆ ಆಗಲಿಲ್ಲ.

> ಚೀನಾ ಹಾಗೂ ರಷ್ಯಾ ಮಿತ್ರರಾಷ್ಟ್ರಗಳು. ಈ ಎರಡು ದೇಶಗಳಿಂದ ಅಮೆರಿಕ ಸಮಾನ ಅಂತರ ಕಾಪಾಡಿಕೊಂಡಿದೆ. ವಿಶ್ವ ಕುದಿಕುಲುಮೆಯ ಸ್ವರೂಪ ತಳೆದಿರುವ ಸಂದರ್ಭದಲ್ಲಿ, ಈ ಮೂರು ದೇಶಗಳಿಗೆ ಸಂಬಂಧಿಸಿದ ರಾಜತಾಂತ್ರಿಕ ಮಾತುಕತೆಗಳು ವಿಶ್ವದ ಗಮನಸೆಳೆದಿವೆ.

ಅಮೆರಿಕ ಅಧ್ಯಕ್ಷರ ಎದುರು ತೈವಾನ್ ವಿಷಯವನ್ನು ಚೀನಾ ಪ್ರಸ್ತಾಪಿಸಿತು. ಈ ಶೃಂಗಸಭೆಯಲ್ಲಿ ಚೀನಾ ಮೇಲುಗೈ ಸಾಧಿಸಿತು ಎಂಬ ವಿಶ್ಲೇಷಣೆಗಳು ಬರುತ್ತಿರುವುದಕ್ಕೆ ಅದೇ ಕಾರಣ. 'ಒಂದು ಚೀನಾ' ನೀತಿಗೆ ಅನುಗುಣವಾಗಿ ಬೃಹತ್ ಚೀನಾದ ಭಾಗವಾಗಿ ತೈವಾನ್ ಇರಬೇಕು ಎಂಬುದು ಚೀನಾದ ನಿಲುವು. ಆದರೆ, ತೈವಾನ್ ತನ್ನ ಸಾರ್ವಭೌಮತ್ವವನ್ನು ಬಿಟ್ಟುಕೊಡಲು ಸಿದ್ಧವಿಲ್ಲ. ಅಮೆರಿಕ ತನ್ನ ರಕ್ಷಣೆಗೆ ನಿಲ್ಲಲಿದೆ ಎಂಬ ವಿಶ್ವಾಸ ಅದಕ್ಕಿದೆ. 1979ರಲ್ಲಿ ಅಮೆರಿಕದ ಸಂಸತ್ತಿನಲ್ಲಿ ಅನುಮೋದನೆಗೊಂಡ ತೈವಾನ್ ಸಂಬಂಧ ಕಾಯ್ದೆಯ ಅನ್ವಯ ತೈವಾನ್ ಆಡಳಿತವನ್ನು ಅಧಿಕೃತವಾಗಿ ಅಮೆರಿಕ ಗುರ್ತಿಸದಿದ್ದರೂ, ಅದರ ಸ್ವರಕ್ಷಣೆಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ಒದಗಿಸಲು ಬದ್ಧವಾಗಿದೆ.

ಈ ಹಿಂದೆ ತೈವಾನ್‌ಗೆ ಸಂಬಂಧಿಸಿದಂತೆ ಚೀನಾ ಆಕ್ರಮಣಕಾರಿ ಹೆಜ್ಜೆ ಇಡುತ್ತಿದೆ ಎನಿಸಿದಾಗ ತೈವಾನ್ ರಕ್ಷಣೆಗೆ ಅಮೆರಿಕ ಧಾವಿಸಿತ್ತು. 1995ರಲ್ಲಿ ತೈವಾನ್ ಜಲಸಂಧಿ ಬಿಕ್ಕಟ್ಟು ಉದ್ಭವಿಸಿದಾಗ, ಆಗಿನ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಚೀನಾವನ್ನು ತಡೆಯಲು ಯುಎಸ್‌ಎಸ್ ನಿಮಿಟ್ಜ್ ವಿಮಾನವಾಹಕ ನೌಕೆಯನ್ನು ತೈವಾನ್ ಜಲಸಂಧಿಗೆ ಕಳುಹಿಸಿದ್ದರು. ಹಾಗಾಗಿ, ಚೀನಾ–ಅಮೆರಿಕ ಸಂಬಂಧಗಳಲ್ಲಿ ತೈವಾನ್ ಪ್ರಶ್ನೆ ಅತ್ಯಂತ ಪ್ರಮುಖ ವಿಷಯವಾಗಿದೆ.

ಟ್ರಂಪ್ ಅವರು ಇತ್ತೀಚಿನ ಚೀನಾ ಭೇಟಿಯ ವೇಳೆ ತೈವಾನ್‌ಗೆ ಅಮೆರಿಕದ ಬೆಂಬಲವನ್ನು ಸ್ಪಷ್ಟವಾಗಿ ಪುನರುಚ್ಚರಿಸಲಿಲ್ಲ. ಬದಲಿಗೆ ತೈವಾನ್ ಕುರಿತು ಚೀನಾ ಭಾವನಾತ್ಮಕ ನಿಲುವು ಹೊಂದಿದೆ ಎಂಬರ್ಥದಲ್ಲಿ ಮಾತನಾಡಿದರು! ತೈವಾನ್‌ಗೆ ಶಸ್ತ್ರಾಸ್ತ್ರ ಮಾರಾಟವನ್ನು ಅಮೆರಿಕ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತು. ಅದಕ್ಕೆ ಇರಾನ್ ಸಂಘರ್ಷ ಕಾರಣ ಎನ್ನಲಾಯಿತು. ಇರಾನ್, ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ವಿಷಯದಲ್ಲಿ ಚೀನಾದ ಸಹಕಾರ ಅಮೆರಿಕಕ್ಕೆ ಬೇಕಿದ್ದರೆ, ತೈವಾನ್ ವಿಷಯದಲ್ಲಿ ಅಮೆರಿಕ ತಟಸ್ಥವಾಗಿರಬೇಕು ಎಂಬ ಸಂದೇಶ ಪರೋಕ್ಷವಾಗಿಯಾದರೂ ಚೀನಾದಿಂದ ರವಾನೆಯಾಗಿರಲಿಕ್ಕೆ ಸಾಕು.

ಅಚ್ಚರಿ ಎಂದರೆ, ಟ್ರಂಪ್ ಅವರು ಎರಡು ದಿನಗಳ ಕಾಲ ಚೀನಾದಲ್ಲಿದ್ದರೂ ಜಂಟಿ ಹೇಳಿಕೆ ಹೊರಬರಲಿಲ್ಲ. ಎರಡು ರಾಷ್ಟ್ರಗಳು ಸಾಧಿಸಿದ ಒಪ್ಪಂದಗಳ ಕುರಿತು ವರದಿಗಳನ್ನು ಮಾತ್ರ ಬಿಡುಗಡೆ ಮಾಡಲಾಯಿತು. ಅದರಲ್ಲಿ ಬೋಯಿಂಗ್ ವಿಮಾನಗಳ ಮಾರಾಟ, ಕೃಷಿ ರಫ್ತಿನ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದು ಮತ್ತು ಭವಿಷ್ಯದ ಸುಂಕ ಕಡಿತಗಳ ಉಲ್ಲೇಖಗಳು ಇದ್ದವು. ಮೊದಲಿಗೆ 500 ಬೋಯಿಂಗ್ ವಿಮಾನಗಳನ್ನು ಚೀನಾ ಖರೀದಿಸಲಿದೆ ಎನ್ನಲಾಗಿತ್ತು, ಆದರೆ ಆ ಸಂಖ್ಯೆ 200ಕ್ಕೆ ಇಳಿಕೆಯಾಯಿತು. ಹಾಗಾಗಿ ಚೀನಾ ಭೇಟಿಯಿಂದ ಅಮೆರಿಕಕ್ಕೆ ಆದ ಪ್ರಯೋಜನವೇನು ಎಂಬ ಪ್ರಶ್ನೆ ಅಮೆರಿಕದಲ್ಲಿ ಕೇಳಿಬರುತ್ತಿದೆ.

ಟ್ರಂಪ್ ಅವರು ಚೀನಾಕ್ಕೆ ಬಂದುಹೋದ ಬೆನ್ನಲ್ಲೇ, ಪುಟಿನ್ ಅವರ ಚೀನಾ ಭೇಟಿ ನಡೆದಿದೆ. ಅದರಲ್ಲಿ ಅಚ್ಚರಿ ಏನಿಲ್ಲ. ನಾಲ್ಕು ವರ್ಷಗಳಿಂದ ಉಕ್ರೇನ್ ಸಂಘರ್ಷ ಚಾಲ್ತಿಯಲ್ಲಿದ್ದರೂ, ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ದಿಗ್ಬಂಧನ ಹೇರಿದ್ದರೂ ರಷ್ಯಾ ಕುಗ್ಗಿಲ್ಲ ಎಂದರೆ ಅದಕ್ಕೆ ಚೀನಾದ ಬೆಂಬಲ ಕಾರಣ ಎಂಬುದು ಸ್ವತಃ ಅಮೆರಿಕಕ್ಕೆ ಗೊತ್ತಿದೆ. ಹಲವು ರಾಷ್ಟ್ರಗಳ ನಾಯಕರು ಇತ್ತೀಚಿನ ವರ್ಷಗಳಲ್ಲಿ ಚೀನಾಕ್ಕೆ ಭೇಟಿ ನೀಡುವುದು ಸಾಮಾನ್ಯವಾಗಿದೆ. ಜಾಗತಿಕ ರಾಜಕೀಯದಲ್ಲಿ ಅನಿವಾರ್ಯ ಕೇಂದ್ರಬಿಂದುವಾಗಿ ಚೀನಾ ಹೊರಹೊಮ್ಮುತ್ತಿದೆ. ಎಲೆಕ್ಟ್ರಾನಿಕ್ಸ್, ಬ್ಯಾಟರಿಗಳು, ಔಷಧಗಳು ಮತ್ತು ನಿರ್ಣಾಯಕ ಖನಿಜಗಳ ವಿಷಯದಲ್ಲಿ ಜಾಗತಿಕ ಪೂರೈಕೆ ಜಾಲ ಚೀನಾದ ಮೇಲೆ ಅವಲಂಬಿತವಾಗಿದೆ.

ಚೀನಾ ಮತ್ತು ಅಮೆರಿಕಕ್ಕೆ ಸಂಬಂಧಿಸಿದಂತೆ ಏಷ್ಯಾದ ಅನೇಕ ರಾಷ್ಟ್ರಗಳು ಮಿಶ್ರ ತಂತ್ರಗಳನ್ನು ಅನುಸರಿಸುತ್ತಿವೆ. ಭದ್ರತೆಗಾಗಿ ಅಮೆರಿಕವನ್ನು ಅವಲಂಬಿಸಿದರೂ, ಆರ್ಥಿಕವಾಗಿ ಚೀನಾದೊಂದಿಗೆ ಹೆಣೆದುಕೊಂಡಿವೆ. ನಾವು ಚೀನಾದ ಜೊತೆಗೆ ಗಡಿಯನ್ನು ಹಂಚಿಕೊಂಡಿರುವುದರಿಂದ ಹಾಗೂ ಹಲವು ಕ್ಷೇತ್ರಗಳಲ್ಲಿ ಪ್ರತಿಸ್ಪರ್ಧಿಗಳಾಗಿರುವುದರಿಂದ ಭಾರತ ಮತ್ತು ಚೀನಾದ ಸಂಬಂಧ ಜಟಿಲವಾಗಿದೆ. ಈ ಅಂಶವನ್ನೇ ಪ್ರಧಾನವಾಗಿಟ್ಟುಕೊಂಡು ಭಾರತವನ್ನು ಒಳಗೊಂಡು ಅಮೆರಿಕ 'ಕ್ವಾಡ್ ಒಕ್ಕೂಟ' ರಚಿಸಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಅಮೆರಿಕ ಕ್ವಾಡ್ ಕುರಿತು ಆಸಕ್ತಿ ಕಳೆದುಕೊಂಡಿದೆ ಮತ್ತು ಕ್ವಾಡ್ ಶೃಂಗಸಭೆ ವಿದೇಶಾಂಗ ಸಚಿವರ ಪಾಲ್ಗೊಳ್ಳುವಿಕೆಯ ಮಟ್ಟಕ್ಕೆ ಇಳಿದಿದೆ. ಚೀನಾ ಹಾಗೂ ರಷ್ಯಾದ ನಡುವೆ ಗಟ್ಟಿಯಾಗುತ್ತಿರುವ ಬಂಧ ಭಾರತದ ಕಳವಳವನ್ನು ಹೆಚ್ಚಿಸಿದೆ.

1972ರಲ್ಲಿ ಬೀಜಿಂಗ್‌ನಲ್ಲಿ ಅಂದಿನ ಅಮೆರಿಕ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು ಚೀನಾದ ವರಿಷ್ಠ ಮಾವೋ ಜೆಡಾಂಗ್ ಅವರನ್ನು ಭೇಟಿಯಾಗಿದ್ದರು. ಅದು ದೊಡ್ಡ ಸಂಚಲನ ಸೃಷ್ಟಿಸಿತ್ತು. ಆ ಭೇಟಿ ದಶಕಗಳ ಕಾಲ ಚೀನಾ ಮತ್ತು ಅಮೆರಿಕ ನಡುವೆ ಇದ್ದ ಬಿಗುವಿನ ವಾತಾವರಣವನ್ನು ತಿಳಿಗೊಳಿಸಿತ್ತು. 'ಒಂದು ಚೀನಾ' ನೀತಿಯನ್ನು ಅಮೆರಿಕ ಅನುಮೋದಿಸಿತ್ತು. ಸೋವಿಯತ್ ವಿರುದ್ಧ ಉಭಯ ರಾಷ್ಟ್ರಗಳ ನಡುವೆ ಮೌನ ಮೈತ್ರಿ ಏರ್ಪಟ್ಟಿತ್ತು. ಇದೀಗ ಟ್ರಂಪ್ ಅವರು ಚೀನಾಕ್ಕೆ ಬಂದು ಹೋಗಿದ್ದಾರೆ. ಮೈತ್ರಿಗಿಂತ ಮೌನ ಎದ್ದು ಕಂಡಿದೆ. ಇದು ಇರುವ ಸಂಘರ್ಷಗಳನ್ನು ಕೊನೆಗಾಣಿಸುತ್ತದೋ ಇಲ್ಲವೇ ಹೊಸದಕ್ಕೆ ಜಾಗ ಮಾಡಿಕೊಡುತ್ತದೋ ಕಾದು ನೋಡಬೇಕು.



ವಾಚಕರ ವಾಣಿ

ಹಾರೈಕೆ ಮಾತುಗಳ ವೈಭವೀಕರಣ ಬೇಡ

'ನಾನು ರಾಜನಾಗುವೆ ಎಂದು ನೊಣವಿನಕೆರೆ ಅಜ್ಜಯ್ಯ ಬಾಲ್ಯದಲ್ಲಿ ಹೇಳಿದ್ದರು. ಅಜ್ಜಯ್ಯನ ಅನುಗ್ರಹದಿಂದ ಮುಖ್ಯಮಂತ್ರಿ ಆಗುತ್ತಿದ್ದೇನೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಇಂಥ ಮಾತುಗಳನ್ನು ಆಡುವುದು ಸಮಾಜಕ್ಕೆ ಬೇರೆಯದೇ ಆದ ಸಂದೇಶವನ್ನು ಕೊಡುತ್ತದೆ. ಮಠಮಂದಿರಗಳಿಗೆ ಮಕ್ಕಳನ್ನು ಕರೆದುಕೊಂಡು ಬರುವ ಭಕ್ತರಿಗೆ ಅಲ್ಲಿನ ಗುರುಗಳು, 'ನಿಮ್ಮ ಮಗು ಮುಂದೆ ದೊಡ್ಡ ಮನುಷ್ಯನಾಗುತ್ತಾನೆ; ರಾಜ್ಯ, ದೇಶ ಆಳುತ್ತಾನೆ' ಎಂದು ಹಾರೈಕೆಯ ನುಡಿ ಹೇಳುವುದು ಸಾಮಾನ್ಯ ಸಂಗತಿ. ಇದಕ್ಕೆ ವಿಶೇಷ ಮಹತ್ವ ಕೊಡಬೇಕಾಗಿಲ್ಲ. ಕಂದಾಚಾರ ಹೆಚ್ಚಾಗುವ ಅಪಾಯ ಇರುವುದರಿಂದ ಇಂಥ ಮಾತುಗಳ ವೈಭವೀಕರಣವೂ ಸರಿಯಲ್ಲ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

'ವಿಐಪಿ ಸಂಸ್ಕೃತಿ'ಗೆ ಬೇಕಿದೆ ತುರ್ತು ಚಿಕಿತ್ಸೆ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಸಂಚಾರಕ್ಕಾಗಿ ಅರ್ಧಗಂಟೆ ರಸ್ತೆ ಬಂದ್ ಮಾಡಲಾಗಿದೆ. ಇದರಿಂದ ಗರ್ಭಿಣಿ ಪತ್ನಿಯನ್ನು ಆಸ್ಪತ್ರೆಗೆ ಸೇರಿಸಲು ಪರದಾಡಿ ಕೊನೆಗೆ ರಸ್ತೆಮಧ್ಯದಲ್ಲಿ ಕುಳಿತು ಪತಿ ಧರಣಿ ಮಾಡಿದ್ದಾರೆ. ದೇಶದಲ್ಲಿ 'ವಿಐಪಿ ಸಂಸ್ಕೃತಿ'ಯು ಕೆಟ್ಟ ಸಂಪ್ರದಾಯವಾಗಿದೆ; ಇದು ಅಸಾಂವಿಧಾನಿಕವೂ ಆಗಿದೆ. ಭದ್ರತೆ ವಿಷಯದಲ್ಲಿ ಇದು ಅನಿವಾರ್ಯವಾದರೂ ಗಂಟೆಗಟ್ಟಲೆ ಸವಾರರಿಗೆ ದಿಗ್ಬಂಧನ ಹಾಕುವುದು ಎಷ್ಟು ಸರಿ? ಮಂತ್ರಿ ಮಹೋದಯರಿಗೆ ಅವರ ಕೆಲಸ ಎಷ್ಟು ಮುಖ್ಯವೋ, ಸಾಮಾನ್ಯ ಪ್ರಜೆಯ ಕೆಲಸವೂ ಅಷ್ಟೇ ಮುಖ್ಯವಲ್ಲವೆ? ಪ್ರತಿಯೊಬ್ಬರಿಗೂ ಅವರವರದೇ ಆದ ತುರ್ತು ಇರುತ್ತದೆ. ಅದನ್ನು ಆಡಳಿತ ನಡೆಸುವವರು ಅರ್ಥ ಮಾಡಿಕೊಳ್ಳಬೇಕು. ಅಧಿಕಾರಸ್ಥರು ಮಾಡಿಕೊಂಡಿರುವ ಈ ಅಲಿಖಿತ ಗೊಡ್ಡು ಸಂಪ್ರದಾಯಕ್ಕೆ ತಿಲಾಂಜಲಿ ನೀಡಬೇಕಿದೆ.

ರಾಜು ಬಿ. ಲಕ್ಕಂಪುರ, ಜಗಳೂರು

ಮಕ್ಕಳ ಮೊಗ್ಗಿನ ಮನಸ್ಸು ಚಿವುಟದಿರಿ

'ಪ್ರಜಾವಾಣಿ'ಯ ಜೂನ್ 2ರ ಸಂಚಿಕೆಯಲ್ಲಿ ಎರಡು ವಿಶಿಷ್ಟ ಫೋಟೊಗಳು ಪ್ರಕಟವಾಗಿವೆ. ಶಾಲೆಯ ಪ್ರಾರಂಭದ ದಿನ ಶಿಕ್ಷಕಿಯರು ಮಕ್ಕಳಿಗೆ ಪುಷ್ಪವೃಷ್ಟಿ ಮಾಡಿ ಸ್ವಾಗತಿಸುತ್ತಿರುವ ಫೋಟೊ ಒಂದು; 'ಶ್ರೀರಾಮ ಸೇನೆ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ'ಯ ಸದಸ್ಯರು ಹದಿಹರೆಯದ ವಿದ್ಯಾರ್ಥಿಗಳಿಗೆ ಶಾಲೆಯ ಆವರಣದಲ್ಲಿ ಕೇಸರಿ ಶಾಲು ಕೊಡುತ್ತಿರುವ ಫೋಟೊ ಇನ್ನೊಂದು. ಶಿಕ್ಷಕರಲ್ಲಿ ಮನವಿ ಇಷ್ಟೆ: ಮೊದಲ ದಿನ ಮಕ್ಕಳ ಮೇಲೆ ಹೂಮಳೆ ಸುರಿಸದಿದ್ದರೂ ಪರವಾಗಿಲ್ಲ. ಶಾಲಾ ದಿನಗಳಲ್ಲಿ ಎಳೆಯ ಮನಸ್ಸಿನ ಮೇಲೆ ಶಿಸ್ತಿನ ಹೆಸರಿನಲ್ಲಿ ಸಲ್ಲದ ಕಟ್ಟುಪಾಡು ಹೇರದೆ ಸ್ವಚ್ಛಂದವಾಗಿ ಕಲಿಯಲು ಬಿಡಿ. 'ಸೇನೆ' ಸದಸ್ಯರಲ್ಲಿ ಮನವಿ: ಕಾರಣ ಏನೇ ಇರಲಿ, ಹರೆಯದ ಹುಡುಗರ ಮನದಲ್ಲಿ ಸ್ನೇಹ–ಸೌಹಾರ್ದ ಮೂಡಿಸುವ ಬದಲು, ಧರ್ಮ–ಜಾತಿ ತಾರತಮ್ಯ ನಿವಾರಣೆಯ ಸೋಗಿನಲ್ಲಿ ಪರೋಕ್ಷವಾಗಿ ಮತೀಯ ದ್ವೇಷಭಾವ ಬಿತ್ತಬೇಡಿ.

ಎಚ್‌. ಆನಂದರಾಮ ಶಾಸ್ತ್ರೀ, ಬೆಂಗಳೂರು

ನೈರುತ್ಯ ರೈಲ್ವೆಯ ಮಲತಾಯಿ ಧೋರಣೆ

ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯ ಮೂರು ರೈಲ್ವೆ ವಿಭಾಗಗಳ ಗೂಡ್ಸ್ ವಿಭಾಗದ ಸರಕು ಸಾಗಾಣಿಕೆ ಆದಾಯ ಗಳಿಕೆಯಲ್ಲಿ ಹುಬ್ಬಳ್ಳಿ ವಿಭಾಗವು ಮೊದಲಿನಿಂದಲೂ ಮುಂಚೂಣಿಯಲ್ಲಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಹುಬ್ಬಳ್ಳಿ ವಿಭಾಗದಲ್ಲಿ ₹4,097.94 ಕೋಟಿ ಆದಾಯ ಸಂಗ್ರಹವಾಗಿದೆ. ಬೆಂಗಳೂರು ವಿಭಾಗದಲ್ಲಿ ₹351.45 ಕೋಟಿ ಹಾಗೂ ಮೈಸೂರು ವಿಭಾಗದಲ್ಲಿ ₹908.12 ಕೋಟಿ ಸಂಗ್ರಹವಾಗಿದೆ. ಹುಬ್ಬಳ್ಳಿ ವಿಭಾಗದ ಆದಾಯದಲ್ಲಿ ವಿಜಯನಗರ, ಬಳ್ಳಾರಿ ಜಿಲ್ಲೆಗಳಿಂದ ಶೇ 70ರಷ್ಟು ಗಳಿಕೆ ಇದ್ದರೂ ರೈಲ್ವೆ ಸೌಲಭ್ಯದಲ್ಲಿ ಈ ಎರಡು ಜಿಲ್ಲೆಗಳನ್ನು ಕಡೆಗಣಿಸಲಾಗಿದೆ. ಬಿಜೆಪಿ ಪ್ರಭಾವಿ ಸಂಸದರ ಕ್ಷೇತ್ರಗಳಿಗೆ ಆದ್ಯತೆ ನೀಡಿ ಅಧಿಕ ಆದಾಯ ನೀಡುತ್ತಿರುವ ಜಿಲ್ಲೆಗಳನ್ನು ನಿರ್ಲಕ್ಷಿಸಿರುವುದು ಸರಿಯೆ?

ವೈ. ಯಮುನೇಶ್, ಹೊಸಪೇಟೆ

ಗೋವಿನ ಹತ್ಯೆ: ಇಬ್ಬಗೆಯ ನೀತಿ ಯಾರದು?

ಒಂದೆಡೆ ಗೋವಿನ ಹತ್ಯೆಗೆ ಪ್ರೋತ್ಸಾಹಿಸಿ, ಇನ್ನೊಂದೆಡೆ ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಲು ಒತ್ತಾಯಿಸುವುದು ಮುಸ್ಲಿಂ ಧರ್ಮಗುರುಗಳ ಇಬ್ಬಗೆಯ ನೀತಿ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಗೋವು ಈಗಾಗಲೇ ನಮ್ಮ ತಾಯಿ; ತಾಯಿ ಮತ್ತು ಮಗುವಿನ ನಡುವಿನ ಸಂಬಂಧವನ್ನು ವ್ಯಾಖ್ಯಾನಿಸಲು ಯಾವುದೇ ಘೋಷಣೆಯ ಅಗತ್ಯವಿಲ್ಲವೆಂದು ಪ್ರತಿಪಾದಿಸಿದ್ದಾರೆ. ಹಾಗಿದ್ದರೆ ದೇಶದಲ್ಲಿನ ಗೋಮಾಂಸ ರಫ್ತು ವ್ಯವಹಾರವನ್ನು ಇಡೀ ವಿಶ್ವದಲ್ಲೇ 2ನೇ ಸ್ಥಾನಕ್ಕೆ ಏರುವಂತೆ ಮಾಡಿರುವುದು ಕೂಡ ಇಬ್ಬಗೆಯ ನೀತಿಯಲ್ಲವೇ?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ನೇಮಕ ವಿಳಂಬ: ಇನ್ನೆಷ್ಟು ದಿನ ವನವಾಸ

ಪರಿಶಿಷ್ಟ ಜಾತಿಯ ಒಳಮೀಸಲಾತಿ ವಿಷಯವಾಗಿ ಒಂದು ವರ್ಷ ಸರ್ಕಾರಿ ಹುದ್ದೆಗಳ ನೇರ ನೇಮಕಾತಿಯು ಸ್ಥಗಿತಗೊಂಡಿತು. ಮೀಸಲಾತಿ ಸರಿಯಾಗಿ ಹಂಚಿಕೆಯಾಗಿಲ್ಲವೆಂದು ಮತ್ತೆ ಮುಂದೂಡಲಾಯಿತು. ಈ ನಡುವೆ ವಿಧಾನಸಭಾ ಉಪಚುನಾವಣೆಯೂ ತಡೆಗೋಡೆಯಾಯಿತು. ಒಳಮೀಸಲಾತಿ ಜಾರಿಯಾದರೂ ರೋಸ್ಟರ್ ಬಿಂದುಗಳ ವರ್ಗೀಕರಣ ಗೊಂದಲವು ಮತ್ತೆ ಅಡ್ಡಿಯಾಯಿತು. ಎಲ್ಲ ಆತಂಕಗಳು ನಿವಾರಣೆಯಾಗಿವೆ ಎನ್ನುವಾಗಲೇ ಮುಖ್ಯಮಂತ್ರಿ ಬದಲಾವಣೆ ವಿಷಯ ಮುನ್ನೆಲೆಗೆ ಬಂದು ನೇಮಕಾತಿಯು ಹಳ್ಳ ಹಿಡಿದಿದೆ. ಇನ್ನೊಂದು ವರ್ಷ ಮುಗಿದರೆ 2028ರ ಚುನಾವಣೆಗೆ ಸರ್ಕಾರ ಸಜ್ಜಾಗಲಿದೆ. ಉದ್ಯೋಗ ನಂಬಿಕೊಂಡು ಕುಳಿತವರಿಗೆ ಇನ್ನೆಷ್ಟು ದಿನ ವನವಾಸ ಎಂಬುದು ತಿಳಿಯದಾಗಿದೆ.

ಪವನ್ ಜಯರಾಂ, ಚಾಮರಾಜನಗರ

ಚುರುಮುರಿ



ಸರ್ಕಾರಿ ಸರ್ವೀಸ್

• ಮಣ್ಣೆ ರಾಜು

ಹೊಸ ಪ್ರಯಾಣಕ್ಕೆ ಸರ್ಕಾರಿ ಬಸ್ ಸಿದ್ಧವಾಗಿತ್ತು. ಹೊಸ ಸಾರಥಿ ಸ್ಟೇರಿಂಗ್ ಹಿಡಿಯಲು ಸಜ್ಜಾಗಿದ್ದರು. ಬಸ್ ಹತ್ತಲು ಪ್ರಯಾಣಿಕರ ನೂಕುನುಗ್ಗಲು.

'ಹೊಸಬರಿಗೆ ಆದ್ಯತೆ ಕೊಡ್ತೀನಿ, ಅವರೂ ಪ್ರಯಾಣಸುಖ ಅನುಭವಿಸಲಿ. ಸೀಟು ಉಳಿದರೆ ಹಳೆ ಪ್ರಯಾಣಿಕರಿಗೆ ಅವಕಾಶ ಕೊಡ್ತೀನಿ' ಎಂದು ಡ್ರೈವರ್ ನಿಷ್ಠುರವಾಗಿ ಹೇಳಿದರು.

'ಸಾರ್, ರಸ್ತೆಯಲ್ಲಿ ಹಳ್ಳ–ಹಂಪ್ಸ್ ಇರ್ತವೆ. ಅಲುಗಾಡದಂತೆ ಸುರಕ್ಷಿತವಾಗಿ ಕರೆದೊಯ್ಯಿರಿ' ಪ್ರಯಾಣಿಕರ ಮನವಿ.

'ನನ್ನ ಡ್ರೈವಿಂಗ್ ಬಗ್ಗೆ ನಂಬಿಕೆ ಇರುವವರು ಕುಳಿತುಕೊಳ್ಳಿ, ಇಲ್ಲವಾದವರು ಇಳಿದುಹೋಗ್ರೀ...' ಚಾಲಕ ಸಿಟ್ಟಾದರು.

'ಸಾರ್, ನಮಗೂ ಬಸ್ ಹತ್ತಲು ಅವಕಾಶ ಮಾಡಿಕೊಡಿ' ಎಂದು ಕೆಲವರು ಗೋಗರೆದರು.

'ಫಿಲಪ್ ಆಗಿದೇರೀ, ಸೀಟು ಇಲ್ಲ'.

'ಸೀಟು ಇಲ್ಲದಿದ್ದರೂ ಪರ್ವಾಗಿಲ್ಲ ಸ್ಟಾಂಡಿಂಗ್ ಬರ್ತೀವಿ. ಮಾರ್ಗಮಧ್ಯೆ ಸೀಟು ಖಾಲಿಯಾದರೆ ಕೂರುತ್ತೇವೆ'.

'ಸ್ಟಾಂಡಿಂಗ್‌ಗೆ ಅವಕಾಶವಿಲ್ಲ, ಮುಂದಿನ ಟ್ರಿಪ್‌ಗೆ ಟ್ರೈ ಮಾಡಿಹೋಗ್ರಿ...' ರೇಗಿದರು.

'ನಡುದಾರಿಯಲ್ಲಿ ಬಸ್ ಕೆಟ್ಟರೆ ಯಾರು ರಿಪೇರಿ ಮಾಡ್ತಾರೆ ಸಾರ್?'

'ರಿಪೇರಿನೂ ಮಾಡ್ತೀನಿ, ಪಂಚರ್ರೂ ಹಾಕ್ತೀನಿ, ಮುಂದಿನ ಸೀಟಿಗೆ ಗುದ್ದಿಕೊಂಡು ಮುಖಮೂತಿ ಜಜ್ಜಿಕೊಂಡವರಿಗೆ ಟಿಂಚರ್ರೂ ಹಾಕಿ ಬ್ಯಾಂಡೇಜೂ ಕಟ್ತೀನಿ, ನಟ್ಟುಬೋಲ್ಟ್ ಟೈಟ್ ಮಾಡಿ ಇಡೀ ಬಸ್ ಕಂಟ್ರೋಲು ಮಾಡ್ತೀನಿ...'

ಪ್ರಯಾಣಿಕರು ಖುಷಿಯಾದರು.

'ಬಸ್‌ನಲ್ಲಿ ತೆಪ್ಪಗಿರಬೇಕು. ತಂಟೆತಕರಾರು ಮಾಡಕೂಡದು. ಆ ರೂಟಿನಲ್ಲಿ ಹೋಗು, ಈ ರೂಟಿನಲ್ಲಿ ಹೋಗು ಅಂತ ಯಾರೂ ಹೇಳಕೂಡದು. ನಾನೇ ಬೇರೆ ನನ್ನ ರೂಟೇ ಬೇರೆ...' ಖಡಕ್ಕಾಗಿ ಹೇಳಿದರು.

'ಫ್ರಂಟ್ ಸೀಟ್ ಬೇಕು, ಕಿಟಕಿ ಸೀಟು ಬೇಕು, ಬ್ಯಾಕ್ ಸೀಟು ಬೇಡ...' ಎಂದು ಪ್ರಯಾಣಿಕರು ಜಗಳಕ್ಕೆ ಬಿದ್ದರು.

'ಶ್! ಸೈಲೆನ್ಸ್... ಸಿಕ್ಕಿರುವ ಸೀಟಿನಲ್ಲಿ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಿ, ಗಲಾಟೆ ಗಿಲಾಟೆ ಮಾಡಿದರೆ ನಡುರಸ್ತೆಯಲ್ಲೇ ಬಸ್ ಇಳಿಸಿಬಿಡ್ತೀನಿ, ಹುಷಾರ್!' ಚಾಲಕ ಎಚ್ಚರಿಸಿದರು. ಎಲ್ಲರೂ ಗಪ್‌ಚುಪ್.

ಸಂಗತ

ಸಿಜೆಪಿ: ಪ್ರಜಾಸತ್ತಾತ್ಮಕ ಪ್ರತಿರೋಧದ ಮಾದರಿ

ಅಧಿಕಾರದಲ್ಲಿ ಇರುವವರು ಆಂತರಿಕವಾಗಿ ಟೊಳ್ಳಾಗಿರುವುದನ್ನು ಕಾಣಿಸುತ್ತಿರುವ 'ಸಿಜೆಪಿ', ವಿರೋಧ ಪಕ್ಷಗಳು ಸಂಘಟಿತಗೊಳ್ಳಬೇಕಾದ ಅಗತ್ಯವನ್ನು ಸೂಚಿಸುತ್ತಿದೆ.

• ಯೋಗೇಂದ್ರ ಯಾದವ್

ಸಾಂಪ್ರದಾಯಿಕ ರಾಜಕೀಯ ವಿಶ್ಲೇಷಣೆಯ ಲೆಕ್ಕಾಚಾರಕ್ಕೆ 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ) ನಿಲುಕದು. ಇದು ಚತುರ. ಆದರೆ, ಅರ್ಥಹೀನ ಪ್ರಶ್ನೆಗಳನ್ನು ಕೇಳುತ್ತದೆ: ಇದನ್ನು ಮಾಡಿದವರು ಯಾರು? ಅದರ ಉದ್ದೇಶ ಏನು? ಮುಂದಿನ ನಡೆ ಏನು? ನೆರಳನ್ನು ತೂಗಿ ನೋಡುವ ಅದರ ಪ್ರಯತ್ನವು ಅದರದ್ದೇ ಕಲ್ಪನೆಗಳನ್ನು ಅಥವಾ ದುಃಸ್ವಪ್ನಗಳನ್ನು ಬಯಲುಗೊಳಿಸುತ್ತದೆ. ಇಂತಹ ಸನ್ನಿವೇಶದಲ್ಲಿ ರಾಜಕೀಯ ಮನಸ್ಸುಗಳು ಒಬ್ಬ ಕವಿ ಅಥವಾ ಮನಃಶಾಸ್ತ್ರಜ್ಞನಿಂದ ಏನನ್ನಾದರೂ ಕಲಿತುಕೊಳ್ಳಬಹುದು.

ಸಿಜೆಪಿ ರಾಜಕೀಯ ಪಕ್ಷ ಅಲ್ಲ. ಇದು ಸಾಮಾನ್ಯ ಜನರಿಗಿಂತ ಕಡಿಮೆಯೂ ಅಲ್ಲ, ಹೆಚ್ಚೂ ಅಲ್ಲ. ಇದೊಂದು ಸಮುದಾಯ, ಗುಂಪು ಅಲ್ಲ. ಇದು ಅದುಮಿಟ್ಟ ಭಾವನೆಗಳ ಅಭಿವ್ಯಕ್ತಿ. ಇದು ಚಳವಳಿಯೊಂದರ ಹತ್ತಿರವೂ ಇಲ್ಲ. ಇದು ಆ ಒಂದು ಕ್ಷಣ ಅಷ್ಟೇ. ಹಾಗಾಗಿಯೇ ಇದು ಮುಖ್ಯವಾಗುತ್ತದೆ. ನಿರಂಕುಶಾಧಿಕಾರದ ದಮನದಿಂದ ಗಣರಾಜ್ಯವನ್ನು ಮರಳಿ ಪಡೆಯಬಹುದಾದ ಅಪೂರ್ವವಾದ ಕೋಲ್ಮಿಂಚು ಇದು.

ಭಾರೀ ಬಹುಮತವುಳ್ಳ ಸರ್ಕಾರದ ಮಧ್ಯಂತರ ಅವಧಿಯಲ್ಲಿ ಅಧಿಕಾರದಲ್ಲಿ ಇರುವವರ ಅಕ್ರಮಗಳನ್ನು ಬಯಲುಗೊಳಿಸಲು ಎಲ್ಲಿಂದಲೋ ಬಂದ ಪ್ರತಿಭಟನಾ ಚಳವಳಿಯಂತೆ ಮೊದಲ ನೋಟಕ್ಕೆ ಇದು ಕಾಣಿಸುತ್ತದೆ. 1973–74ರ ಗುಜರಾತ್ ಮತ್ತು ಬಿಹಾರ ಚಳವಳಿ, 1983ರ ಅಸ್ಸಾಂ ಚಳವಳಿ, 2012ರ ಅಣ್ಣಾ ಹಜಾರೆ ಚಳವಳಿ, 2021ರ ರೈತ ಹೋರಾಟಗಳೆಲ್ಲವೂ ಕಳಾಹೀನ ವಿರೋಧ ಪಕ್ಷಗಳನ್ನು ಹಿಂದಿಕ್ಕಿ, ಅಜೇಯ ಎಂಬಂತೆ ತೋರುತ್ತಿದ್ದ ಸರ್ಕಾರಗಳಿಗೆ ಸವಾಲೆಸೆದಿವೆ.



ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅದೇ ಸ್ಥಿತಿಯಲ್ಲಿದೆ. ಬಿಜೆಪಿ 2024ರಲ್ಲಿ ಪ್ರಯಾಸದಿಂದ ಅಧಿಕಾರ ಹಿಡಿದಿದೆ ಮತ್ತು ಅದಕ್ಕೂ ಹಿಂದಿನ ದಶಕದಲ್ಲಿ ಇದ್ದ ಪ್ರಾಬಲ್ಯ ಮತ್ತು ನ್ಯಾಯಸಮ್ಮತಿಯನ್ನು ಈಗ ಹೊಂದಿಲ್ಲ. ನ್ಯಾಯಸಮ್ಮತಿಯಲ್ಲಿ ಆಗಿರುವ ಬಿರುಕು ಮುಂದುವರಿದಿದ್ದರೂ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಪ್ರಾಬಲ್ಯವನ್ನು ಮರಳಿ ಗಳಿಸಿಕೊಂಡಿದೆ. ಬಿಜೆಪಿಯ ಚುನಾವಣೆ ಗೆಲ್ಲುವ ಸಾಮರ್ಥ್ಯವು ಸಂಪೂರ್ಣಗೊಂಡಿದೆ ಎಂಬ ಸನ್ನಿವೇಶದಲ್ಲಿ ಸಿಜೆಪಿ ಹೊರಹೊಮ್ಮಿರುವುದು ಕಾಕತಾಳೀಯವೇನೂ ಅಲ್ಲ. ನೀಟ್ ರದ್ದತಿ ಮತ್ತು ಮುಖ್ಯ ನ್ಯಾಯಮೂರ್ತಿಯವರ (ಸಿಜೆಐ) ಹೇಳಿಕೆ ಸಾಂದರ್ಭಿಕವೇ ಹೊರತು ಕಾರಣವಲ್ಲ.

ಸಿಜೆಪಿ, ವಾಸ್ತವದಲ್ಲಿನ ನೈಜವಾದ ರಾಜಕೀಯ ಚೈತನ್ಯದ ಅಭಿವ್ಯಕ್ತಿ ಅಲ್ಲ. ಇದು ಸಾಮಾಜಿಕ ಜಾಲತಾಣದಲ್ಲಿ ರೂಪುಗೊಂಡ ಸಂಯೋಜಿತ ಆಕ್ರೋಶ; ನೆಲದಲ್ಲಿ ಬಲವಾಗಿ ಬೇರೂರಿ ಬೆಳೆಯಬಲ್ಲ ಇನ್ನೊಂದು ಚಳವಳಿ ಅಥವಾ ಕಾರ್ಯಸಾಧುವಾದ ರಾಜಕೀಯ ಪರ್ಯಾಯ.

ಇದಕ್ಕೆ ಸ್ಥಾಪಕನಿದ್ದರೂ, ಆತ ನಾಯಕ ಆಗಿರಬೇಕಾಗಿಲ್ಲ. ಇದರ ಫಾಲೋವರ್‌ಗಳಲ್ಲಿ ಹೆಚ್ಚಿನವರು ನೈಜ ರಾಜಕೀಯ ಚಟುವಟಿಕೆಯಲ್ಲಿ ಆಸಕ್ತಿಯೇ ಇಲ್ಲದ ಪ್ರೇಕ್ಷಕರು ಅಥವಾ ಕುತೂಹಲವಷ್ಟೇ ಇರುವ ಯುವಜನರು. ಶಕ್ತಿಶಾಲಿ ಚಳವಳಿಯನ್ನು ಕಟ್ಟಬಲ್ಲ ಹಸಿಹಸಿ ಚೈತನ್ಯ ಇದು.

ವಿಡಂಬನೆ ಮತ್ತು ಊಹಿಸಲಸದಳವಾದ ನಡೆಯೇ ನಿರಂಕುಶಾಧಿಕಾರಕ್ಕೆ ಇರುವ ಅಹಿಂಸಾತ್ಮಕವಾದ ಪ್ರತಿರೋಧ ಎಂದು ಸರ್ಬಿಯಾದ ಚಿಂತಕ ಮತ್ತು ಸಾಮಾಜಿಕ ಹೋರಾಟಗಾರ ಸರ್ಜಾ ಪೊಪೊವಿಕ್ ಅವರು ಹೇಳಿರುವುದಕ್ಕೆ ಅನುಗುಣವಾಗಿಯೇ ವ್ಯವಸ್ಥೆಯನ್ನು ಎದುರಿಸಲು ಜಿರಲೆಯನ್ನು ಮೀಮ್ ಆಗಿ ಬಳಸಲಾಗಿದೆ. ಇಂತಹ ಪ್ರತಿರೋಧಗಳು ನಿರಂಕುಶಾಧಿಕಾರಿಗಳನ್ನು ದ್ವಂದ್ವಕ್ಕೆ ತಳ್ಳುತ್ತವೆ. ಅದಕ್ಕೆ ಅವಕಾಶ ಕೊಟ್ಟರೆ ಅವರು ದುರ್ಬಲ ಎಂದಾಗುತ್ತದೆ; ದಮನ ಮಾಡಿದರೆ ಕ್ರೂರಿಗಳು ಮತ್ತು ಅಸಂಗತರು ಎಂದಾಗುತ್ತದೆ. ಪ್ರಜಾಸತ್ತಾತ್ಮಕ ಪ್ರತಿರೋಧವು ಪಾಠ ಕಲಿಯಬಹುದಾದ ದ್ವಂದ್ವದ ಮಾದರಿಯೊಂದನ್ನು ಸಿಜೆಪಿ ತಿಳಿದೋ ತಿಳಿಯದೆಯೋ ನಮ್ಮ ಮುಂದಿಟ್ಟಿದೆ.

ಸಮಕಾಲೀನ ಭಾರತದ ರಾಜಕೀಯ ವಾಸ್ತವವನ್ನು ಸ್ಪಷ್ಟವಾಗಿ ಹೇಗೆ ನೋಡಬಹುದು ಎಂಬುದನ್ನು ಸಿಜೆಪಿ ನಮಗೆ ಕಲಿಸಿಕೊಟ್ಟಿದೆ. ಮೊದಲನೆಯದಾಗಿ, ಚುನಾವಣಾ ಯಶಸ್ಸಿನ ಕುರಿತು ಎಷ್ಟೇ ಅಬ್ಬರ ಮಾಡಿದರೂ ಜನರಲ್ಲಿ ಅದರಲ್ಲಿಯೂ ವಿಶೇಷವಾಗಿ ಯುವಜನರಲ್ಲಿ ಇರುವ ಅಸಮಾಧಾನ ಮತ್ತು ಆತಂಕವನ್ನು ಮರೆಮಾಚಲು ಸಾಧ್ಯವಿಲ್ಲ. ಎರಡನೆಯದಾಗಿ, ಮೀಮ್ ಒಂದನ್ನು ನಿಷೇಧಿಸಲು ಸರ್ವಶಕ್ತವಾದ ಸರ್ಕಾರವು ರಾಷ್ಟ್ರೀಯ ಭದ್ರತೆಯನ್ನು ನೆಪವಾಗಿ ತಂದರೆ, ಸಾಮಾಜಿಕ ಮಾಧ್ಯಮದ ಟ್ರೆಂಡ್‌ನ ಮಾನ ಕಳೆಯಲು ಸಾಮಾಜಿಕ ಮಾಧ್ಯಮದ ಟ್ರೋಲ್ ಸೇನೆಯನ್ನು ಬಳಸಿಕೊಂಡರೆ, ಅಧಿಕಾರದಲ್ಲಿ ಇರುವವರು ಒಳಗಿನಿಂದ ದುರ್ಬಲರಾಗಿದ್ದಾರೆ ಎಂದೇ ಅರ್ಥ. ಮೂರನೆಯದಾಗಿ, ಸಿಜೆಪಿಗೆ ಇರುವ 2.3 ಕೋಟಿ ಫಾಲೋವರ್ಸ್ ಎಲ್ಲ ವಿರೋಧ ಪಕ್ಷಗಳಿಗೆ ಸಂದೇಶ: ನೀವು ಸುಸಂಘಟಿತಗೊಳ್ಳಬೇಕಾದ ಅಗತ್ಯ ಈಗ ಇದೆ ಎಂಬುದೇ ಆ ಸಂದೇಶ.

ವಾಡಿಕೆಯ ರಾಜಕೀಯ ಸಿನಿಕತನ, ಅಂತರ ಕಾಯ್ದುಕೊಳ್ಳುವಿಕೆ ಅಥವಾ ದೂರ ತಳ್ಳುವಿಕೆಗಳನ್ನು ಆಚೆಗೆ ಇರಿಸಿ, ಸಿಜೆಪಿಗೆ ಪ್ರತಿಕ್ರಿಯೆ ನೀಡಲು ಹೊಸ ದಾರಿಯೊಂದನ್ನು ಕಂಡುಕೊಳ್ಳಬೇಕಿದೆ. ವ್ಯಾಪಕವಾಗಿರುವ ಹತಾಶೆಯನ್ನು ಎದುರಿಸಲು ರಾಜಕೀಯ ಒಗ್ಗಟ್ಟಿನ ಹೊಸ ವ್ಯಾಕರಣವನ್ನು ಶೋಧಿಸಲು ವಿನೋದ್ ಕುಮಾರ್ ಶುಕ್ಲಾ ಅವರ ಹಿಂದಿ ಕವಿತೆಯೊಂದು ನೆರವಾಗುತ್ತದೆ: 'ಆತನಿಗೆ ನಾನು ಗೊತ್ತಿಲ್ಲ/ ಆದರೆ ನನ್ನ ನೆರವಿನ ಕೈ ಆತನಿಗೆ ಗೊತ್ತಿದೆ... ನಾವು ಪರಸ್ಪರರು ಗೊತ್ತಿಲ್ಲ/ ಆದರೆ ಜೊತೆಯಾಗಿ ಹೆಜ್ಜೆ ಹಾಕುವುದು ಗೊತ್ತಿಗೆ ನಮಗೆ'. ಇದು ಕ್ರಾಂತಿಕಾರಿಗಳ ಸ್ನೇಹವಲ್ಲ; ಅಪರಿಚಿತರ ಸಾಂಗತ್ಯ. ಪರಸ್ಪರ ಹಂಚಿಕೊಂಡ ಅಸ್ಮಿತೆಯಿಂದಾದ ಬಂಧವಲ್ಲ, ಬದಲಿಗೆ ಹಂಚಿಕೊಂಡ ದೌರ್ಬಲ್ಯಗಳ ಬಂಧವಾಗಿದೆ.

ಈ ಯುವಜನರಿಗೆ ನಾವು ಗೊತ್ತಿರಲಿಕ್ಕಿಲ್ಲ. ಆದರೆ, ನಾವು ನೀಡಿದ ನೆರವನ್ನು ಅವರು ಗುರ್ತಿಸಬಹುದು. ನಮಗೆ ಪರಸ್ಪರ ಪರಿಚಯವಿಲ್ಲ. ಆದರೆ, ಈ ಕತ್ತಲ ಕಾಲದಲ್ಲಿ ಜೊತೆಯಾಗಿ ನಡೆಯಲು ನಾವು ಕಲಿಯಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಾಜಿ ಐಪಿಎಸ್ ಅಧಿಕಾರಿ, ತಮಿಳುನಾಡು ಬಿಜೆಪಿ ಮುಖಂಡ ಕೆ.ಅಣ್ಣಾಮಲೈ ಅವರು ಪಕ್ಷ ತೊರೆಯುವ ಹಾದಿಯಲ್ಲಿದ್ದಾರೆ. ತಮಿಳುನಾಡು ಬಿಜೆಪಿಯ ಭವಿಷ್ಯ ಎಂದೇ ಅವರು ಕರೆಸಿಕೊಂಡಿದ್ದರು. ಆದರೆ, ನಡುಹಾದಿಯಲ್ಲೇ ಪಕ್ಷದಿಂದ ನಿರ್ಗಮಿಸುವ ಸಾಧ್ಯತೆ ಇದೆ. ಅವರಂತೆ ನಾಗರಿಕ ಸೇವಾ ಅಧಿಕಾರಿಗಳಾಗಿ ಕೆಲಸ ಮಾಡಿ, ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ರಾಜಕೀಯದಲ್ಲಿ ಯಶಸ್ಸು ಗಳಿಸುವ ಹುಮ್ಮಸ್ಸಿನಿಂದ ಬಂದವರ ಪೈಕಿ ಮುಖ್ಯಮಂತ್ರಿ, ಮಂತ್ರಿ ಆದವರೂ ಇದ್ದಾರೆ. ದೇಶದ ಪ್ರಮುಖ ರಾಜಕಾರಣಿಗಳಾಗಿ ಬದಲಾದ ಕೆಲವು ಮಾಜಿ ಅಧಿಕಾರಿಗಳ ಪರಿಚಯ ಇಲ್ಲಿದೆ

ಪಕ್ಷ ರಾಜಕೀಯದಲ್ಲಿ ಮುಳುಗಿ ಎದ್ದ ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್ ಸಾಧಕರು


ರಾಜಕಾರಣದ ಅಂಗಳ ರಂಗೇರಿಸಿದ ಅಧಿಕಾರಿಗಳು

ಕೆ.ಅಣ್ಣಾಮಲೈ



ತಮಿಳುನಾಡಿನ ಕರೂರು ಜಿಲ್ಲೆಯ ಕೆ.ಅಣ್ಣಾಮಲೈ ಎಂಜಿನಿಯರಿಂಗ್, ಎಂಬಿಎ ಪದವೀಧರರು. 2011ರಲ್ಲಿ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ಪಾಸಾಗಿ, ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿ ನಿಯುಕ್ತಿಗೊಂಡರು. ಚಿಕ್ಕಮಗಳೂರು ಮತ್ತು ಉಡುಪಿ ಎಸ್‌ಪಿ ಆಗಿ, ಬೆಂಗಳೂರಿನಲ್ಲಿ ಡಿಸಿಪಿ ಆಗಿ ಕೆಲಸ ಮಾಡಿದರು. 2019ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ, ತಮಿಳುನಾಡಿಗೆ ಹಿಂದಿರುಗಿದ ಅವರು ಮುಂದಿನ ಕೆಲವೇ ತಿಂಗಳಲ್ಲಿ ಬಿಜೆಪಿ ಸೇರಿದರು. ಪಕ್ಷ ಸೇರಿದ ಒಂದೇ ವರ್ಷದಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದರು. ತಮ್ಮ ಛಡಿಯೇಟಿನ ಪ್ರತಿಭಟನೆ, ಪಾದಯಾತ್ರೆ ಇತ್ಯಾದಿಯಿಂದ ಸದಾ ಸುದ್ದಿಯಲ್ಲಿರುತ್ತಿದ್ದ ಅಣ್ಣಾಮಲೈ, ತಮಿಳುನಾಡಿನಲ್ಲಿ ಬಿಜೆಪಿಯ ಭವಿಷ್ಯ ಎಂದೇ ಹೆಸರಾಗಿದ್ದರು. ಆದರೆ, 2021ರ ಚುನಾವಣೆಯಲ್ಲಿ ಅರವಕುರಿಚಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಸೋಲು ಕಂಡರು. ಡಿಎಂಕೆ ಮತ್ತು ಎಐಎಡಿಎಂಕೆ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿದ್ದ ಅಣ್ಣಾಮಲೈ, ನರೇಂದ್ರ ಮೋದಿ ಅವರ ಬಗ್ಗೆ ಭಾರಿ ಹೆಮ್ಮೆಯಿಂದ ಮಾತನಾಡುತ್ತಿದ್ದರು. 2024ರಲ್ಲಿ ಕೊಯಮತ್ತೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋಲು ಕಂಡ ಅವರನ್ನು 2025ರಲ್ಲಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಪಕ್ಷವು ಕೆಳಗಿಳಿಸಿತು. ಎಐಎಡಿಎಂಕೆ ಜತೆಗಿನ ಮೈತ್ರಿ ಕಾರಣಕ್ಕೆ ಪಕ್ಷವು ಅವರನ್ನು ನಿರ್ಲಕ್ಷ್ಯ ಮಾಡಿತು ಎನ್ನುವ ವಿಶ್ಲೇಷಣೆಗಳು ಕೇಳಿಬಂದವು. ಇದರಿಂದ ನೊಂದ ಅಣ್ಣಾಮಲೈ ಪಕ್ಷ ತೊರೆಯಲು ನಿರ್ಧರಿಸಿದ್ದಾರೆ ಎನ್ನಲಾಗುತ್ತಿದೆ.

ಶಾ ಫೈಸಲ್



ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೊದಲ ರ‍್ಯಾಂಕ್ ಗಳಿಸಿದ ಜಮ್ಮು ಮತ್ತು ಕಾಶ್ಮೀರದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಶಾ ಫೈಸಲ್ ಅವರು 2009ನೇ ಬ್ಯಾಚ್‌ನ ಐಎಎಸ್ ಅಧಿಕಾರಿ. 2019ರಲ್ಲಿ ಕಾಶ್ಮೀರದಲ್ಲಿ ನಡೆಯುತ್ತಿದ್ದ ಹತ್ಯೆಗಳು ಮತ್ತು ಮುಸ್ಲಿಮರ ವಿರುದ್ಧ ನಡೆಸಲಾಗುತ್ತಿರುವ ತಾರತಮ್ಯವನ್ನು ಖಂಡಿಸಿ ಭಾರತೀಯ ಆಡಳಿತ ಸೇವೆಗೆ (ಐಎಎಸ್) ರಾಜೀನಾಮೆ ನೀಡಿದರು. ನಂತರ ಜಮ್ಮು ಆ್ಯಂಡ್ ಕಾಶ್ಮೀರ ಪೀಪಲ್ಸ್ ಮೂವ್‌ಮೆಂಟ್ (ಜೆಕೆಪಿಎಂ) ಎಂಬ ರಾಜಕೀಯ ಪಕ್ಷ ಸ್ಥಾಪಿಸಿದರು. 2019ರಲ್ಲಿ ಕೇಂದ್ರ ಸರ್ಕಾರ ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ನಂತರ ಫೈಸಲ್ ಅವರನ್ನು ಕೂಡ ಬಂಧನದಲ್ಲಿಡಲಾಗಿತ್ತು. 2020ರ ಆಗಸ್ಟ್‌ನಲ್ಲಿ ಅವರು ರಾಜಕೀಯ, ಪಕ್ಷವನ್ನು ತೊರೆದರು. ಅವರು ನೀಡಿದ್ದ ರಾಜೀನಾಮೆಯನ್ನು ಕೇಂದ್ರ ಸರ್ಕಾರ ಅಂಗೀಕರಿಸಿರಲಿಲ್ಲ. ಹಾಗಾಗಿ, ಮತ್ತೆ ಅವರು ಭಾರತೀಯ ಆಡಳಿತ ಸೇವೆಗೆ ಸೇರ್ಪಡೆಗೊಂಡರು. ಸದ್ಯ, ಅವರು ಕೇಂದ್ರ ಸಂಸ್ಕೃತಿ ಸಚಿವಾಲಯದಲ್ಲಿ ಉಪಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಸಿಕಾಂತ್ ಸೆಂಥಿಲ್



ತಮಿಳುನಾಡಿನವರಾದ ಶಶಿಕಾಂತ್ ಸೆಂಥಿಲ್ ಅವರು ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದವರು. 2008ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ ಎಂಟನೇ ರ‍್ಯಾಂಕ್ ಗಳಿಸಿದ ಹೆಗ್ಗಳಿಕೆ ಅವರದ್ದು. ದಕ್ಷಿಣ ಕನ್ನಡ, ರಾಯಚೂರು ಜಿಲ್ಲಾಧಿಕಾರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು.
2019ರಲ್ಲಿ ದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಂದ ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆಯಾಗುತ್ತಿರುವುದು ತಮ್ಮ ರಾಜೀನಾಮೆಗೆ ಕಾರಣ ಎಂದು ಹೇಳಿದ್ದರು. 2020ರ ನವೆಂಬರ್‌ನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ಪಕ್ಷದ ಚಿಂತಕರ ಚಾವಡಿಯಲ್ಲಿ ಗುರುತಿಸಿಕೊಂಡಿದ್ದ ಅವರು ಚುನಾವಣಾ ತಂತ್ರಗಾರಿಕೆಯಲ್ಲೂ ಮುಂಚೂಣಿಯಲ್ಲಿದ್ದರು. 2024ರ ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನ ತಿರುವಳ್ಳೂರು ಕ್ಷೇತ್ರದಿಂದ ಜಯಗಳಿಸಿ, ಈಗ ಸಂಸದರಾಗಿದ್ದಾರೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಶುಲ್ಕ ಪಾವತಿಸಿದೆ



‘ಪ್ರಜಾವಾಣಿ’ ವಿದ್ಯಾರ್ಥಿ ವೇತನದಿಂದ ಪ್ರಥಮ ಪಿಯುಸಿ ಶುಲ್ಕ ಪಾವತಿಸಲಾಯಿತು. ಪುಸ್ತಕ ಖರೀದಿಸಲು ನೆರವಾಯಿತು. ಅಗತ್ಯ ಸಮಯದಲ್ಲಿ ಹಣ ನೀಡಿದ್ದಕ್ಕೆ ಧನ್ಯವಾದಗಳು.

ಹಿಂದೂ, ತುರುವೇಕೆರೆ

‘ಪಠ್ಯಪುಸ್ತಕಗಳ ಖರೀದಿಗೆ ನೆರವಾಯಿತು’




‘ಪ್ರಜಾವಾಣಿ’ ನೀಡಿದ ಶಿಷ್ಯವೇತನದಿಂದ ನನ್ನ ಶಿಕ್ಷಣಕ್ಕೆ ಅಪಾರ ನೆರವಾಯಿತು. ಶಿಷ್ಯವೇತನದ ಹಣವನ್ನು ಪಿಯುಸಿ ಸೈನ್ಸ್‌ನ ಪ್ರಥಮ ವರ್ಷದ ಪಠ್ಯ ಪುಸ್ತಕಗಳು ಸೇರಿದಂತೆ ಕಲಿಕೋಪಕರಣಗಳ ಖರೀದಿಸಲು ತುಂಬಾ ನೆರವಾಯಿತು. ಪತ್ರಿಕೆಯಲ್ಲಿ ಬರುವ ಶಿಕ್ಷಣ ಮಾರ್ಗದರ್ಶಿಯೂ ನನ್ನ ಕಲಿಕೆಗೆ ಸಹಕಾರಿಯಾಗಿದೆ. ಬಡವರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ‘ಪ್ರಜಾವಾಣಿ’ ಸಹಾಯಧನ ನೀಡುವ ಕಾರ್ಯ ನಿಜಕ್ಕೂ ಶ್ಲಾಘನೀಯ.

ರೇವಣಸಿದ್ಧಯ್ಯ ಸ್ವಾಮಿ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ

ಪಕ್ಷ ಕಟ್ಟಿದ ಗಟ್ಟಿಗರು

ನಾಗರಿಕ ಸೇವಾ ಅಧಿಕಾರಿಗಳಾಗಿ ವೃತ್ತಿಜೀವನ ಆರಂಭಿಸಿ, ನಂತರ ರಾಜಕೀಯಕ್ಕೆ ಬಂದು, ತಾವೇ ಪಕ್ಷ ಕಟ್ಟಿ ಸೋಲು ಗೆಲುವು ಕಂಡ ಗಟ್ಟಿಗರೂ ಕೆಲವರಿದ್ದಾರೆ. ಅವರಲ್ಲಿ ಅರವಿಂದ ಕೇಜ್ರಿವಾಲ್, ಜಯಪ್ರಕಾಶ್ ನಾರಾಯಣ್, ಕೆ.ಶಿವಗಾಮಿ ಪ್ರಮುಖರು.

ಅರವಿಂದ ಕೇಜ್ರಿವಾಲ್ : ಖರಗ್‌ಪುರದ ಐಐಟಿಯಿಂದ (ಮೆಕ್ಯಾನಿಕಲ್ ಎಂಜಿನಿಯರಿಂಗ್) ಪದವೀಧರರಾದ ಅರವಿಂದ್ ಕೇಜ್ರಿವಾಲ್, 1992ರಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ಐಆರ್‌ಎಸ್ ಅಧಿಕಾರಿಯಾದರು. 2006ರಲ್ಲಿ ದೆಹಲಿಯಲ್ಲಿ ಆದಾಯ ತೆರಿಗೆ ಆಯುಕ್ತರಾಗಿದ್ದ ಅವರು ಹುದ್ದೆ ತೊರೆದು ಸಾರ್ವಜನಿಕ ಜೀವನ ಪ್ರವೇಶಿಸಿದ್ದರು. ಭ್ರಷ್ಟಾಚಾರದ ವಿರುದ್ಧ ಆಂದೋಲನ ನಡೆಸಿ, ಅದಕ್ಕೆ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಪಡೆದಿದ್ದ ಕೇಜ್ರಿವಾಲ್, ನಂತರ ಲೋಕಪಾಲ ಮಸೂದೆಗಾಗಿ ನಡೆದ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದರು. 2012ರಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಸ್ಥಾಪಿಸಿ, 2013ರ ವಿಧಾನಸಭಾ ಚುನಾವಣೆಯ ನಂತರ ಕಾಂಗ್ರೆಸ್ ಬೆಂಬಲದೊಂದಿಗೆ ಮುಖ್ಯಮಂತ್ರಿ ಪದವಿಗೇರಿದರು. ಆದರೆ, ಬಹುಮತ ಕೊರತೆಯಿಂದ ಕೇವಲ 49 ದಿನಗಳಲ್ಲಿ ಪದವಿ ಕಳೆದುಕೊಂಡರು. 2015ರ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ದಾಖಲೆ ಗೆಲುವು ಸಾಧಿಸುವುದರೊಂದಿಗೆ ದೆಹಲಿ ಮುಖ್ಯಮಂತ್ರಿಯಾದರು. 2020ರಲ್ಲಿಯೂ ಪಕ್ಷ ಗೆಲ್ಲುವುದರೊಂದಿಗೆ ಮೂರನೇ ಬಾರಿ ಮುಖ್ಯಮಂತ್ರಿಯಾದರು. 2024ರಲ್ಲಿ ಅವರು ಅಬಕಾರಿ ಹಗರಣ ಸಂಬಂಧ ಜೈಲಿಗೂ ಹೋಗಿಬಂದರು. ಅವರ ಪಕ್ಷ ಪಂಜಾಬ್‌ನ 2022ರ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿ, ಅಧಿಕಾರ ನಡೆಸುತ್ತಿದೆ.



ಜಯಪ್ರಕಾಶ್ ನಾರಾಯಣ್: ಆಂಧ್ರ ಪ್ರದೇಶದ ಜಯಪ್ರಕಾಶ್ ನಾರಾಯಣ್, ವೃತ್ತಿಯಿಂದ ವೈದ್ಯರು. ಯುಪಿಎಸ್‌ಸಿಯಲ್ಲಿ ನಾಲ್ಕನೇ ರ‍್ಯಾಂಕ್ ಪಡೆದು 1980ರಲ್ಲಿ ಐಎಎಸ್ ಅಧಿಕಾರಿಯಾದರು. ತಮ್ಮ 16 ವರ್ಷದ ಸೇವೆಯಲ್ಲಿ ಅವರು ಕೃಷಿ, ನೀರಾವರಿ ಸೇರಿದಂತೆ ಹಲವು ಇಲಾಖೆಗಳಲ್ಲಿ ಸಾಕಷ್ಟು ಕೆಲಸ ಮಾಡಿದರು. ಎನ್‌ಟಿಆರ್ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ಕಾರ್ಯದರ್ಶಿಯೂ ಆಗಿದ್ದರು. ಮತದಾನದ ಮಹತ್ವ, ಹಕ್ಕುಗಳು, ಸರ್ಕಾರದ ಕಾರ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು 1996ರಲ್ಲಿ ಲೋಕಸತ್ತಾ ಆಂದೋಲನ ಸ್ಥಾಪಿಸಿ, 2006ರಲ್ಲಿ ಲೋಕಸತ್ತಾ ಪಕ್ಷ ಸ್ಥಾಪನೆ ಮಾಡಿದರು. ಹಣ, ಮದ್ಯ, ಜಾತಿಯ ಸೋಂಕಿಲ್ಲದ ರಾಜಕಾರಣ ಮಾಡುವುದು ತಮ್ಮ ಗುರಿ ಎಂದು ಪ್ರತಿಪಾದಿಸಿದ ಅವರು, ಚುನಾವಣಾ ರಾಜಕಾರಣದಲ್ಲಿ ಯಶಸ್ಸು ಗಳಿಸಲಿಲ್ಲ. ಚುನಾವಣಾ ಅಕ್ರಮಗಳ ತಡೆಗೆ ಶ್ರಮಿಸಿದ ಅವರು, ಲೇಖಕರೂ ಹೌದು.

ಕೆ.ಶಿವಗಾಮಿ: 1980ರ ಬ್ಯಾಚ್‌ನ ಐಎಎಸ್ ಅಧಿಕಾರಿ ಕೆ.ಶಿವಗಾಮಿ ತಮಿಳುನಾಡಿನವರು. 28 ವರ್ಷ ಐಎಎಸ್ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ ಅವರು, 2008ರಲ್ಲಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು. 2009ರಲ್ಲಿ ಬಹುಜನ ಸಮಾಜವಾದಿ ಪಕ್ಷ (ಬಿಎಸ್‌ಪಿ) ಸೇರಿದ ಅವರು, ನಂತರ ಅಲ್ಲಿಂದ ಹೊರಬಂದು ಸಮುಗ ಸಮತ್ವ ಪಡೈ (ಎಸ್‌ಎಸ್‌ಪಿ) ಸ್ಥಾಪಿಸಿದರು. ದಲಿತರು ಮತ್ತು ಮಹಿಳೆಯರ ಏಳಿಗೆಯೇ ತಮ್ಮ ಪಕ್ಷದ ಮುಖ್ಯ ಆಶಯ ಎಂದು ಘೋಷಿಸಿದ್ದರು. 2016ರ ವಿಧಾನಸಭಾ ಚುನಾವಣೆಯಲ್ಲಿ ಅವರು ಡಿಎಂಕೆ ಚಿಹ್ನೆಯ ಅಡಿ ಪೆರಂಬಲೂರ್ ಕ್ಷೇತ್ರದಿಂದ ಸ್ಪರ್ಧಿಸಿ, ಸೋತರು. ಸಾಮಾಜಿಕ ಸಮಸ್ಯೆಗಳ ಬಗ್ಗೆ ಅವರು ಈಗಲೂ ಸಕ್ರಿಯವಾಗಿ ಸ್ಪಂದಿಸುತ್ತಿದ್ದಾರೆ.

ಮೀರಾ ಕುಮಾರ್



ಭಾರತದ ಲೋಕಸಭೆಯ ಮೊದಲ ಮಹಿಳಾ ಸ್ಪೀಕರ್ (ಸಭಾಧ್ಯಕ್ಷೆ) (2009–2014) ಎಂಬ ಮುಕುಟವನ್ನು ಮುಡಿಗೇರಿಸಿಕೊಂಡಿದ್ದ ಮೀರಾ ಕುಮಾರ್ ಮೂಲತಃ ಭಾರತೀಯ ವಿದೇಶಾಂಗ ಸೇವೆಯ (ಐಎಫ್‌ಎಸ್) ಅಧಿಕಾರಿ. ಉಪಪ್ರಧಾನಿಯಾಗಿದ್ದ ಬಾಬು ಜಗಜೀವನ ರಾಂ ಅವರ ಮಗಳಾದ ಮೀರಾ ಕುಮಾರ್ 1973ರಲ್ಲಿ ಐಎಫ್‌ಎಸ್‌ಗೆ ಸೇರ್ಪಡೆಗೊಂಡಿದ್ದರು. 12 ವರ್ಷಗಳ ಕರ್ತವ್ಯ ನಿರ್ವಹಣೆಯ ಬಳಿಕ, 1985ರಲ್ಲಿ ಕಾಂಗ್ರೆಸ್ ಪಕ್ಷ ಸೇರಿದ್ದರು. ಉತ್ತರ ಪ್ರದೇಶದ ಬಿಜನೋರ್ ಕ್ಷೇತ್ರದ ಉಪಚುನಾವಣೆಯಲ್ಲಿ ರಾಮ ವಿಲಾಸ್ ಪಾಸ್ವಾನ್ ಮತ್ತು ಮಾಯಾವತಿಯವರನ್ನು ಸೋಲಿಸಿ ದೇಶದ ಗಮನ ಸೆಳೆದಿದ್ದರು. 2004ರಲ್ಲಿ ಯುಪಿಎ ಮೊದಲ ಅವಧಿಯಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವೆಯಾಗಿದ್ದರು. 2017ರ ರಾಷ್ಟ್ರಪತಿ ಚುನಾವಣೆಯಲ್ಲಿ ಮೀರಾ ಕುಮಾರ್ ಅವರು ಕಾಂಗ್ರೆಸ್ ಅಭ್ಯರ್ಥಿಯೂ ಆಗಿದ್ದರು. ಆದರೆ, ರಾಮನಾಥ ಕೋವಿಂದ್ ವಿರುದ್ಧ ಸೋಲು ಅನುಭವಿಸಿದರು.

ಅಲ್ಫೋನ್ಸ್ ಕಣ್ಣಂದಾನಂ



ಕೇರಳದ ಕೊಟ್ಟಾಯಂ ಜಿಲ್ಲೆಯವರಾದ ಅಲ್ಫೋನ್ಸ್ ಕಣ್ಣಂದಾನಂ ಅವರು, 1979ರ ಬ್ಯಾಚ್‌ನ ಐಎಎಸ್ ಅಧಿಕಾರಿ. ದೆಹಲಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ (1990) ಅವರ ಹೆಸರು ಜನಪ್ರಿಯವಾಗಿತ್ತು. ದೆಹಲಿಯಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ನೆಲಸಮ ಮಾಡಿ, ಸುಮಾರು ₹10,000 ಕೋಟಿ ಮೌಲ್ಯದ ಜಾಗವನ್ನು ಅವರು ಸರ್ಕಾರದ ಸುಪರ್ದಿಗೆ ಪಡೆದು, ‘ಡೆಮಾಲಿಷನ್ ಮ್ಯಾನ್’ ಎಂದೇ ಹೆಸರಾಗಿದ್ದರು. 2006ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಕೊಟ್ಟಾಯಂನ ಕಾಂಜಿರಪ್ಪಳ್ಳಿ ವಿಧಾನಸಭಾ ಕ್ಷೇತ್ರದಿಂದ ಎಡಪಕ್ಷಗಳ ಬೆಂಬಲದೊಂದಿಗೆ ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದರು. 2011ರಲ್ಲಿ ಬಿಜೆಪಿ ಸೇರ್ಪಡೆಯಾದ ಅವರು ಆರು ವರ್ಷಗಳ ನಂತರ ರಾಜ್ಯಸಭೆಯ ಸದಸ್ಯರಾದರು. ಆ ಅವಧಿಯಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಇಲಾಖೆ ರಾಜ್ಯ ಸಚಿವರಾಗಿದ್ದರು. 2019ರಲ್ಲಿ ಎರ್ನಾಕುಲಂ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡರು.

ಅಜಿತ್ ಜೋಗಿ



ಛತ್ತೀಸಗಢದ ಮೊದಲ ಮುಖ್ಯಮಂತ್ರಿಯಾಗಿದ್ದ ಅಜಿತ್ ಜೋಗಿ ಐಎಎಸ್ ಅಧಿಕಾರಿಯಾಗಿದ್ದವರು. ಆದಿವಾಸಿ ಸಮುದಾಯದ ಜೋಗಿ ಅವರು 1968ನೇ ಬ್ಯಾಚ್‌ನ ಅಧಿಕಾರಿ. ರಾಜೀವ್ ಗಾಂಧಿ ಅವರ ಆಹ್ವಾನದ ಮೇರೆಗೆ 1986ರಲ್ಲಿ ಅವರು ಕಾಂಗ್ರೆಸ್‌ಗೆ ಸೇರಿದ್ದರು. ಅವರ ವಿರುದ್ಧ ಭ್ರಷ್ಟಾಚಾರದ ಆರೋಪಗಳು ಬಂದಿದ್ದವು. 2016ರಲ್ಲಿ ಅವರ ಮಗ ಅಮಿತ್ ಅವರನ್ನು ಪಕ್ಷವು ಆರು ವರ್ಷಗಳವರೆಗೆ ಪಕ್ಷದಿಂದ ಉಚ್ಚಾಟಿಸಿತ್ತು. ಆ ನಂತರ ಅಜಿತ್ ಜೋಗಿ ಕಾಂಗ್ರೆಸ್ ತೊರೆದು ಛತ್ತೀಸಗಢ ಜನತಾ ಕಾಂಗ್ರೆಸ್ ಎಂಬ ಪಕ್ಷವನ್ನು ಸ್ಥಾಪಿಸಿದ್ದರು.

ಕರ್ನಾಟಕದಲ್ಲಿ...



ಕುಮಾರ ನಾಯಕ

ಐಎಎಸ್ ಅಧಿಕಾರಿಯಾಗಿದ್ದ ಜಿ. ಕುಮಾರ ನಾಯಕ ಅವರು ನಿವೃತ್ತಿಯ ಬಳಿಕ ಕಾಂಗ್ರೆಸ್ ಪಕ್ಷ ಸೇರಿ, 2024ರ ಲೋಕಸಭಾ ಚುನಾವಣೆಯಲ್ಲಿ ರಾಯಚೂರು ಕ್ಷೇತ್ರದಿಂದ ಸಂಸದರಾಗಿದ್ದಾರೆ.

ಐಎಎಸ್ ಅಧಿಕಾರಿಗಳಾಗಿದ್ದ ಬಿ.ಎಸ್.ಪಾಟೀಲ, ರತ್ನಪ್ರಭಾ (ಇಬ್ಬರೂ ಮುಖ್ಯ ಕಾರ್ಯದರ್ಶಿ ಆಗಿದ್ದವರು), ಪಿ.ಸಿದ್ದಯ್ಯ, ಬಿ.ಎಚ್.ಅನಿಲ್ ಕುಮಾರ್, ಕೆ. ಶಿವರಾಂ, ಐಪಿಎಸ್ ಅಧಿಕಾರಿಗಳಾದ ರೇವಣ್ಣ ಸಿದ್ದಯ್ಯ, ಶಂಕರ ಬಿದರಿ, ಜ್ಯೋತಿ ಪ್ರಕಾಶ್ ಮಿರ್ಜಿ, ಭಾಸ್ಕರ ರಾವ್, ಪಿ.ಕೋದಂಡರಾಮ್ಯ, ಕೆ.ಸಿ.ರಾಮಮೂರ್ತಿ ಸೇರಿದಂತೆ ಇನ್ನೂ ಕೆಲವರು ಕರ್ತವ್ಯದಿಂದ ನಿವೃತ್ತಿಗೊಂಡ ಬಳಿಕ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು (ಈಗಲೂ ಕೆಲವರು ರಾಜಕೀಯದಲ್ಲೇ ಇದ್ದಾರೆ).

ಕೇಂದ್ರದ ಮಾಜಿ ಸಚಿವರಾದ ಯಶವಂತ ಸಿನ್ಹಾ (ಐಎಎಸ್), ಮಣಿಶಂಕರ ಅಯ್ಯರ್ (ಐಎಫ್‌ಎಸ್), ದಿವಂಗತ ನಟವರ ಸಿಂಗ್ (ಐಎಫ್‌ಎಸ್), ಸಚಿವ ಆರ್.ಕೆ.ಸಿಂಗ್ (ಐಎಎಸ್), ಸತ್ಯಪಾಲ್ ಸಿಂಗ್ (ಐಪಿಎಸ್), ರಾಮಚಂದ್ರ ಪ್ರಸಾದ್ ಸಿಂಗ್ (ಐಎಎಸ್) ಅವರು ಭಾರತೀಯ ನಾಗರಿಕ ಸೇವೆಗಳ ಹುದ್ದೆಗಳಲ್ಲಿದ್ದು, ನಂತರ ರಾಜೀನಾಮೆ ನೀಡಿ ರಾಜಕೀಯಕ್ಕೆ ಬಂದವರು.

ಈಗ ಸಚಿವರಾಗಿರುವ ಎಸ್.ಜೈಶಂಕರ್, ಹರದೀಪ್ ಸಿಂಗ್ ಪುರಿ ಅವರು ಐಎಫ್‌ಎಸ್ ಅಧಿಕಾರಿಗಳಾಗಿ ನಿವೃತ್ತರಾಗಿ ನಂತರ ರಾಜಕೀಯಕ್ಕೆ ಸೇರಿದವರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಈ ಬಾರಿಯ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಜಯಿಸಿದ ಬಳಿಕ, ಅದರ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಅವರು ಟ್ರೋಫಿಯನ್ನು ಹಿಡಿದುಕೊಂಡು ಅಳುತ್ತಿರುವ ಮತ್ತು ಅವರ ಪತ್ನಿ ಅನುಷ್ಕಾ ಶರ್ಮಾ ಅವರು ಕಣ್ಣೊರೆಸಿ ಸಮಾಧಾನ ಮಾಡುತ್ತಿರುವ ವಿಡಿಯೊ ತುಣುಕೊಂದನ್ನು ಅರ್ಪಿತಾ ಎಂಬ ‘ಎಕ್ಸ್’ ಬಳಕೆದಾರರೊಬ್ಬರು ಹಂಚಿಕೊಂಡಿದ್ದಾರೆ. ಲಕ್ಷಾಂತರ ಮಂದಿ ಈ ವಿಡಿಯೊ ತುಣುಕನ್ನು ವೀಕ್ಷಿಸಿದ್ದಾರೆ. ಆದರೆ, ಇದು ಸುಳ್ಳು.



ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಮೂಲಕ ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಿದಾಗ, ಹಲವರು ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಟ್ರೋಫಿ ಪ್ರದಾನ ಸಮಾರಂಭಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ, ಹಲವು ಮಾಧ್ಯಮಗಳು ತಮ್ಮ ‘ಎಕ್ಸ್’ ಖಾತೆಗಳಲ್ಲಿ ಸಮಾರಂಭದ ಬಗ್ಗೆ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದವು. ಅವುಗಳಲ್ಲಿ ವಿರಾಟ್ ಕೊಹ್ಲಿ ಮತ್ತು ಅನುಷ್ಕಾ ಶರ್ಮಾ ಇದ್ದ ಚಿತ್ರಗಳೂ ಇದ್ದವು. ಆದರೆ, ಈ ಚಿತ್ರಗಳಲ್ಲಿ ಅನುಷ್ಕಾ ಶರ್ಮಾ ಅವರು ಧರಿಸಿದ್ದ ದಿರಿಸು ಮತ್ತು ನೆಕ್ಲೆಸ್‌ಗೂ ವಿಡಿಯೊ ತುಣುಕಿನಲ್ಲಿ ಕಂಡು ಬಂದಂತೆ ಅನುಷ್ಕಾ ಅವರು ಧರಿಸಿದ್ದ ಉಡುಗೆ ಮತ್ತು ಆಭರಣದಲ್ಲಿ ವ್ಯತ್ಯಾಸಗಳಿದ್ದವು. ಅನುಮಾನ ಬಂದು ವಿಡಿಯೊವನ್ನು ಎಐ ಪತ್ತೆ ಟೂಲ್ ಹೈವ್ ಮಾಡರೇಷನ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಸಖ್ಯ ಎಂಬ ಸಿರಿ



ವಾಸುದೇವ ನಾಡಿಗ್

ಆ ಬೀದಿಯ ಜನವೇ ಹಾಗೆ. ಇತರರ ಬಗ್ಗೆ ಮಾತಾಡಿಕೊಳ್ಳುವವರ ಸಂತೆ ಅದು. ಒಂದು ವೇಳೆ ಒಬ್ಬ ಬಡವ ತರಕಾರಿ ತಿನ್ನುತ್ತಿದ್ದರೆ ಅದನ್ನು ಅವರು ಅನಿವಾರ್ಯ, ಅಸಹಾಯಕ ಹೋರಾಟ ಎಂದು ಲೊಚಗುಟ್ಟುತ್ತಾರೆ. ಒಂದು ವೇಳೆ ಒಬ್ಬ ಶ್ರೀಮಂತ ಕೇವಲ ತರಕಾರಿ ತಿನ್ನುತ್ತಿದ್ದರೆ ಅದನ್ನು ಒಳ್ಳೆಯ ಆರೋಗ್ಯಕರ ಜೀವನಶೈಲಿ ಎಂದು ಬಣ್ಣಿಸುತ್ತಾರೆ. ಒಬ್ಬ ಬಡವ ಸಾಧಾರಣ ಬೈಕನ್ನು ಓಡಿಸಿದರೆ ಅದನ್ನು ಅವರು ದುಡಿಮೆ ಸಾಲದೇ ವೈಫಲ್ಯ ಎಂದು ಮರುಕ ಪಡುತ್ತಾರೆ. ಒಬ್ಬ ಶ್ರೀಮಂತ ಸಾಧಾರಣ ಬೈಕನ್ನು ಓಡಿಸಿದರೆ ಅದನ್ನು ಜೀವನಶಿಸ್ತು, ಅಚ್ಚುಕಟ್ಟುತನ ಎನ್ನುತ್ತಾರೆ. ಒಂದು ವೇಳೆ ಬಡವ ಸರಳ ವಾಚನ್ನು ಕಟ್ಟಿಕೊಂಡರೆ ಐಷಾರಾಮಿ ಎನ್ನುತ್ತಾರೆ. ಶ್ರೀಮಂತ ಸರಳವಾದ ವಾಚನ್ನು ಕಟ್ಟಿಕೊಂಡರೆ ಅದನ್ನು ಫ್ಯಾಷನ್ ಎನ್ನುತ್ತಾರೆ.

ಒಂದಿಲ್ಲೊಂದು ಟೀಕೆಗಳಲ್ಲೇ ಬಾಳುವ ಜನಸಂತೆಯಲ್ಲಿ ಟೀಕೆಗೆ ಒಳಗಾಗದ ಮನುಷ್ಯರೇ ಇಲ್ಲ. ಹಾಗಂತ ಆ ಬೀದಿಯನ್ನು ಬಿಟ್ಟು ಅಲ್ಲಿ ಹಾಯದೇ ಓಡಾಡುವಂತಿಲ್ಲ. ಬಾಳ್ವೆ ಅಂದರೆ ಅಲ್ಲಿ ಹಾದು ಹೋಗಲೇಬೇಕು. ಕವಿ ಕೆ.ಎಸ್. ನರಸಿಂಹಸ್ವಾಮಿ ಅವರು ಸರಿಯಾಗೇ ಬರೆದಿದ್ದಾರೆ: ‘ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ’ (ಪದ್ಯ: ಇಕ್ಕಳ) ಬರಿ ಮಾತು ಮಾತಲ್ಲೇ ಎದುರಿನವರ ಕುಂಡಲಿ ಹೇಳಬಲ್ಲ ಮನುಷ್ಯ ಸ್ವಭಾವವೇ ಅಷ್ಟು. ವಸ್ತುಗಳು ಮನುಷ್ಯನ ಜೀವನವನ್ನು ಆಧರಿಸಿ ಬೆಲೆ ಪಡೆದುಕೊಳ್ಳುತ್ತವೆ ಅಥವಾ ವೇಷಭೂಷಣ ನೋಡಿ ಮಣೆ ಹಾಕುವ ಟೀಕಿಸುವ ಕಾಲಮಾನ ಯಾವತ್ತೂ ನಿಂತಿಲ್ಲ; ನಿಲ್ಲಲ್ಲ ಕೂಡ. ಅಷ್ಟು ದೂರದಿಂದ ನಡೆದುಕೊಂಡು ಬಂದು ಕೃಷ್ಣನ ನೋಡಲು ಹಂಬಲಿಸಿದ್ದ ಸುಧಾಮನ ಹರಕಲು ಬಟ್ಟೆ ಬರೆಯನ್ನು ನೋಡಿಯೇ ಕಾವಲುಗಾರರು ಆವರಣವನ್ನು ಪ್ರವೇಶಿಸುವಲ್ಲಿ ತಡೆಯೊಡ್ಡುತ್ತಾರೆ. ಅಂತಃಪುರದ ಮೇಲಿಂದಲೇ ಗಮನಿಸಿದ ಕೃಷ್ಣ ಓಡಿ ಬಂದು ಸುಧಾಮನನ್ನು ಅಪ್ಪಿಕೊಂಡಾಗ ಶ್ರೀಮಂತಿಕೆಯೇ ಬದಲಾಗುತ್ತದೆ. ನೆರೆದವರೆಲ್ಲ ಮಾತನಾಡುತ್ತಾರೆ. ಕೃಷ್ಣನ ಅಪ್ಪುಗೆ ಮತ್ತು ಪ್ರೀತಿ ಪಡೆದು ಸಿರಿವಂತರಾದವರ ಕತೆ ಇದು. ಕೌರವ ಪಾಂಡವ ವೀರರ ಮನೆಗೆ ಬಾರದ ಇದೇ ಕೃಷ್ಣ ನೇರವಾಗಿ ವಿದುರನ ಮನೆ ಹೊಕ್ಕಾಗ ಜನರು ಮಾತಾಡುತ್ತಾರೆ.

ಅಕ್ಕಪಕ್ಕದ ಮನೆಯವರ ಸಾಂಗತ್ಯ ಪರಿಚಯ ಇರದ ಬಂಗಲೆ ಫ್ಲ್ಯಾಟ್‌ಗಳ ಸಿರಿತನಕ್ಕೂ ಇದೇ ಅರ್ಥವಿದೆ. ಪಕ್ಕದ ಮನೆಯವರು ಗೊತ್ತಾ ಅಂತ ಕೇಳಿದರೆ ಗೊತ್ತಿಲ್ಲ ಎಂಬ ಉತ್ತರವೇ ಅನೇಕರ ಬಡತನವನ್ನು ತೋರಿಸಬಲ್ಲದು. ಗ್ರಾಮದ ಬಾಳು ಹೀಗಲ್ಲ. ವಿಳಾಸ ಕೇಳಿದರೆ ಅವರ ಮನೆಗೆ ತಲುಪಿಸಿ, ಕೂಡಿಸಿ ಬರುವ ಸಿರಿತನದ ಮನಸ್ಸುಗಳಿವೆ.

‘ಏನು ಬಂದಿರಿ ಹದುಳವಿದ್ದಿರೆ? ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ? ಕುಳ್ಳಿರಿ ಎಂದರೆ ನೆಲ ಕುಳಿಹೋಹುದೆ? ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವ’ ಎಂದು ಒಲಿದಂತೆ ಹಾಡುವ ಬಸವಣ್ಣ ಹೇಳಿದ್ದು ಇದನ್ನೇ.

ಬಾಳಲು ಹಣ ಬೇಕು ನಿಜ. ಆದರೆ, ಆ ಹಣಕ್ಕೆ ಇನ್ನಷ್ಟು ಘನತೆ ಬರುವುದು ಸೌಜನ್ಯದ ಸ್ಪರ್ಶದಿಂದ. ವಾಚು, ತರಕಾರಿ, ಗಾಡಿ, ಬೈಕು, ಉಡುಪು ,ವಸ್ತು ಎಲ್ಲಕ್ಕೂ ಸೌಜನ್ಯದ ಸಖ್ಯ ದೊರೆತರೆ ಬಹುತೇಕ ವಿಶ್ವದ ಸಿರಿವಂತರ ಸಂಖ್ಯೆಯ ಅನುಪಾತ ಚೆಲ್ಲಾಪಿಲ್ಲಿ ಆಗಬಹುದೇನೋ.

ಪದಬಂಧ 6422

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೀರಿನ ಹಬೆಯಿಂದಲೇ ಕಂಡು ಹಿಡಿಯುವುದು! (4)
3.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
5.ತೂಕ ಮಾಡುವ ಸಾಧನ (3)
6.ನೆನಪಲ್ಲೇ ಇರುವ ಕಾರಣ (2)
8.ಬಾಯಾರಿಕೆ ಈ ರೀತಿ ಬಂದಿದೆ (2)
9.ಇಹದ ವಿರುದ್ಧ ಪದ (2)
10.ಹಮ್ಮೀರನಿಗೊಲಿದ ಶಿವ ತಿರುಗಿದ್ದಾನೆ (2)
12.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
14.ಮೊದಲಿನ ಸ್ಥಿತಿ (4)
15.ಕಗ್ಗೊಲೆಯ ಘಟನೆಯಿದು (4)

ಮೇಲಿಂದ ಕೆಳಕ್ಕೆ
1.ಶ್ವಾಸವನ್ನು ನಡುವೆ ಟ್ಟು ನೀಡಿದ ಭರವಸೆ (4)
2.ರಜದಲ್ಲಿ ಖರೀದಿಸಿದ ಬೆಳ್ಳಿ (3)
3.ಗಡಿ ಹತ್ತಿರವಿರುವ ವ್ಯಾಯಾಮ ಶಾಲೆ (3)
4.ಮಲಗುವ ಮನೆಯಿದು (4)
7.ಮಡಿಕೆ ಇಲ್ಲ ಕಾಣುತಿದೆ (3)
8.ಕೊಡುವವನು ದಾರದೊಳಗಿದ್ದಾನೆ (3)
9.ಈ ಪರಿ ಹೇಳಿದಾಗ ಸಿಕ್ಕ ಗುರುತು (4)
11.ಬಯಕೆ ಹೀಗೆ ಬಂದಿದೆ (4)
12.ಪತಿಯೊಡನಿರುವ ಕಾಲಾಳು (3)
13.ವಿವಾದವಿಲ್ಲದೆ ನಡೆದ ಲಗ್ನ (3)

1			2	■	3			4
	■	■		■		■	■	
	■	■	5			■	■	
6	7	■	■	■	■	■	8	
■		■	■	■	■	■		■
9		■	■	■	■	■	10	11
	■	■	12		13	■	■	
	■	■		■		■	■	
14				■	15			

6421ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಸಮಕಾಲೀನ 5.ಅಧರ
6.ವರಾಹ 10.ನಾರಿಕೇಳ
11.ಪರಿಭವ 12.ವಠಾರ
15.ಜವಾನ 16.ಸಹಗಮನ

ಮೇಲಿಂದ ಕೆಳಕ್ಕೆ:
1.ಬೇಸರ 2.ವಿಕಾಸ
3.ದಾನವ 5.ಅವಿನಾಭಾವ
7.ಹಯವದನ 8.ಅಳತೆ9.
ಕಂಪನ 13.ರಸನ
14.ಮಗಳು 15.ಜನನಿ

ಸುಡೊಕು 6805

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5	7		6				2
			5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

6804 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಜೂನ್ 2026 ಬುಧವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ತದಿಗೆ ಗಂ. 21-22 ನಕ್ಷತ್ರ : ಪೂರ್ವಾಷಾಢ ಗಂ. 25-00 ಯೋಗ : ಶುಭ ಗಂ. 08-12 ಕರಣ : ವಣಿಜ ಗಂ. 08-13, ವೃಷಭ ಮಾಸದ 20 ನೇ ದಿನ. ಮಳೆ ನಕ್ಷತ್ರ : ರೋಹಿಣಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-06 ಸೂರ್ಯಾಸ್ತ : 06-51 ಮುಸ್ಲಿಂ ದಿನಾಂಕ : 17 ದುಲ್ ಹಿಜ್ಜಾ ಅದೃಷ್ಟ ಸಂಖ್ಯೆ : 5, 12

ಮೇಷ: ನೂತನ ವ್ಯಕ್ತಿಯ ಪರಿಚಯವು ನಿಮ್ಮ ಕೆಲಸಕ್ಕೆ ಅನುಕೂಲವನ್ನು ಉಂಟು ಮಾಡುತ್ತದೆ. ಮಕ್ಕಳ ವಿಚಾರವಾಗಿ ಇಂದು ನೀವು ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿದೆಯೇ ಎಂದು ಇನ್ನೊಮ್ಮೆ ವಿಮರ್ಶಿಸಿಕೊಳ್ಳಿರಿ.

ವೃಷಭ: ಎಷ್ಟೇ ಚಾಣಾಕ್ಷತನ ತೋರಿದರೂ ಮಾತುಗಾರಿಕೆಯಲ್ಲಿ ನೀವು ಈ ದಿನ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ದಿನ ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ.

ಮಿಥುನ: ನಾಳೆಯ ಕೆಲಸಗಳ ಬಗ್ಗೆ ಇಂದೇ ತಯಾರಿ ನಡೆಸುವುದು ಯಶಸ್ಸಿಗೆ ಸಹಾಯವಾಗುವುದು. ಭಾರಿ ಕೆಲಸಕ್ಕೆ ಕೈಹಾಕಿದ ಪರಿಣಾಮದಿಂದಾಗಿ ಸಣ್ಣ-ಪುಟ್ಟ ಅನಾರೋಗ್ಯ ದೇಹಾಯಾಸ ಉಂಟಾಗಬಹುದು.

ಕರ್ಕಾಟಕ: ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಉತ್ಸಾಹವನ್ನು ತೋರಿ ಅದರಲ್ಲಿ ಸಫಲತೆ-ಹೊಂದಬಹುದು. ಕೆಲಸದಲ್ಲಿ ಧನಾತ್ಮಕ ಬದಲಾವಣೆಯಿಂದಾಗಿ ಸಂತಸ.

ಸಿಂಹ : ಪತ್ರಿಕಾ ವರದಿಗಾರರಿಗೆ ಈ ದಿನವು ಬಹಳ ವಿಶೇಷ ದಿನವಾಗಿ ಜೀವನದಲ್ಲಿ ಸದಾಕಾಲ ನೆನಪಿರುವಂತೆ ಆಗಬಹುದು. ಸರ್ಕಾರಿ ವೃತ್ತಿಪರವಾಗಿ ಅಪಾರ ಗಮನಹರಿಸಿದಲ್ಲಿ ಬಹುನಿರೀಕ್ಷಿತವಾದ ಬೆಳವಣಿಗೆಗಳು ಇರುತ್ತವೆ.

ಕನ್ಯಾ: ಕೈತಪ್ಪಿ ಹೋದ ಕಾರ್ಯಗಳಿಂದ ಆಗುವ ಲಾಭ ನಷ್ಟದ ಮೌಲ್ಯಮಾಪನ ಮಾಡುತ್ತ ಸುಮ್ಮನೆ ಕೂರುವುದರಲ್ಲಿ ಯಾವುದೇ ಪ್ರಯೋಜನ ಇರುವುದಿಲ್ಲ. ನಿಮ್ಮ ಕರ್ತವ್ಯದಲ್ಲಿನ ಕೊರತೆಯು ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ.

ತುಲಾ: ನಿಮ್ಮ ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ ಹಾಗೂ ಸಂಸಾರದಲ್ಲಿ ಸಮತೋಲನ ಪಡೆಯುವಿರಿ. ಕುಲ ದೇವರ ದರ್ಶನ ಅಥವಾ ಕ್ಷೇತ್ರಕ್ಕೆ ಕಾಣಿಕೆ ಕಳುಹಿಸಿದ ನಂತರ ಈ ದಿನವನ್ನು ಪ್ರಾರಂಭಿಸಿ

ವೃಶ್ಚಿಕ: ಸೋಮಾರಿತನ ದೂರವಾಗಿ ಕೈಹಿಡಿದ ಕಾರ್ಯ ಸಾಧನೆ ಅಂತಿಮ ಹಂತ ತಲುಪಲಿದೆ. ನಿಮ್ಮ ಬಯಕೆಗಳು ಸುಲಭವಾಗಿ ಈಡೇರುವುದು. ಸದಾ ಕಾಲದಲ್ಲಿ ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡು ಕೊಳ್ಳಲಿದ್ದೀರಿ.

ಧನು: ಬೇಸತ್ತು ಹೋಗಿದ್ದ ನಿಮ್ಮ ಜೀವನದಲ್ಲಿ ಆಶಾದಾಯಕ ಭಾವನೆಗಳಿಂದ ನೆಮ್ಮದಿಯಾಗಲಿದೆ. ದೃಷ್ಟಿದೋಷ ಸರಿಪಡಿಸಿಕೊಳ್ಳಲು ವೈದ್ಯರನ್ನು ಭೇಟಿಮಾಡಿ. ಸಗಟು ವ್ಯಾಪಾರಿಗಳಿಗೆ ಸಣ್ಣ ಸಮಸ್ಯೆ ಎದುರಾಗಬಹುದು.

ಮಕರ: ನಿಮ್ಮ ಮಾತುಗಾರಿಕೆಯಿಂದಾಗಿ ಸಹೋದರರಿಗೆ ನೋವಾಗಬಹುದು ಅಥವಾ ಕಲಹ ಉಂಟಾಗಬಹುದು. ಈ ದಿನ ನಿಮ್ಮ ಮೊದಲ ಆದ್ಯತೆ ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ. ಸ್ವಂತ ವ್ಯಾಪಾರದ ಯೋಚನೆ ಮಾಡಬಹುದು.


ಕುಂಭ: ನೀವು ಅಧಿಕಾರಿಗಳಾಗಿದ್ದಲ್ಲಿ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಮ್ಮ ನಿರ್ಧಾರವು ಬಹಳ ಅನುಕೂಲಕರವಾಗುವುದು. ನೀವು ಆಡಿದ ಮಾತುಗಳನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಸೋಲಬೇಕಾಗುತ್ತದೆ.

ಮೀನ: ಅನಾರೋಗ್ಯದ ಕಾರಣದಿಂದಾಗಿ ಹಣಕಾಸಿನ ಅನಿವಾರ್ಯತೆಯನ್ನು ಎದುರಿಸಬೇಕಾಗಲಿದೆ. ಜವಳಿ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರವಿರುವುದು. ಆರಕ್ಷಕರು ಅನಿವಾರ್ಯವಾಗಿ ಬಿಡುವಿಲ್ಲದ ಕೆಲಸ ಮಾಡಬೇಕಾಗಬಹುದು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,382
ಇಂದಿನ ಅಂತ್ಯ: 23,483
ದಿನದ ಗರಿಷ್ಠ: 23,556
100

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹620
12 ಕ್ಕೆ ₹86
ಮೈಸೂರು: 100 ಕ್ಕೆ ₹630

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹254.50
ಆರ್‌ಎಸ್‌ಎಸ್-5 ₹247
ಗುಡ್ ಲಾಟ್ ₹212

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ)₹372-635
ದ್ವಿತಳಿ (ಬಿ.ವಿ) ₹455-877

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1620 (1635)
ಸೋಯಾ (ರಿಫೈನ್ಡ್) ₹1510 (1510)
ಸೂರ್ಯಕಾಂತಿ (ರಿಫೈನ್ಡ್) ₹1660 (1660)
ಪಾಮೋಲಿನ್ ₹1490 (1485)

ಅವಾಚ್ಯ ಪದದಿಂದ ಟೀಕಿಸಿದ ಟ್ರಂಪ್

ಇಸ್ರೇಲ್ ಅಧ್ಯಕ್ಷ ನೆತನ್ಯಾಹು ವಿರುದ್ಧ ಅಮೆರಿಕ ಅಧ್ಯಕ್ಷ ವಾಗ್ದಾಳಿ


ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): ಲೆಬನಾನ್ ಮೇಲೆ ದಾಳಿ ನಡೆಸದಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಮನವೊಲಿಸಲಾಗಿದ್ದು, ತಮ್ಮ ಪಡೆಗಳನ್ನು ಅವರು ಹಿಂತೆಗೆದುಕೊಂಡಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಬಗ್ಗೆ ಸಾಮಾಜಿಕ ಮಾಧ್ಯಮ 'ಟ್ರುತ್'ನಲ್ಲಿ ಟ್ರಂಪ್ ಬರೆದುಕೊಂಡಿದ್ದಾರೆ.

ಲೆಬನಾನ್ ಮೇಲಿನ ಇಸ್ರೇಲ್ ದಾಳಿಯನ್ನು ಖಂಡಿಸಿ, ಅಮೆರಿಕದೊಂದಿಗಿನ ಶಾಂತಿ ಒಪ್ಪಂದದ ಮಾತುಕತೆಯನ್ನು ಕೊನೆಗೊಳಿಸುವುದಾಗಿ ಇರಾನ್ ಎಚ್ಚರಿಸಿತ್ತು. ಈ ಬೆನ್ನಲ್ಲೇ ಟ್ರಂಪ್ ಅವರು ನೆತನ್ಯಾಹು ಅವರಿಗೆ ದೂರವಾಣಿ ಕರೆ ಮಾಡಿ ಬೈರೂತ್ ಮೇಲಿನ ದಾಳಿ ನಿಲ್ಲಿಸುವಂತೆ ತಾಕೀತು ಮಾಡಿದ್ದಾರೆ. ಮಾತುಕತೆ ಸಂದರ್ಭದಲ್ಲಿ ಅಸಭ್ಯ ಹಾಗೂ ಅಶ್ಲೀಲ ಪದಗಳನ್ನು ಬಳಸಿ, ನೆತನ್ಯಾಹು ಅವರ ಮೇಲೆ ಟ್ರಂಪ್ ಟೀಕಾಪ್ರಹಾರ ಮಾಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾದ ಬೆನ್ನಲ್ಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

'ನಿನಗೇನಾದರೂ ಹುಚ್ಚು ಹಿಡಿದಿದೆಯೇ? ಇಂಥ ನಡೆಯಿಂದಾಗಿ ಈಗ ಎಲ್ಲರೂ ಇಸ್ರೇಲ್ ಅನ್ನು ದ್ವೇಷಿಸುತ್ತಿದ್ದಾರೆ. ನಾನೇನಾದರೂ ನಿನ್ನ ಬೆಂಬಲಕ್ಕೆ ಇರದೇ ಹೋಗಿದ್ದರೆ ಇಷ್ಟು ಹೊತ್ತಿಗೆ ನೀನು ಜೈಲಿನಲ್ಲಿ ಇರುತ್ತಿದ್ದೆ' ಎಂದು ನೆತನ್ಯಾಹು ಅವರನ್ನು ಟ್ರಂಪ್ ತರಾಟೆಗೆ ತೆಗೆದುಕೊಂಡಿದ್ದಾರೆ' ಎಂದು ಅಮೆರಿಕದ ಮಾಧ್ಯಮ ಸಂಸ್ಥೆ 'ಆ್ಯಕ್ಸಿಯೋಸ್' ವರದಿ ಮಾಡಿದೆ.

'ಹಿಜ್ಬುಲ್ಲಾ ಭಯೋತ್ಪಾದಕರು ಇಸ್ರೇಲ್ ಮೇಲೆ ದಾಳಿಯನ್ನು ನಿಲ್ಲಿಸದಿದ್ದರೆ ಬೈರೂತ್‌ನಲ್ಲಿನ ಉಗ್ರರ ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತೇವೆ' ಎಂದು ನೆತನ್ಯಾಹು ಅವರು ತಿಳಿಸಿದ್ದಾರೆ. ಹಿಜ್ಬುಲ್ಲಾ ಪ್ರತಿನಿಧಿಗಳೊಂದಿಗೂ ಮಾತುಕತೆ ನಡೆಸಲಾಗಿದ್ದು, ಇಸ್ರೇಲ್ ಮತ್ತು ಅದರ ಸೈನಿಕರ ಮೇಲೆ ದಾಳಿಯನ್ನು ನಿಲ್ಲಿಸುವುದಾಗಿ ಅವರು ಒಪ್ಪಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

ರಾಯಭಾರಿಗಳ ಮಾತುಕತೆ: ಅಮೆರಿಕದಲ್ಲಿರುವ ಇಸ್ರೇಲ್ ಮತ್ತು ಲೆಬನಾನ್‌ನ ರಾಯಭಾರಿಗಳು ಪರಸ್ಪರ ದಾಳಿಯನ್ನು ನಿಲ್ಲಿಸುವ ಕುರಿತು ವಾಷಿಂಗ್ಟನ್‌ನಲ್ಲಿ ಮಂಗಳವಾರ ಮತ್ತೆ ಮಾತುಕತೆ ಆರಂಭಿಸಿದ್ದಾರೆ. ಉಭಯ ದೇಶಗಳ ಪ್ರತಿನಿಧಿಗಳ ಮಧ್ಯೆ ನಡೆಯುತ್ತಿರುವ ನಾಲ್ಕನೇ ಸಭೆ ಇದಾಗಿದೆ.

ಇಸ್ರೇಲ್ ರಾಯಭಾರಿ ಯಖೀಲ್ ಲೈಟರ್ ಮತ್ತು ಲೆಬನಾನ್‌ನ ರಾಯಭಾರಿ ನಾಡಾ ಹಮಾದೇ ಮೋವಾದ್ ಹಾಗೂ ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವ ಮ್ಯಾಕ್ರೊ ರುಬಿಯೊ ಅವರ ಹಿರಿಯ ಸಲಹೆಗಾರ ಡ್ಯಾನಿಯಲ್ ಹೋಲರ್ ಅವರು ಸಭೆಯಲ್ಲಿ ಭಾಗಿಯಾಗಿದ್ದಾರೆ.


ಸಭೆಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿಗಳು ಈವರೆಗೆ ಹೇಳಿಕೆ ನೀಡಿಲ್ಲ.

'ಇರಾನ್ ಜತೆ ಕ್ಷಿಪ್ರಗತಿಯಲ್ಲಿ ಮಾತುಕತೆ'

ಇರಾನ್‌ನೊಂದಿಗಿನ ಮಾತುಕತೆಯು ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಯುದ್ಧವನ್ನು ಅಂತ್ಯಗೊಳಿಸಲು ಉಭಯ ದೇಶಗಳ ಅಧಿಕಾರಿಗಳು ಮಾತುಕತೆ ನಡೆಸುತ್ತಿರುವ ನಡುವೆಯೂ, ಎರಡೂ ದೇಶಗಳು ಪರಸ್ಪರ ದಾಳಿ ನಡೆಸುತ್ತಿರುವುದರಿಂದ ಕದನ ವಿರಾಮ ಒಪ್ಪಂದದ ಮೇಲೆ ತೂಗುಗತ್ತಿ ಇದೆ.

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಶ್, ಯಲಹಂಕ, ಬೆಂಗಳೂರು

ಪ್ರಶ್ನೆ: ಇತ್ತೀಚೆಗೆ ನನ್ನ ತಂದೆಯವರು ತೀರಿಹೋದರು. ಅವರ ಹಳೆಯ ಕಡತಗಳನ್ನು ನನ್ನ ಸೋದರರು ಪರಿಶೀಲಿಸುತ್ತಿದ್ದಾಗ ಕೆಲವೊಂದು ಕಂಪನಿಗಳ ಷೇರುಪತ್ರಗಳು ಸಿಕ್ಕಿದವು. ಈ ಕಂಪನಿಗಳು ಪ್ರಸ್ತುತ ಉತ್ತಮ ಸ್ಥಿತಿಯಲ್ಲಿದ್ದು ಲಾಭಾಂಶ (ಡಿವಿಡೆಂಡ್) ಕೂಡ ಸಿಗುತ್ತಿದೆ. ಕಂಪನಿಯ ಷೇರುಗಳ ಮೌಲ್ಯವೂ ಅನೇಕ ಪಾಲು ವೃದ್ಧಿಸಿದೆ. ಪ್ರಸ್ತುತ ಇವುಗಳ ಮೌಲ್ಯ ಸುಮಾರು ₹5 ಲಕ್ಷ ಅಂದಾಜು ಇರಬಹುದು. ಷೇರು ದಾಖಲೆಗಳ ಪ್ರಕಾರ ಅವುಗಳನ್ನು ಸುಮಾರು 1980-90ರ ಆಸುಪಾಸಿನಲ್ಲಿ ಖರೀದಿಸಿ ಭದ್ರವಾಗಿ ಇಟ್ಟಿದ್ದರು. ಆದರೆ ಅವುಗಳನ್ನು ಡಿಮ್ಯಾಟ್ ಖಾತೆಗೆ ಅವರು ವರ್ಗಾಯಿಸಿರಲಿಲ್ಲ. ಆ ಷೇರುಗಳಿಗೆ ಡಿವಿಡೆಂಡ್ ಸಿಕ್ಕಿರುವ ಮಾಹಿತಿ ನಮಗಿಲ್ಲ. ಈ ಹಿನ್ನೆಲೆಯಲ್ಲಿ ನಾನು ಆ ಷೇರುಗಳ ಮೌಲ್ಯವನ್ನು ನನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಏನು ಮಾಡಬೇಕು. ಹಳೆಯ ಡಿವಿಡೆಂಡ್ ಹೋಗಿಬಿಟ್ಟಿದೆ ಅದನ್ನೂ ಪಡೆಯಬಹುದೇ. ಒಂದು ವೇಳೆ, ಷೇರುಗಳು ನನ್ನ ಹೆಸರಿಗೆ ವರ್ಗವಾದ ಬಳಿಕ ಅವನ್ನು ಮಾರಾಟ ಮಾಡುವುದಾದರೆ, ಅದಕ್ಕೆ ತೆರಿಗೆ ಯಾವ ರೀತಿ ಅನ್ವಯಿಸುತ್ತದೆ. ನನ್ನ ಹೆಸರಿಗೆ ವರ್ಗವಾದ ದಿನದಿಂದಲೋ ಅಥವಾ ನನ್ನ ತಂದೆಯವರು ಖರೀದಿಸಿದ ದಿನದಿಂದಲೋ. ದಯವಿಟ್ಟು ಮಾಹಿತಿ ನೀಡಿ.

ಉತ್ತರ: ನಿಮ್ಮ ತಂದೆಯವರ ಹೆಸರಿನಲ್ಲಿರುವ ಹಳೆಯ ಷೇರುಪತ್ರಗಳು ಈಗಲೂ ಮಾನ್ಯವಾಗಿದ್ದು, ಸಂಬಂಧಿಸಿದ ಕಂಪನಿಗಳು ಅಸ್ತಿತ್ವದಲ್ಲಿದ್ದ ಮತ್ತು ಷೇರುಗಳು ರದ್ದಾಗಿರದಿದ್ದರೆ, ಅವುಗಳ ಮಾಲೀಕತ್ವವನ್ನು ಕಾನೂನುಬದ್ಧ ವಾರಸುದಾರರಿಗೆ ವರ್ಗಾಯಿಸಿಕೊಳ್ಳುವ ಅವಕಾಶ ಇದೆ. ಇದನ್ನು 'ಟ್ರಾನ್ಸ್‌ಮಿಷನ್ ಆಫ್ ಷೇರ್' ಎಂದು ಕರೆಯಲಾಗುತ್ತದೆ. ಕಂಪನಿಗಳ ಕಾಯ್ದೆ ಹಾಗೂ ಸಂಬಂಧಿಸಿದ ಸೆಬಿ ನಿಯಮಗಳ ಪ್ರಕಾರ, ಷೇರುದಾರರ ಮರಣದ ಸಂದರ್ಭದಲ್ಲಿ ಅವರ ವಾರಸುದಾರರು ಮರಣ ಪ್ರಮಾಣಪತ್ರ, ಕಾನೂನು ವಾರಸುದಾರರ ದಾಖಲೆಗಳು, ಉತ್ತರಾಧಿಕಾರ ಪ್ರಮಾಣಪತ್ರ ಸೂಕ್ತ ಫಾರಂ ಅಥವಾ ಇತರ ಕೋರ್ಟ್ ದಾಖಲೆಗಳನ್ನು ಸಲ್ಲಿಸಿ ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಮೂಲಕ ಷೇರುಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಬಹುದು. ಬಳಿಕ ಅವುಗಳನ್ನು ಡಿಮ್ಯಾಟ್ ಖಾತೆಗೆ ಪರಿವರ್ತಿಸಬಹುದು.

ನಿಮ್ಮ ತಂದೆಯವರು ಖರೀದಿಸಿದ ನಂತರ ಹಲವು ವರ್ಷಗಳವರೆಗೆ ಡಿವಿಡೆಂಡ್ ಪಡೆಯದೇ ಇದ್ದಲ್ಲಿ, ಕಂಪನಿಗಳ ಕಾಯ್ದೆಯ ಪ್ರಕಾರ ಸತತ ಏಳು ವರ್ಷಗಳ ಕಾಲ ಕ್ಲೇಮ್ ಮಾಡದ ಡಿವಿಡೆಂಡ್ ಮೊತ್ತವನ್ನು ಹಾಗೂ ಅದಕ್ಕೆ ಸಂಬಂಧಿಸಿದ ಷೇರುಗಳನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ (ಐಇಪಿಎಫ್) ಖಾತೆಗೆ ವರ್ಗಾಯಿಸಿರುವ ಸಾಧ್ಯತೆ ಇದೆ. ಅಂತಹ ಸಂದರ್ಭದಲ್ಲಿಯೂ ಹಕ್ಕು ಕಳೆದು ಹೋಗುವುದಿಲ್ಲ. ವಾರಸುದಾರರು ಐಇಪಿಎಫ್-5 ಎಂಬ ಸಲ್ಲಿಸಿ, ಅಗತ್ಯ ದಾಖಲೆಗಳೊಂದಿಗೆ ಸಂಬಂಧಿತ ಕಂಪನಿಯ ಪರಿಶೀಲನೆ ನಂತರ ಐಇಪಿಎಫ್ ಪ್ರಾಧಿಕಾರದಿಂದ ಷೇರುಗಳು ಹಾಗೂ ಬಾಕಿ ಡಿವಿಡೆಂಡ್ ಮೊತ್ತವನ್ನು ತಮ್ಮ ಹೆಸರಲ್ಲಿ ಪಡೆಯಬಹುದು. ಈ ಪ್ರಕ್ರಿಯೆ ಸ್ವಲ್ಪ ಸಮಯ ತೆಗೆದುಕೊಳ್ಳಬಹುದಾದರೂ ಕಾನೂನುಬದ್ಧವಾಗಿ ನಿಮ್ಮ ಹಕ್ಕು ಇಂತಹ ಸಂದರ್ಭದಲ್ಲಿ ಚಲಾಯಿಸಬಹುದಾಗಿದೆ.

ಮೊದಲ ಹಂತದಲ್ಲಿ ಸಂಬಂಧಿತ ಕಂಪನಿಗಳ ವೆಬ್‌ಸೈಟ್ ಸೂಕ್ತ ವಿಭಾಗದಲ್ಲಿ (ಹೂಡಿಕೆದಾರರ ಸೇವೆ, ಐಇಪಿಎಫ್ ಷೇರು) ಪರಿಶೀಲಿಸಬಹುದು. ಈ ರೀತಿ ಪ್ರಕಟಣೆ ಮಾಡುವುದು ಕಂಪನಿಗಳಿಗೆ ಅನಿವಾರ್ಯವೂ ಹೌದು. ಕಂಪನಿಯ ಹೆಸರು, ಫೋಲಿಯೊ ಸಂಖ್ಯೆ, ಷೇರು ಪ್ರಮಾಣಪತ್ರ ಸಂಖ್ಯೆ ಅಥವಾ ಷೇರುದಾರರ ಹೆಸರಿನ ಆಧಾರದ ಮೇಲೆ ವರ್ಗಾವಣೆಗೊಂಡ ಮಾಹಿತಿಯನ್ನು ಖಚಿತಪಡಿಸಿಕೊಳ್ಳಬಹುದು. ಅಗತ್ಯವಿದ್ದರೆ ಸಂಬಂಧಿತ ಆರ್‌ಟಿಎ ಸಂಸ್ಥೆಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಆದಾಯ ತೆರಿಗೆ ದೃಷ್ಟಿಯಿಂದ, ತಂದೆಯವರಿಂದ ಮಕ್ಕಳಿಗೆ ಷೇರುಗಳ ವರ್ಗಾವಣೆ ವಾರಸುದಾರಿಕೆಯ ಮೂಲಕ ನಡೆಯುವುದರಿಂದ ಅದನ್ನು 'ವರ್ಗಾವಣೆ' ಅಥವಾ 'ಮಾರಾಟ' ಎಂದು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ನಿಮ್ಮ ಹೆಸರಿಗೆ ಷೇರುಗಳು ವರ್ಗವಾದ ಸಂದರ್ಭದಲ್ಲಿ ಯಾವುದೇ ಬಂಡವಾಳ ಲಾಭ ತೆರಿಗೆ ಅನ್ವಯಿಸುವುದಿಲ್ಲ. ಆದರೆ ನಂತರ ನೀವು ಆ ಷೇರುಗಳನ್ನು ಮಾರಾಟ ಮಾಡಿದರೆ, ಲಾಭ ಲೆಕ್ಕಾಚಾರಕ್ಕಾಗಿ ನಿಮ್ಮ ತಂದೆಯವರು ಖರೀದಿಸಿದ ದಿನಾಂಕ ಮತ್ತು ಅವರ ಮೂಲ ಖರೀದಿ ವೆಚ್ಚ ಅಥವಾ ಅಂದಿನ ನ್ಯಾಯೋಚಿತ ಮಾರುಕಟ್ಟೆ ಮೌಲ್ಯವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಅಂದರೆ ಹೋಲ್ಡಿಂಗ್ ಅವಧಿ ಹಾಗೂ ಅದರ ಮೌಲ್ಯವು ವಾರಸುದಾರರ ಹೆಸರಿಗೆ ಮುಂದುವರಿಯುತ್ತದೆ. ಆದ್ದರಿಂದ ತೆರಿಗೆ ಉದ್ದೇಶಕ್ಕಾಗಿ ನಿಮ್ಮ ತಂದೆಯವರ ಖರೀದಿ ದಾಖಲೆಗಳನ್ನು ಸಾಧ್ಯವಾದಷ್ಟು ಸಂಗ್ರಹಿಸಿಟ್ಟುಕೊಳ್ಳುವುದು ಸೂಕ್ತ.

ಒಬ್ಬರಿಗಿಂತ ಹೆಚ್ಚು ಮಕ್ಕಳು ಅಥವಾ ಇತರ ಕಾನೂನುಬದ್ಧ ವಾರಸುದಾರರು ಇದ್ದರೆ, ಷೇರುಗಳು ಸ್ವಯಂಚಾಲಿತವಾಗಿ ಒಬ್ಬರ ಹೆಸರಿಗೆ ವರ್ಗಾವಣೆ ಆಗುವುದಿಲ್ಲ. ನಿಮಗೆ ಅನ್ವಯಿಸುವ ಉತ್ತರಾಧಿಕಾರ ಕಾಯ್ದೆ ಪ್ರಕಾರ ಎಲ್ಲ ವಾರಸುದಾರರ ಹಕ್ಕುಗಳನ್ನು ಪರಿಗಣಿಸಬೇಕಾಗುತ್ತದೆ. ವಿಲ್ ಇದ್ದರೆ ಅದರ ಪ್ರಕಾರ, ವಿಲ್ ಇಲ್ಲದಿದ್ದರೆ ಕಾನೂನುಬದ್ಧ ವಾರಸುದಾರರ ನಡುವೆ ಹಂಚಿಕೆಯನ್ನು ನಿರ್ಧರಿಸಬೇಕಾಗುತ್ತದೆ. ಹೀಗಾಗಿ ಷೇರುಗಳ ಟ್ರಾನ್ಸ್‌ಮಿಷನ್ ಮತ್ತು ಐಇಪಿಎಫ್ ಹೂಡಿಕೆ ಮೊತ್ತ ಮರುಪಡೆಯುವ ಪ್ರಕ್ರಿಯೆಯಲ್ಲಿ ಎಲ್ಲಾ ವಾರಸುದಾರರ ಸಮ್ಮತಿ ಅಥವಾ ಅಗತ್ಯ ಕಾನೂನು ದಾಖಲೆಗಳನ್ನು ಒದಗಿಸುವುದು ಅವಶ್ಯಕವಾಗಬಹುದು. ಹೀಗಾಗಿ ಹೆಚ್ಚುವರಿ ಕಾನೂನು ಸಲಹೆ ಹಾಗೂ ನಿಮ್ಮ ಬ್ರೋಕರ್ ಸಂಸ್ಥೆಯನ್ನು ಸಂಪರ್ಕಿಸಿ. ❖

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ತೈಲ ದರ ಹೆಚ್ಚಳ: ಹಣದುಬ್ಬರದ ಮೇಲೆ ಪರಿಣಾಮ–ಕ್ರಿಸಿಲ್



ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯು ಹಣದುಬ್ಬರದ ಮೇಲೆ ಮತ್ತಷ್ಟು ಒತ್ತಡ ಬೀರಲಿದ್ದು, ಮುಂಬರುವ ತಿಂಗಳಿನಲ್ಲಿ ಸಾಗಣೆ ಮತ್ತು ತಯಾರಿಕಾ ವೆಚ್ಚ ಏರಿಕೆಯಾಗುವ ನಿರೀಕ್ಷೆ ಇದೆ ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆಯ ವರದಿ ಮಂಗಳವಾರ ತಿಳಿಸಿದೆ.

ಮೇ 15ರಿಂದ ಪೆಟ್ರೋಲ್ ಮತ್ತು ಡೀಸೆಲ್ ದರ ಪ್ರತಿ ಲೀಟರಿಗೆ ₹7.5ರಷ್ಟು ಹೆಚ್ಚಳವಾಗಿದೆ. ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರ ಏರಿಕೆಯಾದರೆ, ಮತ್ತಷ್ಟು ಬೆಲೆ ಹೆಚ್ಚಳವಾಗುವ ಸಾಧ್ಯತೆ ಇದೆ.

ತೈಲ ಮಾರುಕಟ್ಟೆ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡುವ ಮೂಲಕ ನಷ್ಟವನ್ನು ಕ್ರಮೇಣವಾಗಿ ಭರ್ತಿ ಮಾಡಿಕೊಳ್ಳುತ್ತಿವೆ. ಮುಂದಿನ ದಿನಗಳಲ್ಲಿ ಇದು ₹10ರವರೆಗೆ ಹೆಚ್ಚಳವಾಗಬಹುದು ಎಂದು ಹೇಳಿದೆ.

ಹೆಚ್ಚಿನ ಸಾಗಣೆ ವೆಚ್ಚವು ಆಹಾರ ಮತ್ತು ಕೋರ್ ಹಣದುಬ್ಬರವನ್ನು ಹೆಚ್ಚಿಸಲಿದ್ದು, ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ.

ಇಂಧನ ದರದ ಹೆಚ್ಚಳವು ನೇರವಾಗಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದೆ. ಪೆಟ್ರೋಲ್ ಮತ್ತು ಡೀಸೆಲ್ ದರ ಪ್ರತಿ ಲೀಟರಿಗೆ ₹7.5ರಷ್ಟು ಹೆಚ್ಚಳದಿಂದ ಹಣದುಬ್ಬರ ಅಂದಾಜು ಶೇ 0.36ರಷ್ಟು ಏರಿಕೆಯಾದರೆ, ₹10 ಹೆಚ್ಚಳವಾದರೆ, ಶೇ 0.48ರಷ್ಟಕ್ಕೆ ತಲುಪಬಹುದು ಎಂದು ಹೇಳಿದೆ.

ದೇಶದ ಒಟ್ಟು ಸರಕು ಸಾಗಣೆಯಲ್ಲಿ ರಸ್ತೆ ಮೂಲಕ ಆಗುವ ಸಾಗಣೆಯು ಶೇ 71ರಷ್ಟು ಪಾಲನ್ನು ಹೊಂದಿದೆ. ಇಂಧನಕ್ಕೆ ಆಗುವ ವೆಚ್ಚವು ಶೇ 42ರಷ್ಟಾಗುತ್ತದೆ. ಸಾಗಣೆ ವೆಚ್ಚದಲ್ಲಿನ ಹೆಚ್ಚಳವು ಹೈನು ಉತ್ಪನ್ನಗಳು, ಚಹಾ, ಕಾಫಿ, ಹಣ್ಣುಗಳು, ಧಾನ್ಯಗಳು, ಮಸಾಲೆ ಪದಾರ್ಥಗಳು, ಮೊಟ್ಟೆ, ಮಾಂಸದ ಸಾಗಣೆ ಮೇಲೆ ಹೆಚ್ಚು ಪರಿಣಾಮ ಬೀರಲಿದೆ. ಮುಂದಿನ ದಿನಗಳಲ್ಲಿ ಇದು ಆಹಾರ ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಬಹುದು ಎಂದು ಹೇಳಿದೆ.

ಹಣದುಬ್ಬರದ ವಾಸ್ತವಿಕ ವಿವರ ನೀಡಲು ಕ್ರಮ

ಡಬ್ಲ್ಯುಪಿಐ ಬದಲು ಪಿಪಿಐ



ನವದೆಹಲಿ (ಪಿಟಿಐ): ಹಣದುಬ್ಬರದ ಮೌಲ್ಯಮಾಪನವನ್ನು ಹೆಚ್ಚು ವಾಸ್ತವಿಕವಾಗಿಸಲು, ಸಗಟು ಬೆಲೆ ಸೂಚ್ಯಂಕವನ್ನು (ಡಬ್ಲ್ಯುಪಿಐ) ಕ್ರಮೇಣವಾಗಿ ರದ್ದುಗೊಳಿಸಿ, ಉತ್ಪಾದನೆ, ತಯಾರಿಕಾ ಮತ್ತು ಸೇವೆಗಳ ಬೆಲೆಗಳನ್ನು ವಿವರವಾಗಿ ಒಳಗೊಂಡಿರುವ ಉತ್ಪಾದಕ ಬೆಲೆ ಸೂಚ್ಯಂಕವನ್ನು (ಪಿಪಿಐ) ಪರಿಚಯಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

'ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) 2022–23ರ ಮೂಲ ವರ್ಷವನ್ನು ಆಧಾರವಾಗಿಸಿಕೊಂಡು ಜೂನ್ 15ರಂದು ಪರಿಷ್ಕೃತ ಡಬ್ಲ್ಯುಪಿಐ ಸರಣಿ ಬಿಡುಗಡೆ ಮಾಡಲಿದೆ. ಇದು ಪ್ರಸ್ತುತ ಇರುವ 2011–12ರ ಮೂಲ ವರ್ಷದ ಬದಲಾಗಿರಲಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಧಾನ ಆರ್ಥಿಕ ಸಲಹೆಗಾರ ಪ್ರವೀಣ್ ಮಹ್ತೋ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದ್ದಾರೆ.

ಪರಿಷ್ಕೃತ ಸರಣಿ ಬಿಡುಗಡೆಗೊಂಡ ದಿನಾಂಕದಿಂದ ಐದು ವರ್ಷದ ಬಳಿಕ ಪಿಪಿಐ ಜಾರಿಗೆ ಬರಲಿದ್ದು, ಡಬ್ಲ್ಯುಪಿಐ ಸ್ಥಗಿತಗೊಳ್ಳಲಿದೆ ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಶಿಫಾರಸು ಮೇರೆಗೆ ಡಬ್ಲ್ಯುಪಿಐನಿಂದ ಪಿಪಿಐಗೆ ಬದಲಾವಣೆ ಮಾಡಲು ಮುಂದಾಗಿದೆ.

ಉತ್ಪಾದನೆ ಮತ್ತು ತಯಾರಿಕಾ ಪಿಪಿಐನಿಂದ ಸ್ಪಷ್ಟವಾಗಿ ವಸ್ತುಗಳ ಬೆಲೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.

1942ರಲ್ಲಿ ಮೊದಲ ಬಾರಿಗೆ ಡಬ್ಲ್ಯುಪಿಐ ಅನ್ನು ಪರಿಚಯಿಸಲಾಗಿತ್ತು. ಇದಕ್ಕೆ 1939 ಮೂಲ ವರ್ಷವಾಗಿತ್ತು. ಇಲ್ಲಿಯವರೆಗೆ ಏಳು ಬಾರಿ ಪರಿಷ್ಕರಣೆ ನಡೆದಿದ್ದು, ಕೊನೆಯದಾಗಿ 2017ರಲ್ಲಿ ಪರಿಷ್ಕರಣೆ ಆಗಿತ್ತು. ಇದಕ್ಕೆ 2011–12 ಮೂಲವರ್ಷವಾಗಿದೆ.

ಹೊಸ ಸರಣಿಯಲ್ಲಿ ಉತ್ಪನ್ನಗಳ ಸಂಖ್ಯೆಯು 697ರಿಂದ 957ಕ್ಕೆ ಹೆಚ್ಚಳವಾಗಿದೆ. ವಿದ್ಯುತ್ ಗುಂಪಿನಲ್ಲಿ ಸೌರ ಮತ್ತು ಪವನದಂತಹ ಶಕ್ತಿಯ ಮೂಲಗಳನ್ನು ಸೇರಿಸಲಾಗಿದೆ. ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲವನ್ನು ಪ್ರಾಥಮಿಕ ವಸ್ತುಗಳಿಂದ ಇಂಧನ ಮತ್ತು ವಿದ್ಯುತ್‌ಗೆ ವರ್ಗಾಯಿಸಲಾಗಿದೆ ಎಂದು ಆರ್ಥಿಕ ಸಲಹೆಗಾರ ಕಚೇರಿಯ ಉಪ ಮಹಾನಿರ್ದೇಶಕ ದಿಲೀಪ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2000
ಮಧ್ಯಮ	₹800-1200
ಸಣ್ಣ	₹400-800

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23000
ಎಸಿ	₹14000
ಆರ್‌ಪಿ	₹18250
ಆರ್‌ಸಿ	₹9700

ಮುಂಬೈ ಧಾರಣೆ (ಶೇಂಗಾ)
02-06-2026

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1630 (1645)
ಒಂದು ವಾರದ ಡೆಲಿವರಿ	1625 (1645)
ಪಾಮ್ ವಾರದ ಡೆಲಿವರಿ	1488 (1483)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1550)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,000 (1,53,900)
ಬೆಳ್ಳಿ ಕೆ.ಜಿಗೆ	2,65,000 (2,60,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-26000
ತುರುವೇಕೆರೆ	₹23000-23000

ಅಡಿಕೆ ಧಾರಣೆ

ಪುತ್ತೂರು		ಸಿದ್ದಾಪುರ		ಯಲ್ಲಾಪುರ	
ಕೋಕ	20000-33500	ಗೊರಬಲು	19109-43059	ಕೆಂಪುಗೋಟು	26011-37111
ಹೊಸತು	30000-45000	ಬಿಳಿಗೋಟು	25899-35489	ರಾಶಿ	50500-53299
ಸಾಗರ		ಚಾಲಿ	38000-47539	ಆಪಿ	56959-56959
ಕೆಂಪುಗೋಟು	37309-37309	ಕೋಕ	22899-32899	ಬಿಳಿಗೋಟು	16569-36119
ರಾಶಿ	46899-51299	ಕೆಂಪುಗೋಟು	34469-36299	ಚಾಲಿ	37409-48055
ಸಿಪ್ಪೆಗೋಟು	17099-21200	ರಾಶಿ	47269-52699	ಕೋಕ	12000-31900
ಚಾಲಿ	29666-40299	ತಟ್ಟಿಬೆಟ್ಟೆ	38100-42600	ಕೆಂಪುಗೋಟು	20600-35699
ಶಿವಮೊಗ್ಗ		**ಶಿರಸಿ**		ರಾಶಿ	48769-55899
ಸರಕು	63989-86609	ಬೆಟ್ಟೆ	40699-48399	ತಟ್ಟಿಬೆಟ್ಟೆ	37506-48499
ಬೆಟ್ಟೆ	55009-61309	ಬಿಳಿಗೋಟು	25299-35499		
ರಾಶಿ	45109-53509	ಚಾಲಿ	43911-48260		

ಕೆನರಾ ಬ್ಯಾಂಕ್‌ಗೆ ಬ್ರಜೇಶ್ ಸಿಇಒ

ಪ್ರಜಾವಾಣಿ ವಾರ್ತೆ


ಬ್ರಜೇಶ್ ಕುಮಾರ್ ಸಿಂಗ್

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ನೂತನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ (ಸಿಇಒ) ಬ್ರಜೇಶ್ ಕುಮಾರ್ ಸಿಂಗ್ ಅಧಿಕಾರ ಸ್ವೀಕರಿಸಿದ್ದಾರೆ.

ಇವರ ಅಧಿಕಾರಾವಧಿ 2029ರ ಏಪ್ರಿಲ್ 30 ಅಥವಾ ಮುಂದಿನ ಆದೇಶದವರೆಗೆ ಇರಲಿದೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

ರಿಟೇಲ್ ಬ್ಯಾಂಕಿಂಗ್, ಕಾರ್ಪೊರೇಟ್ ಕ್ರೆಡಿಟ್, ಮಾನವ ಸಂಪನ್ಮೂಲ ವಿಭಾಗ ಸೇರಿದಂತೆ ಬ್ಯಾಂಕಿಂಗ್ ವಲಯದಲ್ಲಿ ಮೂರು ದಶಕಕ್ಕೂ ಅಧಿಕ ಸೇವಾನುಭವ ಹೊಂದಿದ್ದಾರೆ. ಕೆನರಾ ಬ್ಯಾಂಕ್‌ಗೆ ಸೇರುವ ಮೊದಲು ಇವರು ಇಂಡಿಯನ್ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು.

ವಲಸೆ, ವಿದೇಶಿಗರ ನಿಯಮಗಳ ಬದಲಾವಣೆ

ನವದೆಹಲಿ (ಪಿಟಿಐ): ಭಾರತಕ್ಕೆ 180 ದಿನಗಳ ಅಥವಾ ಅದಕ್ಕಿಂತ ಕಡಿಮೆ ಅವಧಿಗೆ ವೀಸಾ ಪಡೆಯುವ ವಿದೇಶಿಗರು ಅವಧಿ ವಿಸ್ತರಿಸಿಕೊಳ್ಳಬೇಕು ಎಂಬುದಾದರೆ, 180 ದಿನಗಳು ಪೂರ್ಣಗೊಳ್ಳುವ ಮೊದಲೇ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವು ಹೊಸ ನಿಯಮ ರೂಪಿಸಿದೆ.

ವಲಸೆ ಮತ್ತು ವಿದೇಶಿಗರ ನಿಯಮಗಳು–2025ಕ್ಕೆ ತಿದ್ದುಪಡಿ ತಂದು, ಕೇಂದ್ರ ಗೃಹ ಸಚಿವಾಲಯವು ಸೋಮವಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ. 180 ದಿನಗಳ ಅವಧಿ ಪೂರ್ಣಗೊಂಡ 14 ದಿನಗಳ ಒಳಗಾಗಿ ನೋಂದಣಿ ಅಧಿಕಾರಿಗೆ ಮಾಹಿತಿ ನೀಡಬೇಕು ಎಂಬುದು ಹಳೇ ನಿಯಮವಾಗಿತ್ತು. ತೀರಾ ಅಗತ್ಯ ಸಂದರ್ಭಗಳಲ್ಲಿ ಮಾತ್ರವೇ ವಿದೇಶಿಗರ ವೀಸಾ ಅವಧಿಯನ್ನು ವಿಸ್ತರಿಸಬಹುದು ಎಂದು ಹೊಸ ನಿಯಮಗಳಲ್ಲಿದೆ.

ಪೋಷಕರಲ್ಲಿ ಒಬ್ಬರು ಭಾರತೀಯರಾಗಿದ್ದು, ತಮಗೆ ಹುಟ್ಟುವ ಮಕ್ಕಳಿಗೆ ಭಾರತದ ಪೌರತ್ವ ಪಡೆದುಕೊಳ್ಳಬೇಕಿದ್ದರೆ ಅಥವಾ ಪೌರತ್ವ ವಾಪಸು ಮಾಡಬೇಕಿದ್ದರೆ ಅಂಥವರು ಮಗುವಿನ ಜನನದ 30 ದಿನಗಳ ಒಳಗಾಗಿ ನೋಂದಣಿ ಅಧಿಕಾರಿಗೆ ಮಾಹಿತಿ ನೀಡಬೇಕಿತ್ತು.

ಈಗ ಈ ನಿಯಮವನ್ನು ಸರಳಗೊಳಿಸಲಾಗಿದೆ. ಈಗ ಪೌರತ್ವ ವಾಪಸು ಪಡೆದುಕೊಳ್ಳುವಾಗ ಮಾತ್ರವೇ ಮಾಹಿತಿ ನೀಡಿದರೆ ಸಾಕು. ಮಗು ಭಾರತದಲ್ಲಿ ಇರುವಾಗಲೇ ಬೇರೆ ದೇಶದ ಪೌರತ್ವ ಪಡೆದುಕೊಂಡರೆ, 30 ದಿನಗಳ ಒಳಗೆ ನೋಂದಣಿ ಅಧಿಕಾರಿಗಳಿಗೆ ಪೋಷಕರು ಮಾಹಿತಿ ನೀಡಬೇಕು ಎಂಬ ಅಂಶ ಹೊಸ ನಿಯಮಗಳಲ್ಲಿದೆ.

ಅನುಕಂಪದ ನೌಕರಿ: ವಿವಾಹಿತ ಪುತ್ರಿಯರೂ ಅರ್ಹರು- ಸುಪ್ರೀಂ

ಒಂದನೇ ಪುಟದಿಂದ...

'ವಿವಾಹಿತ ಪುತ್ರಿ ತವರು ಮನೆಯ ಅಗತ್ಯಗಳನ್ನು ಪೂರೈಸದೇ ಇರಬಹುದು' ಎಂಬ ರಾಜ್ಯದ ವಾದವನ್ನು 'ಅಸಮರ್ಥನೀಯ' ಎಂದು ಹೇಳಿದ ಪೀಠವು, 'ಅರ್ಜಿದಾರರು ಮದುವೆಯಾದ ಬಳಿಕವೂ ಅದೇ ಊರಿನಲ್ಲಿ ಇದ್ದುಕೊಂಡು ನ್ಯಾಯಬೆಲೆ ಅಂಗಡಿಯ ಕಾರ್ಯಾಚರಣೆಯಲ್ಲಿ ತಾಯಿಗೆ ಸಕ್ರಿಯವಾಗಿ ಸಹಕಾರ ನೀಡಿದ್ದಾರೆ. ತಾಯಿಯ ಸಾವಿನ ಬಳಿಕ ಅಂಧರೊಬ್ಬರೂ ಸೇರಿದಂತೆ ಸಹೋದರಿಯರ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿದೆ.

'ಅನುಕಂಪದ ಆಧಾರದ ನೇಮಕಾತಿ ಕೋಟಾವು ಉತ್ತರಾಧಿಕಾರದ ಹಕ್ಕನ್ನು ಅಥವಾ ಡೀಲರ್‌ಶಿಪ್‌ನಲ್ಲಿ ಆನುವಂಶೀಯ ಹಕ್ಕು ಸ್ಥಾಪಿಸುವ ಉದ್ದೇಶವನ್ನು ಹೊಂದಿಲ್ಲ. ಬದಲಾಗಿ, ಮೃತ ಡೀಲರ್ ಅವರ ಅವಲಂಬಿತ ಕುಟುಂಬಕ್ಕೆ ತಕ್ಷಣದ ಹಣಕಾಸು ಪರಿಹಾರ ಒದಗಿಸುವುದು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನಿರಂತರತೆ ಖಚಿತಪಡಿಸಿಕೊಳ್ಳುವುದೇ ಆಗಿದೆ' ಎಂದು ಸ್ಪಷ್ಟಪಡಿಸಿದೆ.

'ಶೈಕ್ಷಣಿಕ ಅರ್ಹತೆ ಮುಚ್ಚಿಟ್ಟರೆ ಉದ್ಯೋಗಿ ವಜಾ ಸಾಧ್ಯವೇ?'

ನಿರ್ದಿಷ್ಟ ಉದ್ಯೋಗಕ್ಕೆ ಅಗತ್ಯವಿರುವ ಅರ್ಹತೆಗಿಂತ ಉನ್ನತ ಶೈಕ್ಷಣಿಕ ಅರ್ಹತೆ ಹೊಂದಿರುವುದನ್ನು ಮುಚ್ಚಿಟ್ಟರೆ ಸರ್ಕಾರಿ ಉದ್ಯೋಗಿಯನ್ನು ಸೇವೆಯಿಂದ ವಜಾ ಮಾಡಬಹುದೇ ಎಂಬ ವಿಚಾರವಾಗಿ ತೆಲಂಗಾಣ ಹೈಕೋರ್ಟ್ ಆದೇಶವನ್ನು ಪರಿಶೀಲನೆಗೆ ಒಳಪಡಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

'ಸಹಾಯಕನ ಹುದ್ದೆಗೆ ನೇಮಕವಾಗಿದ್ದ ಪರಿಶಿಷ್ಟ ಪಂಗಡದ ವ್ಯಕ್ತಿಯೊಬ್ಬರು ಅಗತ್ಯ ವಿದ್ಯಾರ್ಹತೆಯಾದ '10ನೇ ತರಗತಿ ಉತ್ತೀರ್ಣ'ದ ಬದಲಾಗಿ ಇಂಟರ್ ಮೀಡಿಯೇಟ್ ಶಿಕ್ಷಣ ಪೂರೈಸಿದ್ದರೂ ಅದನ್ನು ಮುಚ್ಚಿಟ್ಟಿದ್ದಾರೆ ಎಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರವು ಅವರನ್ನು ಸೇವೆಯಿಂದ ವಜಾ ಮಾಡಿರುವ ನಿರ್ಧಾರ ಸರಿ ಇದೆ' ಎಂದು ತೆಲಂಗಾಣ ಹೈಕೋರ್ಟ್ ತೀರ್ಪು ನೀಡಿತ್ತು.

ತೀರ್ಪನ್ನು ಪ್ರಶ್ನಿಸಿ ಪವಾರ್ ಸುಭಾಷ್ ಅವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಅರವಿಂದ ಕುಮಾರ್ ಮತ್ತು ಶ್ರೀ ಚಂದ್ರಶೇಖರ್ ಅವರಿದ್ದ ಪೀಠವು ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿತು.

'ಮೇಲ್ನೋಟಕ್ಕೆ ಈ ತೀರ್ಪು ದೋಷಪೂರಿತ. ಅಗತ್ಯಕ್ಕಿಂತ ಹೆಚ್ಚಿನ ಶೈಕ್ಷಣಿಕ ಅರ್ಹತೆ ಹೊಂದಿದ್ದಾರೆ ಎಂಬುದು ಅನರ್ಹತೆಗೆ ಕಾರಣವಾಗಲಾರದು ಎಂದು ಈಗಾಗಲೇ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಆದ್ದರಿಂದ ಹೈಕೋರ್ಟ್ ತೀರ್ಪನ್ನು ಪರಿಶೀಲನೆಗೆ ಒಳಪಡಿಸಲಾಗು ವುದು' ಎಂದು ಪೀಠವು ತಿಳಿಸಿದೆ.

'ಬ್ರಿಕ್ಸ್ ಸಭೆಯಲ್ಲಿ 11 ದೇಶಗಳ ಪ್ರತಿನಿಧಿಗಳು'

ಭುವನೇಶ್ವರ (ಪಿಟಿಐ): ಒಡಿಶಾದ ಪುರಿಯಲ್ಲಿ ಜೂನ್ 3ರಿಂದ 5ರವರೆಗೆ ನಡೆಯಲಿರುವ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ವಿಪತ್ತು ಅಪಾಯ ತಗ್ಗಿಸುವ ಕುರಿತ ಎರಡನೇ ತಾಂತ್ರಿಕ ಸಭೆಯಲ್ಲಿ 11 ರಾಷ್ಟ್ರಗಳ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ.

'ವಿಪತ್ತು ಸಂದರ್ಭಗಳನ್ನು ಎದುರಿಸಲು ಕೈಗೊಂಡಿರುವ ಸಿದ್ಧತೆ, ಪರಿಣಾಮಕಾರಿ ಚಂಡಮಾರುತ ನಿರ್ವಹಣೆ, ಮುನ್ಸೂಚನಾ ವ್ಯವಸ್ಥೆಯಲ್ಲಿ ಒಡಿಶಾ ಜಾಗತಿಕವಾಗಿ ಜನಪ್ರಿಯತೆ ಪಡೆದಿರುವುದರಿಂದ ರಾಜ್ಯವು ಸಮಾವೇಶದ ಆತಿಥ್ಯವನ್ನು ವಹಿಸಿದೆ' ಎಂದು ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ತಿಳಿಸಿದ್ದಾರೆ.

ಭಾರತ, ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಸೌದಿ ಅರೇಬಿಯಾ, ಈಜಿಪ್ಟ್, ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಇಥಿಯೋಪಿಯಾ, ಇರಾನ್, ಇಂಡೋನೇಷ್ಯಾ ದೇಶದ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ವಿಪತ್ತು ಅಪಾಯ ತಗ್ಗಿಸುವ ಕುರಿತ ಮೊದಲ ತಾಂತ್ರಿಕ ಸಭೆಯು ಏಪ್ರಿಲ್ 29 ಮತ್ತು 30ರಂದು ವರ್ಚುವಲ್ ಆಗಿ ನಡೆದಿತ್ತು.

ಮದರ್‌ಡೇರಿಯಿಂದ ಮಣ್ಣಿನಲ್ಲಿ ಕರಗುವ ಹಾಲಿನ ಪಾಕೆಟ್ ಬಿಡುಗಡೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಹಾಲು ಪೂರೈಕೆ ಕಂಪನಿ ಮದರ್ ಡೇರಿಯು, ಮಣ್ಣಿನಲ್ಲಿ ನೈಸರ್ಗಿಕವಾಗಿ ಕರಗುವ ಹಾಲಿನ ಪಾಕೆಟ್ ಅನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಈ ಪಾಕೆಟ್ ಯಾವುದೇ ಪ್ಲಾಸ್ಟಿಕ್ ಕಣಗಳನ್ನು ಪರಿಸರದಲ್ಲಿ ಬಿಡುಗಡೆ ಮಾಡುವುದಿಲ್ಲ. ಜೂನ್ 5ರ ವಿಶ್ವ ಪರಿಸರ ದಿನದಿಂದ ಈ ಹಾಲಿನ ಪಾಕೆಟ್‌ಗಳನ್ನು ದೆಹಲಿ–ಎನ್‌ಸಿಆರ್ ಪ್ರದೇಶದ ವಿವಿಧೆಡೆ ಮಾರಾಟ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

'ಹೊಸದಾಗಿ ಪರಿಚಯಿಸಲಾಗಿರುವ ಈ ಹಾಲಿನ ಪಾಕೆಟ್ ಶತಮಾನಗಳ ಬದಲು ಕೆಲವೇ ವರ್ಷಗಳಲ್ಲಿ ಮಣ್ಣಿನಲ್ಲಿ ನೈಸರ್ಗಿಕವಾಗಿ ಕರಗುವಂತೆ ವಿನ್ಯಾಸಗೊಳಿಸಲಾಗಿದೆ. ಭೂಮಿಯನ್ನು ಸಂರಕ್ಷಿಸುವ ಬದ್ಧತೆಯನ್ನು ಕಂಪನಿ ಹೊಂದಿದೆ. ಈ ಹೊಸ ಪಾಕೆಟ್ ಗ್ರಾಹಕರ ಹಾಲಿನ ದರದ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಎನ್‌ಡಿಡಿಬಿಯ ಅಧ್ಯಕ್ಷ ಮೀನೇಶ್ ಶಾ ಹೇಳಿದ್ದಾರೆ. ಮದರ್ ಡೇರಿಯು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ (ಎನ್‌ಡಿಡಿಬಿ) ಅಂಗಸಂಸ್ಥೆ.

ಸಂಕ್ಷಿಪ್ತ ಸುದ್ದಿ

ವಲಸೆ ನೀತಿ ಬದಲಾವಣೆಗೆ ಮುಂದಾದ ಇ.ಯು

ಬ್ರಸೆಲ್ಸ್ (ಎಪಿ): ಐರೋಪ್ಯ ಒಕ್ಕೂಟವು (ಇ.ಯು) ತನ್ನ ವಲಸೆ ನೀತಿಯನ್ನು ತೀವ್ರ ಸ್ವರೂಪದಲ್ಲಿ ಬದಲಾವಣೆ ಮಾಡಲು ಮುಂದಾಗಿದ್ದು, ಗಡಿಪಾರು ಮಾಡುವ ಪ್ರಕರಣಗಳನ್ನು ಹೆಚ್ಚಿಸುವ ಮತ್ತು ವಿದೇಶಗಳಲ್ಲಿ ವಿವಾದಾತ್ಮಕ ಬಂಧನ ಕೇಂದ್ರಗಳನ್ನು ನಿರ್ಮಿಸಲು ಒಪ್ಪಂದಗಳನ್ನು ಮಾಡಿಕೊಳ್ಳುವ ನಿಟ್ಟಿನಲ್ಲಿ ಯೋಜಿಸುತ್ತಿದೆ.

ಇಯುನ ಈ ಕ್ರಮವು ಟ್ರಂಪ್ ಆಡಳಿತದ ಆಕ್ರಮಣಕಾರಿ ವಲಸೆ ನೀತಿಯನ್ನು ಹೋಲುತ್ತಿದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಪ್ರತಿಪಾದಿಸಿವೆ.

'ಇಯುನಲ್ಲಿ ಕಾನೂನುಬದ್ಧವಾಗಿ ಉಳಿಯಲು ಹಕ್ಕಿಲ್ಲದ ಜನರನ್ನು ಅವರ ದೇಶಗಳಿಗೆ ವಾಪಸು ಕಳುಹಿಸುವ ಪ್ರಕ್ರಿಯೆಯನ್ನು ಈ ಹೊಸ ನಿಯಮವು ತ್ವರಿತಗೊಳಿಸುತ್ತದೆ ಮತ್ತು ಅವರ ಸಂಖ್ಯೆಯನ್ನು ಹೆಚ್ಚಿಸುತ್ತದೆ' ಎಂದು ಉಪ ವಲಸೆ ಸಚಿವ, ಸೈಪ್ರಸ್‌ನ ನಿಕೊಲಸ್ ಐಯೊನ್ನಿಡೆಸ್ ಹೇಳಿದ್ದಾರೆ.

'ಅಮೆರಿಕದಲ್ಲಿ ಅಕ್ರಮ ವಾಸ: 30 ಭಾರತೀಯರ ಗಡಿಪಾರು'

ನ್ಯೂಯಾರ್ಕ್ (ಪಿಟಿಐ): 'ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿ, ವಾಣಿಜ್ಯ ಟ್ರಕ್ ಚಾಲಕರಾಗಿ ಕೆಲಸ ಮಾಡುತ್ತಿದ್ದ 30 ಭಾರತೀಯರನ್ನು ಬಂಧಿಸಲಾಗಿದ್ದು, ಶೀಘ್ರದಲ್ಲಿಯೇ ಭಾರತಕ್ಕೆ ವಾಪಸು ಕಳುಹಿಸಲಾಗುವುದು' ಎಂದು ಅಮೆರಿಕ ಕಸ್ಟಮ್ಸ್ ಮತ್ತು ಗಡಿ ಭದ್ರತೆ ವಿಭಾಗವು ಹೇಳಿದೆ.

'ಆಪರೇಷನ್ ಚೆಕ್‌ಮೇಟ್' ಹೆಸರಿನಲ್ಲಿ ಗಡಿ ಭದ್ರತಾ ಗಸ್ತು ಪಡೆಯ ಅಧಿಕಾರಿಗಳು ಮೇ 11–15ವರೆಗೆ ಕಾರ್ಯಾಚರಣೆ ನಡೆಸಿದ್ದರು. ಈ ವೇಳೆ ಒಟ್ಟು 52 ಜನರನ್ನು ಬಂಧಿಸಲಾಗಿತ್ತು. ಅವರಲ್ಲಿ 36 ಟ್ರಕ್ ಚಾಲಕರಿದ್ದರು. ಆ ಪೈಕಿ 30 ಮಂದಿ ಭಾರತೀಯರು' ಎಂದು ವಿಭಾಗ ಮಾಹಿತಿ ನೀಡಿದೆ.

ನಾಲ್ವರು ಉಗ್ರರ ಹತ್ಯೆ



ಪೆಶಾವರ (ಪಿಟಿಐ): ಪಾಕಿಸ್ತಾನದ ಸೇನಾ ಚೆಕ್‌ಪೋಸ್ಟ್‌ವೊಂದರ ಮೇಲಿನ ಆತ್ಮಾಹುತಿ ಬಾಂಬ್ ದಾಳಿ ಯತ್ನವನ್ನು ಭದ್ರತಾ ಪಡೆಗಳು ಮಂಗಳವಾರ ವಿಫಲಗೊಳಿಸಿ, ನಾಲ್ವರು ತಾಲಿಬಾನ್ ಉಗ್ರರನ್ನು ಹತ್ಯೆ ಮಾಡಿವೆ.

ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮಿರನ್‌ಶಾ ಪೋಸ್ಟ್ ಬಳಿ ಇರುವ ಚೆಕ್‌ಪೋಸ್ಟ್‌ಗೆ ಸ್ಫೋಟಕ ತುಂಬಿದ್ದ ವಾಹನದ ಮೂಲಕ ದಾಳಿ ನಡೆಸಲು ತೆಹ್ರಿಕ್‌-ಎ-ತಾಲಿಬಾನ್ (ಟಿಟಿಪಿ) ಭಯೋತ್ಪಾದಕರು ಯತ್ನಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ದಾಳಿ: 21 ಮಂದಿ ಸಾವು

ಕೀವ್ (ಎಪಿ): ರಾಜಧಾನಿ ಕೀವ್ ಹಾಗೂ ಇತರ ನಗರಗಳ ಮೇಲೆ ರಷ್ಯಾ ರಾತ್ರಿಯಿಡೀ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಯಲ್ಲಿ 21 ನಾಗರಿಕರು ಮೃತರಾಗಿದ್ದು, ನೂರಾರು ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ಕೆಲವರು ವಸತಿ ಸಮುಚ್ಚಯಗಳ ಅವಶೇಷಗಳಡಿ ಸಿಲುಕಿದ್ದಾರೆ. ಕೇಂದ್ರ ಉಕ್ರೇನ್‌ನ ನಗರವಾದ ಡಿನಿಪ್ರೊದಲ್ಲಿ ಅವಶೇಷಗಳ ಅಡಿಯಿಂದ ಎಂಟು ವರ್ಷದ ಮಗು, ತಾಯಿ ಹಾಗೂ ಮೂರು ವರ್ಷದ ಮಗುವೊಂದರ ದೇಹವನ್ನು ಸಿಬ್ಬಂದಿ ಹೊರತೆಗೆದಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಕ್ಷಿಪಣಿಗಳು ಮತ್ತು ಖಂಡಾಂತರ ಕ್ಷಿಪಣಿ ದಾಳಿಯಿಂದ ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳದಿದ್ದರೆ ರಷ್ಯಾ ದಾಳಿಯು ಮುಂದುವರಿಯಲಿದೆ ಎಂಬ ಸ್ಪಷ್ಟ ಸಂದೇಶ ಇದಾಗಿದೆ' ಎಂದು ಪ್ರತಿಕ್ರಿಯಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳಿಂದ ಹೆಚ್ಚಿನ ಬೆಂಬಲವನ್ನು ಕೋರಿದ್ದಾರೆ.

'73 ಕ್ಷಿಪಣಿಗಳು ಹಾಗೂ 656 ಡ್ರೋನ್‌ಗಳನ್ನು ರಷ್ಯಾ ಹಾರಿಸಿದ್ದು, ಅದರಲ್ಲಿ 40 ಕ್ಷಿಪಣಿಗಳು ಹಾಗೂ 602 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಅಥವಾ ನಿಷ್ಕ್ರಿಯಗೊಳಿಸಲಾಗಿದೆ' ಎಂದು ಉಕ್ರೇನ್ ವಾಯು ರಕ್ಷಣಾ ಪಡೆ ಮಾಹಿತಿ ನೀಡಿದೆ.

ಚೀನಾ–ಭಾರತ ಸಾಂಸ್ಕೃತಿಕ ವಿನಿಮಯ ಕುರಿತು ಚರ್ಚೆ

ಬೀಜಿಂಗ್ (ಪಿಟಿಐ): ಚೀನಾದಲ್ಲಿರುವ ಭಾರತದ ರಾಯಭಾರಿ ಪ್ರತೀಕ್ ಮಾಥುರ್ ಅವರು ಅಲ್ಲಿನ ಸಾಂಸ್ಕೃತಿಕ ಅಧಿಕಾರಿಗಳೊಂದಿಗೆ ಸೋಮವಾರ ಮಾತುಕತೆ ನಡೆಸಿದ್ದಾರೆ.

ಪೂರ್ವ ಚೀನಾ ಹಾಗೂ ಭಾರತದ ನಡುವಿನ ಸಂಬಂಧ ಬಲಪಡಿಸುವ ಪ್ರಯತ್ನದ ಭಾಗವಾಗಿ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುವ ಹಾಗೂ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವ ಕುರಿತು ಚರ್ಚೆ ನಡೆಸಿದ್ದಾರೆ. ಅಲ್ಲದೇ, 'ಇನ್‌ಕ್ರೆಡಿಬಲ್ ಇಂಡಿಯಾ' ಅಭಿಯಾನದಡಿ ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸುವ ಹಾಗೂ ಭಾರತಕ್ಕೆ ಹೆಚ್ಚಿನ ಪ್ರವಾಸಿಗರ ಹರಿವನ್ನು ಉತ್ತೇಜಿಸುವ ಕುರಿತೂ ಚರ್ಚೆ ನಡೆಸಲಾಗಿದೆ ಎಂದು ಶಾಂಘೈನಲ್ಲಿ ಭಾರತೀಯ ರಾಯಭಾರಿ ಕಚೇರಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕ್ಲಾಸಿಫೈಡ್ಸ್

ಪ್ರಜಾವಾಣಿ
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331


ನೆಟ್ ಬೌಲರ್‌ಗಳಾಗಿ ಅಕೀಬ್, ಪ್ರಿನ್ಸ್‌ಗೆ ಕರೆ

ಸ್ಪಿನ್ನರ್‌ಗಳಾದ ಸಾರಾಂಶ್, ಶಿವಾಂಗ್, ಜೀಶಾನ್‌ಗೂ ಬಿಸಿಸಿಐ ಬುಲಾವ್

ಮುಲ್ಲನಪುರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ವೇಗದ ಬೌಲರ್ ಅಕೀಬ್ ನಬಿ ದಾರ್, ಉತ್ತರ ಪ್ರದೇಶದ ಪ್ರಿನ್ಸ್ ಯಾದವ್ ಸೇರಿದಂತೆ ಆರು ಮಂದಿಯನ್ನು ಭಾರತ ತಂಡದ ಚಿಂತಕರ ಚಾವಡಿಯು, ಅಫ್ಗಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯಕ್ಕೆ 'ನೆಟ್ ಬೌಲರ್'ಗಳಾಗಿ ಸೇರ್ಪಡೆ ಮಾಡಿಕೊಂಡಿದೆ. ಈ ಪಂದ್ಯ ಜೂನ್ 6ರಂದು ಇಲ್ಲಿ ಆರಂಭವಾಗಲಿದೆ.

ರಣಜಿ ಟ್ರೋಫಿಯಲ್ಲಿ 60 ವಿಕೆಟ್‌ಗಳನ್ನು ಕಬಳಿಸಿದ್ದ ಅಕೀಬ್ ನಬಿ ಅವರನ್ನು ಟೆಸ್ಟ್ ತಂಡಕ್ಕೆ ಪರಿಗಣಿಸದಿದ್ದುದು ವ್ಯಾಪಕ ಟೀಕೆಗೆ ಒಳಗಾಗಿತ್ತು. ಮಾಜಿ ಟೆಸ್ಟ್ ಆಟಗಾರ ದಿಲೀಪ್ ವೆಂಗಸರ್ಕಾರ್ ಅವರಂತೂ ನಬಿ ಅವರನ್ನು ನಿರ್ಲಕ್ಷಿಸಿದ್ದಕ್ಕೆ ರಣಜಿ ಟ್ರೋಫಿಯ ಔಚಿತ್ಯವನ್ನು ಪ್ರಶ್ನಿಸಿದ್ದರು. ಏಕೈಕ ಟೆಸ್ಟ್ ತಂಡದ ಆಯ್ಕೆ ವೇಳೆ ನಬಿ ಬದಲು ಪಂಜಾಬ್‌ನ ವೇಗಿ ಗುರನೂರ್ ಬ್ರಾರ್ ಅವರಿಗೆ ಅವಕಾಶ ನೀಡಲಾಗಿತ್ತು.

'ವೇಗಿಗಳಾದ ಗುರುಜಪನೀತ್ ಸಿಂಗ್, ಅಕೀಬ್ ನಬಿ, ಪ್ರಿನ್ಸ್ ಯಾದವ್, ಆಫ್ ಸ್ಪಿನ್ನರ್ ಸಾರಾಂಶ್ ಜೈನ್, ಲೆಗ್ ಸ್ಪಿನ್ನರ್ ಜೀಶಾನ್ ಅನ್ಸಾರಿ ಮತ್ತು ಎಡಗೈ


ಅಕೀಬ್ ನಬಿ ದಾರ್


ಶಿವಾಂಗ್ ಕುಮಾರ್


ಪ್ರಿನ್ಸ್ ಯಾದವ್


ಜೀಶಾನ್ ಅನ್ಸಾರಿ

ಸ್ಪಿನ್ನರ್ ಶಿವಾಂಗ್ ಕುಮಾರ್– ಈ ಆರು ಮಂದಿ ಭಾರತ ತಂಡಕ್ಕೆ ನೆರವಾಗಲು ನೆಟ್ ಬೌಲರ್‌ಗಳಾಗಿ ಸೇರಿಕೊಳ್ಳಲಿದ್ದಾರೆ' ಎಂದು ಬಿಸಿಸಿಐ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಲಖನೌ ಸೂಪರ್ ಜೈಂಟ್ಸ್ ಪರ ಆಡಿದ್ದ ಪ್ರಿನ್ಸ್ ಈ ಬಾರಿಯ ಐಪಿಎಲ್‌ನ 'ಶೋಧ'. ಉತ್ತರ ಪ್ರದೇಶದ ಜೀಶಾನ್ ಮತ್ತು ಶಿವಾಂಗ್ ಅವರು ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಆಡಿದ್ದರು. ಸಾರಾಂಶ್ ಮಧ್ಯಪ್ರದೇಶದವರು.

'ನಬಿ ಅವರ ಜೊತೆಗೆ ಇತರ ಐವರನ್ನು ನೆಟ್ಸ್‌ನಲ್ಲಿ ಬೌಲಿಂಗ್ ಮಾಡಲು ಸೇರ್ಪಡೆ ಮಾಡಲಾಗಿದೆ. ಗುಜರಾತ್ ಟೈಟನ್ಸ್‌ನ ಪ್ರಮುಖ ವೇಗಿಗಳಾದ ಮೊಹಮ್ಮದ್ ಸಿರಾಜ್ ಮತ್ತು ಪ್ರಸಿದ್ಧ ಕೃಷ್ಣ ಅವರು ಏಳು ದಿನಗಳ ಅಂತರದಲ್ಲಿ ಮೂರು ಐಪಿಎಲ್ ಪಂದ್ಯಗಳನ್ನು ಆಡಿದ್ದಾರೆ. ಸದ್ಯ ಉರಿ ಬಿಸಿಲಿನ ವಾತಾವರಣದಲ್ಲಿ ಅವರು ನೆಟ್ಸ್‌ನಲ್ಲಿ ತಮ್ಮೆಲ್ಲಾ ಸಾಮರ್ಥ್ಯ ತೊಡಗಿಸಿಕೊಂಡು ಬೌಲಿಂಗ್ ಮಾಡುವುದು ಕಷ್ಟ. ಬ್ಯಾಟರ್‌ಗಳಿಗೂ ಸಾಕಷ್ಟು ಅಭ್ಯಾಸದ ಅಗತ್ಯವಿದೆ' ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ.

ಗುಜರಾತ್ ಟೈಟನ್ಸ್ ತಂಡವು ಕ್ವಾಲಿಫಯರ್ 1, 2 ಮತ್ತು ಫೈನಲ್ ಪಂದ್ಯಗಳನ್ನು ಐದು ದಿನಗಳ ಅಂತರದಲ್ಲಿ ಆಡಿತ್ತು. ಈ ಪಂದ್ಯಗಳು ಕ್ರಮವಾಗಿ ಧರ್ಮಶಾಲಾ, ಚಂಡೀಗಢ ಮತ್ತು ಅಹಮದಾಬಾದ್‌ನಲ್ಲಿ ನಡೆದಿದ್ದವು.

ಅಕೀಬ್, ಸ್ಟ್ಯಾಂಡ್‌ಬೈ ಆಟಗಾರರ ಪಟ್ಟಿಯಲ್ಲಿದ್ದಾರೆ. ಒಂದುವೇಳೆ, ಸಿರಾಜ್, ಪ್ರಸಿದ್ಧ ಕೃಷ್ಣ, ಗುರನೂರ್ ಇವರಲ್ಲಿ ಒಬ್ಬರು ಗಾಯಾಳಾಗಿ ಹೊರಬಿದ್ದರೆ ಅಕೀಬ್ ಅವರಿಗೆ 15ರ ತಂಡದಲ್ಲಿ ಅವಕಾಶ ಸಿಗಲಿದೆ.

ಭಾರತ ತಂಡು ಮಂಗಳವಾರ ಸಂಜೆ ಮೊದಲ ಸಲ ತಾಲೀಮಿನಲ್ಲಿ ತೊಡಗಿತು. ಐಪಿಎಲ್‌ನ ಭಾಗವಾಗಿದ್ದ ಕೆಲವು ಆಟಗಾರರು ಇದರಲ್ಲಿ ಭಾಗವಹಿಸುವ ಸಾಧ್ಯತೆ ಕಡಿಮೆ.

ಗುಜರಾತ್ ಟೈಟನ್ಸ್‌ನ ಏಳು ಮಂದಿ ಆಟಗಾರರು (ನಾಯಕ ಶುಭಮನ್ ಗಿಲ್, ಬಿ.ಸಾಯಿ ಸುದರ್ಶನ್, ಗುರನೂರ್ ಬ್ರಾರ್, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಮಾನವ್ ಸುತಾರ್, ವಾಷಿಂಗ್ಟನ್ ಸುಂದರ್) ಅವರು ಟೆಸ್ಟ್ ತಂಡದ ಭಾಗವಾಗಿದ್ದಾರೆ.

ಸ್ಪಿನ್ ಬೌಲಿಂಗ್ ಕೋಚ್ ಆಗಿ ಸಾಯಿರಾಜ್ ಬಹುತುಲೆ

ಮುಂಬೈ (ಪಿಟಿಐ): ಭಾರತ ತಂಡದ ಮಾಜಿ ಲೆಗ್ ಸ್ಪಿನ್ನರ್ ಸಾಯಿರಾಜ್ ಬಹುತುಲೆ ಅವರನ್ನು ರಾಷ್ಟ್ರೀಯ ಸೀನಿಯರ್ ಪುರುಷರ ತಂಡಕ್ಕೆ ಸ್ಪಿನ್ ಬೌಲಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ ಎಂದು ಬಿಸಿಸಿಐ ಹೇಳಿಕೆ ತಿಳಿಸಿದೆ.

ಅವರು ಈ ಹಿಂದೆ 19 ವರ್ಷದೊಳಗಿನವರ ಮತ್ತು ಭಾರತ 'ಎ' ತಂಡದ ಜೊತೆ ಕಾರ್ಯನಿರ್ವಹಿಸಿದ್ದರು. 53 ವರ್ಷ ವಯಸ್ಸಿನ ಅವರು ಭಾರತ ತಂಡದ ಪರ ಎರಡು ಟೆಸ್ಟ್ ಮತ್ತು ಎಂಟು ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ದೇಶಿ ಕ್ರಿಕೆಟ್‌ನಲ್ಲಿ ಅತ್ಯುತ್ತಮ ದಾಖಲೆ ಹೊಂದಿರುವ ಬಹುತುಲೆ ಅವರು ಎರಡು ದಶಕಗಳ ಅವಧಿಯಲ್ಲಿ


ಸಾಯಿರಾಜ್ ಬಹುತುಲೆ

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 640 ವಿಕೆಟ್‌ಗಳನ್ನು ಪಡೆದಿದ್ದಾರೆ. 6,176 ರನ್ ಹೊಡೆದಿದ್ದಾರೆ.

ನಿವೃತ್ತಿ ನಂತರ ವಿದರ್ಭ, ಕೇರಳ, ಗುಜರಾತ್ ಮತ್ತು ಬಂಗಾಳ ತಂಡಗಳ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. 2021 ರಿಂದ 2024ರವರೆಗೆ ಬಿಸಿಸಿಐ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಈಗ ಶ್ರೇಷ್ಠತಾ ಕೇಂದ್ರ)ಯಲ್ಲಿ ಸ್ಪಿನ್ ಕೋಚ್ ಆಗಿದ್ದರು. ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ ತಂಡದ ಕೋಚಿಂಗ್ ಸಿಬ್ಬಂದಿಯಾಗಿದ್ದರು.

2022ರಲ್ಲಿ 19 ವರ್ಷದೊಳಗಿನವರ ಐಸಿಸಿ ವಿಶ್ವಕಪ್ ಟೂರ್ನಿ ಗೆದ್ದ ಭಾರತ ತಂಡದಲ್ಲಿ ಬೌಲಿಂಗ್ ಕೋಚ್ ಆಗಿದ್ದರು.

ನಾರ್ವೆ ಚೆಸ್ ಟೂರ್ನಿ: ಪ್ರಶಸ್ತಿ ಆಸೆ ಜೀವಂತ

ಪ್ರಜ್ಞಾನಂದ, ಗುಕೇಶ್, ದಿವ್ಯಾಗೆ ಜಯ

ಓಸ್ಲೊ (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್, ಆರ್.ಪ್ರಜ್ಞಾನಂದ ಅವರು ನಾರ್ವೆ ಚೆಸ್ ಟೂರ್ನಿಯ ಏಳನೇ ಸುತ್ತಿನಲ್ಲಿ ನಿರ್ಣಾಯಕ ಗೆಲುವಿನೊಡನೆ ಪ್ರಶಸ್ತಿ ಆಸೆ ಜೀವಂತವಾಗಿರಿಸಿಕೊಂಡರು. ಮಹಿಳೆಯರ ವಿಭಾಗದಲ್ಲಿ ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್, ಸ್ವದೇಶದ ಕೋನೇರು ಹಂಪಿ ಅವರನ್ನು ಮಣಿಸಿದರು.

ಡಬಲ್ ರೌಂಡ್‌ರಾಬಿನ್ ಲೀಗ್ ಮಾದರಿಯ ಈ ಟೂರ್ನಿಯಲ್ಲಿ ಇನ್ನು ಮೂರು ಸುತ್ತಿನ ಪಂದ್ಯಗಳಷ್ಟೇ ಉಳಿದಿವೆ. ಈ ಹಿಂದಿನ ಸುತ್ತಿನಲ್ಲಿ ಸೋಲನುಭವಿಸಿದ್ದ ಗುಕೇಶ್, ಸೋಮವಾರ ನಡೆದ ಏಳನೇ ಸುತ್ತಿನ ಪಂದ್ಯದಲ್ಲಿ ಅಮೆರಿಕದ ವೆಸ್ಲಿ ಸೊ ಅವರನ್ನು 'ಆರ್ಮ್‌ಗೆಡನ್'ನಲ್ಲಿ ಮಣಿಸಿದರು.

ಈ ಸೋಲಿನ ಹೊರತಾಗಿಯೂ ಸೊ 12.5 ಅಂಕಗಳೊಡನೆ ಅಗ್ರ-ಸ್ಥಾನದಲ್ಲೇ ಮುಂದುವರಿದ್ದಾರೆ. ಆರು ಆಟಗಾರರ ಟೂರ್ನಿಯಲ್ಲಿ ಗುಕೇಶ್ ಎಂಟು ಪಾಯಿಂಟ್ಸ್ ಸಂಗ್ರಹಿಸಿದ್ದು ಕೊನೆಯ ಸ್ಥಾನದಲ್ಲಿದ್ದಾರೆ.

ಇದೇ ವೇಳೆ ಪ್ರಜ್ಞಾನಂದ (9 ಅಂಕ) ಅವರು ಫ್ರೆಂಚ್ ಗ್ರ್ಯಾಂಡ್‌ಮಾಸ್ಟರ್ ಅಲಿರೇಝಾ ಫಿರೋಝ್‌ಜಾ ಅವರನ್ನು ಮಣಿಸಿದರು. ಐದನೇ ಸುತ್ತಿನವರೆಗೆ ಮುನ್ನಡೆಯಲ್ಲಿದ್ದ ಇರಾನ್ ಮೂಲದ ಅಲಿರೇಝಾ (10 ಅಂಕ) ಅವರಿಗೆ ಇದು ಸತತ ಎರಡನೇ 'ಕ್ಲಾಸಿಕಲ್' ಸೋಲು. ಅವರು ಎರಡನೇ ಸ್ಥಾನದಲ್ಲಿದ್ದಾರೆ.

ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (9), ಇನ್ನೊಂದು


ದಿವ್ಯಾ

ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ (9) ಅವರನ್ನು 'ಆರ್ಮ್‌ಗೆಡನ್' ಮೂಲಕ ಮಣಿಸಿದರು. ಪ್ರಜ್ಞಾನಂದ, ಹಾಲಿ ಚಾಂಪಿಯನ್ ಕಾರ್ಲ್‌ಸನ್ ಮತ್ತು ಕೀಮರ್ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ದಿವ್ಯಾಗೆ ಮಣಿದ ಹಂಪಿ: ಮಹಿಳೆಯರ ವಿಭಾಗದಲ್ಲಿ ಭಾರತದ ದಿವ್ಯಾ ಏಳನೇ ಸುತ್ತಿನ ಕ್ಲಾಸಿಕಲ್ ಪಂದ್ಯದಲ್ಲಿ ಹಂಪಿ (6.5) ಜೊತೆ ಡ್ರಾ ಮಾಡಿದರೂ ಆರ್ಮ್‌ಗೆಡನ್‌ನಲ್ಲಿ ಗೆದ್ದರು. ಅವರು 10 ಪಾಯಿಂಟ್ಸ್ ಕಲೆಹಾಕಿದ್ದು ಎರಡನೇ ಸ್ಥಾನದಲ್ಲಿದ್ದಾರೆ. ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (12.5) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಸೆ.1ರಿಂದ ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ ಸಾಧ್ಯತೆ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ 2026–27ರ ಋತುವಿನ ತಾತ್ಕಾಲಿಕ ವೇಳಾಪಟ್ಟಿ ಪ್ರಕಾರ ದೇಶದ ಅಗ್ರಶ್ರೇಣಿಯ ಫುಟ್‌ಬಾಲ್ ಟೂರ್ನಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಸೆಪ್ಟೆಂಬರ್ 1ರಿಂದ ಏಪ್ರಿಲ್ 11ರವರೆಗೆ ನಡೆಯಲಿದೆ.

ಆಡಳಿತಾತ್ಮಕ ಸಮಸ್ಯೆಗಳಿಂದಾಗಿ ಕಳೆದ ಋತುವಿನಲ್ಲಿ ಐಎಸ್‌ಎಲ್ ಟೂರ್ನಿಯನ್ನು ಮೊಟಕುಗೊಳಿಸಲಾಗಿತ್ತು. ಮುಂದಿನ ಆವೃತ್ತಿಯು ಪೂರ್ಣ ಏಳು ತಿಂಗಳು ನಡೆಯಲಿದೆ.

ತಾತ್ಕಾಲಿಕ ವೇಳಾಪಟ್ಟಿ ಪ್ರಕಾರ ಇಂಡಿಯನ್ ಫುಟ್‌ಬಾಲ್ ಲೀಗ್ (ಐಎಫ್‌ಎಲ್) ಅಕ್ಟೋಬರ್ 9ರಿಂದ ಮಾರ್ಚ್ 14 ರವರೆಗೆ; ಭಾರತ ಮಹಿಳಾ ಲೀಗ್ (ಐಡಬ್ಲ್ಯುಎಲ್) ಸೆಪ್ಟೆಂಬರ್ 3ರಿಂದ ಜನವರಿ 24 ರವರೆಗೆ ಮತ್ತು ಫೆಡರೇಷನ್ ಕಪ್ ಏಪ್ರಿಲ್ 20 ರಿಂದ ಮೇ 10 ರವರೆಗೆ ನಿಗದಿಯಾಗಿದೆ.

ಐ-ಲೀಗ್ 2 ಟೂರ್ನಿಯು ಫೆಬ್ರವರಿ 1ರಿಂದ ಏಪ್ರಿಲ್ 11 ರವರೆಗೆ ನಡೆಯಲಿದೆ. ಡುರಾಂಡ್ ಕಪ್ ಟೂರ್ನಿ ಜುಲೈ 11 ರಿಂದ ಆಗಸ್ಟ್ 20 ರವರೆಗೆ ನಡೆಯಲಿದೆ. ಸಂತೋಷ್ ಟ್ರೋಫಿಗಾಗಿ ನಡೆಯುವ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ನವೆಂಬರ್ 19ರಿಂದ ಜನವರಿ 17 ರವರೆಗೆ ನಿಗದಿಯಾಗಿದೆ.


ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್: ಕಿದಂಬಿಗೂ ನಿರಾಸೆ

ಸಿಂಧು ಮುನ್ನಡೆ; ಲಕ್ಷ್ಯ ನಿರ್ಗಮನ

ಜಕಾರ್ತ (ಪಿಟಿಐ): ಭಾರತದ ಪಿ.ವಿ. ಸಿಂಧು ಅವರು ಮಂಗಳವಾರ ಇಲ್ಲಿ ಆರಂಭಗೊಂಡ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಆದರೆ, ಅನುಭವಿ ಆಟಗಾರರಾದ ಲಕ್ಷ್ಯ ಸೇನ್ ಹಾಗೂ ಕಿದಂಬಿ ಶ್ರೀಕಾಂತ್ ಅವರು ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಅವರು ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ 25–23, 21–16ರಿಂದ ನೇರ ಆಟಗಳಲ್ಲಿ ಥಾಯ್ಲೆಂಡ್‌ನ ಬುಸಾನನ್ ಒಂಗ್ ಬಮ್ರುಂಗ್‌ಫನ್ ಅವರನ್ನು ಸೋಲಿಸಿದರು. 51 ನಿಮಿಷ ನಡೆದ ಈ ಹಣಾಹಣಿಯಲ್ಲಿ ಬುಸಾನನ್ ಅವರು ಮೊದಲ ಗೇಮ್‌ನಲ್ಲಿ ನಿಕಟ ಪೈಪೋಟಿ ಒಡ್ಡಿದರು. 30 ವರ್ಷ ವಯಸ್ಸಿನ ಸಿಂಧು ಆಕ್ರಮಣಕಾರಿ ಆಟದೊಂದಿಗೆ ಎರಡನೇ ಗೇಮ್‌ಅನ್ನು ಸುಲಭವಾಗಿ ತಮ್ಮದಾಗಿಸಿಕೊಂಡರು.

ಈ ಗೆಲುವಿನೊಂದಿಗೆ, ಸಿಂಧು ಅವರು ಅಕ್ಟೋಬರ್ 2023ರ ನಂತರ ಮೊದಲ ಬಾರಿ ವಿಶ್ವ ರ‍್ಯಾಂಕಿಂಗ್‌ನ ಅಗ್ರ 10ರಲ್ಲಿ ಸ್ಥಾನ ಪಡೆದರು.


ಭಾರತದ ಪಿ.ವಿ. ಸಿಂಧು ಚಿತ್ರ: ಬಿಎಐ ಎಕ್ಸ್ ಚಿತ್ರ

ವಿಶ್ವದ ಅಗ್ರಮಾನ್ಯ ಆಟಗಾರ್ತಿ, ದಕ್ಷಿಣ ಕೊರಿಯಾದ ಆ್ಯನ್ ಸೆ ಯಂಗ್ ಹಾಗೂ ಸಿಂಧು ಅವರು ಎರಡನೇ ಸುತ್ತಿನಲ್ಲಿ ಮುಖಾಮುಖಿಯಾಗುವ ಸಾಧ್ಯತೆ ಇದೆ. ಈ ಹಿಂದಿನ 9 ಮುಖಾಮುಖಿಗಳಲ್ಲೂ ಯಂಗ್ ಅವರೇ ಗೆಲುವು ಸಾಧಿಸಿದ್ದು, ಸಿಂಧು ಮೊದಲ ಗೆಲುವಿಗಾಗಿ ಎದುರುನೋಡುತ್ತಿದ್ದಾರೆ.

ಲಯ ಕಂಡುಕೊಳ್ಳಲು ಪರದಾಡುತ್ತಿರುವ ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ ಅವರು 19–21, 15–21ರಿಂದ ನೇರ ಆಟಗಳಲ್ಲಿ ಜಪಾನ್‌ನ ಯೂಶಿ ತನಾಕ ಎದುರು ಪರಾಭವಗೊಂಡರು. ಲಕ್ಷ್ಯ ಅವರು 19–21, 16–21ರಿಂದ ಆತಿಥೇಯ ದೇಶದ ಅಲ್ವಿ ಫರ್ಹಾನ್ ಅವರಿಗೆ ಮಣಿದರು.

ಮಾಳವಿಕಾ ಬನ್ಸೋಡ್ ಅವರ ಹೋರಾಟವೂ ಮೊದಲ ಸುತ್ತಿನಲ್ಲಿಯೇ ಅಂತ್ಯಗೊಂಡಿತು. ಅವರು 12–21, 10–21ರಿಂದ ಏಳನೇ ಶ್ರೇಯಾಂಕದ ಆಟಗಾರ್ತಿ, ಥಾಯ್ಲೆಂಡ್‌ನ ಪೋರ್ನಪವೀ ಚೋಚುವಾಂಗ್ ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನಲ್ಲಿ ಹರಿಹರನ್ ಅಮ್ಸಕರುಣನ್– ಎಂ.ಆರ್.ಅರ್ಜುನ್ ಜೋಡಿ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆಯಿತು. ಈ ಜೋಡಿ ಮೊದಲ ಸುತ್ತಿನಲ್ಲಿ 21–18, 21–10ರಿಂದ ಮಲೇಷ್ಯಾದ ನೂರ್ ಮೊಹಮ್ಮದ್ ಅಝ್ರಿನ್ ಆಯೂಬ್ ಮತ್ತು ತಾನ್ ವೀ ಕಿಯೊಂಗ್ ಅವರನ್ನು ಹಿಮ್ಮೆಟ್ಟಿಸಿತು.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಅವರೂ ಮೊದಲ ಸುತ್ತಿನಲ್ಲಿಯೇ ಹೊರಬಿದ್ದರು. ಈ ಜೋಡಿ 14–21, 12–21ರಿಂದ ಆತಿಥೇಯ ರಾಷ್ಟ್ರದ ಫೆಬ್ರಿಯಾನಾ ದ್ವಿಪುಜಿ ಕುಸುಮ- ಮೈಲಿಸಾ ಟ್ರಿಯಾಸ್ ಪುಷ್ಪಿತಸರಿ ಅವರಿಗೆ ಮಣಿಯಿತು.

ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲ– ತನಿಷಾ ಕ್ರಾಸ್ಟೊ ಜೋಡಿಯೂ ಹೊರಬಿತ್ತು.

1958ರಲ್ಲಿ ಪೆಲೆ ಧರಿಸಿದ್ದ ಜೆರ್ಸಿ ಹರಾಜಿಗೆ

ನ್ಯೂಯಾರ್ಕ್ (ಎಎಫ್‌ಪಿ): ಫುಟ್‌ಬಾಲ್ ದಂತಕತೆ ಪೆಲೆ ಅವರು 1958ರ ವಿಶ್ವಕಪ್ ಗೆಲುವಿನ ವೇಳೆ ಧರಿಸಿದ್ದ ಜರ್ಸಿಯನ್ನು (ಪೋಷಾಕು) ಹರಾಜು ಹಾಕಲಾಗುವುದು ಎಂದು ಹರಾಜು ಸಂಸ್ಥೆ ಸೊದೆಬಿ ಮಂಗಳವಾರ ಪ್ರಕಟಿಸಿದೆ. ವಿಶ್ವಕಪ್ ಫುಟ್‌ಬಾಲ್ ಸಂದರ್ಭದಲ್ಲೇ ಈ ಹರಾಜು ನಡೆಯುತ್ತಿರುವುದು ವಿಶೇಷ.

ಆತಿಥೇಯ ಸ್ವೀಡನ್ ವಿರುದ್ಧ ಫೈನಲ್ ಪಂದ್ಯದಲ್ಲಿ ಪೆಲೆ ಅವರು ಬ್ರೆಜಿಲ್‌ನ ಐದು ಗೋಲುಗಳ ಪೈಕಿ ಎರಡನ್ನು ಹೊಡೆದಿದ್ದರು. ಆಗ ಅವರಿಗೆ ಕೇವಲ 17 ವರ್ಷ ವಯಸ್ಸು. ಬ್ರೆಜಿಲ್ ಗೆದ್ದ ಐದು ವಿಶ್ವಕಪ್ ಪ್ರಶಸ್ತಿಗಳಲ್ಲಿ ಅದು ಮೊದಲನೆಯದ್ದಾಗಿತ್ತು. ಇದರಲ್ಲಿ ಮೂರು ಸಂದರ್ಭದಲ್ಲಿ ಪೆಲೆ ಆಡಿದ್ದರು.

ಅವರು ಮೂಲ ಹೆಸರು ಎಡ್ಸನ್ ಅರಂಟೆಸ್ ಡೊ ನಾಸಿಮೆಂಟೊ. ಕರುಳಿನ ಕ್ಯಾನ್ಸರ್‌ನಿಂದ 2022ರ ಡಿಸೆಂಬರ್‌ನಲ್ಲಿ ನಿಧನರಾದಾಗ ಅವರ ವಯಸ್ಸು 82.

'ನಂ 10 ಜರ್ಸಿ' ₹5.70 ಕೋಟಿಗೆ


ಪೆಲೆ ಧರಿಸಿದ್ದ ಜರ್ಸಿ 'ಎಕ್ಸ್' ಚಿತ್ರ

(60 ಲಕ್ಷ ಡಾಲರ್) ಮಾರಾಟವಾಗಬಹುದೆಂದು ಅಂದಾಜಿಸಲಾಗಿದೆ ಎಂದು ಸೊದೆಬಿ ಹೇಳಿಕೆಯಲ್ಲಿ ತಿಳಿಸಿದೆ. ಜೂನ್ 29 ರಿಂದ ಜುಲೈ 16ರ ಅವಧಿಯಲ್ಲಿ ಹರಾಜು ನಡೆಯಲಿದೆ. ಜುಲೈ 19ರಂದು ಈ ಬಾರಿಯ ವಿಶ್ವಕಪ್ ಟೂರ್ನಿಯ ಫೈನಲ್ ನಿಗದಿಯಾಗಿದೆ.

ಡೀಗೊ ಮರಡೊನಾ ಅವರು ಪ್ರಸಿದ್ಧ 'ಹ್ಯಾಂಡ್ ಆಫ್ ಗಾಡ್' ಗೋಲು ಹೊಡೆದಾಗ ಧರಿಸಿದ್ದ ಜರ್ಸಿ 2022ರಲ್ಲಿ ಹರಾಜಿಗೆ ಬಂದಾಗ ₹88 ಕೋಟಿಗೆ ಮಾರಾಟವಾಗಿತ್ತು.

ನೇಷನ್ಸ್ ಕಪ್ ಹಾಕಿ: ಭಾರತ ತಂಡಕ್ಕೆ ಸಲೀಮಾ ಸಾರಥ್ಯ

ನವದೆಹಲಿ (ಪಿಟಿಐ): ಇದೇ 15ರಂದು ಆರಂಭವಾಗುವ ಎಫ್‌ಐಎಚ್ ಮಹಿಳಾ ಹಾಕಿ ನೇಷನ್ಸ್ ಕಪ್ ಟೂರ್ನಿಗೆ 20 ಆಟಗಾರ್ತಿಯರ ಭಾರತ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದೆ. ಅನುಭವಿ ಆಟಗಾರ್ತಿ ಸಲೀಮಾ ಟೆಟೆ ಅವರು ತಂಡವನ್ನು ಮುನ್ನಡೆಸಲಿದ್ದಾರೆ.



ನಾಲ್ಕು ಸ್ನೇಹಪರ ಪಂದ್ಯಗಳ ಸರಣಿ ಆಡಲು ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದ ತಂಡವನ್ನೇ ಬಹುತೇಕ ಉಳಿಸಿಕೊಳ್ಳಲಾಗಿದೆ. ಫಾರ್ವರ್ಡ್ ಆಟಗಾರ್ತಿಯರಾದ ಬಲಜೀತ್ ಕೌರ್ ಹಾಗೂ ಹೀನಾ ಬಾನೊ ಅವರನ್ನು ಕೈಬಿಡಲಾಗಿದೆ.

ಟೂರ್ನಿಯು ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಇದೇ 15ರಿಂದ 21ರ ವರೆಗೆ ನಡೆಯಲಿದೆ. ಭಾರತ ತಂಡವು ಜಪಾನ್, ಅಮೆರಿಕ ಹಾಗೂ ಉರುಗ್ವೆ ತಂಡಗಳೊಂದಿಗೆ ಎ ಗುಂಪಿನಲ್ಲಿದೆ. ಆತಿಥೇಯ ನ್ಯೂಜಿಲೆಂಡ್, ಚಿಲಿ, ಕೊರಿಯಾ ಹಾಗೂ ಫ್ರಾನ್ಸ್ ತಂಡಗಳು ಬಿ ಗುಂಪಿನಲ್ಲಿವೆ.

ಭಾರತ ತಂಡವು ಇದೇ 15ರಂದು ಅಮೆರಿಕ ವಿರುದ್ಧ ಅಭಿಯಾನ ಆರಂಭಿಸಲಿದೆ. 16ರಂದು ಜಪಾನ್ ವಿರುದ್ಧ ಹಾಗೂ 18ರಂದು ಉರುಗ್ವೆ ಎದುರು ಸೆಣಸಲಿದೆ. ಈ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿ, ಪ್ರೊ ಲೀಗ್‌ಗೆ ಅರ್ಹತೆ ಪಡೆಯುವ ತವಕದಲ್ಲಿ ಭಾರತ ತಂಡವಿದೆ. ಈಚೆಗೆ, ಚಿಲಿ ಪ್ರವಾಸದಲ್ಲಿ 2–2 ಸಮಬಲ ಸಾಧಿಸಿದ್ದ ಭಾರತವು ಆಸ್ಟ್ರೇಲಿಯಾ ಸರಣಿಯನ್ನೂ 2–2ರಲ್ಲಿ ಸಮಬಲ ಮಾಡಿಕೊಂಡಿದೆ. ಬಲಿಷ್ಠ ತಂಡಗಳ ಎದುರು ಸ್ಥಿರ ಪ್ರದರ್ಶನ ತೋರಿರುವುದು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ.

ಬ್ಯಾಡ್ಮಿಂಟನ್ ದಿಗ್ಗಜ ಪ್ರಕಾಶ್ ಪಡುಕೋಣೆ ಅಭಿಮತ

ಪ್ರಬಲ ಶಕ್ತಿಯಾಗಲು ಭಾರತಕ್ಕೆ ಕಾಲ ಪಕ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಪ್ರಬಲ ಶಕ್ತಿಯಾಗಲು ಭಾರತಕ್ಕೆ ಕಾಲ ಪಕ್ವಗೊಂಡಿದೆ' ಎಂದು ದಿಗ್ಗಜ ಆಟಗಾರ ಪ್ರಕಾಶ್ ಪಡುಕೋಣೆ ಅವರು ಮಂಗಳವಾರ ಅಭಿಪ್ರಾಯಪಟ್ಟರು.

'ಈಗಿನ ಅಗ್ರಶ್ರೇಣಿಯ ಯುವ ಆಟಗಾರರು ಉತ್ತಮವಾಗಿ ಆಡುತ್ತಿದ್ದಾರೆ. ಆದರೆ ಅವರು ಇದಕ್ಕಿಂತ ಚೆನ್ನಾಗಿ ಆಡುವ ಸಾಮರ್ಥ್ಯ ಹೊಂದಿದ್ದಾರೆ. ಅವರಿಗೆ ಸಿಗುತ್ತಿರುವ ಬೆಂಬಲ ನೋಡಿದರೆ ಅವರು ಸ್ಥಿರ ಪ್ರದರ್ಶನ ನೀಡಬೇಕಾಗಿದೆ. ಪ್ರತಿಯೊಬ್ಬ ಆಟಗಾರನಿಗೂ ವೈಯಕ್ತಿಕ ಕೋಚ್, ಫಿಸಿಯೊ, ಸ್ಟ್ರೆಂತ್ ಅಂಡ್ ಕಂಡಿಷನಿಂಗ್ ಕೋಚ್, ಪೌಷ್ಟಿಕಾಂಶ ತಜ್ಞರ ತಂಡವಿದೆ. ಇದಕ್ಕೆ ನನ್ನದೇನೂ ವಿರೋಧವಿಲ್ಲ. ಆದರೆ ಅವರಿಗೆ ಸಿಗುತ್ತಿರುವ ಉತ್ತೇಜನ ನೋಡಿದರೆ ಅವರು ಇನ್ನೂ ಹೆಚ್ಚಿನದನ್ನು ಸಾಧಿಸಬಹುದಾಗಿದೆ. ಆರು ತಿಂಗಳಿಗೊ, ಎರಡು ವರ್ಷಕ್ಕೊ ಒಂದು ಪ್ರಶಸ್ತಿ ಗೆಲ್ಲುವುದಷ್ಟಕ್ಕೇ ಸಂತುಷ್ಟರಾಗಬಾರದು' ಎಂದು 70 ವರ್ಷ ವಯಸ್ಸಿನ ಪಡುಕೋಣೆ ಅಭಿಪ್ರಾಯಪಟ್ಟರು.

ಪಡುಕೋಣೆ ಸ್ಕೂಲ್ ಆಫ್ ಬ್ಯಾಡ್ಮಿಂಟನ್ (ಪಿಎಸ್‌ಬಿ) ಮತ್ತು ಶ್ರೀರಾಮ್ ಫೈನಾನ್ಸ್ ಲಿ. ಸಹಭಾಗಿತ್ವ ಘೋಷಣೆಯ ಸಂದರ್ಭದಲ್ಲಿ ಅವರು ಆಯ್ದ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು.



ಪಡುಕೋಣೆ ಸ್ಕೂಲ್ ಆಫ್ ಬ್ಯಾಡ್ಮಿಂಟನ್ ಜೊತೆ ಶ್ರೀರಾಮ್ ಫೈನಾನ್ಸ್ ಸಹಭಾಗಿತ್ವ ಸಮಾರಂಭದಲ್ಲಿ ಪ್ರಕಾಶ್ ಪಡುಕೋಣೆ ಹಾಗೂ ಉಮೇಶ್ ರೇವಣಕರ್ ಅವರು ಟೀಶರ್ಟ್ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

'ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಬಿಡುವಿಲ್ಲದ ವೇಳಾಪಟ್ಟಿ ರೂಪಿಸಿದೆ. ಇಂಥ ಸಂದರ್ಭದಲ್ಲಿ ಆಟಗಾರರು ಜಾಣ್ಮೆಯಿಂದ ತಾವು ಆಡುವ ಟೂರ್ನಿಗಳನ್ನು ಆಯ್ಕೆ ಮಾಡಬೇಕು. ಆದರೆ ಪ್ರತಿ ವಾರ ರ‍್ಯಾಂಕಿಂಗ್ ಪರಿಷ್ಕೃತಗೊಳ್ಳುವಾಗ ತಮ್ಮ ಸ್ಥಾನ ಕುಸಿಯದಂತೆ ಆಟಗಾರರು ಎಚ್ಚರಿಕೆ ವಹಿಸುತ್ತಾರೆ. ಒಂದೊಮ್ಮೆ ನಾನು ಈಗ ಆಡುತ್ತಿದ್ದರೆ ರ‍್ಯಾಂಕಿಂಗ್ ಕುಸಿತದ ಕಡೆ ತಲೆಕೆಡಿಸಿಕೊಳ್ಳದೇ ಟೂರ್ನಿ ಗೆಲ್ಲುವ ಕಡೆ ಗಮನ ಹರಿಸುತ್ತಿದ್ದೆ' ಎಂದರು.

ಬಿಡಬ್ಲ್ಯುಎಫ್ ಇನ್ನು ಮುಂದೆ 21 ಪಾಯಿಂಟ್ ಸ್ಕೋರಿಂಗ್ ಮಾದರಿ ಬದಲು 15 ಪಾಯಿಂಟ್‌ಗಳಿಗೆ ಇಳಿಸಲು ನಿರ್ಧರಿಸಿರುವ ಬಗ್ಗೆ ಮಾತನಾಡಿದ ಅವರು, 'ನಾನು 21 ಪಾಯಿಂಟ್ ಮಾದರಿ ಇಷ್ಟಪಡುತ್ತೇನೆ. 15 ಪಾಯಿಂಟ್‌ಗಳ ಮಾದರಿ ಸಣ್ಣ ಮಟ್ಟದಲ್ಲಿರಲಿ. ಕ್ರಿಕೆಟ್‌ನಲ್ಲಿ ಟಿ20, ಏಕದಿನ, ಟೆಸ್ಟ್ ಮಾದರಿಗಳಿರುವಂತೆ. ಬ್ಯಾಡ್ಮಿಂಟನ್‌ನಲ್ಲೂ ನಾವು ಇದನ್ನು ಏಕೆ ಪರಿಶೀಲಿಸಬಾರದು. 21 ಪಾಯಿಂಟ್ ಮಾದರಿಯನ್ನು ತೆಗೆದುಹಾಕಬಾರದು' ಎಂದು ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಹೇಳಿದರು.

ನಿಧನ ವಾರ್ತೆ

ಫುಟ್‌ಬಾಲ್ ಆಟಗಾರ ದರ್ಶನ್

ಬೆಂಗಳೂರು: ಶುಭೋದಯ ಫುಟ್‌ಬಾಲ್ ಕ್ಲಬ್ ತಂಡದ ಪ್ರತಿಭಾನ್ವಿತ ಆಟಗಾರ ದರ್ಶನ್ ಬಿ.ಎನ್. (25) ಅವರು ಅಲ್ಪಕಾಲದ ಅನಾರೋಗ್ಯದಿಂದ ಚಾಮರಾಜಪೇಟೆಯ ರಂಗದೊರೆ ಮೆಮೊರಿಯಲ್ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.



ದರ್ಶನ್ ಅವರು ಬಿಡಿಎಫ್‌ಎ 'ಸಿ' ಡಿವಿಷನ್ ಲೀಗ್‌ನಲ್ಲಿ ಹೊಸಕೋಟೆ ಫುಟ್‌ಬಾಲ್ ಕ್ಲಬ್ ತಂಡವನ್ನು ಪ್ರತಿನಿಧಿಸಿದ್ದರು. ಮೇ 19ರಂದು ನಡೆದ ಲೀಗ್ ಪಂದ್ಯದಲ್ಲಿ ಕೊನೆಯ ಬಾರಿ ಕಣಕ್ಕಿಳಿದಿದ್ದರು.

ಶುಭೋದಯ ಕ್ಲಬ್ ಪರ ಕಳೆದ ಎಂಟು ವರ್ಷಗಳಿಂದ ಆಡುತ್ತಿದ್ದ ಅವರು, ಈಚೆಗೆ ವೈರಾಣು ಜ್ವರದಿಂದ ಬಳಲುತ್ತಿದ್ದರು.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಅಮೃತೂರು ಮೂಲದ ದರ್ಶನ್ ಅವರ ಕುಟುಂಬವು ನಗರದ ಹನುಮಂತನಗರದಲ್ಲಿ ನೆಲಸಿತ್ತು. ಅಮೃತೂರು ಸಮೀಪದ ಗೌಡಗೆರೆಯಲ್ಲಿ ಸೋಮವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿತು ಎಂದು ಅವರ ಕೋಚ್ ಶ್ರೀನಿವಾಸ್ ತಿಳಿಸಿದರು.

ಉದ್ಯೋಗ ವಾಣಿ

ಸೆಮಿಗೆ ಮೀರಾ, ಕೊಸ್ತ್ಯುಕ್

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ
ಸಬಲೆಂಕಾ, ಡಯಾನಾ ಗೆಲುವಿನ ಓಟ

ಪ್ಯಾರಿಸ್ (ಎಎಫ್‌ಪಿ): ರಷ್ಯಾದ ಟೆನಿಸ್ ತಾರೆ ಮೀರಾ ಅಂದ್ರೆಯೇವಾ ಅವರು ಮಂಗಳವಾರ ನೇರ ಸೆಟ್‌ಗಳಿಂದ ರೊಮೇನಿಯಾದ ಸೊರಾನಾ ಸಿರ್ಸ್ಟಿಯಾ ಅವರನ್ನು ಸದೆಬಡಿದು ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಮಾರ್ತಾ ಕೊಸ್ತ್ಯುಕ್ ಅವರು ವೃತ್ತಿಪರ ಯುಗದಲ್ಲಿ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಅಂತಿಮ ನಾಲ್ಕರ ಘಟ್ಟ ತಲುಪಿದ ಉಕ್ರೇನ್‌ನ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

‘ಫಿಲಿಪ್ ಶಾಟಿಯೆ’ ಕೋರ್ಟ್‌ನಲ್ಲಿ ನಡೆದ ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಮೀರಾ 6-0, 6-3ರಿಂದ 18ನೇ ಶ್ರೇಯಾಂಕದ ಸಿರ್ಸ್ಟಿಯಾ ಅವರನ್ನು ಮಣಿಸಿದರು. ತಮ್ಮ ಚೊಚ್ಚಲ ಗ್ರ್ಯಾನ್ ಸ್ಲಾಮ್ ಕಿರೀಟದ ಪ್ರಯತ್ನದಲ್ಲಿರುವ 19 ವರ್ಷ ವಯಸ್ಸಿನ ಮೀರಾ 2024ರಲ್ಲೂ ಇಲ್ಲಿ ಸೆಮಿಫೈನಲ್ ತಲುಪಿದ್ದರು.

ವರ್ಷಾಂತ್ಯಕ್ಕೆ ಟೆನಿಸ್ ವೃತ್ತಿಜೀವನದಿಂದ ನಿವೃತ್ತಿಯಾಗಲಿರುವ 36 ವರ್ಷದ ಸಿರ್ಸ್ಟಿಯಾ ಅವರಿಗೆ ಫ್ರೆಂಚ್ ಓಪನ್‌ನಲ್ಲಿ ಇದು ಕೊನೆಯ ಪಂದ್ಯವಾಗಿತ್ತು. 2009ರ ನಂತರ ಅವರು ಮೊದಲ ಬಾರಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಮೀರಾ, ಮುಂದಿನ ಸುತ್ತಿನಲ್ಲಿ 15ನೇ ಶ್ರೇಯಾಂಕದ ಕೊಸ್ತ್ಯುಕ್ ಅವರನ್ನು ಎದುರಿಸಲಿದ್ದಾರೆ.

ರಷ್ಯಾ– ಉಕ್ರೇನ್ ನಡುವಣ ಯುದ್ಧ-ಕಾಲದಲ್ಲಿ ಉಕ್ರೇನ್ ಆಟಗಾರ್ತಿಯನ್ನು ಎದುರಿಸುವ ಸವಾಲುಗಳ ಬಗ್ಗೆ ಮೀರಾ ಅವರನ್ನು ಮಾಧ್ಯಮದವರು ಪ್ರಶ್ನಿಸಿದಾಗ, ‘ನಾನು ಯಾರೊಂದಿಗೆ ಆಡುತ್ತೇನೆ ಎಂಬುದು ಮುಖ್ಯವಲ್ಲ. ನನ್ನತ್ತ ಬರುವ ಚೆಂಡನ್ನು ಹೊಡೆದಟ್ಟಲು ಪ್ರಯತ್ನಿಸುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

ಇಗಾ ಶ್ವಾಂಟೆಕ್ ಅವರಿಗೆ ನಾಲ್ಕನೇ ಸುತ್ತಿನಲ್ಲಿ ಆಘಾತ ನೀಡಿದ್ದ 23 ವರ್ಷದ ಕೊಸ್ತ್ಯುಕ್, ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಮೊದಲ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದರು. ಅವರು ಕ್ವಾರ್ಟರ್ ಫೈನಲ್‌ನಲ್ಲಿ 6-3, 2-6, 6-2 ರಿಂದ ತಮ್ಮದೇ ದೇಶದ ಎಲಿನಾ ಸ್ವಿಟೋಲಿನಾ ಅವರನ್ನು ಮಣಿಸಿದರು. ಏಳನೇ ಕ್ರಮಾಂಕದ ಸ್ವಿಟೋಲಿನಾ ಅವರಿಗೆ ಇಲ್ಲಿ ಆರನೇ ಬಾರಿಯೂ ಎಂಟರ ಘಟ್ಟವನ್ನು ದಾಟಲು ಸಾಧ್ಯವಾಗಲಿಲ್ಲ.

ಜೇಡಿಮಣ್ಣಿನ ಅಂಕಣದಲ್ಲಿ ಗೆಲುವಿನ ಓಟವನ್ನು 17 ಪಂದ್ಯಗಳಿಗೆ ವಿಸ್ತರಿಸಿದ ಕೊಸ್ತ್ಯುಕ್ ಅವರು ಈ ಗೆಲುವನ್ನು ತಮ್ಮ ದೇಶದ ಜನತೆಗೆ ಅರ್ಪಿಸಿದ್ದಾರೆ.

ಸಬಲೆಂಕಾ ಓಟ: ಅಗ್ರ ಶ್ರೇಯಾಂಕದ ಆಟಗಾರ್ತಿ ಅರಿನಾ ಸಬಲೆಂಕಾ 7-5, 6-3ರಿಂದ ಜಪಾನ್‌ನ ನವೋಮಿ ಒಸಾಕಾ ಅವರನ್ನು ಹಿಮ್ಮೆಟ್ಟಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

28 ವರ್ಷದ ಸಬಲೆಂಕಾ ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಪ್ರಯತ್ನದಲ್ಲಿದ್ದಾರೆ. ಬೆಲರೂಸ್‌ನ ಆಟಗಾರ್ತಿ ಮುಂದಿನ ಸುತ್ತಿನಲ್ಲಿ ರಷ್ಯಾದ ಡಯಾನಾ ಶ್ನೈಡರ್ ಅವರನ್ನು ಎದುರಿಸಲಿದ್ದಾರೆ. 25ನೇ ಶ್ರೇಯಾಂಕದ ಡಯಾನಾ 6-3, 3-6, 6-0ರಿಂದ ಮ್ಯಾಡಿಸನ್ ಕೀಸ್ ಅವರನ್ನು ಸೋಲಿಸಿದರು.

ಜ್ವರೇವ್ ಮುನ್ನಡೆ

ಪ್ರಶಸ್ತಿಗೆ ಫೆವರೀಟ್ ಎನಿಸಿರುವ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರು 7-6(3), 6-1, 6-3ರಿಂದ ಸ್ಪೇನ್‌ನ ರಫೆಕ್ ಜೋಡಾರ್ ಅವರನ್ನು ಮಣಿಸಿ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಅಗ್ರಶ್ರೇಯಾಂಕದ ಯಾನಿಕ್ ಸಿನ್ನರ್, ಮೂರನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ ಅವರು ಟೂರ್ನಿಯಿಂದ ಈಗಾಗಲೇ ಹೊರಬಿದ್ದಿರುವ ಕಾರಣ ಜ್ವರೇವ್ ಅವರಿಗೆ ಚಾಂಪಿಯನ್ ಆಗುವ ಅವಕಾಶ ಹೆಚ್ಚಿದೆ.

2024ರ ರನ್ನರ್ಸ್ ಅಪ್, 29 ವರ್ಷದ ಜ್ವರೇವ್ ಅವರು ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ವಿಂಬಲ್ಡನ್ ಹೊರತುಪಡಿಸಿ ಉಳಿದ ಮೂರೂ ಪ್ರಮುಖ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿದರೂ ಕಿರೀಟ ಒಲಿದಿಲ್ಲ.




ವಿಭಿನ್ನ ದಿರಿಸಿನಲ್ಲಿ ಗಮನ ಸೆಳೆದ ಜಪಾನ್‌ನ ನವೋಮಿ ಒಸಾಕಾ (ಎಡ) ಗೆಲುವಿನ ಬಳಿಕ ನೃತ್ಯ ಮಾಡಿ ಸಂಭ್ರಮಿಸಿದ ಸಬಲೆಂಕಾ ಎಪಿ/ಎಎಫ್‌ಪಿ ಚಿತ್ರ

ಡಬಲ್ಸ್: ಕ್ವಾರ್ಟರ್‌ಗೆ ಬಾಲಾಜಿ–ಮಾರ್ಸೆಲೊ



ಬಾಲಾಜಿ


ಪ್ಯಾರಿಸ್ (ಪಿಟಿಐ): ಭಾರತದ ಅನುಭವಿ ಆಟಗಾರ ಶ್ರೀರಾಮ್ ಬಾಲಾಜಿ ಮತ್ತು ಅವರ ಬ್ರೆಜಿಲ್‌ನ ಜೊತೆಗಾರ ಮಾರ್ಸೆಲೊ ಡೆಮೊಲಿನರ್ ಅವರು ಫ್ರೆಂಚ್ ಓಪನ್ ಪುರುಷರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದಾರೆ. ಬಾಲಾಜಿ, ಟೂರ್ನಿಯಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆಯಾಗಿದ್ದಾರೆ.

ತಮಿಳುನಾಡಿನ 36 ವರ್ಷದ ಬಾಲಾಜಿ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಅಂತಿಮ ಎಂಟರ ಘಟ್ಟ ತಲುಪಿದ್ದಾರೆ. ಸೋಮವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬಾಲಾಜಿ–ಮಾರ್ಸೆಲೊ ಜೋಡಿಯು 7–5, 6–4ರಿಂದ ಆರನೇ ಶ್ರೇಯಾಂಕದ ಜರ್ಮನಿಯ ಜೋಡಿ ಟಿಮ್ ಪುಟ್ಜ್ ಮತ್ತು ಕೆವಿನ್ ಕ್ರಾವಿಯೆಟ್ಜ್ ಅವರಿಗೆ ಆಘಾತ ನೀಡಿತು.

ಉದ್ಘಾಟನಾ ಪಂದ್ಯದಲ್ಲಿ ಬ್ಲಾಸ್ಟರ್ಸ್–ಮಿಸ್ಟಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಗುಲ್ಬರ್ಗ ಮಿಸ್ಟಿಕ್ಸ್ ತಂಡಗಳು ಜೂನ್ 20ರಂದು ಮೈಸೂರಿನಲ್ಲಿ ಆರಂಭವಾಗುವ ಐದನೇ ಆವೃತ್ತಿಯ ‘ಮಹಾರಾಜ ಟ್ರೋಫಿ’ ಕೆಎಸ್‌ಸಿಎ ಟಿ20 ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.



ಆತಿಥೇಯ ಮೈಸೂರು ವಾರಿಯರ್ಸ್ ತಂಡವು ಆರಂಭಿಕ ದಿನದ ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ತಂಡವನ್ನು ಎದುರಿಸಲಿದೆ. ಈ ಋತುವಿನಲ್ಲಿ ಹೊಸ ಫ್ರ್ಯಾಂಚೈಸಿಯಾಗಿರುವ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವು ಜೂನ್ 21ರಂದು ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರು ಲೆಗ್‌ಗಳಲ್ಲಿ ಟೂರ್ನಿಯ ಪಂದ್ಯಗಳನ್ನು ಆಯೋಜಿಸಲಾಗಿದೆ. ಒಟ್ಟು ಆರು ತಂಡಗಳು ಟೂರ್ನಿಯಲ್ಲಿ ಪ್ರಶಸ್ತಿಗೆ ಸೆಣಸಾಟ ನಡೆಸಲಿವೆ. ಜುಲೈ 12ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ವೇಳಾಪಟ್ಟಿ

ದಿನಾಂಕ	ಪಂದ್ಯ	ಸಮಯ
ಮೈಸೂರು ಲೆಗ್		
ಜೂನ್ 20	ಬೆಂಗಳೂರು–ಗುಲ್ಬರ್ಗ	ಮ. 2.30
ಜೂನ್ 20	ಶಿವಮೊಗ್ಗ–ಮೈಸೂರು	ರಾತ್ರಿ 7
ಜೂನ್ 21	ಮಂಗಳೂರು–ಹುಬ್ಬಳ್ಳಿ	ಮ. 2.30
ಜೂನ್ 21	ಬೆಂಗಳೂರು–ಶಿವಮೊಗ್ಗ	ರಾತ್ರಿ 7
ಜೂನ್ 22	ಮೈಸೂರು–ಹುಬ್ಬಳ್ಳಿ	ಮ. 2.30
ಜೂನ್ 22	ಗುಲ್ಬರ್ಗ–ಮಂಗಳೂರು	ರಾತ್ರಿ 7
ಜೂನ್ 23	ಗುಲ್ಬರ್ಗ–ಶಿವಮೊಗ್ಗ	ಮ. 2.30
ಜೂನ್ 23	ಮೈಸೂರು–ಬೆಂಗಳೂರು	ರಾತ್ರಿ 7
ಜೂನ್ 24	ಮಂಗಳೂರು–ಬೆಂಗಳೂರು	ಮ. 2.30
ಜೂನ್ 24	ಹುಬ್ಬಳ್ಳಿ–ಶಿವಮೊಗ್ಗ	ರಾತ್ರಿ 7
ಜೂನ್ 25	ಮಂಗಳೂರು–ಮೈಸೂರು	ಮ. 2.30
ಜೂನ್ 25	ಹುಬ್ಬಳ್ಳಿ–ಗುಲ್ಬರ್ಗ	ರಾತ್ರಿ 7
ಹುಬ್ಬಳ್ಳಿ ಲೆಗ್		
ಜೂನ್ 27	ಶಿವಮೊಗ್ಗ–ಬೆಂಗಳೂರು	ಮ. 2.30
ಜೂನ್ 27	ಮೈಸೂರು–ಗುಲ್ಬರ್ಗ	ರಾತ್ರಿ 7
ಜೂನ್ 28	ಶಿವಮೊಗ್ಗ–ಮಂಗಳೂರು	ರಾತ್ರಿ 7
ಜೂನ್ 29	ಗುಲ್ಬರ್ಗ–ಹುಬ್ಬಳ್ಳಿ	ಮ. 2.30
ಜೂನ್ 29	ಬೆಂಗಳೂರು–ಮಂಗಳೂರು	ರಾತ್ರಿ 7
ಜೂನ್ 30	ಶಿವಮೊಗ್ಗ–ಗುಲ್ಬರ್ಗ	ಮ. 2.30
ಜೂನ್ 30	ಮೈಸೂರು–ಮಂಗಳೂರು	ರಾತ್ರಿ 7
ಜುಲೈ 1	ಬೆಂಗಳೂರು–ಹುಬ್ಬಳ್ಳಿ	ರಾತ್ರಿ 7
ಜುಲೈ 2	ಹುಬ್ಬಳ್ಳಿ–ಮೈಸೂರು	ಮ. 2.30
ಜುಲೈ 2	ಮಂಗಳೂರು–ಶಿವಮೊಗ್ಗ	ರಾತ್ರಿ 7
ಜುಲೈ 3	ಗುಲ್ಬರ್ಗ–ಮೈಸೂರು	ಮ. 2.30
ಜುಲೈ 3	ಹುಬ್ಬಳ್ಳಿ–ಬೆಂಗಳೂರು	ರಾತ್ರಿ 7
ಬೆಂಗಳೂರು ಲೆಗ್		
ಜುಲೈ 5	ಬೆಂಗಳೂರು–ಮೈಸೂರು	ಮ.2.30
ಜುಲೈ 5	ಶಿವಮೊಗ್ಗ–ಹುಬ್ಬಳ್ಳಿ	ರಾತ್ರಿ 7
ಜುಲೈ 6	ಹುಬ್ಬಳ್ಳಿ–ಮಂಗಳೂರು	ಮ.2.30
ಜುಲೈ 6	ಗುಲ್ಬರ್ಗ–ಬೆಂಗಳೂರು	ರಾತ್ರಿ 7
ಜುಲೈ 7	ಮೈಸೂರು–ಶಿವಮೊಗ್ಗ	ರಾತ್ರಿ 7
ಜುಲೈ 8	ಮಂಗಳೂರು–ಗುಲ್ಬರ್ಗ	ರಾತ್ರಿ 7
ಜುಲೈ 9	ಎಲಿಮಿನೇಟರ್	ಮ. 2.30
ಜುಲೈ 9	ಕ್ವಾಲಿಫೈಯರ್–1	ರಾತ್ರಿ 7
ಜುಲೈ 10	ಕ್ವಾಲಿಫೈಯರ್ 2	ರಾತ್ರಿ 7
ಜುಲೈ 12	ಫೈನಲ್	ರಾತ್ರಿ 7

ಡೋಪಿಂಗ್ ಪರೀಕ್ಷೆಯಲ್ಲಿ ಸಿಲುಕಿದ ದೀಕ್ಷಾ

ನವದೆಹಲಿ (ಪಿಟಿಐ): ಮಹಿಳೆಯರ 1,500 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಕೆ.ಎಂ.ದೀಕ್ಷಾ ಅವರು ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ.



ರಾಷ್ಟ್ರೀಯ ಕ್ರೀಡೆಗಳ ಬೆಳ್ಳಿ ಪದಕ ವಿಜೇತೆ ಸಹ ಆಗಿರುವ 27 ವರ್ಷ ವಯಸ್ಸಿನ ದೀಕ್ಷಾ ಈ ವರ್ಷದ ಏಪ್ರಿಲ್‌ನಲ್ಲಿ ಕೇವಲ ಒಂದು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ನಿಷೇಧಿತ ಮದ್ದು ಸೇವನೆ ದೃಢಪಟ್ಟಿದೆ ಎಂದು ಉನ್ನತ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ. ಗ್ಲಾಸ್ಗೊದಲ್ಲಿ ನಿಗದಿಯಾಗಿರುವ 2026ರ ಕಾಮನ್‌ವೆಲ್ತ್ ಕ್ರೀಡೆಗಳಿಗೆ (ಜುಲೈ 23 ರಿಂದ ಆಗಸ್ಟ್ 2) ಆಯ್ಕೆ ಟ್ರಯಲ್ಸ್ ಆಗಿದ್ದ ರಾಂಚಿಯ ಫೆಡರೇಷನ್ ಕಪ್ ಕೂಟದಲ್ಲಿ ದೀಕ್ಷಾ ಭಾಗವಹಿಸಿರಲಿಲ್ಲ.

ರಾಂಚಿಯಲ್ಲಿ ನಡೆದಿದ್ದ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ ಮಾನದಂಡ ತಲುಪಲು ವಿಫಲರಾದ ಅಥ್ಲೀಟುಗಳಿಗೆ ಮತ್ತೊಂದು ಅವಕಾಶವಾಗಿ ಜೂನ್ 13ರಂದು ನಡೆಯಲಿರುವ ಲೂಧಿಯಾನ ಲೆಗ್ ಅನ್ನು ಅರ್ಹತಾ ಟೂರ್ನಿಯಲ್ಲಿ ಪರಿಗಣಿಸಲು ಭಾರತ ಅಥ್ಲೆಟಿಕ್ ಫೆಡರೇಷನ್ ನಿರ್ಧರಿಸಿದೆ. ಆದರೆ ಫೆಡರೇಷನ್ ಕಪ್‌ನಲ್ಲಿ ಭಾಗವಹಿಸಿದವರಿಗೆ ಮಾತ್ರ ಈ ಅವಕಾಶ ಕಲ್ಪಿಸಿದೆ.

ಏಪ್ರಿಲ್‌ನಲ್ಲಿ ನಡೆದಿದ್ದ ಇಂಡಿಯನ್ ಓಪನ್ ಅಥ್ಲೆಟಿಕ್ ಸರಣಿ 2ರಲ್ಲಿ ಅವರು 4ನಿ.25.74 ಸೆ.ಗಳಲ್ಲಿ ಓಟ ಕ್ರಮಿಸಿದ್ದರು. ಆದರೆ ಕಾಮನ್‌ವೆಲ್ತ್ ಕ್ರೀಡೆಗಳಿಗೆ ನಿಗದಿಪಡಿಸಿದ ಮಾನದಂಡ (4:05.09) ಸಾಧಿಸಿರಲಿಲ್ಲ. 2024ರ ಮೇ ತಿಂಗಳಲ್ಲಿ ಅಮೆರಿಕದಲ್ಲಿ ನಡೆದ ಸ್ಪರ್ಧೆಯೊಂದರಲ್ಲಿ ಅವರು 4ನಿ.04.78 ಸೆ.ಗಳಲ್ಲಿ ಓಡಿದ್ದು ದಾಖಲೆಯಾಗಿತ್ತು.